
ಪ್ರಚೋದನೆ

ಲಂಕೇಶ್


ಆಗಸ್ಟ್ 08, 2012 ಪುಟ 20 ರೂ. 14/-



ಅಪರೂಪದ ವೈದ್ಯ
ಡಾ.ಶಿವರಾಂ ಕಣ್ಮರೆ



ಮಣ್ಣಿನ ಮಗನ
ಕಿಡ್ನಿ ಕುಸಿತ



ಬೆಮೆಲ್ ಕೃಷ್ಣಪ್ಪ
ಸೀನನ ಲೆಕ್ಕ
ಫೈಸಲ್



ಉತ್ತರಕನ್ನಡ
ಜೆಡಿಎಸ್‌ನತ್ತ
ಶಿವಾನಂದ್ ನಾಯ್ಕ



ಹೊಳಲ್ಕೆರೆ
ಶಾಸಕ ಚಂದ್ರಪ್ಪನಿಗೆ
ಗೇಟ್‌ಪಾಸ್

ನ್ಯಾಯಭಾಗ:ರಕ್ತದ ಮಡಿಲಲ್ಲಿ ಇಟ್ಕಾಳ ಗ್ರಾಮ

ದಕ್ಷಿಣ ಕನ್ನಡ:
ಸಮವಸ್ತ್ರ
ದಬ್ಬಾಳಿಕೆ




ಮಾರುತಿ ಸುಜುಕಿ
ದೊಂಬಿಯ ಹಿಂದಿನ
ದಮನಕಾಂಡ

ಚಾರ್ವಾಕ




• ಶಿವಸುಂದರ್

ಈ ಅಂಕಿಸಂಖ್ಯೆಗಳು ಹೇಳುತ್ತಿರುವ ಕಥೆಯೇನು? ಹಿಂದಿಗಿಂತ ಪ್ರತಿಯೊಂದು ಜಿಲ್ಲೆಗಳಲ್ಲೂ ಮನೆಗಳು, ಅದರಲ್ಲಿನ ಸೌಲಭ್ಯಗಳು ಮತ್ತು ಪ್ರತಿ ಮನೆಗಿರುವ ಆಸ್ತಿಪಾಸ್ತಿಗಳು ಸಂಖ್ಯಾತ್ಮಕವಾಗಿ ಹೆಚ್ಚಿವೆ. ಆದರೆ ಅವು ಹರಡಿಕೊಂಡಿರುವ ರೀತಿಯನ್ನು ನೋಡಿದರೆ ಐತಿಹಾಸಿಕವಾಗಿ ಅಭಿವೃದ್ಧಿ ಹೊಂದಿದ ಜಿಲ್ಲೆಗಳು ಹೆಚ್ಚು ಸೌಲಭ್ಯವನ್ನು ಕಂಡಿದ್ದರೆ, ಹಿಂದುಳಿದ ಜಿಲ್ಲೆಗಳಲ್ಲಿ ಮೊದಲಿಗಿಂತ ಸಂಖ್ಯೆ ಹೆಚ್ಚಾಗಿದ್ದರೂ ದಕ್ಷಿಣದ ಜಿಲ್ಲೆಗಳೊಂದಿಗೆ ಅಂತರವೂ ಹೆಚ್ಚಿದೆ.







“ಮನೆತನ”ಗಳು ಹೇಳುತ್ತಿರುವ ಅಭಿವೃದ್ಧಿಯ ತಾರತಮ್ಯದ ಕಥೆಗಳು

2011ರಲ್ಲಿ ಭಾರತ ಸರ್ಕಾರ ನಡೆಸಿದ ದೇಶವ್ಯಾಪಿ **Housing, Household Amenities and Assets** -ಮನೆಗಳ, ಅವುಗಳಿಗೆ ಲಭ್ಯವಾಗಿರುವ ಸೌಲಭ್ಯಗಳ ಮತ್ತು ಅವುಗಳ ಬಳಿ ಇರುವ ಆಸ್ತಿಪಾಸ್ತಿಗಳ - ಸರ್ವೇಯನ್ನು ಸರ್ಕಾರ ಪ್ರಕಟಿಸಿದೆ. ಸಾಮಾನ್ಯವಾಗಿ ಸಾರ್ವತ್ರಿಕ ಜನಗಣತಿ ದೇಶದ ಜನಸಂಖ್ಯೆಯಲ್ಲಿ ಬರುತ್ತಿರುವ ಬದಲಾವಣೆಗಳನ್ನು ದಾಖಲು ಮಾಡಿದರೆ ಈ ಮನೆಗಳ ಸರ್ವೇ ಪ್ರತಿ ಮನೆಗಳ ಆರ್ಥಿಕ ಮತ್ತು ಸಾಮಾಜಿಕ ಸ್ಥಾನಮಾನಗಳಲ್ಲಿ ಬರುತ್ತಿರುವ ಚಲನೆಯ ಸೂಕ್ಷ್ಮ ಸ್ವರೂಪವನ್ನು ಪರಿಚಯಿಸುತ್ತದೆ. ದೇಶದ ಅಭಿವೃದ್ಧಿ ಪಥ ಎಷ್ಟೇ ದಶಾಂಶದಷ್ಟು ವೇಗವಾಗಿ ಬೆಳೆಯುತ್ತಿದ್ದರೂ ಅದರಿಂದ ಈ ದೇಶದ ಪ್ರತಿ ಭಾಗಗಳಿಗೆ ಮತ್ತು ಪ್ರತಿ ಮನೆಗಳಿಗೆ ದಕ್ಕಿದ್ದೆಷ್ಟು ಎಂಬುದನ್ನು ಈ ವರದಿ ಪರೋಕ್ಷವಾಗಿ ಬಿಚ್ಚಿಡುತ್ತದೆ.

ಈ **Housing, Household Amenities and Assets** - ಸರ್ವೇ ಪ್ರತಿ ರಾಜ್ಯ ಜಿಲ್ಲಾವಾರು ಮತ್ತು ಕೆಲವು ನಿರ್ದಿಷ್ಟ ವಿಷಯಗಳಲ್ಲಿ ತಾಲ್ಲೂಕು ಮತ್ತು ಹೋಬಳಿವಾರು ಮಟ್ಟದ ಮಾಹಿತಿಯನ್ನು, ಜೊತೆಗೆ ಪ್ರತಿ ಮನೆಗಳಿಗೆ ಸಂಬಂಧಪಟ್ಟಂತೆ 33 ಕ್ಕೂ ಹೆಚ್ಚು ಬಗೆಯ ವಿವರಗಳನ್ನು ದಾಖಲು ಮಾಡುತ್ತದೆ. ಅದರಲ್ಲಿ 1) ಮನೆಯ ಕಟ್ಟೋಣದ ಕುರಿತು- ಅದರಲ್ಲಿ ಮನೆಯ ನಿರ್ಮಾಣಕ್ಕೆ ಬಳಸಿರುವ ವಸ್ತು, ಸೂರು, ಗೋಡೆ ಮತ್ತು ನೆಲಕ್ಕೆ ಹಾಕಿರುವ ಹಾಸುಗಳನ್ನು ಆಧರಿಸಿ ಯಾವ್ಯಾವ ಜಿಲ್ಲೆ-ರಾಜ್ಯಗಳಲ್ಲಿ ಯಾವ ಯಾವ ಥರದ ಮನೆಗಳಿವೆ? ಯಾವುದು ಹೆಚ್ಚುತ್ತಿವೆ? ಯಾವುದು ಕಡಿಮೆಯಾಗುತ್ತಿವೆ? ಅರ್ಥಾತ್ ಜನ ಇನ್ನೂ ಮುರುಕು ಜೋಪಡಿಗಳಲ್ಲೇ ಇದ್ದಾರೋ ಅಥವಾ ಅಭಿವೃದ್ಧಿಯಿಂದ ನಿಧಾನವಾಗಿಯಾದರೂ ಜನತೆ ನಿಜಕ್ಕೂ ಒಂದು ಗಟ್ಟಿ ಆಸರೆಯನ್ನು ಪಡೆದುಕೊಳ್ಳುತ್ತಿದ್ದಾರೋ ಎಂಬಿತ್ಯಾದಿ ಪ್ರಶ್ನೆಗಳಿಗೆ ಉತ್ತರ ನೀಡುತ್ತವೆ. ಹಾಗೆಯೇ ಒಂದು ಮನೆಯಲ್ಲಿ ಎಷ್ಟು ಜನ ವಾಸಿಸುತ್ತಿದ್ದಾರೆ ಎನ್ನುವುದೂ ಸಹ ದೇಶದಲ್ಲಿ ವ್ಯಾಪಿಸುತ್ತಿರುವ ಉತ್ಪಾದನಾ ಕ್ರಮದ ಬಗ್ಗೆಯೂ ಸೂಚನೆ ಕೊಡುತ್ತದೆ. ಉದಾಹರಣೆಗೆ ಕೃಷಿಯ ಮೇಲಿನ ಅವಲಂಬನೆ ಇರುವ ಕುಟುಂಬಗಳ ಸಂಖ್ಯೆ ಕಡಿಮೆಯಾಗುತ್ತಾ ಹೋಗುತ್ತಿದ್ದಂತೆ ದೊಡ್ಡ ಕುಟುಂಬಗಳ ಸಂಖ್ಯೆಯೂ ಕಡಿಮೆಯಾಗುತ್ತಾ ಹೋಗುತ್ತದೆ. ಹೀಗಾಗಿ ಮನೆಗಳ ಸರ್ವೇ ಮಾಡುವಾಗ ಹೆಚ್ಚು ಜನರಿರುವ ಮತ್ತು ಕಡಿಮೆ ಜನರಿರುವ ಕುಟುಂಬಗಳ ಸಂಖ್ಯೆ ಆ ಕುಟುಂಬ ಮತ್ತು ಆ ಪ್ರಾಂತ್ಯ ಎಷ್ಟರಮಟ್ಟಿಗೆ ಊಳಿಗಮಾನ್ಯ ಕೃಷಿಯನ್ನು ಆಧರಿಸಿದೆ ಅಥವಾ ಇಲ್ಲ ಎಂಬುದನ್ನೂ ಅರುಹುತ್ತಾ ಹೋಗುತ್ತದೆ. ಹಾಗೆಯೇ ಒಂದು ಜಿಲ್ಲೆಯಲ್ಲಿ ಎಷ್ಟು ಮನೆಗಳಿಗೆ ಅತ್ಯಗತ್ಯ ನಾಗರಿಕ ಸೌಲಭ್ಯ ಸಿಕ್ಕಿದೆ - ಉದಾಹರಣೆಗೆ ಕುಡಿಯುವ ನೀರು, ಶೌಚಾಲಯ - ಎಂಬುದೂ ಆ ಜಿಲ್ಲೆ ಅಥವಾ ರಾಜ್ಯದ ಜನರ ಅಭಿವೃದ್ಧಿಯನ್ನು ನಮ್ಮ ಆರ್ಥಿಕ ವ್ಯವಸ್ಥೆ ಎಷ್ಟು ಪರಿಗಣಿಸಿದೆ ಎಂಬುದನ್ನು ಸೂಚಿಸುತ್ತದೆ. ಹಾಗೆಯೇ ಒಂದು ಪ್ರದೇಶದಲ್ಲಿ ಉತ್ತಮ ರಸ್ತೆ ಇದ್ದರೆ, ಅಲ್ಲಿಯ ಜನತೆಯ ಗಳಿಕೆಯ ಸಾಮರ್ಥ್ಯ ಹೆಚ್ಚಿದ್ದರೆ ಸಹಜವಾಗಿಯೇ ಗಳಿಸಿದ ಆದಾಯವನ್ನು ವಾಹನ, ಟಿವಿ, ಕಂಪ್ಯೂಟರ್ ಇನ್ನಿತರ ಸೌಲಭ್ಯಗಳ ಮೇಲೆ ವಿನಿಯೋಗಿಸುತ್ತಾರೆ. ಹೀಗಾಗಿ ಒಂದು ಪ್ರದೇಶದಲ್ಲಿ ಎಷ್ಟು ವಾಹನ ಮತ್ತು ಇತರ ಸೌಲಭ್ಯಗಳು ಇವೆ ಎಂಬುದೂ ಆ ಪ್ರದೇಶದ ಆರ್ಥಿಕತೆ ಮತ್ತು ಅಭಿವೃದ್ಧಿಯ ಮಾದರಿಯ ಗುಟ್ಟನ್ನು ಹೊರಹಾಕುತ್ತದೆ. ಅದೇರೀತಿ ಇತರ ಕನಿಷ್ಠ ಸೌಲಭ್ಯಗಳೂ ಇಲ್ಲದ ಕಡೆ ಕೇವಲ ಉಪಭೋಗೀ ಸಾಮಗ್ರಿಗಳ ಭರಾಟೆ ಇದ್ದರೆ ಆ ಅಭಿವೃದ್ಧಿಯ ವಿಕೃತತೆ ಮತ್ತು ಪ್ರಭುತ್ವದ ಪಾತ್ರವನ್ನೂ ಅದು ಬಿಡಿಸಿಡುತ್ತದೆ. ಇವೆಲ್ಲವೂ ಸರ್ಕಾರೀ ಅಂಕಿಅಂಶಗಳೇ ಆಗಿದ್ದು ಅದರಲ್ಲಿ ಸಂಪೂರ್ಣ ಸತ್ಯ ಪ್ರತಿಫಲನವಾಗಿರುವುದಿಲ್ಲ ಎಂಬ ಎಚ್ಚರ ಇಟ್ಟುಕೊಂಡು ಪರಿಶೀಲಿಸಿದರೂ ಒಟ್ಟಾಗಿ ಒಂದು ಸ್ವರೂಪದ ಚಹರೆಯಂತೂ ಅದರಲ್ಲಿ ಅಡಕವಾಗಿರುವುದನ್ನು ನಿರಾಕರಿಸಲಾಗುವುದಿಲ್ಲ.

ಈ ಹಿನ್ನೆಲೆಯಲ್ಲಿ 2011ರ **Housing, Household Amenities and Assets** ವರದಿ ಕರ್ನಾಟಕದ ಬಗ್ಗೆ ನೀಡಿರುವ ಅಂಕಿಅಂಶಗಳನ್ನು ಗಮನಿಸಿದರೆ ಒಟ್ಟಾರೆ ಕರ್ನಾಟಕದ ಅಭಿವೃದ್ಧಿ ಪಥ ಹಿಂದುಳಿದ ಜಿಲ್ಲೆಗಳನ್ನು ಹಿಂದುಳಿದವನ್ನಾಗಿಯೂ, ಮುಂದುವರೆದ ಜಿಲ್ಲೆಗಳನ್ನು ಇನ್ನಷ್ಟು ಮುಂದುವರೆದವನ್ನಾಗಿಯೂ ಬೆಳೆಸಿರುವುದು ನಿಚ್ಚಳವಾಗಿ ಗೋಚರವಾಗುತ್ತದೆ.

ಈ ಸೆನ್ಸಸ್‌ನ ಪ್ರಕಾರ ರಾಜ್ಯದಲ್ಲಿ 2001ರಲ್ಲಿ 1.38 ಕೋಟಿ ಮನೆಗಳಿದ್ದದ್ದು 2011ರಲ್ಲಿ ಅವುಗಳ ಸಂಖ್ಯೆ 1.79 ಕೋಟಿಗೆ ಏರಿದೆ. ಅಂದರೆ ಕಳೆದ ಹತ್ತು ವರ್ಷಗಳಲ್ಲಿ 40 ಲಕ್ಷ ಮನೆಗಳು ಸೇರ್ಪಡೆಗೊಂಡಿವೆ. ಆದರೆ ಇವುಗಳಲ್ಲಿ ಗ್ರಾಮೀಣ ಪ್ರದೇಶದ ಶೇ. 51.7 ರಷ್ಟು ಮತ್ತು ನಗರ ಪ್ರದೇಶದ ಶೇ.60.1ರಷ್ಟು ಮನೆಗಳು ಮಾತ್ರ ಸರ್ಕಾರ ಗುಣಮಟ್ಟದ್ದಾಗಿವೆ. ತನ್ನ ಅಧಿಕಾರಾವಧಿಯಲ್ಲಿ ಗುಡಿಸಲು ಮುಕ್ತ ರಾಜ್ಯವನ್ನಾಗಿ ಮಾಡಿರುವುದಾಗಿ ಸರ್ಕಾರ ಹೇಳಿಕೊಳ್ಳುತ್ತಿದ್ದರೂ 2011ರ ಸೆನ್ಸಸ್‌ನ ಪ್ರಕಾರ 15,02,930 ಗುಡಿಸಲುಗಳು ಈಗಲೂ ಉಳಿದುಕೊಂಡಿವೆ.

ಇವುಗಳಲ್ಲಿ ರಾಜ್ಯಾದ್ಯಂತ ಒಂದು ಮನೆಯಲ್ಲಿ ನಾಲ್ವರು ಇರುವ ಸಂಖ್ಯೆ 2001ರಲ್ಲಿ ಶೇ.22.4ರಷ್ಟಿದ್ದದ್ದು 2011ರಲ್ಲಿ 26.2ಕ್ಕೆ, ಮೂವರು ಇರುವ ಸಂಖ್ಯೆ 12.1ರಿಂದ 15.4ಕ್ಕೆ, ಇಬ್ಬರಿರುವ ಸಂಖ್ಯೆ 7.9ರಿಂದ 9.6ಕ್ಕೆ ಏರಿದ್ದರೆ 5 ಜನರಿರುವ ಮನೆಗಳ ಸಂಖ್ಯೆ 19.8ರಿಂದ 18.9ಕ್ಕೆ, 6-8 ಜನರಿರುವ ಮನೆಗಳ ಸಂಖ್ಯೆ 25.4ರಿಂದ 20.7ಕ್ಕೆ, 9ಕ್ಕಿಂತ ಜಾಸ್ತಿ ಜನರಿರುವ ಮನೆಗಳ ಸಂಖ್ಯೆ 9ರಿಂದ 5.2ಕ್ಕೆ ಇಳಿದಿದ್ದರೂ ಇದು ಒಟ್ಟಾರೆ ಚಿತ್ರಣವನ್ನೇನೂ ಕೊಡುವುದಿಲ್ಲ. ಉದಾಹರಣೆಗೆ 4 ಜನರಿರುವ ಮನೆಗಳ ಸಂಖ್ಯೆ ರಾಜ್ಯದಲ್ಲಿ ಸರಾಸರಿ 26.2 ಇದ್ದರೂ ಮೈಸೂರು (31.3), ಹಾಸನ (32.5), ಶಿವಮೊಗ್ಗ (31.1)ದಂಥ ಸಾಪೇಕ್ಷವಾಗಿ ಮುಂದುವರೆದ ಜಿಲ್ಲೆಗಳಲ್ಲಿ ಬ್ರಾಕೆಟ್‌ನಲ್ಲಿ ತೋರಿಸಿರುವಂತೆ ರಾಜ್ಯದ ಸರಾಸರಿಗಿಂತ ಎಷ್ಟೋ ಪಟ್ಟು ಹೆಚ್ಚಿದೆ. ಆದರೆ ಅದೇ ಸಮಯದಲ್ಲಿ ಯಾದಗಿರಿ (14.5), ಬೀದರ್ (17.5), ಬಿಜಾಪುರ (18.8)ದಂಥ ಹಿಂದುಳಿದ ಜಿಲ್ಲೆಗಳಲ್ಲಿ 4 ಜನರಿರುವ ಮನೆಗಳ ಸಂಖ್ಯೆ ರಾಜ್ಯದ ಸರಾಸರಿಗಿಂತ ಎಷ್ಟೋ ಪಾಲು ಕೆಳಗಿದೆ. ಆದರೆ ಈ ಹಿಂದುಳಿದ ಜಿಲ್ಲೆಗಳಲ್ಲಿ 6-8ರಷ್ಟು ಜನರಿರುವ ಮನೆಗಳ ಸಂಖ್ಯೆ ರಾಜ್ಯದ ಸರಾಸರಿಗಿಂತ (20.7) ಸಾಕಷ್ಟು ಹೆಚ್ಚಿದೆ. ಉದಾಹರಣೆಗೆ 6-8ರಷ್ಟು ಜನರಿರುವ ಮನೆಗಳ ಸಂಖ್ಯೆ ಯಾದಗಿರಿಯಲ್ಲಿ 35.7 ಅಷ್ಟಿದ್ದರೆ, ಗುಲ್ಬರ್ಗ-ಶೆ.34, ರಾಯಚೂರು 30.4, ಬೀದರ್- 34.3 ರಷ್ಟಿದೆ. ಅಷ್ಟು ಮಾತ್ರವಲ್ಲ, ಒಂದು ಮನೆಯಲ್ಲಿ 9ಕ್ಕಿಂತ ಹೆಚ್ಚು ಜನ ಇರುವವರ ಸಂಖ್ಯೆಯಲ್ಲಿ ರಾಜ್ಯದ ಸರಾಸರಿ ಕೇವಲ ಶೇ.5.2ರಷ್ಟಿದ್ದರೆ, ಯಾದಗಿರಿಯಲ್ಲಿ ಅದು ಶೇ.13.8, ಕೊಪ್ಪಳ 9.71, ಬಿಜಾಪುರ 9.5 ರಷ್ಟನ್ನು ದಾಖಲಿಸಿದೆ. ಹೀಗೆ ಹಿಂದುಳಿದ ಜಿಲ್ಲೆಗಳಲ್ಲಿ 6-9? ಇರುವ ಮನೆಗಳ ಸಂಖ್ಯೆ ಅಂದರೆ ಅವಿಭಕ್ತ ಕುಟುಂಬಗಳ ಅರ್ಥಾತ್ ಊಳಿಗಮಾನ್ಯ ಕೃಷಿ ಆಧಾರಿತ ಮನೆಗಳ ಸಂಖ್ಯೆ ಮೊದಲಿಗಿಂತ ಕಡಿಮೆಯಾಗುತ್ತಿದ್ದರೂ ರಾಜ್ಯದ ಸರಾಸರಿಗಿಂತ ಈಗಲೂ ಹೆಚ್ಚೇ ಇದೆ. ಇದು ದಕ್ಷಿಣಕ್ಕೆ ಹೋಲಿಸಿದರೆ ಮನೆವಾಳ್ತನದಲ್ಲಿ ಉತ್ತರದ ಹಿಂದುಳಿದ ಜಿಲ್ಲೆಗಳು ಇನ್ನೂ ಊಳಿಗಮಾನ್ಯ ಸ್ವರೂಪದಿಂದ ಕಳಚಿಕೊಳ್ಳುವ ವೇಗದಲ್ಲಿ ಹಿಂದಿವೆ ಎನ್ನುವುದನ್ನು ಸೂಚಿಸುತ್ತವೆ.

ಹಾಗೆಯೇ ಪ್ರತಿ ಮನೆಗಳಿಗೆ ಸಿಗುತ್ತಿರುವ ಸೌಲಭ್ಯಗಳನ್ನು ಗಮನದಲ್ಲಿಟ್ಟುಕೊಂಡು ನೋಡಿದರೂ ದಕ್ಷಿಣ ಮತ್ತು ಹಿಂದುಳಿದ - ಅದರಲ್ಲೂ ಹಿಂದುಳಿದ ಹೈದರಾಬಾದ್ ಕರ್ನಾಟಕದ - ಪ್ರದೇಶಗಳ ನಡುವಿನ ವ್ಯತ್ಯಾಸ ಎದ್ದು ಕಾಣುತ್ತದೆ. ಉದಾಹರಣೆಗೆ ಈ ರಾಜ್ಯ ಎಷ್ಟೋ ಮುಂದುವರೆದಿದೆ ಎಂದು ಹೇಳಿಕೊಳ್ಳುತ್ತಿದ್ದರೂ ಈಗಲೂ ರಾಜ್ಯದ ಶೇ.57.5ರಷ್ಟು ಮನೆಗಳು ಅಡುಗೆ ಮಾಡಲು ಸೌದೆಯಂಥ ಉರುವಲನ್ನೇ ಆಶ್ರಯಿಸಿವೆ. ಶೇ. 32.5ರಷ್ಟು ಜನ ಮಾತ್ರ ಎಲ್‌ಪಿಜಿ ಇಂಧನವನ್ನು ಬಳಸುತ್ತಾರೆ. ಆದರೆ ಅದರಲ್ಲಿರುವ ಪ್ರಾದೇಶಿಕ ವ್ಯತ್ಯಾಸವನ್ನು ನೋಡಿದರೂ ಅಭಿವೃದ್ಧಿಯ ತಾರತಮ್ಯ ಎದ್ದು ಕಾಣುತ್ತದೆ. ಉದಾಹರಣೆಗೆ ಯಾದಗಿರಿಯ ಶೇ.86ರಷ್ಟು ಮನೆಗಳು ಈಗಲೂ ಉರುವಲು ಸೌದೆಯನ್ನೇ ಆಶ್ರಯಿಸಿದ್ದರೆ, ಮೈಸೂರಿನಲ್ಲಿ ಕೇವಲ ಶೇ. 48ರಷ್ಟು ಮಾತ್ರ ಉರುವಲನ್ನು ಆಶ್ರಯಿಸುತ್ತಾರೆ. ಮೈಸೂರಿನಲ್ಲಿ ಶೇ.37.8ರಷ್ಟು ಮನೆಗಳು ಎಲ್‌ಪಿಜಿ ಸೌಲಭ್ಯ ಪಡೆದಿದ್ದರೆ ಯಾದಗಿರಿಯಲ್ಲಿ ಕೇವಲ ಶೆ.9.5ರಷ್ಟು ಮತ್ತು ಕೊಪ್ಪಳದಲ್ಲಿ ಶೇ.12.2ರಷ್ಟು ಜನ ಮಾತ್ರ ಎಲ್‌ಪಿಜಿ ಕನೆಕ್ಷನ್ ಪಡೆದಿದ್ದಾರೆ. ಸೀಮೆ ಎಣ್ಣೆ ಬಳಕೆ ರಾಜ್ಯದ ಸರಾಸರಿಗಿಂತ -5.4-ಗಿಂತ ಮೂರುಪಟ್ಟು ಹೆಚ್ಚಾಗಿ ಬಳಕೆಯಾಗುತ್ತಿರುವುದು ಬೆಂಗಳೂರಿನಲ್ಲಿ (ಶೇ.15.9ರಷ್ಟು). ಇದು ಬಹಳಷ್ಟು ಸ್ಲಂ ನಿವಾಸಿಗಳ ಉರುವಲು ಎಂಬುದರಲ್ಲಿ ಸಂಶಯವಿರಬೇಕಿಲ್ಲ. ಏಕೆಂದರೆ ಬೆಂಗಳೂರಿನ ಸ್ಲಂ ಬಡವರು ಎಲ್‌ಪಿಜಿಯನ್ನಾಗಲೂ ಮಣದ ಲೆಕ್ಕದಲ್ಲಿ ಸೌದೆಯನ್ನಾಗಲೀ ಕೊಂಡುಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ಬೆಂಗಳೂರಿನಲ್ಲಿ ಸೌದೆಯ ರೇಟು ಎಲ್‌ಪಿಜಿ ರೇಟನ್ನೂ ಮೀರಿಸುತ್ತದೆ.

ಇದಲ್ಲದೆ ಪ್ರತಿ ಮನೆ ಗಳಿಸಿಕೊಂಡ ಆಸ್ತಿಪಾಸ್ತಿಗಳನ್ನು ಲೆಕ್ಕ ಹಾಕಿದರೆ ಕಳೆದ 10 ವರ್ಷಗಳಲ್ಲಿ ಟೆಲಿವಿಷನ್ ಮತ್ತು ಫೋನುಗಳ ಸಂಪರ್ಕದಲ್ಲಿ ಸ್ಫೋಟಕ ರೀತಿಯ ಬದಲಾವಣೆ ಕಂಡುಬರುತ್ತದೆ. 2001ರಲ್ಲಿ ಶೇ.37 ಮನೆಗಳಲ್ಲಿ ಟಿವಿ ಇದ್ದರೆ ಈಗ ಶೇ.60ರಷ್ಟು ಮನೆಗಳಲ್ಲಿ ಟಿವಿಗಳಿವೆ. ಆದರೆ ಆದರಲ್ಲೂ ಸಾಕಷ್ಟು ಪ್ರಾದೇಶಿಕ ವ್ಯತ್ಯಾಸಗಳು ಕಂಡುಬರುತ್ತದೆ. ಉದಾಹರಣೆಗೆ ಯಾದಗಿರಿ ಜಿಲ್ಲೆಯಲ್ಲಿ ಟಿವಿ ಇರುವ ಮನೆಗಳ ಸಂಖ್ಯೆ ಕೇವಲ ಶೇ.30-ಅಂದರೆ ರಾಜ್ಯದ ಸರಾಸರಿಗಿಂತ ಅರ್ಧದಷ್ಟು ಕಡಿಮೆ. ಹಾಗೆಯೇ ಬೀದರ್ 37.11, ಕೊಪಳ 43.9, ರಾಯಚೂರು 45ರಷ್ಟು ಮನೆಗಳು ಮಾತ್ರ ಟಿವಿಗಳನ್ನು ಹೊಂದಿವೆ.

ಒಟ್ಟಾರೆಯಾಗಿ ನೋಡಿದಲ್ಲಿ ಮೊಬೈಲ್ ಫೋನ್ ಬಳಕೆಯಲ್ಲಿ ಮಾತ್ರ ಈ ಜಿಲ್ಲೆಗಳು ರಾಜ್ಯದ ಸರಾಸರಿಗಿಂತ ಹೆಚ್ಚಿನ ಅಂಶಗಳನ್ನು ದಾಖಲಿಸಿವೆ. ರಾಜ್ಯದಲ್ಲಿ 2001ರಲ್ಲಿ ಟೆಲಿಫೋನ್ ಕನೆಕ್ಟಿವಿಟಿ ಶೇ.12.8 ಇದ್ದದ್ದು ಕಳೆದ 10 ವರ್ಷಗಳಲ್ಲಿ ಶೇ.71 ಕ್ಕೆ ಏರಿದೆ. ಅದರಲ್ಲಿ ಲ್ಯಾಂಡ್ ಲೈನ್‌ಗಿಂತ ಮೊಬೈಲ್ ಫೋನ್ ಕನೆಕ್ಟಿವಿಟಿಯೇ ಹೆಚ್ಚಾಗಿ ಈ ಹಿಂದುಳಿದ ಜಿಲ್ಲೆಗಳಲ್ಲಿ ಕಂಡುಬರುತ್ತದೆ. ಉದಾಹರಣೆಗೆ ಮೊಬೈಲ್ ಫೋನ್ ಕನೆಕ್ಟಿವಿಟಿಯಲ್ಲಿ ರಾಜ್ಯದ ಸರಾಸರಿ ಶೇ.56.5ರಷ್ಟಿದ್ದರೆ ಬಿಜಾಪುರ-61.2, ರಾಯಚೂರು-59, ಕೊಪ್ಪಳ-57.11ರಷ್ಟು ದಾಖಲಿಸಿದೆ. ಆದರೆ ಇದರಲ್ಲೂ ಬೀದರ್ ಶೇ. 45.2ರಷ್ಟನ್ನೂ, ಚಿತ್ರದುರ್ಗ ಶೇ.47ರಷ್ಟನ್ನು ದಾಖಲಿಸಿದೆ. ಆಯಾ ಜಿಲ್ಲೆಗಳಿಗೆ ಹೋಲಿಸಿಕೊಂಡಲ್ಲಿ ಮೊಬೈಲ್, ಟಿವಿ ಇತ್ಯಾದಿಗಳ ಪ್ರಮಾಣ ಹಲವು ಪಟ್ಟು ಜಾಸ್ತಿಯೇ ಎನ್ನುವುದರಲ್ಲಿ ಸಂದೇಹವಿಲ್ಲ. ಆದರೆ ಜಿಲ್ಲೆಗಳ ನಡುವೆ ಹೋಲಿಸಿದಲ್ಲಿ ಇರುವ ವ್ಯತ್ಯಾಸ ಮತ್ತು ಅಭಿವೃ[ದ್ಧಿಯ] ತಾರತಮ್ಯ ಎದ್ದು ಕಾಣುತ್ತದೆ.

ಅದೇರೀತಿ ಸ್ಕೂಟರ್, ಮೋಟಾರ್ ಸೈಕಲ್, ಮೊಪೆ[ಡ್]ಗಳ ಒಡೆತನದಲ್ಲಿ 2001ರಲ್ಲಿ ಶೇ.14.4 ಇದ್ದದ್ದು 2011ರ[ಲ್ಲಿ] ಶೇ. 25.6ಕ್ಕೇರಿದೆ. ಆದರೆ ಅದರಲ್ಲೂ ಇರುವ ಪ್ರಾದೇಶಿ[ಕ] ತಾರತಮ್ಯ ಕಣ್ಣಿಗೆ ರಾಚುತ್ತದೆ. ಈ ಟು ವೀಲರ್‌ಗಳ ಒಡೆತನ[ದಲ್ಲಿ] ರಾಜ್ಯದ ಸರಾಸರಿ ಶೇ.25.6 ಇದ್ದರೆ ಯಾದಗಿರಿ ಜಿ[ಲ್ಲೆ] ಕೇವಲ ಶೇ.11.7ರಷ್ಟು ಒಡೆತನವನ್ನೂ, ಬೀದರ್ 14.[…] ರಾಯಚೂರು 19.6, ಕೊಪ್ಪಳ 17.4ರಷ್ಟು ಹೆಚ್ಚಳವ[ನ್ನು] ಮಾತ್ರ ದಾಖಲಿಸಿವೆ. ಅದೇ ರೀತಿ ಕಾರ್ ಒಡೆತನ[ದ] ಹೆಚ್ಚಳದಲ್ಲಿ ರಾಜ್ಯದ ಸರಾಸರಿ ಶೇ.6.3ರಷ್ಟಿದ್ದರೆ ಯಾದಗಿ[ರಿ]ಯಲ್ಲಿ ಕೇವಲ ಶೇ 2.2, ಬಿಜಾಪುರ 2.9, ಬೀದರ್ 3[…] ಮಾತ್ರವಿದೆ. ಇವುಗಳ ಸಂಖ್ಯೆ ರಾಜ್ಯದ ಸರಾಸರಿಗಿಂ[ತ] ಹೆಚ್ಚಿರುವುದು ಬೆಂಗಳೂರು, ಮೈಸೂರು, ದಕ್ಷಿಣ ಕನ್[ನಡ] ಮತ್ತು ಉಡುಪಿಯಲ್ಲಿ ಎಂಬುದು ಏನನ್ನು ಸೂಚಿಸುತ್ತದೆ[?]

ಹಾಗೆಯೇ ಬ್ಯಾಂಕ್ ಸೌಲಭ್ಯಗಳ ದೃಷ್ಟಿಯಿಂ[ದ] ನೋಡಿದರೆ ಕಳೆದ 10 ವರ್ಷಗಳಲ್ಲಿ ಅದು ಬೆಳೆಯು[…] ಶೇ.61ರಷ್ಟು ಪ್ರದೇಶಗಳು ಬ್ಯಾಂಕ್ ವ್ಯಾಪ್ತಿಯ[…] ಬಂದಿರುವುದು ನಿಜವಾದರೂ, ಈಗಲೂ ಯಾದಗಿರಿ[…] ಶೇ.39, ರಾಯಚೂರಿನ ಶೇ.50 ಮತ್ತು ಕೊಪಳದ ಶೇ.4[…] ಪ್ರದೇಶಗಳಿಗೆ ಮಾತ್ರ ಬ್ಯಾಂಕ್ ಸೌಲಭ್ಯ ದಕ್ಕಿದೆ.

ಕಳೆದ 10 ವರ್ಷದಲ್ಲಿ 60 ಲಕ್ಷ ಮನೆಗಳು ಹೊಸದ[ಾಗಿ] ಸೇರ್ಪಡೆಯಾಗಿದ್ದರೂ ಈಗಲೂ 15 ಲಕ್ಷ ಮನೆಗ[ಳು] ಗುಡಿಸಲು ಮನೆಗಳೇ. ರಾಜ್ಯದಲ್ಲಿ ಸರಾಸರಿ ಶೇ.11 ರ[ಷ್ಟು] ಮಾತ್ರ ಗುಡಿಸಲುಗಳು ಎಂದು ಸರ್ಕಾರ ಹೇಳಿಕೊಂಡರ[ೂ] ಅದರಲ್ಲಿ ಹೈದರಾಬಾದ್ ಕರ್ನಾಟಕದ ಜಿಲ್ಲೆಗಳ ಸಾಕ[ಷ್ಟು] ಗುಡಿಸಲುಗಳನ್ನು ಹೊಂದಿವೆ. ಬಿಜಾಪುರದ ಶೇ.44[…] ಯಾದಗಿರಿಯ ಶೇ.43.2, ಕೊಪ್ಪಳದ ಶೇ.37.4 ಮ[ತ್ತು] ರಾಯಚೂರಿನ ಶೇ.38 ರಷ್ಟು ಮನೆಗಳು ಗುಡಿಸಲುಗ[ಳು…]

ಹಾಗಾದರೆ ಈ ಅಂಕಿಸಂಖ್ಯೆಗಳು ಹೇಳುತ್ತಿರು[ವ] ಕಥೆಯೇನು? ಹಿಂದಿಗಿಂತ ಪ್ರತಿಯೊಂದು ಜಿಲ್ಲೆಗಳಲ[್ಲೂ] ಮನೆಗಳು, ಆದರಲ್ಲಿನ ಸೌಲಭ್ಯಗಳು ಮತ್ತು ಪ್ರತಿ ಮನೆಗಿರು[ವ] ಆಸ್ತಿಪಾಸ್ತಿಗಳು ಸಂಖ್ಯಾತ್ಮಕವಾಗಿ ಹೆಚ್ಚಿವೆ. ಆದರೆ ಅ[ವು] ಹರಡಿಕೊಂಡಿರುವ ರೀತಿಯನ್ನು ನೋಡಿದರೆ ಐತಿಹಾಸಿಕವ[ಾಗಿ] ಅಭಿವೃದ್ಧಿ ಹೊಂದಿದ ಜಿಲ್ಲೆಗಳು ಹೆಚ್ಚು ಸೌಲಭ್ಯವನ್ನು ಕಂಡಿ[ದ್ದರೆ,] ಹಿಂದುಳಿದ ಜಿಲ್ಲೆಗಳಲ್ಲಿ ಮೊದಲಿಗಿಂತ ಸಂಖ್ಯೆ ಹೆಚ್ಚಾಗಿದ್ದ[ರೂ] ದಕ್ಷಿಣದ ಜಿಲ್ಲೆಗಳೊಂದಿಗೆ ಅಂತರವೂ ಹೆಚ್ಚಿದೆ. ಮುಖ್ಯವ[ಾಗಿ] ಹಿಂದುಳಿದ ಜಿಲ್ಲೆಗಳಲ್ಲಿ ಇನ್ನೂ ಅತಿ ಹಿಂದುಳಿದ ಜಿಲ್ಲೆಗಳ[ಾಗಿ] ಬೀದರ್, ಯಾದಗಿರಿ, ಕೊಪ್ಪಳಗಳು ರೂಪುಗೊಳ್ಳುತ್ತಿವೆ.

ಈ ಅಭಿವೃದ್ಧಿ ಮಾದರಿ ಬಡ ಜಿಲ್ಲೆ ಮತ್ತು ಶ್ರೀಮ[ಂತ] ಜಿಲ್ಲೆಗಳ ಅಂತರವನ್ನು ಇನ್ನೂ ಹೆಚ್ಚು ಮಾಡುತ್ತಿವೆ. ಅ[…] ಶ್ರೀಮಂತ ಜಿಲ್ಲೆಗಳಲ್ಲಿನ ಬಡವರ ಪಾಡು ಹಿಂದು[ಳಿದ] ಜಿಲ್ಲೆಗಳ ಬಡವರಷ್ಟೆ ದಾರುಣವಾಗಿದೆ. ಎಲ್‌[ಪಿಜಿ] ಕನೆಕ್ಷನ್‌ಗಳನ್ನು ಅತಿಹೆಚ್ಚು ಹೊಂದಿರುವ ಬೆಂಗಳೂರಿನ[…] ಅತಿಹೆಚ್ಚು ಸೀಮೆಎಣ್ಣೆ ಕೂಡಾ ಖರ್ಚಾಗುತ್ತದೆ. ಇ[…] ಬಡಜನರು ಎಲ್‌ಪಿಜಿಯನ್ನಾಗಲೀ, ಸೌದೆಯನ್ನಾಗ[ಲೀ] ಕೊಳ್ಳಲು ಸಾಧ್ಯವಿಲ್ಲದೆ ರಾತ್ರಿಯೆಲ್ಲಾ ಸೀಮೆಎಣ್ಣೆ ಕ್ಯೂ[…] ನಿಲ್ಲುವ ದೃಶ್ಯ ಉತ್ತರದ ಜಿಲ್ಲೆಗಳಲ್ಲಿ ಬೆಳ್ಳಂಬೆಳಗ್ಗೆ ಎ[…] ಉರುವಲು ಹುಡುಕುತ್ತಾ ಹೊರಡುವ ಮಹಿಳೆಯ[ರ] ಬವಣೆಯ ದೃಶ್ಯವನ್ನೇ ನೆನಪಿಸುತ್ತದೆ.

ರಾಜ್ಯಕ್ಕೆ ಬರ ಬಡಿದರೆ, ಸರ್ಕಾರಕ್ಕೆ ಗರ ಬಡಿದಿದೆ

ಜಗದೀಶ್ ಶೆಟ್ಟರ್ ನಾಲ್ಕು ವರ್ಷಗಳಲ್ಲೇ ಬಿಜೆಪಿಯ ಮೂರನೆ ಮುಖ್ಯಮಂತ್ರಿ ಆಗುವ ಸೂಚನೆಗಳು ಕಂಡು ಬಂದಾಗ ಅವರ ಸ್ನೇಹಿತರೊಬ್ಬರು ನನಗೆ "ಶೆಟ್ಟರ್ ಅವರು ನೀವು ಭಾವಿಸಿರುವಂತೆ ಕಟ್ಟರ್ ಆರೆಸ್ಸೆಸ್‌ವಾದಿ ಅಲ್ಲ, ಅವರು ಯಡಿಯೂರಪ್ಪನ ತರಹ ಹೋಮ, ಹವನ, ವಾಸ್ತುಗಳಲ್ಲಿ ಮೂಢನಂಬಿಕೆಯನ್ನು ಹೊಂದಿರುವವರಲ್ಲ; ಮಠ, ದೇವಸ್ಥಾನಗಳಿಗೆ ಎಡತಾಕುವವರಲ್ಲ, ಶೆಟ್ಟರ್ ಆರೆಸ್ಸೆಸ್ ಮೂಲದವರಾಗಿದ್ದರೂ ನಿಮ್ಮಂತೆ ನಾಸ್ತಿಕರು" ಎಂದು ಹೇಳಿದ್ದರು. ಅವರ ಮಾತನ್ನು ಕೇಳಿ "ಅರೆರೆ, ಇದೆಂತಹ ಅಚ್ಚರಿ" ಎಂದು ಒಂದುಕ್ಷಣ ನನಗನ್ನಿಸಿತ್ತು. ಆದರೆ ಆರೆಸ್ಸೆಸ್ ಎಂಬ ಮೂಲಭೂತವಾದಿಗಳ ಅಂಗಳದಲ್ಲೇ ಬೆಳೆದಿರುವ ಶೆಟ್ಟರ್ ತರಹದ ಜನರಲ್ಲಿ ಯಾವ ರೀತಿಯ ಪ್ರಗತಿಪರ ಧೋರಣೆಯಾಗಲಿ, ಮೂಢನಂಬಿಕೆಗಳ ವಿರುದ್ಧದ ನಿಲುವಾಗಲೀ ಇರುವುದು ಸಾಧ್ಯವೇ ಇಲ್ಲ ಎಂಬುದು ಶೆಟ್ಟರ್ ಪ್ರಮಾಣವಚನ ಸ್ವೀಕರಿಸಿದ ನಂತರದ ಕೆಲವೇ ಕ್ಷಣಗಳಲ್ಲಿ ಸ್ಪಷ್ಟವಾಯಿತು.

'ನಾಸ್ತಿಕ' ಎಂದು ತನ್ನನ್ನು ಕರೆದುಕೊಳ್ಳುವ ಶೆಟ್ಟರ್ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುತ್ತಿದ್ದಂತೆ ಅವರ ಪತ್ನಿ ಶಿಲ್ಪಾ ವಿಧಾನಸೌಧದಲ್ಲಿರುವ ಮುಖ್ಯಮಂತ್ರಿಯ ಕಚೇರಿಯಲ್ಲಿ 'ಚಂಡಿಕಾ ಹೋಮ'ವನ್ನೋ ಇನ್ನೆಂಥದ್ದೋ ಮಣ್ಣುಮಸಿಯನ್ನೋ ಮಾಡಿಸಿದರು. ಹೋಗಲಿ, 'ಸಂಪ್ರದಾಯ'ದಲ್ಲಿ ನಂಬಿಕೆ ಹೊಂದಿರುವ ಶಿಲ್ಪಾ ಶೆಟ್ಟರ್ ತರಹದ ಗೃಹಿಣಿಯ ಕೆಲಸವಿದು ಎಂದು ಅದನ್ನು ನಿರ್ಲಕ್ಷಿಸೋಣವೆಂದರೆ ಸ್ವತಃ ಜಗದೀಶ್ ಶೆಟ್ಟರ್ ಮುಖ್ಯಮಂತ್ರಿ ಆಗುತ್ತಿದ್ದಂತೆ ರಾಜ್ಯದ ಜ್ವಲಂತ ಸಮಸ್ಯೆಯಾದ ಬರದ ಬಗ್ಗೆ ಗಮನ ಕೊಡುವ ಬದಲು ವಿವಿಧ ಮಠಗಳಿಗೆ, ದೇವಸ್ಥಾನಗಳಿಗೆ ಭೇಟಿ ನೀಡಲಾರಂಭಿಸಿದರು. ಪರಮ ಜಾತಿವಾದಿಯೂ, ಭ್ರಷ್ಟಾಚಾರಿಯೂ, ಮೌಢ್ಯಗಳ ಬೆಂಬಲಿಗನೂ ಆದ ಯಡ್ಡಿಯ ಕೃಪಾಶೀರ್ವಾದದಿಂದಲೇ



ಮುಖ್ಯಮಂತ್ರಿ ಸ್ಥಾನಕ್ಕೇರಿದ ಶೆಟ್ಟರ್ ವಿಧಿ ಇಲ್ಲದೆ ಹೀಗೆ ಮಠಗಳಿಗೆ ರೌಂಡು ಹೊಡೆಯುತ್ತಿದ್ದಾರೆ; ಇವತ್ತಿನ ರಾಜಕೀಯದಲ್ಲಿ ಜಾತಿ ಪ್ರಮುಖ ಪಾತ್ರ ವಹಿಸುತ್ತಿರುವುದರಿಂದ ಶೆಟ್ಟರ್ ಅವರಿಗೆ ಇದೆಲ್ಲ ಅನಿವಾರ್ಯವಾಗಿದೆ ಎಂದು 'ನಾಸ್ತಿಕ' ಶೆಟ್ಟರ್ ಬಗ್ಗೆ ವಿನಾಯಿತಿ ತೋರಬಹುದೇ ಎಂದು ಯೋಚಿಸುತ್ತಿರುವಾಗಲೇ ಅವರ ನೇತೃತ್ವದ ಸರ್ಕಾರ ತನ್ನ ಪ್ರಥಮ ಅಧಿಕೃತ ಸುತ್ತೋಲೆಯನ್ನು ಹೊರಡಿಸಿದೆ. ಆ ಸುತ್ತೋಲೆಯಲ್ಲಿ ರಾಜ್ಯದಲ್ಲಿ ತಾಂಡವಾಡುತ್ತಿರುವ ಬರವನ್ನು ನೀಗಿಸಲು ಮಳೆ ಬರುವಂತೆ ಮುಜರಾಯಿ ಇಲಾಖೆಗೆ ಒಳಪಟ್ಟಿರುವ ರಾಜ್ಯದ ಎಲ್ಲಾ ದೇವಸ್ಥಾನಗಳಲ್ಲಿ ಪೂಜೆಗಳನ್ನು ನಡೆಸಬೇಕೆಂದೂ, ಇಂತಹ ಪೂಜೆಗಳಿಗೆ ಒಟ್ಟು 17 ಕೋಟಿ ರೂಪಾಯಿಗಳ ವೆಚ್ಚ ಆಗುತ್ತದೆಂದೂ ಹೇಳಲಾಗಿದೆ.

'ಸ್ವಘೋಷಿತ ನಾಸ್ತಿಕ' ಮುಖ್ಯಮಂತ್ರಿಯೋರ್ವನ ಸರ್ಕಾರ ತನ್ನ ಪ್ರಥಮ ಸುತ್ತೋಲೆಯಾಗಿ ಇಂತಹ ಮೌಢ್ಯದ ಆದೇಶವನ್ನು ಹೊರಡಿಸಿರುವುದು ನಾನು ಕಳೆದವಾರ ಇದೇ ಅಂಕಣದಲ್ಲಿ ಬರೆದದ್ದನ್ನು ಸತ್ಯವಾಗಿಸಿದೆ. ನನ್ನ ಅಂಕಣದಲ್ಲಿ ಯಡ್ಡಿ, ಸದಾನಂದ ಗೌಡ, ಶೆಟ್ಟರ್.... ಯಾರೇ ಬಿಜೆಪಿ ಪಕ್ಷದಿಂದ ಮುಖ್ಯಮಂತ್ರಿ ಆದರೂ ಬಿಜೆಪಿಯ ಮೇಲೆ ಸಂಪೂರ್ಣ ಹಿಡಿತ ಹೊಂದಿರುವ ಕೋಮುವಾದಿ, ಮೂಲಭೂತವಾದಿ ಮತ್ತು ಬ್ರಾಹ್ಮಣಶಾಹಿ ಆರೆಸ್ಸೆಸ್ ಸಿದ್ಧಾಂತವೇ ಈ ರಾಜ್ಯದಲ್ಲಿ ಕೆಲಸ ಮಾಡುತ್ತದೆ ಎಂದು ಹೇಳಿದ್ದೆ. ಅದನ್ನು ಶೆಟ್ಟರ್ ಅವರು ಕೆಲವೇ ದಿನಗಳಲ್ಲಿ ಸಾಬೀತುಪಡಿಸಿದ್ದಾರೆ!

ಶೆಟ್ಟರ್ ಅವರು ಚುನಾವಣಾ ಆಯೋಗದ ಮುಂದೆ 2008ರಲ್ಲಿ ಸಲ್ಲಿಸಿರುವ ಆಸ್ತಿ ದಾಖಲೆಗಳ ಪ್ರಕಾರ ಅವರು ಹಲವು ಕಾಂಪ್ಲೆಕ್ಸ್, ಶೇರು, ಡಿಬೆಂಚರ್, ಮನೆ, ವಾಹನ, ನಗದು ಇತ್ಯಾದಿಗಳ ಒಡೆಯರೇ ಹೊರತು ಅವರು ಯಾವುದೇ ಕೃಷಿ ಭೂಮಿಯನ್ನು ಹೊಂದಿಲ್ಲ. ಅಂದರೆ ಶೆಟ್ಟರ್ ನಮ್ಮ ರೈತರು ಅನುಭವಿಸುತ್ತಿರುವ ಸಂಕಷ್ಟಗಳನ್ನು ನೇರವಾಗಿ ಅನುಭವಿಸುತ್ತಿಲ್ಲ, ಮಾತ್ರವಲ್ಲ, ಶೆಟ್ಟರ್ ಅವರ ಪಕ್ಷ 'ಆರಾಧಿಸುವ', 'ರಕ್ಷಿಸಲು' ಹೊರಟಿರುವ 'ಗೋಮಾತೆ'ಗಳನ್ನೂ ಅವರು ಸಾಕಿಲ್ಲ. ಅಂದರೆ ಜಾನುವಾರುಗಳಿಗೆ ಅತ್ಯಗತ್ಯವಾಗಿರುವ ಮೇವಿನ ರೇಟು ಎಷ್ಟಿದೆ ಎಂದೂ ಶೆಟ್ಟರ್ ಅವರಿಗೆ ಗೊತ್ತಿರುವ ಸಾಧ್ಯತೆಗಳಿಲ್ಲ. ಆದರೆ ಹತ್ತಕ್ಕಿಂತಲೂ ಹೆಚ್ಚು ದನಗಳನ್ನು ಸಾಕಿರುವ ನನಗೆ ಅದರ ರೇಟು ಗೊತ್ತು. ಇವತ್ತು ಬೆಂಗಳೂರಿನ ಸಮೀಪದ ಹಳ್ಳಿಗಳಲ್ಲಿ ಒಂದು ಮೆದೆ ರಾಗಿ ಹುಲ್ಲಿನ ರೇಟು ಬರೋಬ್ಬರಿ **15,000** ರೂಪಾಯಿಗಳು. ಇನ್ನು ಇಂಡಿ, ಬೂಸಾಗಳ ರೇಟನ್ನು ಕೇಳಲೇ ಬೇಡಿ.

ಬರದಿಂದ ತತ್ತರಿಸುತ್ತಿರುವ ರೈತರಿಗೆ ಈಗ ಉಳಿದಿರುವ ಒಂದು ಮಾರ್ಗ ತಮ್ಮ ಜಾನುವಾರುಗಳನ್ನು ಮಾರಿ ತಮ್ಮ ಪ್ರಾಣವನ್ನು ರಕ್ಷಿಸಿಕೊಳ್ಳಲು ತಮ್ಮ ಹೊಟ್ಟೆಗೆ ಒಂದಷ್ಟು ಆಹಾರವನ್ನು ಖರೀದಿಸುವುದು. ಆದರೆ ಜಾನುವಾರು ವಧೆ ಕುರಿತಂತೆ ಚೆಡ್ಡಿಗಳು ರಾಜ್ಯಾದ್ಯಂತ ಹಬ್ಬಿಸಿರುವ ಭೀತಿಯ ಪರಿಣಾಮವಾಗಿ ಇವತ್ತು ದನಗಳ ರೇಟು ಕುಸಿದಿದೆ. ಈ ಹಿಂದೆ ಒಂದು ಸಾಮಾನ್ಯ ಗಾತ್ರದ ನಾಟಿ ದನವನ್ನು ಮಾರಿದರೆ ರೈತರಿಗೆ ಹತ್ತರಿಂದ ಹದಿನೈದು ಸಾವಿರ ರೂಪಾಯಿಗಳಾದರೂ ಸಿಗುತ್ತಿದ್ದವು. ಆದರೀಗ ಅದೇ ದನಕ್ಕೆ ಮಾರುಕಟ್ಟೆಯಲ್ಲಿ ಐದರಿಂದ ಎಂಟು ಸಾವಿರ ರೂಪಾಯಿಗಳು ಸಿಕ್ಕಿದರೆ ಹೆಚ್ಚು. ಅಂದರೆ, ಇದೇ ಶೆಟ್ಟರ್ ಅವರ ಪಕ್ಷದ ಕುತಂತ್ರ ನೀತಿಯಿಂದಾಗಿ ಇವತ್ತು ರಾಜ್ಯದ ಸಾವಿರಾರು ರೈತರಿಗೆ ಒಟ್ಟಾರೆಯಾಗಿ ಕೋಟ್ಯಾಂತರ ರೂಪಾಯಿಗಳ ನಷ್ಟ ಆಗುತ್ತಿದೆ. ರೈತರ ಹಿತಾಸಕ್ತಿಯ ಬಗ್ಗೆ ಬೊಗಳೆ ಬಿಡುವ ಚೆಡ್ಡಿಗಳ ಅಸಲಿ ರೈತ ಪರ ಕಾಳಜಿ ಇದು.

ಇದು ಬರಗಾಲದ ಒಂದು ಮುಖವಷ್ಟೇ. ಮುಂಗಾರು ಮಳೆ ಕೈಕೊಟ್ಟಿದ್ದರಿಂದ ರಾಜ್ಯದ ಸಾವಿರಾರು ರೈತರು ಈಗಾಗಲೇ ನಷ್ಟವನ್ನು ಕಂಡಿದ್ದಾರೆ, ಸಾಲಗಳಲ್ಲಿ ಸಿಲುಕಿಕೊಂಡಿದ್ದಾರೆ. ಈಗ ಇಡೀ ಮಳೆಗಾಲವೇ ಕೈಕೊಟ್ಟಿದೆ. ಲಕ್ಷಾಂತರ ರೈತರು ತಲೆ ಮೇಲೆ ಕೈಹೊತ್ತು ಕೂತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಅವರಿಗೆ ನೆರವಾಗುವ ಬದಲು ಶೆಟ್ಟರ್ ಅವರ ಸರ್ಕಾರ ದೇವಸ್ಥಾನಗಳಲ್ಲಿ ವಿಶೇಷ ಪೂಜೆಗೆ ಆದೇಶ ಹೊರಡಿಸಿದೆ. ಅಷ್ಟೇ ಅಲ್ಲ, ಇಂತಹ ಪೂಜೆಗಳಿಗೆ ಸಾರ್ವಜನಿಕರಿಗೆ ಸೌಲಭ್ಯಗಳನ್ನು ಒದಗಿಸಲು ವೆಚ್ಚವಾಗಬೇಕಿದ್ದ 17 ಕೋಟಿ ರೂಪಾಯಿಗಳನ್ನು ದುಂದುವೆಚ್ಚ ಮಾಡಲಾಗುತ್ತಿದೆ.



ಅಂದಹಾಗೆ, ಇವತ್ತು ಜಗತ್ತಿನಾದ್ಯಂತ ಚಿಂತೆ ಹುಟ್ಟಿಸಿರುವ 'ಗ್ಲೋಬಲ್ ವಾರ್ಮಿಂಗ್' (ಜಾಗತಿಕ ತಾಪಮಾನ ಏರಿಕೆ) ಬಗ್ಗೆ ಶೆಟ್ಟರ್ ಸಾಹೇಬರು ಕೇಳಿರುವಂತಿಲ್ಲ. ಈ ಭೂಮಿಯ ಮೇಲೆ ಮನುಷ್ಯ ಹೆಚ್ಚೆಚ್ಚು ಇಂಧನ, ಮರ, ಇತ್ಯಾದಿಗಳನ್ನು ಸುಟ್ಟಿದ್ದರಿಂದಲೇ ತಾಪಮಾನ ಏರಿ ಅತಿವೃಷ್ಟಿ ಮತ್ತು ಅನಾವೃಷ್ಟಿಗಳಿಗೆ ಕಾರಣವಾಗುತ್ತಿದೆ. ಇದು ಯಾವ ಮಟ್ಟಕ್ಕೆ ಹೋಗಿದೆ ಎಂದರೆ ಇವತ್ತಿನ ಪತ್ರಿಕೆಗಳ ವರದಿಯ ಪ್ರಕಾರ ಹಿಮಗಡ್ಡೆಗಳ ಪ್ರದೇಶವಾಗಿರುವ ಗ್ರೀನ್‌ಲ್ಯಾಂಡಿನ ಹೆಚ್ಚಿನ ಭಾಗ ಕೇವಲ ನಾಲ್ಕು ದಿನಗಳಲ್ಲಿ ಕರಗಿಹೋಗಿದೆ. ಇವತ್ತು ನಮ್ಮ ರಾಜ್ಯದಲ್ಲಿ ಮಾತ್ರವಲ್ಲ, ನಮ್ಮ ದೇಶ ಕೂಡ ಸೇರಿದಂತೆ ಜಗತ್ತಿನ ಹಲವಾರು ದೇಶಗಳಲ್ಲಿ ಬರದ ಪರಿಸ್ಥಿತಿ ಕಂಡುಬಂದಿದೆ. ಆದ್ದರಿಂದ ನಿಜವಾಗಲೂ ನಮ್ಮ ಭೂಮಿ, ಪರಿಸರ, ಪ್ರಕೃತಿಯ ರಕ್ಷಣೆ ಬಗ್ಗೆ ಕಾಳಜಿ ಹೊಂದಿರುವವರು, ಸರಿಯಾದ ಕಾಲಕ್ಕೆ ಸರಿಯಾದ ಪ್ರಮಾಣದಲ್ಲಿ ಮಳೆ ಆಗಲಿ ಎಂದು ಬಯಸುವವರು ಏರುತ್ತಿರುವ ಜಾಗತಿಕ ತಾಪಮಾನವನ್ನು ಕಡಿಮೆಗೊಳಿಸಲು ಪ್ರಯತ್ನಿಸಬೇಕೇ ಹೊರತು ಸೌದೆ, ತುಪ್ಪ, ಎಣ್ಣೆ ಇತ್ಯಾದಿಗಳನ್ನು ಭಸ್ಮ ಮಾಡಿ ತಾಪಮಾನದ ಏರಿಕೆಗೆ ಕಾರಣವಾಗುವ ಹೋಮ, ಹವನಗಳನ್ನಲ್ಲ. ಆದರೆ ಇಷ್ಟು ವಿವೇಚನೆ ಚೆಡ್ಡಿಗಳಿಗೆ ಬರುವುದಿಲ್ಲ ಬಿಡಿ. ಯಾಕೆಂದರೆ 'ಸ್ವಘೋಷಿತ ನಾಸ್ತಿಕ' ಶೆಟ್ಟರ್ ಅವರೂ ಸೇರಿದಂತೆ ಚೆಡ್ಡಿಗಳದ್ದು ಬರೀ ಬೂಸಾ ಬುದ್ಧಿ!

****

ಕಂಡಹಾಗೆ



editorlankesh@gmail.com • ಗೌರಿ ಲಂಕೇಶ್

ವರ್ಷಗಳು ಉರುಳಿದಂತೆ ನಮ್ಮ ಸಮಾಜದಲ್ಲಿ ಸಡಿಲಗೊಳ್ಳಬೇಕಿದ್ದ ಜಾತಿ ವ್ಯವಸ್ಥೆ ಅದೆಷ್ಟು ಗಟ್ಟಿಯಾಗುತ್ತಲೇ ಸಾಗಿದೆ ಎಂದರೆ ಇತ್ತೀಚೆಗೆ 'ಅಸ್ಪೃಶ್ಯರ' ಮನೆಯಲ್ಲಿ ತಿಂದಿದ್ದಕ್ಕೆ ಮಧ್ಯಪ್ರದೇಶ ರಾಜ್ಯದಲ್ಲಿ ಒಂದು ನಾಯಿಯ ವಿರುದ್ಧ ಬಹಿಷ್ಕಾರವನ್ನು ಹಾಕಲಾಗಿದೆ.

ವಿಪರ್ಯಾಸಗಳಿಂದ ಕೂಡಿರುವ ಈ ವಿಚಿತ್ರ ಕತೆ ಹೀಗಿದೆ: ಮಧ್ಯಪ್ರದೇಶದ ಮೊರೆನಾ ಜಿಲ್ಲೆಯಲ್ಲಿ ಮನಿಕ್‌ಪುರ್ ಎಂಬ ಹಳ್ಳಿ ಇದೆ. ಆ ಹಳ್ಳಿಯಲ್ಲಿ ರಾಮಪಾಲ್ ಸಿಂಗ್ ಎಂಬ ಭೂಮಾಲೀಕನಿದ್ದಾನೆ. ಸ್ಥಳೀಯವಾಗಿ ರಾಜಕೀಯ ಬಲವನ್ನೂ ಹೊಂದಿರುವ ಈ ರಾಮಪಾಲ್ ರಾಜಪುತ್ ಎಂಬ 'ಮೇಲು' ಜಾತಿಗೆ ಸೇರಿದವನಾಗಿದ್ದಾನೆ. ಈತ ಶೇರು ಎಂಬ ನಾಯಿಯನ್ನು ಸಾಕಿದ್ದ. ಕಪ್ಪುಬಣ್ಣದ ಶೇರು ಯಾವುದೋ 'ಉನ್ನತ' ತಳಿಯ ನಾಯಿಯಾಗಿರದೆ ಮಾಮೂಲಿ ಬೀದಿ ನಾಯಿಯಂತಿದೆ.


ಕೆಲದಿನಗಳ ಹಿಂದೆ ಇದೇ ಮನಿಕ್‌ಪುರ್ ಹಳ್ಳಿಯ ನಿವಾಸಿ ಯಾದ ಸುನೀತಾ ಎಂಬಾಕೆ ತನ್ನ ಕೃಷಿ ಕೂಲಿ ಗಂಡನಿಗೆ ಊಟ ಬಡಿಸುತ್ತಿದ್ದಳು. ಆತ ಊಟ ಮುಗಿಸಿದನಂತರ ಒಂದು ರೊಟ್ಟಿ ಉಳಿದಿತ್ತು. ಅದೇ ಹೊತ್ತಿಗೆ ಹತ್ತಿರದಲ್ಲೇ ಅತ್ತ ಇತ್ತ ಮೂಸುತ್ತಿದ್ದ ಕಪ್ಪು ನಾಯಿಯೊಂದು ಸುನೀತಾಳ ಕಣ್ಣಿಗೆ ಬಿತ್ತು. ಆ ನಾಯಿಗೆ ಹಸಿವಾಗಿರಬೇಕೆಂದು ಭಾವಿಸಿದ ಸುನೀತಾ ಉಳಿದಿದ್ದ ರೊಟ್ಟಿಯನ್ನು ಆ ನಾಯಿಗೆ ಬಿಸಾಡಿದಳು. ಶೇರು ಆ ರೊಟ್ಟಿಯನ್ನು ತಿನ್ನುತ್ತಿರುವುದನ್ನು ಆ ನಾಯಿಯ ಮಾಲೀಕ ರಾಮಪಾಲ್ ನೋಡಿದ. 'ಅಸ್ಪೃಶ್ಯ ಚಮ್ಮಾರ' ಜಾತಿಗೆ ಸೇರಿರುವ ಸುನೀತಾ 'ಸ್ಪೃಶ್ಯ' ಜಾತಿ ರಜಪುತನಾದ ತಾನು ಸಾಕಿರುವ ನಾಯಿಗೆ ರೊಟ್ಟಿ ಹಾಕಿದ್ದರ ಬಗ್ಗೆ ಕೆಂಡಾಮಂಡಲನಾದ ರಾಮಪಾಲ್ "ಲೇ ಚಮ್ಮಾರಳೇ, ನನ್ನ ನಾಯಿಗೆ ನಿನ್ನ ಮನೆಯಲ್ಲಿ ಮಾಡಿರುವ ರೊಟ್ಟಿಯನ್ನು ಹಾಕುವಷ್ಟು ಧೀಮಾಕ ನಿನಗೆ. ನಿನಗೆ ಮಾಡುತ್ತೇನೆ ಇರು" ಎಂದು ಧಮಕಿಹಾಕಿದ.

ಭೂಮಾಲೀಕ, ಸಾಹುಕಾರ, ರಾಜಕೀಯ ಪ್ರಭಾವ ಹೊಂದಿರುವ ರಾಮಪಾಲ್ ಆ ಕ್ಷಣ ಕೋಪಗೊಂಡು ಮಾತನಾಡಿದ್ದಾನೆ ಎಂದು ಭಾವಿಸಿದ ಸುನೀತ ಅದರ ಬಗ್ಗೆ ತಲೆ ಕೆಡಿಸಿಕೊಳ್ಳದೆ ಸುಮ್ಮನಾದಳು. ಆದರೆ ರಾಮಪಾಲ್ ಸುಮ್ಮನಾಗಲಿಲ್ಲ. ಊರಿನ ಪಂಚಾಯತಿಯನ್ನು ಕರೆಸಿದ. ಆ ಪಂಚಾಯತಿಯು ಇನ್ನು ಮುಂದೆ ಶೇರು ಎಂಬ ನಾಯಿಯು ರಾಜಪುತ್ ಜಾತಿಗೆ ಸೇರಿದ ರಾಮಪಾಲನ ನಾಯಿ ಅಲ್ಲವೆಂದೂ, ಚಮ್ಮಾರ ಜಾತಿಗೆ ಸೇರಿರುವ ಸುನೀತಾ ಕೊಟ್ಟ ರೊಟ್ಟಿಯನ್ನು ತಿಂದಿದ್ದಕ್ಕೆ ನಾಯಿಯೂ 'ಅಸ್ಪೃಶ್ಯ' ಆಗಿದೆ ಎಂದೂ, ಇನ್ನು ಮುಂದೆ ಶೇರು ನಾಯಿಯನ್ನು ದಲಿತರ ಕೇರಿಯಲ್ಲೇ ಕಟ್ಟಿರಬೇಕೆಂದೂ, ಅದನ್ನು ಸುನೀತಾಳ ಕುಟುಂಬವೇ ನೋಡಿಕೊಳ್ಳಬೇಕೆಂದೂ 'ತೀರ್ಪು' ನೀಡಿತು. ಹೀಗೆ ನಾಯಿ ಶೇರು ವಿರುದ್ಧ ಬಹಿಷ್ಕಾರವನ್ನು ಹಾಕಿದ ಪಂಚಾಯತಿ ರಾಜಪುತನ ನಾಯಿಯನ್ನು 'ಅಸ್ಪೃಶ್ಯ' ಮಾಡಿದ 'ಪಾಪ'ಕ್ಕೆ ಸುನೀತಾಳ ಮೇಲೆ ಬರೋಬ್ಬರಿ **15,000** ರೂಪಾಯಿಗಳ ದಂಡವನ್ನೂ ವಿಧಿಸಿತು.

ಈ ಅನ್ಯಾಯದಿಂದ ಸುನೀತಾಳ ಕುಟುಂಬ ತತ್ತರಿಸಿತು. ಹೇಳಿಕೇಳಿ ಸುನೀತಾಳದ್ದು ಕೃಷಿ ಕೂಲಿಕಾರರ ಕುಟುಂಬ. ನಾಯಿಯೊಂದಕ್ಕೆ ರೊಟ್ಟಿ ಕೊಟ್ಟಿದ್ದಕ್ಕೆ **15,000** ರೂಪಾಯಿಗಳ ದಂಡವನ್ನು ಆಕೆಯ ಕುಟುಂಬ ಎಲ್ಲಿಂದ ತರಬೇಕು? ಆಗ ಸುನೀತಾ ಮತ್ತು ಆಕೆಯ ಅಣ್ಣ ನಹರ್ ಜಾತವ್ ಈ ಅನ್ಯಾಯದ ವಿರುದ್ಧ ಹತ್ತಿರದ ಸುಮವಳಿ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಲು ಹೋದರು. ಆದರೆ ರಾಜಕೀಯ ಪ್ರಭಾವವನ್ನು ಹೊಂದಿರುವ ರಾಮಪಾಲ್ ಸಿಂಗ್ ವಿರುದ್ಧದ ದೂರನ್ನು ದಾಖಲಿಸಿಕೊಳ್ಳಲು ನಿರಾಕರಿಸಿದ ಸುಮವಳಿ ಪೊಲೀಸರು ಕಲ್ಯಾಣ್ ಠಾಣೆಯಲ್ಲಿ ದೂರು ನೀಡುವಂತೆ ಸುನೀತಾ ಮತ್ತಾಕೆಯ ಅಣ್ಣ ನಹರ್‌ಗೆ ಸೂಚಿಸಿದರು. ಅದರಂತೆ ಅವರಿಬ್ಬರು ಕಲ್ಯಾಣ್ ಠಾಣೆಗೆ ಹೋದಾಗ ಅಲ್ಲಿದ್ದ ಪೊಲೀಸರು "ನೀನ್ಯಾಕೆ ಮೇಲುಜಾತಿಯವರ ನಾಯಿಗೆ ರೊಟ್ಟಿ ಕೊಡಲು ಹೋದೆ?" ಎಂದು ಸುನೀತಾಳನ್ನೇ ಗದರಿಸಿದರು. ಆಗ ವಿಧಿ ಇಲ್ಲದೆ ಸುನೀತಾ ಮತ್ತು ನಹರ್ ಜಿಲ್ಲೆಯ ಡೀಸಿ ಮತ್ತು ಎಸ್‌ಪಿ ಮುಂದೆ ಜಾತಿನಿಂದನೆ ಕಾನೂನಿನಡಿ ದೂರು ಸಲ್ಲಿಸಲು ಯತ್ನಿಸಿದರು. ಆದರೆ ಇವತ್ತಿನವರೆಗೂ ಅವರು ಕೊಟ್ಟಿರುವ ದೂರನ್ನು ಆಧರಿಸಿ ಯಾವ ಅಧಿಕಾರಿಯೂ ಒಂದು ಎಫ್‌ಐಆರ್ ಅನ್ನೂ ತಯಾರಿಸಿಲ್ಲ.

ನಮ್ಮ ದೇಶದ ಸಂವಿಧಾನ ಅಸ್ಪೃಶ್ಯತೆಯನ್ನು ಕಾನೂನುಬಾಹಿರ ಮಾಡಿ ಆರು ದಶಕಗಳಿಗಿಂತ ಹೆಚ್ಚು ವರ್ಷಗಳಾಗಿವೆ. ಜಾತಿನಿಂದನೆ ತರಹದ ಕಾನೂನುಗಳು ಜಾರಿಯಾಗಿ ಅದೆಷ್ಟೋ ವರ್ಷಗಳಾಗಿವೆ. ಆದರೆ ಇವತ್ತಿಗೂ ನಮ್ಮ ಭಾರತದಲ್ಲಿ ಸುನೀತಾ ಎಂಬ ಚಮ್ಮಾರರ ಮಹಿಳೆಗೂ, ಆಕೆ ಮಾನವೀಯತೆಯಿಂದ ರೊಟ್ಟಿ ತಿನ್ನಿಸಿದ ಶೇರು ಎಂಬ 'ಕಂತ್ರಿ' ನಾಯಿಗೂ ಯಾವುದೇ ವ್ಯತ್ಯಾಸ ಇಲ್ಲದಿರುವುದು 'ಸೂಪರ್ ಪವರ್' ಆಗುವ ಕನಸನ್ನು ಹೊತ್ತಿರುವ 'ಇಂಡಿಯಾ'ದ ಟೊಳ್ಳುತನವನ್ನು ಎತ್ತಿ ತೋರಿಸುತ್ತದೆ...

ಉತ್ತರ ಕನ್ನಡ ಶಿವಾನಂದ ನಾಯ್ಕ ನಡೆ ಜೆಡಿಎಸ್ ಕಡೆ




ಅಸ್ನೋಟಿಕರ್

ಉತ್ತರ ಕನ್ನಡದ ರಾಜಕಾರಣದ ಪಡಸಾಲೆಯಲ್ಲೀಗ "ಅದಲುಬದಲು ಕಂಚೀ ಕದಲು" ಆಟ ಆರಂಭವಾಗಿದೆ. ಅಷ್ಟೂ ಪಕ್ಷದ ಪುಢಾರಿಗಳಲ್ಲಿ ಅದೇನೋ ತಲ್ಲಣ; ಮತ್ತೇನೇನೋ ಲೆಕ್ಕಾಚಾರ. ಯಾವ ಪಾರ್ಟಿಗೆ ವಲಸೆ ಹೋದರೆ ಎಮ್ಮೆಲ್ಲೆಗಿರಿ ಚಟ ತೀರಬಹುದೆಂಬ ಯೋಚನೆ- ಯೋಜನೆ! ಜಿಲ್ಲೆಯ ದೊಡ್ಡ ಪಕ್ಷಗಳಾದ ಬಿಜೆಪಿ ಮತ್ತು ಕಾಂಗ್ರೆಸ್‌ನಲ್ಲಿ ಅತೃಪ್ತ ಆತ್ಮಗಳೇ ಜಾಸ್ತಿ. ಈ ಅಂತರ್ ಪಿಶಾಚಿಗಳಿಗೆ ಬಲೆ ಬೀಸಿದರೆ ಕರಾವಳಿಯಲ್ಲಿ ನೆಲೆಯೂರಬಹುದೆಂಬ ಸ್ಕೆಚ್ ಜೆಡಿಎಸ್ ಯಜಮಾನರು ಹಾಕಿಕೊಂಡಿದ್ದಾರೆ. ಬಿಜೆಪಿ-ಕಾಂಗ್ರೆಸ್‌ನ ಗತಿಗೇಡಿಗಳೂ ಈ "ಅಪ್ಪ ಮಕ್ಕಳ ಪಾರ್ಟಿ"ಯೇ ಸುರಕ್ಷಿತ ತಾಣವೆಂದು ಭಾವಿಸಿ ಗುಳೆಗೆ ಅಣಿಯಾಗುತ್ತಿದ್ದಾರೆ....

ಹಾಗೆ ನೋಡಿದರೆ ಉತ್ತರ ಕನ್ನಡದ ಘಟ್ಟದ ಮೇಲಿನ ಅಥವಾ ಘಟ್ಟದ ಕೆಳಗಿನ ಎರಡೂ ಏರಿಯಾದಲ್ಲಿ ಜೆಡಿಎಸ್‌ಗೆ ಅದರದೇ ಸಿದ್ಧಾಂತ ಅಥವಾ ಸಿಂಬಲ್ ಆಧಾರದ ಸಂಘಟನೆ ಎಂಬುದೇ ಈವರೆಗೆ ಕಂಡುಕೊಳ್ಳಲಾಗಿಲ್ಲ. ಆದರೂ ಈ ಪಾರ್ಟಿ ಜಿಲ್ಲೆಯ ಆರು ಶಾಸಕರಲ್ಲಿ ಇಬ್ಬರನ್ನು ಹೊಂದಿದೆ. ಹಳಿಯಾಳದ ಸುನಿಲ್ ಹೆಗಡೆಯಾಗಲಿ, ಕುಮಟೆಯ ದಿನಕರ ಶೆಟ್ಟಿಯಾಗಲಿ ಗೆದ್ದಿದ್ದು ದೇವೇಗೌಡ ಅಥವಾ ಕುಮಾರಸ್ವಾಮಿ ಪ್ರಭಾವದಿಂದ ಅಲ್ಲವೇ ಅಲ್ಲ. ಈ ಇಬ್ಬರೂ ಗಿಮಿಕ್- ಚಮಕ್- ಚತುರರು; ಕಾಂಗ್ರೆಸ್‌ನ ದೇಶಪಾಂಡೆ- ಮೋಹನ ಶೆಟ್ಟಿ ಬಗ್ಗೆ ಜನರಿಗಿದ್ದ ಬೇಸರ, ಆ ಪಕ್ಷದೊಳಗಿನ ಕಾಲೆಳೆವ ಹಿಕಮತ್ತುಗಳೇ ಈ ಜೆಡಿಎಸ್ ಧೀರರ ಎಮ್ಮೆಲ್ಲೆಯಾಗಿಸಿದೆ.

ಈ ಇಬ್ಬರ ಜೊತೆ ಇನ್ನಿಬ್ಬರನ್ನು ಉತ್ತರ ಕನ್ನಡದಲ್ಲಿ ಶಾಸಕರಾಗಿಸಿಕೊಳ್ಳಬೇಕೆಂಬ ಪ್ಲಾನು ಕುಮ್ಮಿ ಸಾಹೇಬರು ಮಾಡಿದ್ದಾರೆ. ಅದಕ್ಕೆಂದೇ ಆತ ತನ್ನ ಪಕ್ಷದ ಯುವ ಘಟಕದ ಅಧ್ಯಕ್ಷ ಮಧು 'ಬಂ' ಕೈಗೆ ಈ ಜಿಲ್ಲೆಯ ಜೆಡಿಎಸ್ ಉಸ್ತುವಾರಿ ಕೊಟ್ಟಿದ್ದಾರೆ. ಇದಕ್ಕೆ ಕಾರಣವೂ ಇದೆ. ಉತ್ತರ ಕನ್ನಡದ ಅಳಿಮಯ್ಯನೂ ಆಗಿದ್ದ 'ಬಂ' ಜೀವಿತಾವಧಿಯಲ್ಲಿ ಸದ್ರಿ ಜಿಲ್ಲೆಯಲ್ಲಿ ದೊಡ್ಡ ಮಟ್ಟದ ವರ್ಚಸ್ಸು ಹೊಂದಿದ್ದರು. ಆತನ ನಾಮಬಲವೇ ಹಲವು ಅಬ್ಬೇಪಾರಿಗಳನ್ನು ಶಾಸಕರನ್ನಾಗಿ ಮಾಡಿದ್ದೂ ಇದೆ. ಇಂಥ 'ಬಂ'ರ ಮಗ ಮಧು ತನ್ನಪ್ಪನ ಮೇಲೆ ಜಿಲ್ಲೆಯ ಹಿಂದುಳಿದವರಿಗಿದ್ದ ಅಭಿಮಾನವನ್ನು ಜೆಡಿಎಸ್‌ಗೆ ಎನ್‌ಕ್ಯಾಷ್ ಮಾಡಿಕೊಡಲು ಹವಣಿಸುತ್ತಿದ್ದಾರೆ. ಜೆಡಿಎಸ್ ಕಟ್ಟಲೆಂದೇ ಮೇಲಿಂದ ಮೇಲೆ ಜಿಲ್ಲೆಗೆ ವಕ್ಕರಿಸುತ್ತಿದ್ದಾರೆ. ಕುಮ್ಮಿ-ಮಧು ಜೋಡಿ ಯಾವ ಪಕ್ಷದಿಂದ ಯಾವ ಪುಢಾರಿಯನ್ನು ಪಟಾಯಿಸಿ ತಂದು ಜಿಲ್ಲೆಯ ಯಾವ ಕ್ಷೇತ್ರದಲ್ಲಿ ಜೆಡಿಎಸ್ ಕ್ಯಾಂಡಿಡೇಟ್ ಮಾಡಬೇಕೆಂಬ ಒಂದು ನಿಖರ ಸ್ಟ್ರೇಟಜಿ ಮಾಡಿಕೊಂಡಿದೆ.




ಭೀಮಣ್ಣ ನಾಯ್ಕ

ಕುಮ್ಮಿ-ಮಧು ಲಿಸ್ಟ್ ಪ್ರಕಾರ ಕುಮಟಾ ಮತ್ತು ಹಳಿಯಾಳದಲ್ಲಿ ಹಾಲಿ ಶಾಸಕರಾದ ದಿನಕರ್ ಶೆಟ್ಟಿ ಹಾಗು ಸುನಿಲ್ ಹೆಗಡೆ, ಕಾರವಾರದಲ್ಲಿ ಬಿಜೆಪಿಯಿಂದ ಮಾನಸಿಕವಾಗಿ ಹೊರಗಿರುವ "ಸಿಜರೀನ್ ಮಂತ್ರಿ" ಆನಂದ್ ಅಸ್ನೋಟಿಕರ್, ಭಟ್ಕಳದಲ್ಲಿ ಕರ್ನಾಟಕ ಸಾಬೂನು ಮತ್ತು ಮಾರ್ಜಕ ಕಂಪನಿ ಅಧ್ಯಕ್ಷ-ಮಾಜಿ ಮಂತ್ರಿ ಶಿವಾನಂದ ನಾಯ್ಕ, ಶಿರಸಿಯಲ್ಲಿ ಬಿಸಿಸಿ ಅಧ್ಯಕ್ಷನೂ ಆಗಿರುವ ಮಧುನ ಸೋದರ ಮಾವ ಭೀಮಣ್ಣ ನಾಯ್ಕ ಅಥವಾ ದಿವಂಗತ ಹೆಗಡೆಜೀ ದಾಯಾದಿ ಮೊಮ್ಮಗ ಶಶಿಭೂಷಣ ಹೆಗಡೆ ಜೆಡಿಎಸ್‌ನ ಇಲೆಕ್ಷನ್ ಹಾರ್ಸ್ ಆಗಲಿವೆ! ಅಡ್ನಾಡಿ ಆನಂದ್ ಅಸ್ನೋಟಿಕರ್ ಕುಮ್ಮಿಯ "ಫ್ರೆಜ್ ಕ್ಯಾಚ್" ಆದರೆ ಮಧುಗೆ ಭಟ್ಕಳದ ಶಿವಾನಂದ ನಾಯ್ಕರ ಬೇಟೆಯ ಹೊಣೆ ಹೊರಿಸಲಾಗಿದೆ. ಮೊನ್ನೆ ಮಧು ಕಾರವಾರದಲ್ಲಿ ಚಲಾವಣೆ ಕಳೆದುಕೊಂಡಿರುವ ತನ್ನಪ್ಪನ ಶತ್ರುವೆಂದೇ ಗುರುತಿಸಲ್ಪಟ್ಟಿದ್ದ ಹೋಪ್‌ಲೆಸ್ ಪ್ರಭಾಕರ ರಾಣೆಯಂನ್ನು ಜೆಡಿಎಸ್‌ಗೆ ಸೇರಿಸಿಕೊಂಡಿರುವುದರಿಂದ ಆ ಪಾರ್ಟಿಗೆ ಆಗಿರುವುದು ಶೂನ್ಯ ಸಂಪಾದನೆಯಷ್ಟೇ!



ರಾಣೆಯಿಂದ ಜೆಡಿಎಸ್‌ಗೆ ಜಿಲ್ಲೆಯಲ್ಲಿ ಪ್ರಯೋಜನ ಏನಿಲ್ಲವೆಂಬುದು ಮಧುಗೂ ಗೊತ್ತಿದೆ. ಹೀಗಾಗಿ ಆತನ ಕಣ್ಣಿರುವುದು ಜೆಡಿಎಸ್‌ನ ಕ್ಯಾಂಡಿಡೇಟಾದರೆ ಭಟ್ಕಳದಲ್ಲಿ ಗೆಲ್ಲಬಹುದಾದ ಯಡ್ಡಿ ಅನುಯಾಯಿ ಶಿವಾನಂದ ನಾಯ್ಕನ ಮೇಲೆ. ಈ ಶಿವಾನಂದ ನಾಯ್ಕನ ದೇಹವಷ್ಟೇ ಕಳೆದ ಮೂರ್ನಾಲ್ಕು ವರ್ಷದಿಂದ ಬಿಜೆಪಿಯಲ್ಲಿದೆ; ಪ್ರಾಣ ಇರುವುದು ಜೆಡಿಎಸ್‌ನಲ್ಲಿ. ಒಂದು ಕಾಲದಲ್ಲಿ ಮುಸ್ಲಿಮರ ಪರಮವೈರಿಯಾಗಿದ್ದ ಈ ಪಕ್ಕಾ ಚೆಡ್ಡಿ ಜೆಡಿಎಸ್ ಸೇರುವ ಇರಾದೆಯಿಂದಲೇ ಸಾಬರ ಸ್ನೇಹಿತನ ಗೆಟಪ್ ಪಡೆದುಕೊಂಡಿದ್ದಾನೆ. ಸುಮಾ ಉಲ್ಟಾ ರಾಜಕಾರಣ ಶಿವಾನಂದ ನಾಯ್ಕ ಶುರು ಹಚ್ಚಿಕೊಳ್ಳುವಷ್ಟು ಸಿಟ್ಟು ಆತನಿಗೆ ಬಿಜೆಪಿ ಮೇಲೆ ಬರಲು ಒಂದು ದೊಡ್ಡ ಕಾರಣವಿದೆ. ಆದೆಂದರೆ-ಬಿಜೆಪಿಯೊಳಗಿನ ಗರ್ಭಗುಡಿ ಸಂಸ್ಕೃತಿ!

ಬಿಜೆಪಿಯ ಪುರೋಹಿತಶಾಹಿಗಳೆಲ್ಲ ಒಳಗೊಳಗೇ ಒಟ್ಟಾಗಿ ಕಳೆದ ಅಸೆಂಬ್ಲಿ ಇಲೆಕ್ಷನ್‌ನಲ್ಲಿ ಈ ದೀವರ ಧೀರನನ್ನು ಹೀನಾಯವಾಗಿ ಸೋಲಿಸಿದ್ದರು.



ದಿನಕರ್ ಶೆಟ್ಟಿ



ಅನಿಲ್‌ಕುಮಾರ್

ಶಿವಾನಂದ ನಾಯ್ಕ ಭಟ್ಕಳದ ಐತಿಹಾಸಿಕ ಕೋಮು ರಾಜಕಾರಣದ ಬೈ-ಪ್ರಾಡಕ್ಟ್ ಎಂಬ ಬಗ್ಗೆ ಎರಡು ಮಾತೇ ಇಲ್ಲ. ಈ ಶಿವಾನಂದ ನಾಯ್ಕ ಪ್ರಜಾಪ್ರಭುತ್ವದ ಪವಾಡದಿಂದ "ಕೋ-ಜಾ" ಸರ್ಕಾರದಲ್ಲಿ ಮಂತ್ರಿಯೂ ಆಗಿಹೋಗಿದ್ದರು. ಇದು ಲಾಗಾಯ್ತಿನಿಂದ ಜಿಲ್ಲಾ ಬಿಜೆಪಿಯಲ್ಲಿ ಯಜಮಾನಿಕೆ ನಡೆಸುತ್ತಾ ಬಂದಿದ್ದ ಬ್ರಾಹ್ಮಣ ಲಾಬಿಗೆ ಸಹಿಸಲಾಗಲಿಲ್ಲ. ಮಂತ್ರಿ ಕಾಗೇರಿ, ಸಂಸದ ಅನಂತ್ಕಾಣಿ, ಮಾಜಿ ಶಾಸಕ ಡಾ. ಎಂ.ಪಿ. ಕರ್ಕಿ ವಗೈರೆ ಪುರೋಹಿತಶಾಹಿ ಪುಢಾರಿಗಳಿಗೆ ದೀವರ ಡ್ರೈವರ್ ಶಿವಣ್ಣ ಕ್ಯಾಬಿನೆಟ್ ಮಂತ್ರಿಯೆಂಬುದೇ ಅರಗಿಸಿಕೊಳ್ಳಲಾಗಲಿಲ್ಲ. ನಾಯ್ಕ ಮಂತ್ರಿಯಾದ ಮರುಗಳಿಗೆಯಿಂದಲೇ ಈ ಬ್ರಾಹ್ಮಣ ಗ್ಯಾಂಗ್ ಆತನನ್ನು ಅಡಿಗಡಿಗೆ ಕಾಡಲಾರಂಭಿಸಿತು; ಅಲ್ಲಲ್ಲಿ, ಆಗಾಗ ಬ್ರಾಹ್ಮಣರ ರಹಸ್ಯ ಸಭೆ ನಡೆಸಿ ನಾಯ್ಕನ ಹಣಿಯುವ ಸ್ಕೆಚ್ ಹಾಕುತ್ತಲೇ ಬಂತು. ಸರಿಯಾಗಿಯೇ ತಿರುಗಿಬಿದ್ದ ನಾಯ್ಕ ಸ್ವಜಾತಿ ದೀವರ ಸಂಘಟನೆಗೆ ಕೈಹಾಕಿದರು; ಸ್ವ-ಜಾತಿ ಸ್ವಾಮಿ ಕರೆಸಿ ಕುಮಟೆಯಲ್ಲೊಂದು ಬೃಹತ್ ಸಮಾವೇಶವೂ ಮಾಡಿದರು; ಹಿಂದುಳಿದವರ ಪರ ಕಾರ್ಯಾಚರಣೆ ನಡೆಸಹತ್ತಿದರು.

ಜಿಲ್ಲೆಯ ರಾಜಕಾರಣದಲ್ಲಿ ಪ್ರಬಲ ಜಾತಿಗಳಾದ ದೀವರು ಮತ್ತು ಬ್ರಾಹ್ಮಣರು ಪರಂಪರಾಗತ ಎದುರಾಳಿಗಳು. ಹೀಗಿರುವಾಗ ದೀವರ ಶಿವಾನಂದ ನಾಯ್ಕ ಮಂತ್ರಿಯಾಗುವುದೆಂದರೆ... ಅಕಟಕಟಾ... ಮಡಿ-ಮೈಲಿಗೆಯ ಬ್ರಾಹ್ಮಣರಿಗೆ ಸಹಿಸಲಾದೀತಾ....?! ಯಾವಾಗ ಶಿವಾನಂದ ನಾಯ್ಕ ಕುಮಟೆಯಲ್ಲಿ ದೀವರ "ಗುರುವಂದನೆ" ಮಾಡಿದನೋ ಅಂದೇ ಹವ್ಯಕ ಹಿರೇಮಣಿಗಳಾದ ಕಾಗೇರಿ-ಕರ್ಕಿ-ಅನಂತ್ಕಾಣಿಗಳು ಆತನ ಇತಿಶ್ರೀಗೆ ದೃಢ ನಿರ್ಧಾರ ಮಾಡಿದ್ದರು!!

ಕೆಲವೇ ದಿನದಲ್ಲಿ ಅಸೆಂಬ್ಲಿ ಇಲೆಕ್ಷನ್ ಎದುರಾಯ್ತು. ಬಿಜೆಪಿ ಗಾಳಿ-ಯಡ್ಡಿ ಹವಾ ಎದ್ದಿತ್ತು; ಭಟ್ಕಳದಲ್ಲಿ ಯಡ್ಡಿ ಶಿಷ್ಯ ಶಿವಾನಂದ ನಾಯ್ಕ ಗೆದ್ದರೆ ತಮ್ಮ ಜನಿವಾರ ಸಮುದಾಯದ ಕಾಗೇರಿಗೆ ಮತ್ತೆ ಮಂತ್ರಿಗಿರಿ ಕೈತಪ್ಪುತ್ತದೆ ಎಂಬುದು ಬ್ರಾಹ್ಮಣ ಬಳಗಕ್ಕೆ ಖಾತ್ರಿಯಾಗಿತ್ತು. ಜತೆಗೆ ಶೂದ್ರ ಶಕ್ತಿ ಕಟ್ಟಿ ತಮಗೆ ಸೆಡ್ಡು ಹೊಡೆದಿದ್ದ ನಾಯ್ಕ ಯಾವ ಕಾರಣಕ್ಕೂ ಗೆಲ್ಲಬಾರದೆಂದು ಬ್ರಾಹ್ಮಣ ಮಠಾಧೀಶರೂ ಒಳಗೊಳಗೇ ಫರ್ಮಾನೂ ಹೊರಡಿಸಿದ್ದರು. ಇಡೀ ಜಿಲ್ಲೆಯ ಬಿಜೆಪಿ ಹವ್ಯಕರು ತಮ್ಮ ಶಕ್ತಿಯನ್ನು ಭಟ್ಕಳದಲ್ಲಿ ಕೇಂದ್ರೀಕರಿಸಿದರು. ಶಿವಾನಂದ ನಾಯ್ಕರನ್ನು ಸೋಲಿಸಲು ಏನೇನು ಸಾಧ್ಯವೋ ಅದೆಲ್ಲ ಹಗಲೂ-ಇರುಳೂ ನಡೆಸಿದರು. ಮಂತ್ರಿಯಾಗಿದ್ದೇ ಇರುಳಲ್ಲೂ ಕೊಡೆಹಿಡಿಯ ತೊಡಗಿದ್ದ ನಾಯ್ಕರ ಸ್ವಯಂಕೃತಾಪರಾಧವೂ ಬ್ರಾಹ್ಮಣರ ಪಾತಕದೊಂದಿಗೆ ಸೇರಿಕೊಂಡಿತು. ಶಿವಾನಂದ ನಾಯ್ಕ ದೊಡ್ಡ ಅಂತರದಲ್ಲಿ ಸೋತರು; ಬ್ರಾಹ್ಮಣಶಾಹಿ ಗೆದ್ದಿತು!

ಯಡ್ಡಿ ಸಿಎಂ ಆಗುತ್ತಲೇ ಆದೇನೇನೋ ಸರ್ಕಸ್ ಮಾಡಿ ಒಂದು ಗೂಟದ ಕಾರು ಹಿಡಿದುಕೊಂಡು ಬಂದ ಶಿವಾನಂದ ನಾಯ್ಕ. ಆದರೆ ಆತನಿಗೆ ಜೆ... ಬಿಜೆಪಿಯಲ್ಲಿ-ಆಡಳಿತದಲ್ಲಿ ಮೂರು ಬಲ್ಲಿ ಕಿಮ್ಮತ್ತಿಲ್ಲದ... ಕಾಗೇರಿ ಬಳಗ ಮಾಡಿಬಿಟ್ಟಿತ್ತು. ಸಂಸದ ಅನಂತ್ಕಾಣಿಯಂತ... ಈ ಮಾಜಿ ಗ್ಯಾಂಗ್‌ಸ್ಟರ್‌ನ ತಲೆ ಕಂಡರೆ ಹಲ್ಲು ಕಚ್ಚಿ-ಮು... ಕಟ್ಟುವಷ್ಟು ಸೇಡಿಗೆ ಬಿದ್ದಿದ್ದ! ಒಂದು ಕಾಲದಲ್ಲಿ ಭಟ್ಕಳದ... ಕೋಮುಸಾಮರಸ್ಯ ಕೆಡಿಸುತ್ತಿದ್ದ ಗುರು-ಶಿಷ್ಯ ಜೋಡಿಯಿಂದ... ಇವತ್ತಿಗೂ ಭಟ್ಕಳದಲ್ಲಿ ಈ ಇಬ್ಬರ ಮುಂಪರುಪರಿ... ಮಾಡಿಸಿದರೆ ಶಾಸಕನಾಗಿದ್ದ ಡಾ. ಚಿತ್ತರಂಜನ್ ಕೊ... ರಹಸ್ಯ ಬಹಿರಂಗವಾಗುತ್ತದೆ ಎಂಬ ಅಭಿಪ್ರಾ... ಚಾಲ್ತಿಯಲ್ಲಿದೆ! ಇಂಥ ಶಿವಾನಂದ ನಾಯ್ಕ ಈಗ ಸ್ಥಳೀ... ಬಿಜೆಪಿಯಲ್ಲಿ ತಿರುಬೋಕಿಯಂತಾಗಿಹೋಗಿದ್ದಾರೆ. ಬಿಜೆ... ಟಿಕೆಟ್ ಸಿಕ್ಕರೂ ತಾನು ಗೆಲ್ಲದಂತೆ ಬಿಜೆಪಿಯೊಳಗಿ... ಬ್ರಾಹ್ಮಣ ಬೆಟಾಲಿಯನ್ ಕಿತಾಪತಿ ಮಾ... ಸೋಲಿಸುತ್ತದೆಂಬುದೂ ಆತನಿಗೆ ಖಾತ್ರಿಯಾಗಿ ಹೋಗಿ...

ಲಿಂಗಾಯತರ ಓಟು ಇಲ್ಲದ-ಸ್ವಂತ ವರ್ಚಸ್ಸೂ ಇ... ಭಟ್ಕಳದಲ್ಲಿ "ದೇವಪಿತ್ರ" ಯಡ್ಡಿಯಿಂದಲೂ ತನ್ನ... ಗೆಲ್ಲಿಸಲು ಸಾಧ್ಯವಾಗದೆಂಬ ಸತ್ಯ ನಾಯ್ಕಗೆ ಗೊತ್ತು. ಹೀಗ... "ಇಲ್ಲಿ (ಬಿಜೆಪಿ) ಇರುವುದು ಕೆಎಸ್‌ಡಿಎಸ್‌ನ ಗೂ... ಕಾರಿಗಾಗಿ; ಅಲ್ಲಿ (ಜೆಡಿಎಸ್) ಇರುವುದು ನನ್ನ ಮ... ಎಂದು ಶಿವಾನಂದ ನಾಯ್ಕ ಆಪ್ತ ವಲಯದಲ್ಲಿ ... ಹೇಳುತ್ತಿದ್ದಾರೆ. ಜೆಡಿಎಸ್ ಸೇರಲು ಆತ ಕಳೆದೊಂ... ವರ್ಷದಿಂದ ವೇದಿಕೆ ಸಿದ್ಧಪಡಿಸಿಕೊಳ್ಳುತ್ತಿದ್ದರು. ಸುಮಾ... ಒಂದೂವರೆ ವರ್ಷದ ಹಿಂದೆ ಕೆಎಸ್‌ಡಿಎಲ್ ಅ... ಖಾತೆಯಿಂದ ದುಬೈಗೆ ಹೋದಾಗಲೇ ನಾಯ್ಕ ಜೆಡಿ... ಸೇರುವ ತೀರ್ಮಾನ ಕೈಗೊಂಡಿದ್ದರು. ಕೆಎಸ್‌ಡಿಎಲ್... ಗಲ್ಫ್ ಡಿಸ್ಟ್ರಿಬ್ಯೂಟರ್ ಆಗಿರುವಾತ ದಕ್ಷಿಣ ಕನ್ನಡ ಮೂ... ಗಲ್ಫ್ ಉದ್ಯಮಿ ಎಂ.ಆರ್. ಶೆಟ್ಟಿ. ಈ... ಮೂಲಕ ದುಬೈನ ನಂಬರ್ ಟೂ ಶ್ರೀಮ... ಉದ್ಯಮಿ ಆಗಿರುವ ಭಟ್ಕಳದ ನವಾಯ... ಮುಸ್ಲಿಮ್ ಲೀಡರ್ ಖಲೀಲ್‌ರ... ಶಿವಾನಂದ ನಾಯ್ಕ ಸಂಧಿಸಿದ್ದರು. ಜೆಡಿ... ಸೇರಿದರೆ ಭಟ್ಕಳದಲ್ಲಿರುವ ನಿರ್ಣಾಯ... ನವಾಯತ ಸಮುದಾಯದ ಓಟು ಕೊಡಿಸ... ಭರವಸೆ ನಾಯ್ಕಗೆ ಖಲೀಲ್ ಕೊಟ್ಟಿದ್ದ... ಭಟ್ಕಳದ ನವಾಯತರ ಪರಮೋಚ್ಛ ಧಾಮಿ... ಸಂಸ್ಥೆ "ತಂಜೀಮ್"ನಲ್ಲಿ ಈ ಖಲೀ... ರಹಮಾನ್ ಪ್ರಭಾವಿ!


ಈ "ಗಲ್ಫ್ ಒಪ್ಪಂದ"ದ ಬಳಿಕವೇ ... ಶಿವಾನಂದ ನಾಯ್ಕರ ಚಹರೆ ಬದಲಾಗಿ... ಸೆಕ್ಯುಲರ್ ಮುಖವಾಡ ಬಂದಿದ್ದು. ಆ... ಬಿಜೆಪಿ ತೊರೆದು ಜೆಡಿಎಸ್ ಸೇರಲು ... ಮಾತ್ರ ಹದವಾಗಿರಲಿಲ್ಲ. ಈಗ ಶಿವಾನ... ನಾಯ್ಕರ ಈವರೆಗಿನ ರಾಜಕಾರಣಕ್ಕೆ ತದ್ವಿರುದ್ಧವಾದ "ಆ... ಮುಹೂರ್ತ ಕೂಡಿಬರುತ್ತಿದೆ. ಜೆಡಿಎಸ್‌ನ ಮಹಾಪ್ರ... ಕಾರ್ಯದರ್ಶಿ ಬಸನಗೌಡ ಯತ್ನಾಳ ನಾಯ್ಕರ ಬ... "ಸಹಪಾಠಿ." ಈತನ ಮೂಲಕವೇ ಜೆಡಿಎಸ್ ದಿ... ನಾಯ್ಕ ತಯಾರಿ ನಡೆಸಿದ್ದಾರೆ. ಇನ್ನೊಂದೆಡೆ ಮಧು ... ಪ್ರಯತ್ನಿಸುತ್ತಿದ್ದಾರೆ. ನಾಯ್ಕರನ್ನು ಸೆಳೆದು ಜೆಡಿಎಸ್ ಬು... ಹಾಕಿದ ಕ್ರೆಡಿಟ್ ತನಗೇ ಸಿಗಲೆಂಬ ತಂತ್ರಗಾರಿಕೆ ಮಧು... 'ಬಂ' ಅನುಯಾಯಿಗಳು ಅಪಾರವಾಗಿರುವ ಭ... ಕ್ಷೇತ್ರದ ಹೊಳೆಸಾಲಲ್ಲಿ ಮಧುನಿಂದ ಲಾಭವಾಗುತ್ತ... ಲೆಕ್ಕಾಚಾರ ನಾಯ್ಕರದು. ಕಳೆದ ಬಾರಿ ನಾಯ್ಕಗೆ ಕೈಕೊ... ಈ ಹೊಳೆಸಾಲು.

ಒಂದೆರಡು ಸುತ್ತಿನ ಮಾತುಕತೆ ಬಸನಗೌಡ-ವ... ಜೊತೆ ಮಾಡಿ ಮುಗಿಸಿರುವ ಶಿವಾನಂದ ನಾಯ್ಕ ಜೆಡಿ... ಸೇರಲು ರೆಡಿಯಾಗಿ ಕುಂತಿದ್ದಾರೆ. ಆದರೆ ಆನ... ಅಸ್ನೋಟಿಕರ್, ಕುಂದಾಪುರದ ಹಾಲಾಡಿ ಶ್ರೀನಿವಾಸ ... ಶಿರಸಿಯ ಭೀಮಣ್ಣ ನಾಯ್ಕ ಮತ್ತಿತರ ಕರಾವ... ಕಾಂಗ್ರೆಸ್-ಬಿಜೆಪಿ ಭೂಪರನ್ನೆಲ್ಲ ಒಂದೇ ಬಾರಿ ದ... ಗದ್ದಲ ಎಬ್ಬಿಸಿ ಜೆಡಿಎಸ್‌ಗೆ ಸೇರಿಸಿಕೊಂಡರೆ ಪಾ... ಲಾಭ ಹೆಚ್ಚೆಂದು ಕುಮ್ಮಿ ಗಣಿತ ಹಾಕಿದ್ದಾರೆ. ... ಸಮೀಕರಣದಿಂದ ಜೆಡಿಎಸ್‌ಗೆ ಕರಾವಳಿಯಲ್ಲಿ ಎ... ಬೆಳೆ ತೆಗೆಯಲು ಅನುಕೂಲವಾಗುವುದಂತೂ ... ಕುಂದಾಪುರದ ಹಾಲಾಡಿ, ಭಟ್ಕಳದ ಶಿವಾನಂದ ನಾ... ಕಾರವಾರದ ಆನಂದ್ ಅಸ್ನೋಟಿಕರ್, ಶಿರಸಿಯ ಭೀ... ನಾಯ್ಕ ಜೆಡಿಎಸ್ ಸೇರಿದರೆ ಶಾಸಕರಾ... ಅವಕಾಶಗಳಂತೂ ಇದೆ. ಈ ಅತೃಪ್ತ ಆತ್ಮಗಳಿಗೆ ವ... ನೀಡಿದರೆ ಕರಾವಳಿಯಲ್ಲಿ ಗತಿಗೇಡಿಯಾಗಿರುವ ಜೆಡಿ... ಶಾಪವೂ ಕೊಂಚವಾದರೂ ಪರಿಹಾರವಾಗುತ್ತದೆ.

ಒಟ್ಟಿನಲ್ಲಿ ಕರಾವಳಿಯ ಪಾಲಿಟಿಕ್ಸ್‌ನಲ್ಲಿ ಎದ... ಈ ಪಕ್ಷಾಂತರ "ತುಫಾನು" ಅರಬ್ಬೀ ಸಮುದ್ರದಲ್ಲಿ... ಚಂಡಮಾರುತದಂತೆ ಎಲ್ಲೆಲ್ಲೋ ಬಡಿದು, ಇನ್ನ... ನಿಲ್ಲುವುದು ಗ್ಯಾರಂಟಿ. ಈ ರಗಳೆ ರಾಜಕಾರಣದ ಬಿರು... ಯಾವ ಪುಢಾರಿ ಮುಳುಗುತ್ತಾನೋ? ಯಾವ ... ಮುಳುಗುವುದೋ? ಎಂಬ ಕುತೂಹಲವಂತೂ ಜಿಲ್ಲೆ... ಮೂಡಿದೆ!!

• ನಹ...

ಮಾವ-ಅಳಿಯ ಜಗಳ್‌ಬಂದಿ !!




ಭೀಮಣ್ಣ

ಜೆಡಿಎಸ್‌ನ ರೆಡಿಮೇಡ್ ಯುವನಾಯಕ ಮಧು ಬಂಗಾರಪ್ಪ ತನ್ನ ಅಜ್ಜನ ಮನೆ ಊರಾದ ಉತ್ತರ ಕನ್ನಡದಲ್ಲಿ ತಾಕತ್ತು ತೋರಿಸಲು ತಂತ್ರಗಾರಿಕೆ ನಡೆಸಿದ್ದಾನೆ. ದಿವಂಗತ ಅಪ್ಪ 'ಬಂ'ಗೆ ಜಿಲ್ಲೆಯಲ್ಲಿದ್ದ ಅಪಾರ ಬೆಂಬಲವನ್ನು ಜೆಡಿಎಸ್‌ಗೆ ಓಟಾಗಿ ಪರಿವರ್ತಿಸಲು ಈತ ತರಹೇವಾರಿ ಕಸರತ್ತು ಮಾಡುತ್ತಿದ್ದಾನೆ. ಬಿಜೆಪಿ-ಕಾಂಗ್ರೆಸ್‌ನಲ್ಲಿರುವ ಜನ ಬಳಕೆಯ ಗಟ್ಟಿಗರನ್ನೇ ಹಿಡಿದು ಜೆಡಿಎಸ್ ಬುಟ್ಟಿಗೆ ಹಾಕಲು ಮಧು ಬಲೆಬೀಸಿ ಕುಂತಿದ್ದಾನೆ. ಭಟ್ಕಳದ ತಾಕತ್‌ವಾನ್ ಶಿವಾನಂದ ನಾಯ್ಕ ತನ್ನ ಮೂಲಕವೇ ಬಿಜೆಪಿ ಬಿಟ್ಟು ಜೆಡಿಎಸ್‌ಗೆ ಸೇರುವುದು ಮಧುಗೆ ಖಾತ್ರಿಯಾಗಿದೆ.

ಈಗಾತನ ಗುರಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಭೀಮಣ್ಣ ನಾಯ್ಕ. ಈತ ವರಸೆಯಲ್ಲಿ ಮಧುಗೆ ಸೋದರ ಮಾವ; ತಾಯಿಯ ತಮ್ಮ. ಈ ಭೀಮಣ್ಣ ಎಂಬ ಅನ್‌ಪಡ್‌ಗೆ ರಾಜಕಾರಣಿಯ ಶೇಪು ಕೊಟ್ಟಿದ್ದೇ 'ಬಂ'. ಒಂಥರಾ ಮೊದ್ದಣಿಯಂತಿರುವ ಭೀಮಣ್ಣನನ್ನು ದೇಶಪಾಂಡೆ 'ಬಂ' ಒಲಿಸಿಕೊಳ್ಳಲೆಂದೇ ಡಿಸಿಸಿ ಅಧ್ಯಕ್ಷ ಮಾಡಿದ್ದರು. ದೇಶಪಾಂಡೆಗೆ ಮ್ಯಾಗಿ ವಿರುದ್ಧದ ಕದನದಲ್ಲಿ ಭೀಮಣ್ಣನ ದೀವರ ಜಾತಿ ಬಲ ಬೇಕಿತ್ತು. 'ಬಂ' ಪಕ್ಷ ಬದಲಿಸಿದಾಗ-ಪಕ್ಷ ಕಟ್ಟಿದಾಗೆಲ್ಲ ಆತನ ನೆರಳಾಗಿಯೇ ಭಾಮೈದ ಹೋಗಿದ್ದ ಬಂದಿದ್ದ. ಇಂಥ ಭೀಮಣ್ಣ 'ಬಂ' ಕೊನೆಗಾಲದಲ್ಲಿ ಜೆಡಿಎಸ್ ಸೇರಿದಾಗ ಮಾತ್ರ ಹೋಗಿರಲಿಲ್ಲ.

ಇದಕ್ಕೆ ಕಾರಣ ಒಂದು, 'ಬಂ' ಬಣ್ಣಗೆಟ್ಟಿದ್ದು; ಇನ್ನೊಂದು ಕಾರಣ, ದೇಶಪಾಂಡೆ ಶಿರಸಿ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಕೊಡಿಸುವ ಭರವಸೆ ನೀಡಿದ್ದು. ಆದರೆ ಮಧು ಮಾತ್ರ ಮಾವ ಜೆಡಿಎಸ್‌ಗೆ ಬರಬಹುದೆಂದು ಕಾದು-ಕಾದು ಸುಸ್ತಾಗಿದ್ದಾನೆ. ಮಧುಗೆ ಮಾವ ಭೀಮಣ್ಣನ ಮೇಲೆ ತುಂಬಾ ಭರವಸೆ ಇಟ್ಟು ಕೌಟುಂಬಿಕವಾಗಿಯೂ ಈ ಮಾವ-ಅಳಿಯ ಸಂಬಂಧ ಮಧುರವಾಗೇ ಇತ್ತು. ಈ ನಡುವೆ ಮಾವ ಮಧು ಮತ್ತು ಕು.ಬಂ. ಜಗಳದಲ್ಲಿ ಮಧು ಪರ ಮಸಲತ್ತು ಮಾಡುತ್ತಿರುವಾತ.. ಭೀಮಣ್ಣನ ಕಿತಾಪತಿಯೇ ಮಧು-ಕುಬಂ ಬದ್ಧ ವೈರಿಯಾಗಲು ಕಾರಣವೆಂದು 'ಬಂ' ಕುಟುಂಬದ ಸಮಸ್ಯೆ ಬಲ್ಲವರು ಹೇಳುತ್ತಾರೆ. ಈಗ ಸಮಯಸಾಧಕ ಭೀಮಣ್ಣ ಕೈಕೊಟ್ಟಿದ್ದಾರೆ.



ಮಧು

ಮಾವನ ಮೋಸದಿಂದ ಅಳಿಯ ಮಧು ಹತಾಶನಾಗಿದ್ದಾನೆ. ಮಾವನ ವಿರುದ್ಧವೇ ಕೊಂಕು ಮಾತು ಬಹಿರಂಗವಾಗೇ ಆಡುತ್ತಿದ್ದಾನೆ. "ಬೇರೆ ಪಕ್ಷದಲ್ಲುಳಿದು 'ಬಂ' ಅಭಿಮಾನಿ ಅಂದರೆ ಹೇಗೆ? ಹಿರಿಯನಾದ ಮಾವಯ್ಯ ಜೆಡಿಎಸ್‌ಗೆ ಬರ್ತಾರೆ.. ಬರದಿದ್ರೆ ಆತನ ವಿರುದ್ಧ ಶಿರಸಿಯಲ್ಲಿ ಕ್ಯಾಂಡಿಡೇಟ್ ಜೆಡಿಎಸ್ ಹಾಕ್ತದೆ... ನನ್ನಪ್ಪನಿಂದಲೇ ಬೆಳೆದ ಭೀಮಣ್ಣ ಜೆಡಿಎಸ್‌ಗೆ ಬರದಿದ್ದರೆ ಜನ ಕ್ಷಮಿಸೋದಿಲ್ಲ...." ಎಂದೆಲ್ಲ ಹಲುಬುತ್ತಿದ್ದಾನೆ.

ಇದರಿಂದ ಕೆರಳಿರುವ ಎಮ್ಮೆಲ್ಲೆ ಕನಸಿನಲ್ಲಿರುವ ಭೀಮಣ್ಣ "ಮಧು ಮೃದುವಾಗಿ ಮಾತಾಡಲಿ... ಆತ 'ಬಂ' ಮಗನೇ ಹೊರತು ಮಧು 'ಬಂ' ಅಲ್ಲವಲ್ಲ... ಆತ 'ಬಂ'ರಂತೆ ಬಿರುಸಾಗಿ ಮಾತಾಡೋ ಅಗತ್ಯ ಇಲ್ಲ.. 'ಬಂ' ವ್ಯಕ್ತಿತ್ವವೂ ಆತನಿಗಿಲ್ಲ" ಎಂದು ಮೂದಲಿಸುತ್ತಿದ್ದಾರೆ. ಒಟ್ಟಿನಲ್ಲಿ ಸರಿಯಾದ ಕ್ಯಾಂಡಿಟೇಟಿಲ್ಲದೆ ಒದ್ದಾಡುತ್ತಿರುವ ಮಧು ಮಾವನನ್ನು ಬಿಡುತ್ತಿಲ್ಲ; ಆತ ಜೆಡಿಎಸ್‌ಗೆ ಬರುತ್ತಿಲ್ಲ. ಬಫೂನ್ ಬಡಿದಾಟ ಮಾತ್ರ ಗಮ್ಮತ್ತಾಗಿದೆ.

ದೇಶದ ಯಾವ ಶಿಕ್ಷಣ ಸಂಸ್ಥೆಯೂ ಸರ್ವತಂತ್ರ ಸ್ವತಂತ್ರವಲ್ಲ. ಪ್ರಜೆಗಳ ಸಂವಿಧಾನದತ್ತ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸುವಂತಹ ನಿಯಮಗಳನ್ನು ಶಿಕ್ಷಣ ಸಂಸ್ಥೆಗಳು ತಮ್ಮ ವಿದ್ಯಾರ್ಥಿಗಳ ಮೇಲಾಗಲೀ, ಶಿಕ್ಷಕರ ಮೇಲಾಗಲೀ ಹೇರುವಂತಿಲ್ಲ. ರಾಮಕುಂಜೇಶ್ವರ ಕಾಲೇಜಿನ ಪ್ರಿನ್ಸಿಪಾಲರ ಧೋರಣೆ ಸಂವಿಧಾನದ 19 ಮತ್ತು 25 ನೆಯ ಕಲಂಗಳಲ್ಲಿ ಹೇಳಲಾಗಿರುವ ನಂಬಿಕೆ, ಆಚರಣೆ ಮತ್ತು ಅಭಿಪ್ರಾಯ ಸ್ವಾತಂತ್ರ್ಯಗಳ ಉಲ್ಲಂಘನೆಯಾಗಿದ್ದು, ಅವರ ಕ್ರಮವನ್ನು ರದ್ದುಗೊಳಿಸುವುದು ವಿಶ್ವವಿದ್ಯಾಲಯದ ಉಪಕುಲಪತಿಗಳ ಕರ್ತವ್ಯವಾಗಿದೆ.

ಕಳೆದ ನಾಲ್ಕು ವರ್ಷಗಳ ಬಿಜೆಪಿ ಸರ್ಕಾರದ ಎರಡು ದೊಡ್ಡ ಸಾಧನೆಗಳೆಂದರೆ ಭ್ರಷ್ಟಾಚಾರದಲ್ಲಿ ಸಾರ್ವಕಾಲಿಕ ದಾಖಲೆ ಸ್ಥಾಪಿಸಿದ್ದು ಮತ್ತು ಹಿಂದೂತ್ವದ ಅಜೆಂಡಾವನ್ನು ರಾಜ್ಯದ ಮೇಲೆ ಹೇರಿದ್ದು. ಈ ಸರ್ಕಾರದ ಭ್ರಷ್ಟಾಚಾರಕ್ಕೆ ಸಾಟಿಯೇ ಇಲ್ಲವಾದರೂ, ಹಿಂದಿನ ರಾಜ್ಯ ಸರ್ಕಾರಗಳ ಚರಿತ್ರೆಯೂ ಇಷ್ಟೇ ಕಳಂಕಿತವಾಗಿತ್ತು ಎಂಬ ಸಮಜಾಯಿಷಿಯಾದರೂ ಇದೆ. ಆದರೆ ಹಾಲಿ ಸರ್ಕಾರದ ನೇತೃತ್ವ ಮತ್ತು ಭಾಗೀದಾರಿಕೆಗಳಲ್ಲಿ ಬಿಜೆಪಿಯ ಸಂಘ ಪರಿವಾರ ಜಾರಿಗೆ ತರುತ್ತಿರುವ ಹಿಂದೂತ್ವದ ಅಜೆಂಡಾದ ಕರಾಳ ಪರಿಣಾಮ ಭವಿಷ್ಯದಲ್ಲೂ ಸುದೀರ್ಘ ಕಾಲ ಉಳಿಯುವಂತಹದ್ದು. ಸದ್ಯಕ್ಕೆ ರಾಜ್ಯದಲ್ಲಿ ಈ ಅಜೆಂಡಾ ಎರಡು ರೀತಿಗಳಲ್ಲಿ ಕಾರ್ಯಗತಗೊಳ್ಳುತ್ತಿದೆ. ಚುನಾಯಿತ ಸರ್ಕಾರವೊಂದಕ್ಕೆ ಇರುವ ಅಧಿಕಾರವನ್ನು ಬಳಸಿಕೊಂಡು, ಕಾನೂನಿನ ಚೌಕಟ್ಟಿನಲ್ಲಿಯೇ ಹಿಂದೂತ್ವದ ಸಿದ್ಧಾಂತವನ್ನು ಹೇರಿಗೊಳಿಸುವುದು ಹಾಲಿ ಸರ್ಕಾರದ ಒಂದು ಕಾರ್ಯವಿಧಾನ. ಉದಾ:

1. ಹಿಂದೂ ಧರ್ಮವೇ ರಾಜ್ಯದ ಅಧಿಕೃತ ಧರ್ಮ ಮತ್ತು ವೈದಿಕ ಬ್ರಾಹ್ಮಣ ಪರಂಪರೆಯೇ ರಾಜ್ಯದ ಅಧಿಕೃತ ಪರಂಪರೆ ಎಂದು ಪ್ರತಿಪಾದಿಸುವ ಉದ್ದೇಶದಿಂದ ಶಾಲಾ ಪಠ್ಯಪುಸ್ತಕಗಳ ಪುನರ್‌ರಚನೆ ಹಾಗೂ ಮೊಟ್ಟೆ ಸಾತ್ವಿಕ ಆಹಾರ ಅಲ್ಲ ಎಂಬ ಉದ್ದೇಶದಿಂದ ಶಾಲೆಯ ಮಕ್ಕಳಿಗೆ ನಿರಾಕರಿಸಿರುವುದು.

2. ಬಡಮಕ್ಕಳ ಶಿಕ್ಷಣ, ವಯಸ್ಕರ ಶಿಕ್ಷಣಗಳಂತಹ ಅವಶ್ಯವಾದ ಕಾರ್ಯಕ್ರಮಗಳಿಗೆ ಮೀಸಲಾಗಿರಬೇಕಾಗಿದ್ದ ಹಣದಲ್ಲಿ ಸಂಸ್ಕೃತ ವಿಶ್ವವಿದ್ಯಾಲಯದ ಸ್ಥಾಪನೆ.

3. ಮುಸ್ಲಿಮ್ ಸಮುದಾಯವನ್ನೇ ಇಡಿಯಾಗಿಸಿ ಭಯೋತ್ಪಾದಕವೆಂಬಂತೆ ಚಿತ್ರಿಸುವ ಕಾರ್ಯಕ್ರಮಗಳನ್ನು ಶಾಲೆ ಕಾಲೇಜುಗಳಲ್ಲಿ ಏರ್ಪಡಿಸುವುದು.

4. ಅಲ್ಪಸಂಖ್ಯಾತ ಸಮುದಾಯಗಳು, ದಲಿತರು, ಬುಡಕಟ್ಟು ಜನಾಂಗಗಳು ಮತ್ತಿತರ ಕೆಳಜಾತಿ ವರ್ಗಗಳ ಆಹಾರ ಸಂಸ್ಕೃತಿಯನ್ನು ತಿರಸ್ಕರಿಸುವುದರ ಜೊತೆಗೆ ರೈತ ವಿರೋಧಿಯೂ ಆಗಿರುವ ಜಾನುವಾರು ಹತ್ಯಾ ನಿಷೇಧ ಕಾಯ್ದೆಯ ಅಂಗೀಕಾರ.

ಸಮವಸ್ತ್ರದ ದಬ್ಬಾಳಿಕೆ



5. ರಾಜ್ಯದಲ್ಲಿ ಅಲ್ಪಸಂಖ್ಯಾತರು ನಡೆಸುತ್ತಿರುವ ಶಿಕ್ಷಣ ಮತ್ತು ಇತರ ಸಂಸ್ಥೆಗಳಿಗೆ ನಿರಂತರ ಕಿರುಕುಳ..

ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರ ಶಾಸನಬದ್ಧವಾಗಿಯೇ ಈ ದಬ್ಬಾಳಿಕೆಯ ಕ್ರಮಗಳನ್ನು ಜಾರಿಗೆ ತರುತ್ತಿದೆ. ಪ್ರತಿಪಕ್ಷಗಳಾದ ಕಾಂಗ್ರೆಸ್ ಮತ್ತು ಜೆಡಿಎಸ್ ಈ ಕುರಿತು ತೋರಿಕೆಯ ಪ್ರತಿಭಟನೆಯನ್ನು ಕೂಡ ಮಾಡದೆ ಆಳುವ ಪಕ್ಷದೊಡನೆ ಶಾಮೀಲಾಗಿವೆ. ಸಂಘ ಪರಿವಾರದ ಆರ್‌ಎಸ್‌ಎಸ್, ವಿಹಿಂಪ, ಭಜರಂಗದಳ, ವಿದ್ಯಾರ್ಥಿ ಪರಿಷತ್ ಮುಂತಾದ ಸಂಘಟನೆಗಳ ಮುಖಾಂತರ ವಿದ್ಯಾರ್ಥಿ ಯುವ ಜನರನ್ನು ನಿಯಂತ್ರಿಸುವುದು, ನಕ್ಸಲ್ ಚಳವಳಿಗೆ ಪ್ರತಿರೋಧದ ಹೆಸರಿನಲ್ಲಿ ಪ್ರಗತಿಶೀಲ, ಎಡ ಹಾಗೂ ಸೆಕ್ಯುಲರ್ ವಿಚಾರಗಳ ವಿರುದ್ಧ ಅಪಪ್ರಚಾರ, ಮಾಧ್ಯಮಗಳಲ್ಲಿರುವ ತಮ್ಮ ಬಾಡಿಗೆ ಬಂಟರನ್ನು ಬಳಸಿಕೊಂಡು ಸುದ್ದಿಗಳನ್ನು ತಿರುಚುವುದು ಇವು ಪ್ರಸಕ್ತ ಸರ್ಕಾರದ




ಪರೋಕ್ಷ ದಬ್ಬಾಳಿಕೆಯ ವಿಧಾನಗಳು. ಇದೆಲ್ಲದರ ಪರಿಣಾಮವಾಗಿ ರಾಜ್ಯದ ಜನ ಈಗ ತಮ್ಮ ಸುತ್ತ ನಡೆಯುತ್ತಿರುವ ಯಾವುದೇ ಅನ್ಯಾಯವನ್ನು ಅನ್ಯಾಯವೆಂದು ಗುರುತಿಸಲಾರದ ಅಪಾಂಗರಾಗುತ್ತಿದ್ದಾರೆ.

ಆ ಮಾತಿಗೆ ಇತ್ತೀಚೆಗಿನ ನಿದರ್ಶನವೆಂದರೆ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ರಾಮಕುಂಜ ಎಂಬ ಸಣ್ಣ ಊರಿನ ರಾಮಕುಂಜೇಶ್ವರ ಪದವಿ ಕಾಲೇಜಿನ ಮುಸ್ಲಿಮ್ ವಿದ್ಯಾರ್ಥಿನಿಯರ ನ್ಯಾಯಯುತ ಬೇಡಿಕೆಯೊಂದನ್ನು ಕಾಲೇಜು ಆಡಳಿತ ಮಂಡಳಿ ಬಗ್ಗುಬಡಿದಿರುವುದು ಮತ್ತು ಆ ಕುರಿತು ಎಲ್ಲಿಯೂ ಯಾವುದೇ ಬಗೆಯ ಕಳವಳವೂ ವ್ಯಕ್ತವಾಗದೆ ಇರುವುದು. ಸದ್ರಿ ರಾಮಕುಂಜೇಶ್ವರ ಕಾಲೇಜಿನ ಸುಮಾರು ನೂರು ಮುಸ್ಲಿಮ್ ವಿದ್ಯಾರ್ಥಿನಿಯರು ಕಾಲೇಜು ವಿಧಿಸಿದ ಸಮವಸ್ತ್ರದ ಜೊತೆಗೆ ತಲೆಗೆ ಮುಸುಕು (ಹಿಜಬ್) ಧರಿಸಿ ತರಗತಿಗಳಿಗೆ ಹಾಜರಾಗಲು ತಮಗೆ ಅವಕಾಶ ಮಾಡಿಕೊಡಬೇಕು ಎಂಬ ಬೇಡಿಕೆಯನ್ನು ಈ ಹಿಂದೆ ಹಲವು ಬಾರಿ ಕಾಲೇಜು ಆಡಳಿತ ಮಂಡಳಿಯ ಮುಂದೆ ಇಟ್ಟಿದ್ದರು. ಆಡಳಿತ ಮಂಡಳಿ ಹಾಗೂ ಕಾಲೇಜಿನ ಪ್ರಿನ್ಸಿಪಾಲರು ಅದನ್ನು ನಿರಾಕರಿಸುತ್ತಲೇ ಇದ್ದರು. ಪ್ರಸಕ್ತ ಶೈಕ್ಷಣಿಕ ವರ್ಷದ ಆರಂಭದಲ್ಲಿ ಕಾಲೇಜಿನ ವಿದ್ಯಾರ್ಥಿನಿಯರು ಮತ್ತೊಮ್ಮೆ ಈ ಬೇಡಿಕೆಯನ್ನು ಸಲ್ಲಿಸಿದರು. ಅದಕ್ಕೆ ಅನುಮತಿ ದೊರೆಯದಿದ್ದಾಗ ವಿದ್ಯಾರ್ಥಿನಿಯರು ಕಾಲೇಜು ಸಮವಸ್ತ್ರದ ಮೇಲೆ ತಲೆಗೆ ಹಿಜಬ್ ಧರಿಸಿ ಬಂದರು. ಪ್ರಿನ್ಸಿಪಾಲರು ಅವರಿಗೆ ಕಾಲೇಜಿನೊಳಗೆ ಪ್ರವೇಶ ನಿರಾಕರಿಸಿದಾಗ ವಿದ್ಯಾರ್ಥಿನಿಯರು ಕಾಲೇಜಿನ ಹೊರ ನಿಂತು ಪ್ರತಿಭಟನೆ ನಡೆಸಿದರು. ತಾ. 12.07.2012 ರಿಂದ ರಾಮಕುಂಜೇಶ್ವರ ಪದವಿ ಕಾಲೇಜಿನ ಮುಸ್ಲಿಮ್ ವಿದ್ಯಾರ್ಥಿನಿಯರು ತರಗತಿಗಳಿಗೆ ಹಾಜರಾಗುತ್ತಿಲ್ಲ. ಪ್ರಿನ್ಸಿಪಾಲರು ಈಗಲೂ ತಮ್ಮ ನಿಲುವಿನಿಂದ ಹಿಂದೆ ಸರಿದಿಲ್ಲ. ಅದಕ್ಕೆ ಬದಲಾಗಿ ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿರುವವರ ಮೇಲೆಯೇ ಅವರು ಕೇಸು ದಾಖಲಿಸಿದ್ದಾರೆ. ಕಾಲೇಜು ಆಡಳಿತ ಮಂಡಳಿಯ ಗೌರವ ಅಧ್ಯಕ್ಷರಾದ ಪೇಜಾವರ ಶ್ರೀಗಳು ಈಗ ತಾವು ಚಾತುರ್ಮಾಸ್ಯದ ವ್ರತದಲ್ಲಿ ಇರುವುದರಿಂದ, ಅದುಮುಗಿದ ಮೇಲೆ ವಿದ್ಯಾರ್ಥಿನಿಯರು, ಹೆತ್ತವರು ಮತ್ತು ಇತರರ ಜೊತೆ ಈ ವಿಷಯದಲ್ಲಿ ಮಾತುಕತೆ ನಡೆಸುವುದಾಗಿ ಹೇಳಿದ್ದಾರೆ. ಸದ್ರಿ ಕಾಲೇಜು ಮಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಟ್ಟಿದ್ದು ವಿಶ್ವವಿದ್ಯಾಲಯದ ಉಪಕುಲಪತಿಗಳು ಈ ವಿಷಯದಲ್ಲಿ ಮಧ್ಯೆ ಪ್ರವೇಶಿಸಬೇಕಾಗಿತ್ತು. ದೇಶದ ಯಾವ ಶಿಕ್ಷಣ ಸಂಸ್ಥೆಯೂ ಸರ್ವತಂತ್ರ ಸ್ವತಂತ್ರವಲ್ಲ. ಪ್ರಜೆಗಳ ಸಂವಿಧಾನದತ್ತ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸುವಂತಹ ನಿಯಮಗಳನ್ನು ಶಿಕ್ಷಣ ಸಂಸ್ಥೆಗಳು ತಮ್ಮ ವಿದ್ಯಾರ್ಥಿಗಳ ಮೇಲಾಗಲೀ, ಶಿಕ್ಷಕರ ಮೇಲಾಗಲೀ ಹೇರುವಂತಿಲ್ಲ. ರಾಮಕುಂಜೇಶ್ವರ ಕಾಲೇಜಿನ ಪ್ರಿನ್ಸಿಪಾಲರ ಧೋರಣೆ ಸಂವಿಧಾನದ 19 ಮತ್ತು 25 ನೆಯ ಕಲಂಗಳಲ್ಲಿ ಹೇಳಲಾಗಿರುವ ನಂಬಿಕೆ, ಆಚರಣೆ ಮತ್ತು ಅಭಿಪ್ರಾಯ ಸ್ವಾತಂತ್ರ್ಯಗಳ ಉಲ್ಲಂಘನೆಯಾಗಿದ್ದು, ಅವರ ಕ್ರಮವನ್ನು ರದ್ದುಗೊಳಿಸುವುದು ವಿಶ್ವವಿದ್ಯಾಲಯದ ಉಪಕುಲಪತಿಗಳ ಕರ್ತವ್ಯವಾಗಿದೆ. ಆದರೆ ಅವರು ಈ ಬಗ್ಗೆ ಕಾನೂನು ಏನು ಹೇಳುತ್ತದೆ ಎಂದು ಪರಿಶೀಲಿಸುತ್ತೇನೆ ಎಂದು ಹೇಳಿ ತಮ್ಮ ಹೊಣೆಗಾರಿಕೆಯಿಂದ ಕಳಚಿಕೊಂಡಿದ್ದಾರೆ.

ವಿದ್ಯಾರ್ಥಿಗಳ ಮೇಲೆ ಇಂತಹ ಒತ್ತಾಯದ ಹೇರಿಕೆಯ ಕುರಿತು ಕಾನೂನಿನ ನಿಲುವು ಏನು ಎಂಬುದು ಸ್ಪಷ್ಟವಾಗಿದೆ. ಉದಾಹರಣೆಗೆ 1987 ರಲ್ಲಿ ಕೇರಳದ ಸಾರ್ವಜನಿಕ ಶಿಕ್ಷಣ ಇಲಾಖೆ, ಶಾಲಾ ಕಾಲೇಜುಗಳಲ್ಲಿ ರಾಷ್ಟ್ರಗೀತೆಯನ್ನು ಕಡ್ಡಾಯಗೊಳಿಸಿದಾಗ ಕ್ರೈಸ್ತ ಧರ್ಮದ ಪ್ರಾಟೆಸ್ಟಂಟ್ ಪಂಥದ "ಜೆ ಹೋವನ ಸಾಕ್ಷಿಗಳು" ಎಂಬ ಸಂಘಟನೆಗೆ ಸೇರಿದ ಮೂವರು ವಿದ್ಯಾರ್ಥಿಗಳು "ತಾವು ದೇಶದ್ರೋಹಿಗಳಲ್ಲ; ಆದರೆ ರಾಷ್ಟ್ರಗೀತೆ ಹಾಡುವುದು ತಮ್ಮ ಧರ್ಮಕ್ಕೆ ವಿರೋಧವಾದದ್ದು; ದೇವರ ಸ್ತೋತ್ರ ಬಿಟ್ಟು ತಾವು ಬೇರೆ ಏನನ್ನೂ ಸ್ತುತಿಸಲಾರೆವು" ಎಂದು ಪ್ರತಿಭಟಿಸಿದರು. ಈ ವಿವಾದದಲ್ಲಿ ಕೇರಳ ಹೈಕೋರ್ಟು, ವಿದ್ಯಾರ್ಥಿಗಳ ವಿರುದ್ಧ ತೀರ್ಪು ಕೊಟ್ಟರೂ, ಸುಪ್ರೀಂಕೋರ್ಟು ಆ ವಿದ್ಯಾರ್ಥಿಗಳ ನಿಲುವನ್ನು ಎತ್ತಿ ಹಿಡಿಯುವುದರ ಜೊತೆ, ಶಿಕ್ಷಣ ಸಂಸ್ಥೆಗಳ ಅಂತಹ ನಿಯಮಗಳು ಸಂವಿಧಾನಕ್ಕೆ ವ್ಯತಿರಿಕ್ತವಾದವು ಎಂದು ಸಹ ತೀರ್ಪು ನೀಡಿದೆ.

ಕಳೆದ ವರ್ಷ ಅಂದರೆ 2011-2012 ರ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದಿರೆಯ ಜೈನ್ ಕಾಲೇಜಿನ ಓರ್ವ ಮುಸ್ಲಿಂ ವಿದ್ಯಾರ್ಥಿನಿ ಹಾಡಿಯಾ ಎಂಬವರು ಹಿಜಬ್ ಧರಿಸಿ ತರಗತಿಗೆ ಹಾಜರಾದಾಗ, ಕಾಲೇಜು ಅವರನ್ನು ಅಮಾನತು ಗೊಳಿಸಿ, ಪರೀಕ್ಷೆಗೆ ಹಾಜರಾಗಲು

►16




ಇತ್ತೀಚೆಗೆ 'ಪ್ರಜಾವಾಣಿ' ಪತ್ರಿಕೆಯನ್ನು ತೊರೆದಿರುವ ವ್ಯಂಗ್ಯಚಿತ್ರಕಾರ ಪಿ. ಮೊಹಮ್ಮದ್ ಅವರು ತಮ್ಮ ಫೇಸ್‌ಬುಕ್‌ನಲ್ಲಿ ಬರೆದಿರುವ ಟಿಪ್ಪಣಿ ಇಲ್ಲಿದೆ.

ಅದ್ಭುತ ಕಲಾವಿದನ ಆಳವಾದ ನೋವು

ಮುದ್ರಣ ಮಾಧ್ಯಮದಲ್ಲಿ ರಾಜಕೀಯ ವ್ಯಂಗ್ಯಚಿತ್ರಕಾರರಿಗೆ ಭವಿಷ್ಯ ಇದೆಯೇ? "ಇಲ್ಲ" ಎಂದು ಪಿ. ಲಂಕೇಶರು ...ಳ ಹಿಂದೆ ನನಗೆ ಹೇಳಿದ್ದಾಗ ನಾನು ...ರ ಮಾತನ್ನು ಒಪ್ಪಿರಲಿಲ್ಲ. ...ರ 'ಪತ್ರಿಕೆ'ಯಲ್ಲಿದ್ದ ...ಜು ಗಂಗೊಳ್ಳಿ, ಚಂದ್ರಶೇಖರ ಗುಬ್ಬಿ ...ಬಿಟ್ಟುಹೋದ ಕಾರಣಕ್ಕೆ ಅಸಮಾಧಾನದಿಂದ ...ಗೆ ಹೇಳುತ್ತಿದ್ದಾರೆ ಎಂದುಕೊಂಡಿದ್ದೆ. ಆ ...ತನೆ ನಡೆದು ಬಹಳ ವರ್ಷಗಳಾಗಿವೆ. ನನಗೆ ...ವೃತ್ತಿಯಲ್ಲಿ ಬೆಳ್ಳಿಹಬ್ಬದ (25 ವರ್ಷ) ಅನುಭವವಾಗಿದೆ. ನನ್ನ ವಯಸ್ಸು ಚಿನ್ನದ ಹಬ್ಬವನ್ನು ...ರಿಸುವ ಸ್ಥಾನದಲ್ಲಿದೆ. ಕನ್ನಡದ ಒಂದು ...ಮುಖ ದಿನಪತ್ರಿಕೆಯಲ್ಲಿ ಒಂದು ದಶಕದಷ್ಟು ಕಾಲ ...ಸಿದು ಹೊರಬಂದಿರುವ ಈ ಸಂದರ್ಭದಲ್ಲಿ ...ಕೇಶರ ಮಾತು ಮತ್ತೆ ನೆನಪಾಗುತ್ತಿದೆ.

ಒಂದು ಬಾರಿ ನಾನು ನಡೆದುಬಂದ ಕಾರ್ಟೂನಿಸ್ಟ್ ...ನು ಈ ದೀರ್ಘ ದಾರಿಯತ್ತ ತಿರುಗಿ ನೋಡಿದರೆ... ...ನಿಜಕ್ಕೂ ಸಾಧಿಸಿದ್ದೇನು ಎನ್ನುವ ಪ್ರಶ್ನೆ ನನ್ನನ್ನು ...ವಾಗಿ ಅಣಕಿಸುತ್ತದೆ. ಈ ವೃತ್ತಿಯ ಆದಾಯದಿಂದ ...ಹೆಂಡತಿ ಮಕ್ಕಳಿಗೆ ಒಂದು ಉತ್ತಮ ಎನ್ನಬಹುದಾದ ...ವನ್ನು ಕೊಡಲಿಕ್ಕೆ ಆಗಲಿಲ್ಲ; ನನ್ನ ಮಕ್ಕಳಿಗೆ ಒಂದು ...ಮ ಶಿಕ್ಷಣ ನೀಡಲಿಕ್ಕೆ ಸಾಧ್ಯವಾಗಲಿಲ್ಲ; ನನ್ನದೇ ಆದ ...ದು ಮನೆಯನ್ನು ಮಾಡಿಕೊಳ್ಳಲಿಕ್ಕೆ ಸಾಧ್ಯವಾಗಲಿಲ್ಲ. ...ಇ ಹಾಲದು ಎಂಬಂತೆ ನನ್ನ ಉದ್ಯೋಗದ ದೆಸೆಯಿಂದ ...ವು ನನ್ನ ಜೊತೆಯಲ್ಲಿ ಹೈದರಾಬಾದ್, ಬೆಂಗಳೂರು ...ಎಳೆದುಕೊಂಡು ಹೋದೆ. ಆದರೂ ನನಗೆ, ನನ್ನ ವೃತ್ತಿಗೆ ಗಟ್ಟಿಯಾಗಿ ಬೆಂಬಲ ನೀಡುತ್ತ ಬಂದಿದ್ದಳು ನನ್ನ ಹೆಂಡತಿ ಖತೀಜ. ನನ್ನ ವೃತ್ತಿಯ ಅನಿಶ್ಚಿತತೆ ಕೊಡುತ್ತಿದ್ದ ಮಾನಸಿಕ ಒತ್ತಡ ಕಾರಣವೋ ಏನೋ 2002ರಲ್ಲಿ ಆಕೆಗೆ ಇದ್ದಕ್ಕಿದ್ದಂತೆ ಗಂಭೀರ ಅನಾರೋಗ್ಯ ಕಾಣಿಸಿಕೊಂಡು ಅದರಲ್ಲೇ ತೀರಿಕೊಂಡಳು. ನಂತರ ನನಗೆ ಎದುರಾದದ್ದು ನನ್ನ ಬದುಕಿನ ಅತ್ಯಂತ ದೊಡ್ಡ ಸವಾಲು. ಆಗ ಸುಮಾರು 15 ವರ್ಷದಿಂದ ಈ ವೃತ್ತಿಯಲ್ಲಿ ಇದ್ದರೂ ಇನ್ನೂ ಒಂದು ದೊಡ್ಡ ಪತ್ರಿಕೆಯಲ್ಲಿ ಅವಕಾಶ ಸಿಕ್ಕದೆ ಬದುಕು ಅತಂತ್ರ ಆಗಿತ್ತು, ಬೇರೆ ಆದಾಯ ಮೂಲವೂ ಇರಲಿಲ್ಲ. ಮನೆಯಲ್ಲೇ ಕೂತು ಬೇರೆ ಬೇರೆ ಪತ್ರಿಕೆಗಳಿಗೆ ಚಿತ್ರಗಳನ್ನು ಬರೆದುಕೊಡುತ್ತಾ ಸ್ವಲ್ಪ ಆದಾಯ ಸಂಪಾದಿಸುತ್ತಿದ್ದೆ. ಅಂತ ಸನ್ನಿವೇಶದಲ್ಲಿ ನನ್ನ ದೊಡ್ಡ ಶಕ್ತಿಯಾಗಿದ್ದ ನನ್ನ ಹೆಂಡತಿ ಹೋಗಿಬಿಟ್ಟಿದ್ದಳು.



ಆದರೂ ಹೇಗೋ ಒಂದು ಕಡೆ ಮಕ್ಕಳನ್ನೂ ನೋಡಿಕೊಳ್ಳುತ್ತಾ ಇನ್ನೊಂದು ಕಡೆ ವ್ಯಂಗ್ಯಚಿತ್ರಗಳನ್ನೂ ರಚಿಸುತ್ತ ಬದುಕಿನ ಬಂಡಿಯನ್ನು ಏದುಸಿರುಬಿಡುತ್ತಾ ಹೇಗೋ ಎಳೆಯುತ್ತಾ ಸಾಗಿದೆ. (ಸ್ವಂತ ಬದುಕಿನಲ್ಲಿ ಒಳಗೊಳಗೇ ಅಳುತ್ತಾ, ಜನರನ್ನು ನಗಿಸಲು ಪ್ರಯತ್ನಿಸುವ ನನ್ನ ಕಾಯಕಕ್ಕಿಷ್ಟು...!)

2003ರಲ್ಲಿ ಪ್ರಜಾವಾಣಿಯಲ್ಲಿ ಫ್ರೀ ಲ್ಯಾನ್ಸರ್ ವ್ಯವಸ್ಥೆಯಲ್ಲಿ, ಹೊರಗಿನಿಂದ ವ್ಯಂಗ್ಯಚಿತ್ರಗಳನ್ನು ಮಾಡಿಕೊಡಲು ಅಂದಿನ ಸಹ-ಸಂಪಾದಕರಾಗಿದ್ದ ಶೈಲೇಶ್ಚಂದ್ರ ಗುಪ್ತ ಅವರು ಅವಕಾಶ ಮಾಡಿಕೊಟ್ಟರು. 2005ರಲ್ಲಿ ಪ್ರಜಾವಾಣಿಯ ಸಂಪಾದಕೀಯ ವಿಭಾಗದಲ್ಲಿ ಸ್ಟಾಫ್ ಆಗಿ ಸೇರಲು ಸಾಧ್ಯ ಆಯ್ತು, ಆಗ ನನಗೆ 42 ವರ್ಷ! ಒಬ್ಬ ವ್ಯಂಗ್ಯ ಚಿತ್ರಕಾರನಾಗಿ ಸ್ಥಿರಗೊಳ್ಳಲು ನನ್ನ ಅಷ್ಟು ಆಯಸ್ಸನ್ನು ಸವೆಸಬೇಕಾಯ್ತು!

ಕಾರ್ಟೂನ್ ಕಲೆಗಾಗಿ ಇಷ್ಟೆಲ್ಲಾ ಪಾಡನ್ನು ಪಟ್ಟ ಒಬ್ಬ ಕಲಾವಿದನಿಗೆ ಆತ್ಮಾಭಿಮಾನ ಸ್ವಲ್ಪ ಹೆಚ್ಚೇ ಇರುವುದು ತಪ್ಪಲ್ಲ ಅಲ್ಲವೇ? ನನ್ನ ಚಿತ್ರಗಳ ಬಗ್ಗೆ 'derogatory' 'insulting' ಮೊದಲಾದ ಅಭಿಪ್ರಾಯಗಳನ್ನು ಕೇಳಿದಾಗ ನನಗೆ ಜೀರ್ಣಿಸಿಕೊಳ್ಳುವುದು ಕಷ್ಟ ಎನ್ನಿಸುತ್ತಿತ್ತು. ಒಂದು ಕಾರ್ಟೂನನ್ನು 'ಕಾರ್ಟೂನ್' ಮಾತ್ರ ಆಗಿ ನೋಡಬೇಕು. ಅದೊಂದು ನೈಜಚಿತ್ರ ಎಂಬಂತೆ ನೋಡಿದರೆ ಅಲ್ಲೇ ಸಮಸ್ಯೆ ಹುಟ್ಟಿಕೊಳ್ಳುತ್ತದೆ.

ಕೆಲವು ಕಾಲದಿಂದ ಇದೇ ವಿಷಯ ನನ್ನನ್ನು ಕಾಡುತ್ತಿತ್ತು. ಈ ನನ್ನ ಪ್ರೀತಿಯ ಕಲೆಗಾಗಿ ಇಷ್ಟೆಲ್ಲಾ ಪಡಬಾರದ ಕಷ್ಟಗಳನ್ನು ಸಹಿಸಿಕೊಂಡು ಬಂದು, ಈಗ ಇಂಥ ಮಾತುಗಳನ್ನು ಕೇಳಿಕೊಂಡು ಇರುವುದು ಸರಿಯೇ? ಯಾವ ಪುರುಷಾರ್ಥಕ್ಕಾಗಿ ಇದು? ಈ ಕ್ಷೇತ್ರ ಸಾಕು; ಹೊಟ್ಟೆಪಾಡಿಗೆ ಬೇರೆ ಏನಾದರೂ ಸ್ವಂತ ವ್ಯಾಪಾರ-ಗೀಪಾರ ಮಾಡಿದರೆ ಆಗದೆ ಎಂದುಕೊಳ್ಳುತ್ತಿದ್ದೆ. ಹೇಳಿಕೇಳಿ 'ಬಿಸಿನೆಸ್'ಗೆ ಖ್ಯಾತವೋ 'ಕುಖ್ಯಾತ'ವೋ ಆಗಿರುವ ಬ್ಯಾರಿ ಸಮುದಾಯದಿಂದ ಬಂದವನು ನಾನು......

ಮಾರುತಿ ಸುಜುಕಿ-ದೊಂಬಿಯ ಹಿಂದಿನ ದಮನಕಾಂಡ


ಕೊಲೆಯಾದ ಅವನೀಶ್

ರಾಜಧಾನಿ ದೆಹಲಿಯಿಂದ 40-50 ಕಿಮೀ ದೂರದಲ್ಲಿರುವ ಮಾನೆಸರ್‌ನಲ್ಲಿರುವ ಮಾರುತಿ ಸುಜುಕಿ ಇಂಡಿಯಾ ಲಿಮಿಟೆಡ್ ಕಂಪನಿಯಲ್ಲಿ ರೊಚ್ಚಿಗೆದ್ದ ಕಾರ್ಮಿಕರಿಂದ ಕಳೆದ ವಾರ ಭಾರೀ ಅನಾಹುತವೊಂದು ನಡೆದು ಹೋಗಿದೆ. ಇತ್ತೀಚಿನ ದಶಕಗಳಲ್ಲಿ ಕಂಡುಕೇಳರಿಯದಂಥ ಆ ಭಯಾನಕ ಹಿಂಸಾಚಾರದಲ್ಲಿ ಅವನೀಶ್ ಕುಮಾರ್ ದೇವ್ ಎಂಬ ಕಂಪನಿಯ ಒಬ್ಬ ಮ್ಯಾನೇಜರ್ ಜೀವಂತವಾಗಿ ಸುಟ್ಟುಹೋಗಿದ್ದಾನೆ. ಆ ಮ್ಯಾನೇಜರ್‌ನ ಸಾವಿನ ಸನ್ನಿವೇಶ ಎಷ್ಟು ಭೀಕರವಾಗಿತ್ತೆಂದರೆ ಮೊದಲೇ ದಾಳಿಗೊಳಗಾಗಿದ್ದ ಆತನ ಕಾಲುಗಳಿಗೆ ತೀವ್ರ ಪೆಟ್ಟು ಬಿದ್ದಿದ್ದು ಎದ್ದು ನಡೆಯಲಾಗದ ಸ್ಥಿತಿಯಲ್ಲಿದ್ದ. ಹಾಗೇ ಉರಿಯುತ್ತಿರುವ ಬೆಂಕಿಗೆ ಬಲಿಯಾಗಿ ಹೋದ. ಆತನ ದೇಹ ಗುರುತಿಸಲಾಗದಷ್ಟು ಸುಟ್ಟು ಹೋಗಿತ್ತು. ಈ ಕ್ರೌರ್ಯವನ್ನು ಮಾನವೀಯ ಮೌಲ್ಯಗಳಲ್ಲಿ ನಂಬಿಕೆಯಿರುವ ಯಾರೇ ಆಗಲಿ ಸಮರ್ಥಿಸಲಾರರು.

ಈ ಗಲಭೆಯಲ್ಲಿ ಸುಮಾರು 33 ಮಂದಿ ಅಧಿಕಾರಿಗಳು ಹಾಗೂ ಸೂಪರ್‌ವೈಸರ್‌ಗಳು ಗಾಯಗೊಂಡಿದ್ದು ಆಸ್ಪತ್ರೆಗೆ ದಾಖಲಾಗಿದ್ದಾರೆ. ಇವರಲ್ಲಿ ಇಬ್ಬರು ಜಪಾನಿ ರಾಷ್ಟ್ರೀಯರು. ಹಾಗೆಯೇ ಗಲಭೆಯಿಂದ ಹೊತ್ತಿಕೊಂಡ ಬೆಂಕಿಯಲ್ಲಿ ಫ್ಯಾಕ್ಟರಿಯ ಕೆಲವು ಕಟ್ಟಡಗಳು, ಪೀಠೋಪಕರಣಗಳು, ಕಂಪ್ಯೂಟರ್, ದಾಖಲೆಗಳು ಮುಂತಾದವು ಸುಟ್ಟುಹೋಗಿವೆ.

ಕೂಡಲೇ ರಂಗಪ್ರವೇಶ ಮಾಡಿದ ಪೊಲೀಸರು ನೂರಕ್ಕೂ ಹೆಚ್ಚು ಕಾರ್ಮಿಕರನ್ನು ಬಂಧಿಸಿದ್ದಾರೆ. ಪರಾರಿಯಾಗಿರುವ ಸುಮಾರು 3000 ಕಾರ್ಮಿಕರಿಗಾಗಿ ಬೇಟೆ ಮುಂದುವರೆಸಿದ್ದಾರೆ. ಕಂಪನಿಯ ಕಾವಲಿಗಾಗಿ 1500 ಪೊಲೀಸರನ್ನು ನಿಯೋಜಿಸಲಾಗಿದೆ. ಹರಿಯಾಣದ ಮುಖ್ಯಮಂತ್ರಿ ಹೂಡಾ ಸುಜುಕಿ ಕಂಪನಿಯ ರಕ್ಷಣೆಗೆ ಕೂಡಲೇ ಧಾವಿಸಿ ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಿದ್ದಾರೆ. ಕೇಂದ್ರದಲ್ಲಿ ಪ್ರಧಾನಿಯಾದಿಯಾಗಿ ಹಲವು ಮಂತ್ರಿಮಾನ್ಯರು ರಂಗಪ್ರವೇಶ ಮಾಡಿ ಕಂಪನಿಗೆ ರಕ್ಷಣೆ ನೀಡುವ ಭರವಸೆಯ ಮಹಾಪೂರವನ್ನೇ ಹರಿಸಿದ್ದಾರೆ.

ಟಿವಿ ಹಾಗೂ ಪತ್ರಿಕಾ ಮಾಧ್ಯಮಗಳಿಗಂತೂ ಪುರುಸೊತ್ತೇ ಇಲ್ಲ; ಈ ಘೋರವನ್ನು ಬಗೆಬಗೆಯಾಗಿ ಬಣ್ಣಿಸಿ ವಾರವಿಡೀ ಪ್ರಚಾರ ಮಾಡುತ್ತಿವೆ. ಈ ಕಾರ್ಮಿಕರನ್ನು ರಾಕ್ಷಸರೆಂಬಂತೆ ಯಶಸ್ವಿಯಾಗಿ ಚಿತ್ರಿಸಿರುವ ಮಾಧ್ಯಮಗಳ ಸಾಮರ್ಥ್ಯವನ್ನು ನಾವು ಮೆಚ್ಚಲೇಬೇಕು!

ಅದು ಹಾಗಿರಲಿ; ಈ ಸುದ್ದಿ ತಿಳಿದ ಯಾರಿಗಾದರೂ ಇಂಥಾ ಒಂದು ದುರ್ಘಟನೆಯ ಹಿನ್ನೆಲೆ ಏನು 'ಕಾರ್ಮಿಕರು ಹೀಗೆ ರೊಚ್ಚಿಗೇಳಲು ಕಾರಣಗಳೇನು' ಎಂಬ ಪ್ರಶ್ನೆ ಮೂಡುವುದು ಅತ್ಯಂತ ಸಹಜ ತಾನೇ? ಆದರೆ ಇಂಥಾ ಪ್ರಶ್ನೆಗಳನ್ನು ಮಾಧ್ಯಮಗಳು ವ್ಯವಸ್ಥಿತವಾಗಿ ಮೂಲೆಗುಂಪು ಮಾಡಿಬಿಟ್ಟಿವೆ. ಕಾರ್ಪೋರೇಟ್ ಕಂಪನಿಗಳ ಕೈಯಲ್ಲಿರುವ ಮಾಧ್ಯಮಗಳಿಂದ ನಾವು ಇನ್ನೇನು ನಿರೀಕ್ಷಿಸಲು ಸಾಧ್ಯ ಹೇಳಿ?

ಇರಲಿ, ಈ ಘಟನೆಯಲ್ಲಿ ಕಡೆಗಣಿಸಲಾಗದ ಕೆಲವು ಪ್ರಮುಖ ಅಂಶಗಳನ್ನು ಗಮನಿಸೋಣ. ಮೊದಲನೆಯದಾಗಿ ಮಾನೆಸರದಲ್ಲಿರುವ ಮಾರುತಿ ಕಂಪನಿಯ ಘಟಕದಲ್ಲಿ ಒಂದು ವರ್ಷದಿಂದೀಚೆಗೆ ಈಗ ನಡೆಯುತ್ತಿರುವುದು ನಾಲ್ಕನೇ ಮುಷ್ಕರ. 2011ರ ಜೂನ್‌ನಲ್ಲಿ 13 ದಿನಗಳು, ಆಗಸ್ಟ್‌ನಲ್ಲಿ 33 ದಿನಗಳು, ಅಕ್ಟೋಬರ್‌ನಲ್ಲಿ 14 ದಿನಗಳು ಮುಷ್ಕರದಲ್ಲಿ ಕಳೆದುಹೋಗಿದೆ.

ಹೋಗಲಿ, ಈ ಕಾರ್ಮಿಕರು ಮಾರುತಿ ಸುಜುಕಿಯ ಆಡಳಿತ ಮಂಡಳಿಯೊಂದಿಗೆ ಹೀಗೆ ಎಡೆಬಿಡದೆ ಸಂಘರ್ಷಕ್ಕೆ ತೊಡಗಲು ಕಾರಣವೇನು? ಬಗೆಹರಿಸಲು ಸಾಧ್ಯವಾಗದ ಅಂಥಾ ಯಾವ ಅಗಾಧವಾದ ಬೇಡಿಕೆಯನ್ನು ಈ ಕಾರ್ಮಿಕರು ಮುಂದಿಟ್ಟಿರಬಹುದು? ಈ ವಿಪರೀತಕ್ಕೆ ದಾರಿಮಾಡಿದ ಕಾರ್ಮಿಕರ ಬೇಡಿಕೆಯನ್ನು ಕೇಳಿದರೆ ಯಾರೂ ನಂಬಲಿಕ್ಕಿಲ್ಲ; ಆದರೆ ಅದೇ ವಾಸ್ತವ. ಹಾಗೆ ನೋಡಿದರೆ ದೇಶಾದ್ಯಂತ ಸಂಘಟನೆಯನ್ನು ಹೊಂದಿರುವ ಯಾವ ಪ್ರಮುಖ ಟ್ರೇಡ್ ಯೂನಿಯನ್ನೂ ಇಲ್ಲಿಲ್ಲ. ಅದಕ್ಕೆ ಕಂಪನಿ ಅವಕಾಶವನ್ನೂ ನೀಡಿಲ್ಲ. ಹೀಗಾಗಿ ಕಂಪನಿಯಲ್ಲಿ ತಮ್ಮದೇ ಆದ ಒಂದು ಕಾರ್ಮಿಕ ಸಂಘವನ್ನು ಸ್ಥಾಪಿಸಿಕೊಂಡಿರುವ ಕಾರ್ಮಿಕರು ಅದಕ್ಕೆ ಕಂಪನಿ ಅಧಿಕೃತ ಮಾನ್ಯತೆ ನೀಡಬೇಕೆಂದು ಕೇಳುತ್ತಿದ್ದಾರೆ. ಇದೇ ಅವರ ಪ್ರಮುಖ ಬೇಡಿಕೆಯೆಂದರೆ ಆಶ್ಚರ್ಯವಾಗುತ್ತಿದೆ ಅಲ್ಲವೆ?

ತಾವು ಕೆಲಸ ಮಾಡುವ ಕಾರ್ಖಾನೆಯಲ್ಲಿ ಟ್ರೇಡ್ ಯೂನಿಯನ್ ಕಟ್ಟಿಕೊಳ್ಳುವ ಹಕ್ಕನ್ನು ಸಂವಿಧಾನವೇ ಮಾನ್ಯ ಮಾಡಿದೆ. ಹೀಗೆ ದೇಶಾದ್ಯಂತ ಸಾವಿರಾರು ಯೂನಿಯನ್‌ಗಳಿವೆ. ಆದರೆ ಸುಜುಕಿ ಕಂಪನಿ ಮಾತ್ರ ಕಾನೂನುಬದ್ಧವಾದ ಈ ಕನಿಷ್ಠ ಬೇಡಿಕೆಯನ್ನು ನಿರಾಕರಿಸುತ್ತಿದೆ. ಬದಲಿಗೆ ಕಂಪನಿ ಮತ್ತೊಂದು ಕುತಂತ್ರ ನಡೆಸಿ ತನ್ನ ಚೇಲಾಗಳ ಮೂಲಕ 'ಮಾರುತಿ ಉದ್ಯೋಗ್ ಕಾಮಗಾರ್ ಯೂನಿಯನ್' (ಎಂಯುಕೆಯು) ಎಂಬ ಪಾಕೆಟ್ ಯೂನಿಯನ್ ಒಂದನ್ನು ಮುಂದುಮಾಡಿ ಅದನ್ನೇ ಅಧಿಕೃತಗೊಳಿಸಿಬಿಟ್ಟಿದೆ. ಈ ಚೇಲಾ ಸಂಘಕ್ಕೆ ಚುನಾವಣೆ ನಡೆಸಬೇಕೆಂಬ ಬೇಡಿಕೆಯನ್ನು ಕೇಳಿಸಿಕೊಳ್ಳುವವರೂ ಇಲ್ಲ.

ಇದು ಒತ್ತಟ್ಟಿಗಿರಲಿ, ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಗಳಿಸಿರುವ ಜಪಾನಿ ಮೂಲದ ಸುಜುಕಿ ಕಂಪನಿಯಲ್ಲಿ ಹಲವಾರು ವರ್ಷಗಳಿಂದ ದುಡಿಯುತ್ತಿರುವ ಕಾರ್ಮಿಕರ ಸ್ಥಿತಿಗತಿ ಹೇಗಿದೆ ಎಂಬುದನ್ನು ನೋಡಿ. ಮಾನೆಸರ ಘಟಕದಲ್ಲಿರುವ ಸುಮಾರು 3000 ಕಾರ್ಮಿಕರ ಪೈಕಿ ಕೇವಲ 950 ಮಂದಿ ಮಾತ್ರ ಕಾಯಂ ನೌಕರರು; 1250 ಮಂದಿ ಗುತ್ತಿಗೆ ಕಾರ್ಮಿಕರು; 400 ಮಂದಿ ಟ್ರೈನಿಗಳು; ಮತ್ತೆ 400 ಮಂದಿ ಅಪ್ರೆಂಟೈಸ್ ಟ್ರೈನಿಗಳು. ಆದರೆ ಇವರೆಲ್ಲರೂ ಕುಶಲ ಕೆಲಸಗಾರರೇ. ಅವರು ಮಾಡುತ್ತಿರುವ ಕೆಲಸದಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಸಂಬಳ- ಸವಲತ್ತುಗಳಿಂದ ವಂಚಿಸಲಿಕ್ಕೆ ಮಾತ್ರ ಹೀಗೆ ಬೇರೆಬೇರೆ ಹೆಸರುಗಳಷ್ಟೆ.

ಟ್ರೈನಿ ಎಂಬ ಹೆಸರಿನಲ್ಲಿ ದುಡಿಯುತ್ತಿರುವವರಿಗೆ ಕನಿಷ್ಠ ವೇತನವೂ ಇಲ್ಲ, ತಿಂಗಳಿಗೆ ಮೂರರಿಂದ ನಾಲ್ಕು ಸಾವಿರ ಮಾತ್ರ. ಇನ್ನೂ ಗುತ್ತಿಗೆ ಕಾರ್ಮಿಕರಿಗೆ 6 ರಿಂದ 7 ಸಾವಿರ ಮಾತ್ರ. ಕಾಯಂ ನೌಕರರ ಮೂಲ ವೇತನ 8000 ರೂ. ಇತರೆ ಅಲೋಯೆನ್ಸ್ ಎಲ್ಲಾ ಸೇರಿದರೆ ಸುಮಾರು 15,000 ಆಗುತ್ತೆ ಆದರೆ ಶಿಸ್ತುಕ್ರಮ ಮುಂತಾದ ಹೆಸರಿನಲ್ಲಿ ಅದಕ್ಕೂ ಕತ್ತರಿ ಬೀಳುತ್ತದೆ. ಇಲ್ಲಿ ಕೆಲಸ ಮಾಡುವ ಕಾರ್ಮಿಕರು ಯಾರೇ ಸತ್ತರೂ ರಜೆ ಹಾಕುವಂತಿಲ್ಲ. ಹಾಗೆ ಒಂದು ದಿನದ ರಜೆಗೆ 1500 ರೂಪಾಯಿ ಕಟ್. ಮೆಡಿಕಲ್ ಲೀವ್ ಕೂಡ ಇಲ್ಲಿ ಅನ್ವಯಿಸುವುದಿಲ್ಲ. ಕಾರ್ಮಿಕರು ಮದುವೆ ಮಾಡಿಕೊಳ್ಳಲು ರಜೆ ಮಂಜೂರು ಮಾಡಿಸಿಕೊಳ್ಳಲು ತಿಪ್ಪರಲಾಗ ಹಾಕಬೇಕು.

ಇನ್ನು ಕಾರ್ಮಿಕರ ದಿನಚರಿಯಂತೂ ಇನ್ನೂ ಹೀನಾಯ. ಬೆಳಗ್ಗೆ 5.00 ಗಂಟೆಗೆ ತಮ್ಮ ಗೂಡುಬಿಟ್ಟು, ಗಡಿಬಿಡಿಯಲ್ಲಿ ಬಸ್ ಹಿಡಿದು ಕಂಪನಿ ಗೇಟಿನಲ್ಲಿ ಪಂಚ್ ಮಾಡಬೇಕು; ಒಂದೇ ಒಂದೇ ಸೆಕೆಂಡು ತಡವಾದರೂ ಆ ದಿನದ ಸಂಬಳ ಕಟ್ ಆದಂತೆ. ಹಾಗೆಂದು ಅವರು ವಾಪಸ್ ಮನೆಗೂ ಹೋಗಲಾಗುವುದಿಲ್ಲ, ಯಾಕೆಂದರೆ ಪ್ರವೇಶ ದ್ವಾರವನ್ನು ಒಮ್ಮೆ ಬಂದ್ ಮಾಡಿದರೆ ಮುಗೀತು. ಮತ್ತೆ ತೆರೆಯುವುದು ಸಂಜೆಯ ವೇಳೆಗೆ ಮಾತ್ರ. ಬೆಳಗ್ಗೆ 6.30 ರ ವೇಳೆಗೆ ಸೂಪರ್‌ವೈಸರ್‌ಗಳು ಕೆಲಸಗಳ ಬಗ್ಗೆ ನಿರ್ದೇಶನ ನೀಡುತ್ತಾರೆ. ಅದಾದ ನಂತರ 7.00 ಗಂಟೆಗೆ ಸರಿಯಾಗಿ ಕೆಲಸ ಆರಂಭವಾಗುತ್ತದೆ.

ಕನ್ವೆಯರ್ ಬೆಲ್ಟ್‌ಗಳ ಮೇಲೆ ಪ್ರತಿ 38 ಸೆಕೆಂಡುಗಳಿಗೆ ಒಂದರಂತೆ ಕಾರುಗಳು ಚಲಿಸುತ್ತವೆ ಅಂದರೆ ಕೆಲಸದ ಒತ್ತಡ ಎಷ್ಟಿರುತ್ತದೆ ಎಂದು ಅರ್ಥ ಮಾಡಿಕೊಳ್ಳಬಹುದು. ಕಾರ್ಮಿಕರು ಅತ್ತಿತ್ತ ಕದಲಲೂ ಸಾಧ್ಯವಿಲ್ಲ. ಕುಡಿಯುವ ನೀರಿಗೂ ತತ್ವಾರ. ದಿನಕ್ಕೆರಡು ಬಾರಿ ಬ್ರೇಕ್‌ಗಳಲ್ಲಿ ಮಾತ್ರ ಅವರಿಗೆ ಉಸಿರಾಡಲು ಅವಕಾಶ. ಆ ಬ್ರೇಕ್‌ನ ಸ್ಥಿತಿಯೂ ಶೋಚನೀಯ. ಅಂದರೆ 9.00 ಕ್ಕೆ ನೀಡುವ ಟೀ ಬ್ರೇಕ್ ಖಚಿತವಾಗಿ 7 ನಿಮಿಷಗಳು ಮಾತ್ರ. ಈ 7 ನಿಮಿಷಗಳಲ್ಲೇ ಶೌಚಾಲಯದ ಕೆಲಸವನ್ನು ಮುಗಿಸಿಕೊಳ್ಳಬೇಕು. ಹೀಗಾಗಿ ಕಾರ್ಮಿಕರು ಬಿಸ್ಕೆಟ್ ಅಥವಾ ಸಮೋಸ ಕೈಯಲ್ಲಿಡಿದು ಕೊಂಡೇ ಟಾಯ್ಲೆಟ್‌ಗೆ ಓಡುವ ದೃಶ್ಯ ಇಲ್ಲಿ ಮಾಮೂಲು.

ಮತ್ತೊಂದು ಬ್ರೇಕ್ ಮಧ್ಯಾಹ್ನ ಊಟಕ್ಕೆ 30 ನಿಮಿಷ ಮಾತ್ರ. ಅರ್ಧ ಕಿ.ಮೀ ದೂರದ ಕ್ಯಾಂಟೀನ್‌ಗೆ ಓಡಿಓಡಿ ನಾಲ್ಕು ತುತ್ತು ತಿನ್ನುವ ಮೊದಲೇ ಬೆಲ್ ಆಗಿರುತ್ತದೆ. ಯಾವುದೇ ಸಂದರ್ಭದಲ್ಲಿ ಒಂದೇ ನಿಮಿಷ ತಡವಾದರೂ ಒಂದು ದಿನದ ಸಂಬಳ ಕಟ್. ಜೊತೆಗೆ ಸೂಪರ್‌ವೈಸರ್‌ಗಳಿಂದ ಬೈಗುಳ, ನಿಂದನೆ. ಹೀಗೆ ತನ್ನ ಕಾರ್ಮಿಕರನ್ನು ಉಸಿರಾಡಲಾರದ ಸ್ಥಿತಿಯಲ್ಲಿ ನಿರ್ಬಂಧಿಸಿರುವ ಮಾರುತಿ ಸುಜುಕಿ ಎಂಬ ನರಕ ಇಡೀ ನ್ಯಾಷನಲ್ ಕ್ಯಾಪಿಟಲ್ ರೀಜನ್ ಕೈಗಾರಿಕಾ ಪ್ರದೇಶದಲ್ಲೇ ಕುಪ್ರಸಿದ್ಧ.

ಕಾರ್ಮಿಕರನ್ನು ನಿಯಂತ್ರಿಸಲು ಸುಜುಕಿ ಕಂಪನಿ ಎಲ್ಲಾ ರೀತಿಯ ಪಾಳೇಗಾರಿ ವಿಧಾನಗಳನ್ನೂ ಬಳಸುತ್ತಿದೆ.



ಸುತ್ತಮುತ್ತಲ ಪ್ರಭಾವಿ ವ್ಯಕ್ತಿಗಳಿಗೆ ಟ್ರಾನ್ಸ್‌ಪೋರ್ಟ್, ಕ್ಯಾಂಟೀನ್ ಮುಂತಾದ ಆಕ್ಸಿಲರಿ ಕಾಮಗಾರಿಗಳ ಗುತ್ತಿಗೆ ಕೊಟ್ಟು ಅವರನ್ನು ತಮ್ಮ ಪರವಾಗಿ ಬಳಸಿಕೊಳ್ಳುತ್ತಿದ್ದಾರೆ. ಅಷ್ಟೂ ಸಾಲದೆಂಬಂತೆ ಕಾರ್ಮಿಕರಿಗೆ ಮುಂದಾಳತ್ವ ವಹಿಸುವವರನ್ನು ಮಟ್ಟ ಹಾಕಲೆಂದು ಬಾಡಿಗೆ ಗೂಂಡಾಗಳ ಮೀಸಲು ಪಡೆಯೊಂದು ಸದಾ ಸಜ್ಜಾಗಿರುತ್ತದೆ. ಸುಜುಕಿ ಕಂಪನಿಯ ಗುರ್‌ಗಾಂವ್ ಘಟಕದಲ್ಲಿ ಕಳೆದ ವರ್ಷ ಕಂಪನಿಯ ಬಾಡಿಗೆ ಗೂಂಡಾಗಳು ಅಜಿತ್‌ಸಿಂಗ್ ಎಂಬ ಕಾರ್ಮಿಕನನ್ನು ಗುಂಡಿಟ್ಟು ಕೊಂದರು. ಆ ಬಗ್ಗೆ ಕೇಸು ದಾಖಲಾಗಿದ್ದು, ಈ ಪ್ರಕರಣದ ಫೈಲು ಪೊಲೀಸ್ ಠಾಣೆ ಹಾಗೂ ನ್ಯಾಯಾಲಯದಲ್ಲಿ ಧೂಳು ತಿನ್ನುತ್ತಾ ಕೂತಿದೆ. ಕಾರ್ಮಿಕನ ಕೊಲೆಗೆ ಕನಿಷ್ಠ ಸ್ಪಂದಿಸದ ಸರ್ಕಾರ ಹಾಗೂ ಪೊಲೀಸರು ಕಂಪನಿಯ ಸೇವೆಗೆ ತಮ್ಮ ನಿಷ್ಠೆಯನ್ನು ಬಹಿರಂಗವಾಗಿಯೇ ವ್ಯಕ್ತಪಡಿಸುತ್ತಿರುವುದನ್ನು ನಾವು ದಿನವೂ ಮಾಧ್ಯಮಗಳಲ್ಲಿ ಕಾಣುತ್ತಿದ್ದೇವೆ. ನಮ್ಮ ಸರ್ಕಾರ, ಪೊಲೀಸ್ ವ್ಯವಸ್ಥೆ ಇರೋದೇ ಹಾಗೆ, ಆ ಮಾತು ಹಾಗಿರಲಿ.

ಇಂಥಾ ಸಂಕಷ್ಟಮಯ ಸನ್ನಿವೇಶದಲ್ಲಿ ಕಾರ್ಮಿಕರಿಗಿರು[...] ಏಕೈಕ ಆಸರೆಯೆಂದರೆ ಸಂಘಟನೆ ಮಾತ್ರ. ನಮ್ಮ ನೆಲ[...] ಕಾನೂನು ಕಾರ್ಮಿಕ ಸಂಘಟನೆಗಳನ್ನು ಮಾ[...] ಮಾಡಿರುವುದು ನಮ್ಮ ಸುದೈವ. ಅದನ್ನು ಹಾ[...] ತಪ್ಪಿಸಲೆಂದು ಚೇಲಾ ಯೂನಿಯನ್ ಮುಂದಿಟ್ಟ[...] ಕಂಪನಿಯ ಕ್ರಮವನ್ನು ತಿರಸ್ಕರಿಸಿ ಕಾರ್ಮಿಕರು 201[...] ಜೂನ್ 3ರಂದು 'ಮಾರುತಿ ಸುಜುಕಿ ಎಂಪ್ಲಾಯೀ[...]



ಯೂನಿಯನ್ (ಎಂಎಸ್‌ಇಯು)' ಎಂಬ ತಮ್ಮದೇ ಆ[...] ನೂತನ ಸಂಘವೊಂದನ್ನು ಸ್ಥಾಪಿಸಿದರು.

ಅದರ ನಾಯಕತ್ವ ವಹಿಸಿದವನು 24 ವರ್ಷ[...] ಸೋನು ಗುಜ್ಜಾರ್. ಈತನ ಹಿನ್ನೆಲೆ ಇನ್ನ[...] ಕುತೂಹಲಕಾರಿಯಾಗಿದೆ. ಯಾವುದೇ ಕೆಲಸದಲ್ಲಿ ಅತಿ[...] ಶ್ರದ್ಧೆ, ಶಿಸ್ತು ಪಾಲಿಸುವುದು ಆತನ ಜಾಯಮಾನ. ಹಾಗ[...] ಕಳೆದ ಕೆಲವು ವರ್ಷಗಳಿಂದ ಈತ ಬೆಸ್ಟ್ ಆಪರೇಟ[...] ಹಾಗೂ ಬೆಸ್ಟ್ ಎಂಪ್ಲಾಯಿ ಮುಂತಾದ ಅವಾರ್ಡ್‌ಗಳ[...] ಕಂಪನಿಯ ಎಂಡಿ ಕೈಯಿಂದಲೇ ಪಡೆದುಕೊಂಡಿದ[...] ಹಾಜರಿ ಪುಸ್ತಕದಲ್ಲಿ ಆತನಿಗೆ ಶೇಕಡ 99 ಹಾಜರಿಯಿ[...] ಹೀಗಾಗಿ ಎಂಬಿಎ ದರ್ಜೆಯ ಎಲ್ಲಾ ಅಧಿಕಾರಿಗಳಿ[...] ಆತ ಅಚ್ಚುಮೆಚ್ಚು.

ಆದರೆ ತಮ್ಮ ಹೀನಾಯ ಬದುಕನ್ನು ಸುಧಾ[...] ಕೊಳ್ಳಬೇಕೆಂಬ ಕಾರ್ಮಿಕರೆಲ್ಲರ ಒತ್ತಾ[...] ಮುಂದಾಳಾಗಿ ಆತ ಹೊ[...] ಸಂಘಟನೆಯ ಚುನಾವಣ[...] ನಿಲ್ಲುತ್ತಾನೆಂಬ ಸುದ್ದಿ ಮ್ಯಾನೇಜ್‌ಮೆಂ[...] ಕಿವಿಗೆ ಬಿದ್ದಿದ್ದೇ ತಡ, ತಮ್ಮ ಮೆ[...] ಸೋನುವನ್ನು ಆಡಳಿತ ಕಚೇರಿಗೆ ಕರೆ[...] ಅಧಿಕಾರಿಗಳ ಹಿಂಡು ಆತ[...] ಮನವೊಲಿಸಲು ಬಗೆಬಗೆಯ ಪ್ರಯ[...] ನಡೆಸಿದರು. ಆದರೆ ಲಂಚ[...] ಆಮಿಷವಾಗಲಿ, ಗಂಭೀರ ಪರಿಣಾಮ[...] ಬೆದರಿಕೆಯಾಗಲಿ ಸೋನುವ[...] ಬಗ್ಗಿಸಲೇ ಇಲ್ಲ. ಕೆಲಸದಿಂದ ವ[...] ಮಾಡುವುದಾಗಿ ಹೆದರಿಸಿದರೂ ಜ[...] ಸೋನು ಸಂಘ ಕಟ್ಟುವುದು ತ[...] ಕಾನೂನುಬದ್ಧ ಹಕ್ಕು, ಹಾಗೆ ಕಾನೂನು ಪಾಲಿಸಲು ನಾ[...] ಯಾರಿಗೂ ಹೆದರಬೇಕಾಗಿಲ್ಲ ಎಂದು ಹೇಳಿ ಕಾರ್ಮಿ[...] ಪರವಾಗಿ ದೃಢವಾಗಿ ನಿಂತುಬಿಟ್ಟ. ಹೀಗೆ ಕಂಪನಿ[...] ನೆಚ್ಚಿನ ಆದರ್ಶ ಕಾರ್ಮಿಕ, ಕಾರ್ಮಿಕರ ಆದ[...] ನಾಯಕನಾಗಿಬಿಟ್ಟಿದ್ದ.

ಇದುವರೆಗೂ ಹೊರಗಿನಿಂದ ಬರುವ ಸಂಘಟನೆಗ[...] ಅವಕಾಶ ನೀಡಿದರೆ ಕಂಪನಿಯಲ್ಲಿ ಇಲ್ಲದ ರಾಜಕೀ[...] ಮಾಡುತ್ತಾರೆ ಎಂಬ ಕಾರಣ ನೀಡಿ, ಯೂನಿಯನ್‌ಗ[...] ಅವಕಾಶ ನಿರಾಕರಿಸಿದ್ದ ಕಂಪನಿಗೆ ಈ ಹೊಸ ಯೂನಿಯ[...] ತಲೆನೋವಾಗಿ ಪರಿಣಮಿಸಿತು.

ಮ್ಯಾನೇಜ್‌ಮೆಂಟ್ ಹೊಸ ತಂತ್ರ ಹೂಡಿ ತಮ್ಮ[...] ಕಿಸೆಯಲ್ಲಿದ್ದ ಕಾರ್ಮಿಕ ಇಲಾಖೆಯ ಅಧಿಕಾರಿಗಳನ್ನು [...] ಬಿಟ್ಟರು. ಕಾರ್ಮಿಕ ಅಧಿಕಾರಿಗಳು ಯಾವುದೋ ಕು[...] ನೆಪ ನೀಡಿ ಈ ಯೂನಿಯನ್‌ನ ರಿಜಿಸ್ಟ್ರೇಷನ್ [...] ಮಾಡಿಬಿಟ್ಟರು. ಆಕ್ರೋಶಗೊಂಡ ಕಾರ್ಮಿ[...]

▶

ಕಂಪನಿಗೆ ಚೆಲ್ಲಾಟ ಕಾರ್ಮಿಕರಿಗೆ ಪ್ರಾಣಸಂಕಟ

ದೇಶದಲ್ಲಿ ಅತಿ ಬೇಡಿಕೆಯಿರುವ ಸ್ವಿಫ್ಟ್ ಹಾಗು ಸ್ವಿಫ್ಟ್ ಡಿಜೈರ್ ಡೀಸೆಲ್ ಕಾರುಗಳನ್ನೂ ಒಳಗೊಂಡ[...] ಹಲವು ಕಾರುಗಳು ಇದೇ ಮಾನೆಸರ ಘಟಕದಲ್ಲಿ ತಯಾರಾಗುತ್ತವೆ. ಈ ಕಂಪನಿಯಿಂದ ಪ್ರತಿನಿತ್ಯ ಹೊರಬರು[...] ಕಾರುಗಳ ಸಂಖ್ಯೆ ಸುಮಾರು 1600ಕ್ಕೂ ಹೆಚ್ಚು, ಹಾಗೆ ಕಳೆದ ವರ್ಷ ಇಲ್ಲಿ ತಯಾರಾದ ಕಾರುಗಳ ಸಂ[...] ಬರೋಬ್ಬರಿ 5,50,000! ಮಾರುಕಟ್ಟೆಯಲ್ಲಿ ದಿನೇದಿನೇ ಬೇಡಿಕೆ ಹೆಚ್ಚಿದಷ್ಟೂ ಜಪಾನಿ ದೊರೆಗಳ ಲಾ[...] ಹೆಚುತ್ತದೆ. ಆದರೆ ಕಾರ್ಮಿಕರ ಪಾಲಿಗೆ? ಕೆಲಸದ ಒತ್ತಡ, ದಮನಗಳಷ್ಟೇ ಹೆಚ್ಚುತ್ತಿರುವುದು ನಮ್ಮೆಲ್ಲರ ಕ[...] ಮುಂದಿರುವ ಕಟು ವಾಸ್ತವ.


ಅಂದಹಾಗೆ ದೇಶದ ಕಾರು ಮಾರುಕಟ್ಟೆಯಲ್ಲಿ ಶೇಕಡ 50 ಭಾಗವನ್ನು ಸುಜುಕಿ ಕಂಪನಿಯೇ ಕಬಳಿಸಿದೆ. ಕಳೆ[...] ಸಾಲಿನಲ್ಲಿ ಹಲವಾರು ಮುಷ್ಕರಗಳು ನಡೆದರೂ ಕಂಪನಿ 1635 ಕೋಟಿ ನಿವ್ವಳ ಲಾಭ ಗಳಿಸಿದೆ. ಅದೇ 2010ರ[...] 2288 ಕೋಟಿ ನಿವ್ವಳ ಲಾಭ ಗಳಿಸಿತ್ತು, ಹಾಗೆಯೇ ಕಂಪನಿಯ ಶೇರುಗಳ ಮೇಲೆ ಶೇಕಡ 150 ರಷ್ಟು ಡಿವಿಡೆಂ[...] ಅನ್ನು ಕಂಪನಿ ಘೋಷಿಸಿದೆ. ಆದರೆ ನಿರ್ಗತಿಕ ಕಾರ್ಮಿಕರು ಮೂರೊತ್ತಿನ ಅನ್ನವನ್ನು ಕಾಯಂ ಮಾಡಿಕೊಳ್ಳ[...] ಯಾರಲ್ಲಿ ಮೊರೆಯಿಡಬೇಕು? ಅವರ ಮುಂದಿರುವ ಆಯ್ಕೆಗಳೇನು?

ಗ್ರಾಮಸ್ಥರ ಪಂಚಾಯತಿ

ಕಾರ್ಮಿಕ-ಮಾಲೀಕರ ಈ ಸಂಘರ್ಷವನ್ನು ಬಗೆಹರಿಸಿ ಶಾಂತಿ ಕಾಪಾಡಲೆಂದು ಸುತ್ತಮುತ್ತಲ ಹತ್ತಾರು ಗ್ರಾಮದ ಜನರು ಒಂದು ಪಂಚಾಯತಿ ನಡೆಸಿದ್ದಾರೆ. ರೈತರಿಗೇಕೆ ಈ ಉಸಾಬರಿ ಅನ್ನುತ್ತೀರಾ? ಅದು ಅವರಿಗೆ ಅನಿವಾರ್ಯವಾಗಿದೆ.


2002 ರಲ್ಲಿ ಚೌತಾಲ ಸರ್ಕಾರ ಮಾರುತಿ ಕಂಪನಿಗಾಗಿ 3000 ಎಕರೆ ಜಮೀನನ್ನು ಎಕರೆಗೆ 2.25 ಲಕ್ಷ ರೂಪಾಯಿ ಕೊಟ್ಟು ಸ್ವಾಧೀನಪಡಿಸಿಕೊಂಡಿತ್ತು, ಪ್ರತಿಯೊಬ್ಬರಿಗೂ ಉದ್ಯೋಗ ಕೊಡುವ ಭರವಸೆಯನ್ನೂ ಕೊಟ್ಟಿದ್ದರು. ಆದರೆ ಸ್ಥಳೀಯರಿಗೆ ಉದ್ಯೋಗ ಕೊಟ್ಟರೆ ತಮಗೆ ವಿಧೇಯರಾಗಿರುವುದಿಲ್ಲವೆಂದು ಅಕ್ಕಪಕ್ಕದ ಗ್ರಾಮದ ಯಾರೊಬ್ಬರಿಗೂ ಉದ್ಯೋಗ ಕೊಡಲಿಲ್ಲ. ಜಮೀನು ಕಳೆದುಕೊಂಡ ಗ್ರಾಮಸ್ಥರು ಸಣ್ಣಪುಟ್ಟ ಹೋಟೆಲ್, ಅಂಗಡಿಗಳನ್ನು ಇಟ್ಟುಕೊಂಡು ಜೀವನ ನಡೆಸುತ್ತಿದ್ದಾರೆ ಅಥವಾ ಆಟೋ ಓಡಿಸುವುದು ಮುಂತಾದ ಕೆಲಸ ಮಾಡುತ್ತಾ ಜೀವನಾಧಾರ ರೂಪಿಸಿಕೊಂಡಿದ್ದಾರೆ. ಮತ್ತೆ ಕೆಲವರು ತಮ್ಮ ಮನೆಗಳ ಬದಿಯಲ್ಲಿ ಕಾರ್ಮಿಕರಿಗಾಗಿ ಬಾಡಿಗೆ ರೂಮುಗಳನ್ನು ಕಟ್ಟಿದ್ದಾರೆ. ಈಗ ಕಂಪನಿ ಮುಚ್ಚಿಕೊಂಡರೆ ಪರೋಕ್ಷವಾಗಿ ಕಂಪನಿಯನ್ನೇ ಅವಲಂಬಿಸಿರುವ ಹಳ್ಳಿಗರ ಅನ್ನಕ್ಕೆ ಕಲ್ಲು ಬಿದ್ದಂತೆಯೆ ಸರಿ. ಇತ್ತ ಭೂಮಿಯೂ ಇಲ್ಲ; ಇತರ ಬದುಕಿನ ಆಧಾರವೂ ಇಲ್ಲ.

ಹೀಗಾಗಿ ಅಕ್ಕಪಕ್ಕದ ಹಳ್ಳಿಯ ನೂರಾರು ಪ್ರತಿನಿಧಿಗಳು ಸೇರಿ 'ಮಹಾ ಪಂಚಾಯತಿ' ನಡೆಸಿ 21 ಜನರ ಸಮಿತಿಯೊಂದನ್ನು ರಚಿಸಿಕೊಂಡಿದ್ದಾರೆ. ಅವರ ಉದ್ದೇಶ ಹೇಗಾದರೂ ಮಾಡಿ ಕಂಪನಿಯ ಆಡಳಿತ ಮಂಡಳಿ ಮತ್ತು ಕಾರ್ಮಿಕರ ನಡುವಿನ ಸಮಸ್ಯೆ ಬಗೆಹರಿಸಿ ಕಂಪನಿಯನ್ನು ತಮ್ಮ ಊರಿನಲ್ಲೇ ಉಳಿಸಿಕೊಳ್ಳುವುದು. ಆದ್ದರಿಂದ ಸಮಸ್ಯೆ ಬಗೆಹರಿಸುವಂತೆ ಅವರು ಸರ್ಕಾರದ ಮೇಲೆ ಒತ್ತಡ ತರಲು ನಿರ್ಧರಿಸಿದ್ದಾರೆ. ಆದರೆ ಸುಜುಕಿ ಧಣಿಗಳ ಬೆಂಗಾವಲಿಗೆ ನಿಂತಿರುವ ಸರ್ಕಾರ ಈ ಬಡಪಾಯಿಗಳ ಮಾತನ್ನು ಕೇಳುತ್ತದೆ ಎಂದು ನಿರೀಕ್ಷಿಸಬಹುದೆ?



ಮಣ್ಣಿನ ಮಗನ ಕಿಡ್ನಿ ಕುಸಿತ?

'ಅಮೋಘ' ಬಂಗಲೆಯ ಪಕ್ಕದ ಮನೆಯನ್ನು ಮಾತ್ರ ಏಕೆ ಹಾಗೇ ಇಟ್ಟುಕೊಂಡಿದ್ದಾರೆ. ಅಲ್ಲಿ ಏನು ನಡೆಯುತ್ತದೆ, ಏಕೆ ಅಲ್ಲಿಗೆ ವಾರಕ್ಕೆರಡು ಬಾರಿ ದೇವೇಗೌಡರನ್ನು ಕರೆದೊಯ್ಯಲಾಗುತ್ತದೆ ಮತ್ತು ಆ ಹೊತ್ತಿಗೆ ಡಾಕ್ಟರುಗಳು, ನರ್ಸ್‌ಗಳೆಲ್ಲಾ ಏಕೆ ಜಮಾಯಿಸುತ್ತಾರೆ? ಆ ಮನೆಯನ್ನು ದೇವೇಗೌಡರ ಪಾಲಿಗೆ ಚಿಕಿತ್ಸಾ ಕೇಂದ್ರವಾಗಿ ರೂಪಿಸಲಾಗಿದೆಯೇ? ಅಲ್ಲಿ ದೇವೇಗೌಡರ ಕಿಡ್ನಿಯ ಡಯಾಲಿಸಿಸ್ ನಡೆಸುತ್ತಾರಾ?



"ನನಗೇನಾಗಿದೆ? ಚೆನ್ನಾಗೇ ಇದ್ದೀನಲ್ಲಾ?", "ಯಾಕೆ ಹೆಚ್ಚಿಗೆ ಎಲ್ಲಿ ಕಾಣಿಸಿಕೊಳ್ತಾ ಇಲ್ಲ" ಅಂದ್ರೆ; "ನನ್ನ ಜೀವನಚರಿತ್ರೆ ಬರೀತಾ ಇದ್ದೀನಿ ನೋಡಿ, ಅದಕ್ಕೆ ಯಾವ ಕಾರ್ಯಕ್ರಮವನ್ನೂ ಒಪ್ಪಿಕೊಳ್ತಾ ಇಲ್ಲ. ಅದನ್ನು ಮುಗಿಸಿದ ಮೇಲೆ ಹೇಗೆ ಬೀದಿಗಿಳಿತೀನಿ ಅಂತ ನೀವೇ ನೋಡ್ತೀರಿ...!"

ತಮ್ಮ ಆರೋಗ್ಯ ಕುರಿತಂತೆ ಯಾರೇ ಕೇಳಿದರೂ ಮಣ್ಣಿನ ಮಗ ದೇವೇಗೌಡರ ಬಾಯಿಂದ ಇದಕ್ಕಿಂತ ಬೇರೆ ಮಾತೇ ಇಲ್ಲ. ಸರಿ, ತಮ್ಮ ಬಯೋಗ್ರಫಿ ಬರೆಯಲು ದೇವೇಗೌಡರಿಗೆ ಒಂದು ವರ್ಷ ಬೇಕೆ? ಹೋಗಲಿ, ಇದು ಜೀವನಗಾಥೆ ಬರೆಯುತ್ತಾ ಕೂರುವ ಸಂದರ್ಭವೇ? ಚುನಾವಣೆಗಿನ್ನು ಕೆಲವೇ ತಿಂಗಳುಗಳಿರುವಾಗ, ಬಿಜೆಪಿ ಸರ್ಕಾರದ ಅಂತಃಕಲಹ ಮುಗಿಲು ಮುಟ್ಟಿರುವಾಗ, ರಾಜ್ಯ ಬರಗಾಲದಲ್ಲಿ ಬಸವಳಿದಿರುವಾಗ, ಸರ್ಕಾರದ ದುರಾಡಳಿತ ಮತ್ತು ಭ್ರಷ್ಟಾಚಾರದ ವಿರುದ್ಧ ನಾಡಿಗೆ ನಾಡೇ ರೊಚ್ಚಿಗೆದ್ದಿರುವಾಗ; ದೇವೇಗೌಡರಂಥ ಓರ್ವ 24x7 ರಾಜಕಾರಣಿ 'ರೋಮ್ ಉರಿಯುತ್ತಿದ್ದರೆ ನೀರೋ ಪಿಟೀಲು ಬಾರಿಸಿದಂತೆ' ತಮ್ಮ ಗತವೈಭವದ ಕತೆ ಬರೆಯಲು ಕೂರುತ್ತಾರೆಂದರೆ ಅದನ್ನು ನಂಬುವರ್‍ಯಾರು?

ನಿಜಕ್ಕೂ ದೇವೇಗೌಡರು ಪುಸ್ತಕ ಬರೆಯುತ್ತಿದ್ದಾರಾ ಅಥವಾ ಅವರ ಆರೋಗ್ಯ ಹದಗೆಟ್ಟಿದೆಯಾ? ಏಕೆ ಒಕ್ಕಲಿಗರ ಸಂಘ ಹಮ್ಮಿಕೊಂಡ ಚುಂಚನಗಿರಿ ಗುರುವಂದನೆಯಂಥ ಓಟ್ ಬ್ಯಾಂಕ್ ಸಮಾವೇಶವನ್ನು ದೇವೇಗೌಡರು ಮಿಸ್ ಮಾಡಿಕೊಳ್ಳುತ್ತಾರೆ? ಅಧಿಕಾರವಿಲ್ಲದಿರುವಾಗ ವಾಟಾಳರೇ ನಾಚುವಂತೆ ಬೀದಿ ಹೋರಾಟಕ್ಕಿಳಿಯುವ ದೇವೇಗೌಡ ಕೇವಲ ವಯಸ್ಸಾದ ಮಾತ್ರಕ್ಕೇ ತೆಪ್ಪಗಾಗುತ್ತಾರೆಂಬುದನ್ನು ಯಾರು ತಾನೇ ಒಪ್ಪಲು ಸಾಧ್ಯ?

ದೇವೇಗೌಡರ ಇತಿಹಾಸ, ಜಾಯಮಾನ ಮತ್ತು ಹುಟ್ಟುಗುಣ ಬಲ್ಲವರಿಗೆ ಇಂಥ ಪ್ರಶ್ನೆಗಳ ಸರಮಾಲೆಯೇ ಎದುರಾದದ್ದು ಕಳೆದೊಂದು ವರ್ಷದಿಂದ. ಸರಿ, ತಮ್ಮ ಜೀವನಚರಿತ್ರೆಯನ್ನು ಮಾಗುವ ಮುನ್ನವೇ ಬರೆದು ಮುಗಿಸಬೇಕೆಂದು ದೇವೇಗೌಡರು ಇಚ್ಛಿಸುವುದೇ ಆದಲ್ಲಿ ಅಷ್ಟೊಂದು ಅವಸರವಾಗಿ ಬರೆದು ಮುಗಿಸಬೇಕಾದ ಯಾವ ಒತ್ತಡಕ್ಕೆ ದೇವೇಗೌಡರು ಸಿಲುಕಿದ್ದಾರೆ?

ಈ ಎಲ್ಲಾ ಪ್ರಶ್ನೆಗಳಿಗೆ ದೇವೇಗೌಡರ ಅಂತಃಪುರದಿಂದ ಹೊರಬಿದ್ದ ಏಕೈಕ ಉತ್ತರವೆಂದರೆ ಅದು ಕಿಡ್ನಿ ಫೈಲ್ಯೂರ್!


ಪದ್ಮನಾಭನಗರದ ಪೆಟ್ರೋಲ್ ಬಂಕು, ಅದರ ಹಿಂಭಾಗದ ಹೊಸ ಮನೆ, ಸದ್ಯ ದೇವೇಗೌಡರು ಸಾಹಿತ್ಯ ಸೃಷ್ಟಿಗೆ ಕೂತಿದ್ದಾರೆನ್ನುವ 'ಅಮೋಘ' ಬಂಗಲೆಯ ಮೂಲಗಳ 'ಗುಸುಪಿಸು' ಮಾತುಗಳ ಸಾರಾಂಶವೇ ದೇವೇಗೌಡರ ಕಿಡ್ನಿ ಪ್ರಾಬ್ಲಂ! ವಾರಕ್ಕೆ ಕಮ್ಮಿಯೆಂದರೂ ಎರಡು ಬಾರಿ ದೇವೇಗೌಡರು ಡಯಾಲಿಸಿಸ್‌ಗೆ ಒಳಗಾಗಲೇಬೇಕಂತೆ. ಸಾಮಾನ್ಯವಾಗಿ ಪದ್ಮನಾಭನಗರದ 9ನೇ ಅಡ್ಡರಸ್ತೆಯ ಎರಡನೇ ಮೇನ್‌ನ 743ನೇ ನಂಬರಿನ ಅಮೋಘ ಬಂಗಲೆಯಲ್ಲೇ ದೇವೇಗೌಡರ ದಿನಚರಿ ಶುರುವಾಗುತ್ತದೆಯಾದರೂ ಅದರ ಪಕ್ಕದ ಮತ್ತೊಂದು ಮನೆಯಲ್ಲಿ ದೇವೇಗೌಡರಿಗೇನು ಕೆಲಸ? ದೇವೇಗೌಡರನ್ನು ವಾರಕ್ಕೆರಡು ಬಾರಿ ದಿನಪೂರ್ತಿ ಆ ಮನೆಯಲ್ಲೇ ಇಟ್ಟುಕೊಂಡು ಯಾವ ಚಿಕಿತ್ಸೆ ನೀಡಲಾಗುತ್ತದೆ? ದೇವೇಗೌಡರ ಮಗನೇ ನಡೆಸುವ ಡಿ.ಜಿ. ಆಸ್ಪತ್ರೆಯ ನೆಫ್ರಾಲಜಿ ವಿಭಾಗದ ಮುಖ್ಯಸ್ಥ ಡಾ॥ ಸಂಜಯ್ ಹಿರೇಮಠ್‌ಗೆ ಅಲ್ಲೇನು ಕೆಲಸ? ಬೆಂಗಳೂರಿನ ಖ್ಯಾತ ಕಿಡ್ನಿ ತಜ್ಞ ಮತ್ತು ಟ್ರನಿಟಿ ಆಸ್ಪತ್ರೆಯ ಮುಖ್ಯಸ್ಥ ಡಾ॥ ಬಾಲಾಜಿ ಪ್ರಸಾದ್ ಪದೇಪದೇ ಬಂದು ದೇವೇಗೌಡರ ಮೇಲೆ ಯಾವ ಥೆರಪಿ ಪ್ರಯೋಗಿಸುತ್ತಾರೆ?

ಇಂಥ ಕೆಲ ವದಂತಿಗಳ ಸತ್ಯಾಸತ್ಯತೆ ಏನೇ ಇರಲಿ, ಆದರೆ ಇದೆಲ್ಲವೂ ಕಿಡ್ನಿಗೆ ಸಂಬಂಧಪಟ್ಟ ವಿಷಯಗಳೇ. ಸದ್ಯ ದೇವೇಗೌಡರ ಬೆಂಗಳೂರು ವಾಸ್ತವ್ಯಕ್ಕೆ ಸಂಬಂಧಪಟ್ಟಂತೆ ಕಾಣಸಿಗುವ ಮೂರು ಪ್ರಮುಖ ವಿಳಾಸಗಳೆಂದರೆ ಮೊದಲನೆಯದು ದೇವೇಗೌಡರ ಪೆಟ್ರೋಲ್ ಬಂಕ್ ಹಿಂಭಾಗದ ನಂ 36, ಚಿನ್ನಪ್ಪನಾಯ್ಡು ಲೇಔಟ್, ಬನಶಂಕರಿ 3ನೇ ಹಂತ, ಪದ್ಮನಾಭನಗರದ ಹೊಸ ಬಂಗಲೆ. ಸದ್ಯ ಇದೇ ದೇವೇಗೌಡರ ಹೊಸಮನೆ. ಜ್ಯೋತಿಷ್ಯವೋ, ವಾಸ್ತು ಮೋಹವೋ ಪ್ರಮುಖರ ಭೇಟಿ, ಚರ್ಚೆ ಕಾರ್ಯಾಚರಣೆ ಇತ್ಯಾದಿಗಳನ್ನೆಲ್ಲ ದೇವೇಗೌಡರು ಈ ಹೊಸ ಮನೆಯಲ್ಲೇ ಮಾಡುತ್ತಾರೆ.

ಎರಡನೆಯದು ಹಿಂದಿದ್ದ ಅಮೋಘ ಬಂಗಲೆ. ಇಲ್ಲಿಂದಲೇ ದೇವೇಗೌಡರು ಮುಖ್ಯಮಂತ್ರಿಯಾದದ್ದು, ಪ್ರಧಾನಿಯಾಗಿದ್ದು. ಮೂರನೆಯದು ಡಿ.ಜಿ. ಆಸ್ಪತ್ರೆ ಪಕ್ಕದ ಮಗಳು ಶೈಲಾಜರ ಮನೆ. ಇಲ್ಲಿ ಅಪರೂಪಕ್ಕೊಮ್ಮೆ ದೇವೇಗೌಡರು ಕಾಣಸಿಗುತ್ತಾರೆ. ಆದರೆ 'ಅಮೋಘ' ಬಂಗಲೆಯ ಪಕ್ಕದ ಮನೆಯನ್ನು ಮಾತ್ರ ಏಕೆ ಹಾಗೇ ಇಟ್ಟುಕೊಂಡಿದ್ದಾರೆ. ಅಲ್ಲಿ ಏನು ನಡೆಯುತ್ತದೆ, ಏಕೆ ಅಲ್ಲಿಗೆ ವಾರಕ್ಕೆರಡು ಬಾರಿ ದೇವೇಗೌಡರನ್ನು ಕರೆದೊಯ್ಯಲಾಗುತ್ತದೆ ಮತ್ತು ಆ ಹೊತ್ತಿಗೆ ಡಾಕ್ಟರುಗಳು, ನರ್ಸ್‌ಗಳೆಲ್ಲಾ ಏಕೆ ಜಮಾಯಿಸುತ್ತಾರೆಂಬುದೇ ಅನೇಕರ ಪ್ರಶ್ನೆ.

ಆ ಮನೆಯನ್ನು ದೇವೇಗೌಡರ ಪಾಲಿಗೆ ಚಿಕಿತ್ಸಾ ಕೇಂದ್ರವಾಗಿ ರೂಪಿಸಲಾಗಿದೆಯೇ? ಅಲ್ಲಿ ದೇವೇಗೌಡರ ಕಿಡ್ನಿಯ ಡಯಾಲಿಸಿಸ್ ನಡೆಸುತ್ತಾರಾ?

ಕಿಡ್ನಿ ವೈಫಲ್ಯವಿರುವವರು ಡಯಾಲಿಸಿಸ್ ಮಾಡಿಸಿಕೊಳ್ಳಲು ಹಿಂದಿನಂತೆ ಈಗ ಆಸ್ಪತ್ರೆಗೇ ಹೋಗಬೇಕಿಲ್ಲ. ಡಯಾಲಿಸಿಸ್ ಯಂತ್ರವನ್ನು ಮನೆಯಲ್ಲೇ ತಂದಿಟ್ಟು ಕೊಂಡು ವಾರಕ್ಕೆರಡೋ, ಮೂರೋ ಬಾರಿ ರಕ್ತ ಶುದ್ಧಿ ಮಾಡಿಕೊಳ್ಳಬಹುದು. ಅದೊಂದು ಆಳೆತ್ತರದ ಪೆಟ್ಟಿಗೆಯಂಥ ಯಂತ್ರ. ಅದನ್ನು **haemo dialysis machine** ಅನ್ನುತ್ತಾರೆ. ದೇವೇಗೌಡರ ಅಮೋಘ ಬಂಗಲೆಯ ಕೆಲಸದಾಳುಗಳು ಮತ್ತು ಅವರ ಕಾರಿನ ಡ್ರೈವರ್‌ಗಳು ಗುಸುಗುಡುವುದನ್ನೇ ನಂಬಬಹುದಾದರೆ ದೇವೇಗೌಡರ ಕಿರಿಯ ಅಳಿಯ ಅರ್ಥಾತ್ ಪುತ್ರಿ ಶೈಲಾಜರ ಪತಿ ಡಾ॥ ಚಂದ್ರಶೇಖರ್ ಅಂಥದೊಂದು ಯಂತ್ರವನ್ನು ಆ ಮನೆಯಲ್ಲಿ ತಂದಿಟ್ಟಿದ್ದಾರೆ.



ಶೈಲಜಾ-ಅನುಸೂಯರೊಂದಿಗೆ ದೇವೇಗೌಡ

ಪ್ರತಿ ಮೂರು ದಿನಕ್ಕೊಮ್ಮೆ ಡಿ.ಜಿ. ಆಸ್ಪತ್ರೆಯ ನೆಫ್ರಾಲಜಿಸ್ಟ್ ಡಾ॥ ಸಂಜಯ್ ಹಿರೇಮಠ್ ಬಂದು ದೇವೇಗೌಡರ ಡಯಾಲಿಸಿಸ್ ನಡೆಸಿಕೊಡುತ್ತಾರೆ. ಡಯಾಲಿಸಿಸ್ ಅಂದರೆ ರೋಗಿಯೊಬ್ಬ ದಿನವಿಡೀ **dialyser Tub** ನಲ್ಲಿ ಹೊಕ್ಕಿರಬೇಕು. ಒಂದಲ್ಲ ಎರಡು ಸಿರಿಂಜುಗಳನ್ನು ಆತನ ರಕ್ತನಾಳಕ್ಕೆ ಚುಚ್ಚಲಾಗುತ್ತದೆ. ಒಂದು ಸಿರಿಂಜ್‌ನ ಮೂಲಕ ದೇಹದ ಕಲ್ಮಶಯುಕ್ತ ರಕ್ತ ಯಂತ್ರವನ್ನು ಹೊಕ್ಕರೆ ಮತ್ತೊಂದು ಸಿರಿಂಜಿನ ಮೂಲಕ ಶುದ್ಧೀಕರಣಗೊಂಡ ರಕ್ತವನ್ನು ದೇಹ ಹೀರಿಕೊಳ್ಳುತ್ತದೆ. ದಿನವಿಡೀ ಯಂತ್ರಕ್ಕೆ ಮೈಯೊಡ್ಡಿ ಡಯಾಲಿಸಿಸ್‌ಗೊಳಗಾದ ವ್ಯಕ್ತಿ ಅದರ ಯಾತನೆಯಿಂದ ಚೇತರಿಸಿಕೊಳ್ಳುವುದಕ್ಕೇ ಮತ್ತೊಂದು ದಿನ ಪೂರ್ತಿ ಬೇಕಾಗುತ್ತದೆ. ಅಲ್ಲಿಗೆ ಎರಡು ದಿನಗಳು ಡಯಾಲಿಸಿಸ್ ಕಾರಣಕ್ಕೇ ಪೋಲಾಗುತ್ತದೆ. ಮೂರನೇ ದಿನದ ಹೊತ್ತಿಗೆ ರೋಗಿ ಅಷ್ಟಿಷ್ಟು ಚಟುವಟಿಕೆ ನಡೆಸಬಹುದಾದರೂ ನಾಲ್ಕನೇ ದಿನಕ್ಕೆ ಮತ್ತೆ ಡಯಾಲಿಸಿಸ್ ಮಾಡಿಸಿಕೊಳ್ಳಲೇಬೇಕು!

ಇದು ಕಿಡ್ನಿ ವೈಫಲ್ಯದ ಪ್ರಾರಬ್ಧ ಕರ್ಮ. ಕುಡಿದ ನೀರು, ಆಹಾರದ ತೇವಾಂಶ ಯಾವುದೂ ಮೂತ್ರರೂಪದಲ್ಲಿ ವಿಸರ್ಜನೆಗೊಳ್ಳುವುದೇ ಇಲ್ಲ. ರಕ್ತವನ್ನು ಶುದ್ಧೀಕರಿಸಿ ಮೂತ್ರ ವಿಭಜಿಸಬೇಕಾದ ಕಿಡ್ನಿಯೇ ವಿಫಲಗೊಳ್ಳುವುದರಿಂದ ಕನಿಷ್ಠ ಮೂರು ದಿನಕ್ಕೆ ಒಮ್ಮೆಯಾದರೂ ರೋಗಿ ಡಯಾಲಿಸಿಸ್ ಮಾಡಿಸಿಕೊಳ್ಳದೇ ಹೋದರೆ ರಕ್ತದಲ್ಲಿ ಪೊಟಾಷಿಯಂ ಅಂಶ ಹೆಚ್ಚಾಗಿ **creatinine** 'ಕಲ್ಮಶ' ಪ್ರಮಾಣ ವಿಪರೀತಗೊಳ್ಳುತ್ತದೆ. ಇದಕ್ಕೆ ತಕ್ಕಂತೆ ಪೊಟಾಷಿಯಂಯುಕ್ತ ಹಲಸಿನ ಹಣ್ಣು, ಮಾವಿನ ಹಣ್ಣು, ಕಡ್ಲೆ ಬೀಜ, ತೆಂಗಿನಕಾಯಿ, ಎಳನೀರು, ಡ್ರೈಫ್ರೂಟ್ಸ್ ತಿನ್ನುವಂತಿಲ್ಲ. ತಿಂದ ಪಕ್ಷದಲ್ಲಿ ಉಸಿರಾಟವೇ ಕಷ್ಟವಾಗಿ ಹೃದಯ ಬಡಿತದ ವೇಗ ಉಲ್ಬಣಿಸಿ ಹಾರ್ಟ್ ಆಟ್ಯಾಕ್ ಸಂಭವಿಸಬಹುದು ಅಥವಾ ಬ್ರೇನ್ ಹ್ಯಾಮರೇಜ್ ಆಗಬಹುದು. ಅಲ್ಲಿಗೆ ಕಿಡ್ನಿ ರೋಗಿಯೊಬ್ಬನಿಗೆ ತನ್ನ ಚಟುವಟಿಕೆಗೆಂದು ಸಿಗುವುದು ಒಂದು ದಿನ ಮಾತ್ರ. ಅದು ಕೂಡಾ ಮಾರನೇ ದಿನದ ಡಯಾಲಿಸಿಸ್‌ಗೆ ಅಣಿಯಾಗಬೇಕು.

ಬಹುಶಃ ಇಂಥದೊಂದು ದುರ್ಗತಿಯೇ ದೇವೇಗೌಡರನ್ನು ಮನೆಯಲ್ಲಿ ಬಂಧಿಸಿಟ್ಟಿದೆಯೆ? ಕಳೆದೊಂದು ವರ್ಷದಿಂದ ದೇವೇಗೌಡರು ಬಹಿರಂಗವಾಗಿ ಕಾಣಿಸಿಕೊಂಡಿದ್ದೇ ಅಪರೂಪ. ಇತ್ತೀಚೆಗೆ ಪ್ರಣಬ್ ಮುಖರ್ಜಿ ಬೆಂಗಳೂರಿಗೆ ಬಂದಾಗ ನಡೆದ ಭೇಟಿ, ಇದೇ 15ರಂದು ಅರಮನೆ ಮೈದಾನದಲ್ಲಿ ನಡೆದ ಮುಸ್ಲಿಂ ಸಮಾವೇಶದಲ್ಲಿ ಭಾಗವಹಿಸಿದ್ದು ಮತ್ತು ನಡುನಡುವೆ ಕೆಲ ಟೀವಿ ವರದಿಗಾರರನ್ನು ಮನೆಗೇ ಕರೆಸಿಕೊಂಡು ಕೊಟ್ಟ ಸಂದರ್ಶನಗಳ ಹೊರತಾಗಿ ದೇವೇಗೌಡರು ಸಾರ್ವಜನಿಕವಾಗಿ ಕಾಣಿಸಿದ್ದೇ ಅಪರೂಪ.


ದೇವೇಗೌಡರಿಗೆ ಈ ಹಿಂದೆ ಕಾಯಿಲೆಗಳಿರಲಿಲ್ಲ ಎಂದೇನಲ್ಲ. ಈಗವರಿಗೆ 79ರ ಇಳಿವಯಸ್ಸು. ಹೆಗಡೆ, ಧರ್ಮ ಸಿಂಗ್, ಪಟೇಲ್, ಬೊಮ್ಮಾಯಿ ಮುಂತಾದವರಿಗೆ ಹೋಲಿಸಿದರೆ ದೇವೇಗೌಡರದ್ದು ಮುದ್ದೆ ಬ್ರಾಂಡಿನ ಗಟ್ಟಿ ದೇಹ. 1986ರ ಹೊತ್ತಿಗೇ ಸಕ್ಕರೆ ಕಾಯಿಲೆ ಆಕ್ರಮಿಸಿತ್ತು. ಅದಕ್ಕೂ ಮೊದಲೇ ಬಿ.ಪಿ ಶುರುವಾಗಿತ್ತು. ಇದೆಲ್ಲಕ್ಕೂ ಹಿಂದೆಯೇ ಕೊಲೆಸ್ಟ್ರಾಲ್ ಸಮಸ್ಯೆಯಿತ್ತು. ವಿಪರೀತ ಪ್ರವಾಸ, ನೂರಾರು ಮೈಲಿಗಳ ಪ್ರಯಾಣ ಮತ್ತು ಬಿಡುವಿಲ್ಲದ ರಾಜಕೀಯದಿಂದಾಗಿ ಆಗಾಗ ಬೆನ್ನುನೋವು, ಮಂಡಿನೋವು ಕಾಡುತ್ತಿತ್ತು. ಇದ್ಯಾವುದಕ್ಕೂ ಜಗ್ಗದ ದೇವೇಗೌಡರು 1980ರಲ್ಲೇ ಮೂತ್ರನಾಳದ ಸೋಂಕಿಗೆ ಬಲಿಯಾದರು. ಹೊತ್ತಲ್ಲದ ಹೊತ್ತಲ್ಲಿ ಹನಿ ಲೆಕ್ಕದಲ್ಲಿ ಮೂತ್ರ ಸೋರಿಕೆಯಾಗುತ್ತಿತ್ತು. ಇದಕ್ಕೆಂದೇ 1980ರಲ್ಲಿ ಸುನ್ನತಿ ಮಾಡಿಕೊಂಡರು. ಅದರಿಂದ ಒಂದು ಸಮಸ್ಯೆಯೇನೋ ಬಗೆಹರಿಯಿತಾದರೂ ಮೂತ್ರನಾಳದ ಸೋಂಕು ಮಾತ್ರ ಕಾಡುತ್ತಲೇ ಇತ್ತು. ಡಿ.ಜಿ. ಆಸ್ಪತ್ರೆಯ ಯೂರಾಲಜಿ ತಜ್ಞ ಡಾ॥ ಜೈದೇವರೇ ನಿಂತು ಮೂತ್ರನಾಳದ ಸೋಂಕಿಗೆ ಚಿಕಿತ್ಸೆ ಕೊಡುತ್ತಿದ್ದರು.

ಬಹುಶಃ ಈ ಮೂತ್ರನಾಳದ ಸೋಂಕೇ ಕಾಲಕ್ರಮೇಣ ಮೂತ್ರಪಿಂಡಗಳನ್ನು ಆವರಿಸಿದೆಯೆ? ದೇವೇಗೌಡರಿಗಿರುವುದು ಕಿಡ್ನಿ ವೈಫಲ್ಯವೋ ಅಥವಾ ಕಿಡ್ನಿಗೆ ಅಂಟಿದ ಸೋಂಕು ರೋಗವೊ? ಬೀಪಿ, ಶುಗರ್, ಕೊಲೆಸ್ಟ್ರಾಲ್, ಮೂತ್ರನಾಳದ ಸಮಸ್ಯೆಗಳಿಗೆ ಜಗ್ಗದ ದೇವೇಗೌಡರನ್ನು ಅಂತಿಮವಾಗಿ ಕಿಡ್ನಿ ಸಮಸ್ಯೆ ಸೋಲುವಂತೆ ಮಾಡಿದೆಯೆ? ಇದೇ ಕಾರಣಕ್ಕೆ ದೇವೇಗೌಡರು ಮನೆ ಹೊಕ್ಕಿ ಕೂತಿದ್ದಾರೆಯೆ? ಇದು ನಿಜವೇ ಆಗಿದ್ದಲ್ಲಿ ಒಕ್ಕಲಿಗರ ಪಾಲಿನ ಎರಡು ಆಧಾರಸ್ತಂಭಗಳಾದ ಆದಿಚುಂಚನಗಿರಿ ಸ್ವಾಮಿ ಮತ್ತು ದೇವೇಗೌಡ ಇಬ್ಬರದ್ದೂ ಆರೋಗ್ಯ ವಿಷಯದಲ್ಲಿ ಒಂದೇ ಸಮಸ್ಯೆ ಆದಂತಾಯ್ತು.


ಹಾಗಾಗದಿರಲಿ ಎಂದೇ ಹಾರೈಸೋಣ.

ಅಷ್ಟಕ್ಕೂ ತಮ್ಮ ಅನಾರೋಗ್ಯವನ್ನು ಮುಚ್ಚಿಟ್ಟು ಆತ್ಮಚರಿತೆ ಬರೆಯುತ್ತಿದ್ದೇನೆಂದು ಏಕೆ ದೇವೇಗೌಡರು ಮುಚ್ಚುಮರೆ ಮಾಡಬೇಕೋ ಗೊತ್ತಾಗುತ್ತಿಲ್ಲ. ಓರ್ವ ಹೋರಾಟಗಾರರಾಗಿ ಹೇಗಿದ್ದರೂ ಜನ ದೇವೇಗೌಡರನ್ನು ಪ್ರೀತಿಸುತ್ತಾರೆ. ಅದರಲ್ಲೂ ಆರೋಗ್ಯ ಹದಗೆಟ್ಟಿದೆಯೆಂದರೆ ಅನುಕಂಪ ಇನ್ನೂ ಹೆಚ್ಚಾಗುತ್ತವೆ. ಅಂತಾ ಕಾಯಿಲೆಯಿದ್ದಿದ್ದೇ ಆದರೆ ದೇವೇಗೌಡರಿಗೇಕೆ ಹಿಂಜರಿಕೆ? ರೋಗ ಮುಚ್ಚಿಡಬಾರದು ಸಂಸಾರ ಬಿಚ್ಚಿಡಬಾರದಲ್ಲವೇ?

● ರಾ. ಸೋಮನಾಥ್




ಗೌಡರ ರಣಕಹಳೆಗೆ ಆಗಸ್ಟ್ ಬರಬೇಕೆ?



ಕಳೆದೊಂದು ವರ್ಷದಿಂದ ಜೆಡಿಎಸ್ ಪಾಳೆಯದಲ್ಲಿ ಘರ್ಜನೆ, ಗುಡುಗು, ಸಿಡಿಲು ಇತ್ಯಾದಿ ಯಾವ ಶಬ್ದವೂ ಕೇಳಿಬರುತ್ತಿಲ್ಲ. ಏಕೆಂದರೆ ಕುಲಬಾಂಧವರೇ ಆದ ಸದಾನಂದ ಗೌಡರಿದ್ದರಲ್ಲ, ಸಾಲದ್ದಕ್ಕೆ ಕುಮಾರಸ್ವಾಮಿಗೂ ಅನಾರೋಗ್ಯ ಮತ್ತು ಮುಖ್ಯಮಂತ್ರಿಯಾಗಿದ್ದಾಗ ಮಾಡಿಕೊಂಡ ಫಜೀತಿಗಳಿಂದಾಗಿ ಕೋರ್ಟು, ಲೋಕಾಯುಕ್ತ, ಜಾಮೀನು; ಎಂದೇ ಕಾಲ ನೂಕುತ್ತಿದ್ದಾರೆ. ಇನ್ನು ರೇವಣ್ಣ ಬೆಂಗಳೂರಿನತ್ತ ತಲೆ ಹಾಕಿದ್ದೇ ಅಪರೂಪ. ದೇವೇಗೌಡರು ಗೂಡು ಸೇರಿಕೊಂಡರೆ ರಾಜ್ಯ ರಾಜಕೀಯವಷ್ಟೇ ಅಲ್ಲ, ಸಮಸ್ತ ಜೆಡಿಎಸ್ ಪಾಳಯವೇ ನಿಶ್ಶಬ್ದವಾಗಿಬಿಡುತ್ತದೆ. ದೇವೇಗೌಡರಿಗೂ ಕುಮಾರಸ್ವಾಮಿಗೂ ರೇವಣ್ಣನಿಗೂ ಇರುವ ವ್ಯತ್ಯಾಸವಿದು. ಇವರ ಹೊರತಾಗಿ ಜೆಡಿಎಸ್ ಪರವಾಗಿ ಕೇಳಿಬರುವ ಏಕೈಕ ಧ್ವನಿಯೆಂದರೆ ಅದು ವೈಎಸ್‌ವಿ ದತ್ತ ಅವರಾದರೂ ಕುಮಾರಸ್ವಾಮಿ, ರೇವಣ್ಣರನ್ನು ಮೀರಿ ನುಗ್ಗುವ ಹಾಗಿಲ್ಲ. ಹೀಗಾಗಿ ಕಳೆದೊಂದು ವರ್ಷದಿಂದ ಜೆಡಿಎಸ್ ಮತ್ತು ಕಾಂಗ್ರೆಸ್ ಎರಡೂ ಹೆಚ್ಚೂ ಕಮ್ಮಿ ಒಂದೇ ಪರಿಸ್ಥಿತಿಯಲ್ಲಿವೆ. ಈಗ ಜೆಡಿಎಸ್ ಪಾಳೆಯದಿಂದ ಬಂದ ಉತ್ಸಾಹಕರ ಸುದ್ದಿಯೆಂದರೆ ಆಗಸ್ಟ್ 2ನೇ ವಾರದಿಂದ ದೇವೇಗೌಡರು ರಾಜ್ಯ ಪ್ರವಾಸ ಕೈಗೊಳ್ಳುತ್ತಾರಂತೆ. ಸರ್ಕಾರದ ವಿರುದ್ಧ ಮತ್ತೆ ಬೀದಿ ಹೋರಾಟ ಶುರು ಹಚ್ಚಿಕೊಳ್ಳುತ್ತಾರಂತೆ. ಹಾಗೊಮ್ಮೆ ದೇವೇಗೌಡರು ಬೀದಿಗಿಳಿದಿದ್ದೇ ಆದರೆ ಅದರಿಂದ ಒಂದಂತೂ ಸ್ಪಷ್ಟವಾಗುತ್ತದೆ. ಅದು ದೇವೇಗೌಡರು ಈತನಕ ವಹಿಸಿದ ಮೌನಕ್ಕೆ ಅವರ ಅನಾರೋಗ್ಯ ಕಾರಣವಲ್ಲ, ಬದಲಿಗೆ ಸದಾನಂದಗೌಡರ ಮೇಲೆ ಅವರಿಗಿದ್ದ ಕುಲಮೋಹ?

ರಾಯಭಾಗ: ರಕ್ತದ ಮಡಿಲಲ್ಲಿ ಇಟ್ನಾಳ ಗ್ರಾಮ


ಪ್ರಜಾತಂತ್ರದಲ್ಲಿ ಪಾಳೆಪಟ್ಟುಗಳು ನಾಶವಾಗಿ ಪಾಳೆಗಾರಿಕೆ ಪಾಳುಬಿದ್ದು ಹೋಗಿದ್ದರೂ ಬೆಳಗಾವಿ ಜಿಲ್ಲೆಯ ರಾಯಭಾಗ ತಾಲೂಕಿನಲ್ಲಿ ಮಾತ್ರ ಅದರ ಅಟ್ಟಹಾಸ ಇನ್ನೂ ನಿಂತಿಲ್ಲ. ಈ ಹಿಂದೆ ವಿ.ಎಲ್.ಪಾಟೀಲ ಮತ್ತು ಬಾನೆ ಸರ್ಕಾರದಂಥವರು ಸಾಕಷ್ಟು ಮೆರೆದಾಡಿ ಈಗ ತಣ್ಣಗಾಗಿದ್ದರೂ ಇಲ್ಲಿ ರಕ್ತ ಇನ್ನೂ ಹರಿಯುತ್ತಲೇ ಇದೆ. ಪಾಳೆಗಾರಿಕೆಯ ದರ್ಪ ಮತ್ತು ದೌಲತ್ತುಗಳೊಂದಿಗೆ ಈಗ ರಾಜಕೀಯ ದ್ವೇಷವೂ ಬೆರೆತು ಹೆಣಗಳು ಉರುಳುತ್ತಲೇ ಇವೆ. ಈ ಮಾರಾಮಾರಿಯಲ್ಲಿ ಮುಂದಿನ ಟಾರ್ಗೆಟ್ ಯಾರಾಗಬಹುದು ಎಂಬ ಆತಂಕ ಮಾತ್ರ ದಿನೇದಿನೇ ಜನರನ್ನು ಕಾಡುತ್ತಿದೆ. ಮೊನ್ನೆ ಶಾರ್ಪ್ ಶೂಟರ್ ಯಲ್ಲಪ್ಪ ಕಾಳೆ ಪರಾರಿಯಾಗಿರುವುದು ಇಂತಹ ಆತಂಕ ಹೆಚ್ಚಾಗುವುದಕ್ಕೆ ಕಾರಣವಾಗಿದೆ.




ವಿ.ಎಲ್.ಪಾಟೀಲ



ಪ್ರತಾಪ್ ರಾವ್



ಸುರೇಶ್ ಮುತ್ನಾಳ



ಸದಾಶಿವ ಧಾಂಗೆ

ಈ ಶಾರ್ಪ್ ಶೂಟರ್ ಯಲ್ಲಪ್ಪ ಕಾಳೆ ಕೆಲತಿಂಗಳ ಹಿಂದೆ ಇಟ್ನಾಳ ಗ್ರಾಮದ ಸದಾಶಿವ ಧಾಂಗೆ ಎಂಬ ವ್ಯಕ್ತಿಯ ಮೇಲೆ ಕಟಕಬಾವಿ ಕ್ರಾಸ್ ಹತ್ತಿರ ನಡೆದ ಗುಂಡಿನ ದಾಳಿಯ ಪ್ರಮುಖ ಆರೋಪಿ ಆಗಿದ್ದಾನೆ.

ಹಾಗೆ ನೋಡಿದರೆ ರಾಯಭಾಗ ತಾಲೂಕಿನ ಇಟ್ನಾಳ ಗ್ರಾಮಕ್ಕೆ ಕೊಲೆಗಳು, ಗುಂಡಿನ ದಾಳಿಗಳು ಹೊಸದೇನಲ್ಲ. ಸುಮಾರು 35 ವರ್ಷಗಳ ಹಿಂದೆ ಯಾವುದೋ ದ್ವೇಷಕ್ಕಾಗಿ ಪರಸಪ್ಪ ಕಂಕಣವಾಡಿ ಹಾಗೂ ಸತ್ಯಪ್ಪ ಹಾಲಳ್ಳಿ ಎಂಬಿಬ್ಬರು ಸೇರಿ ಧೂಳಪ್ಪ ಮುತ್ನಾಳ ಎಂಬುವವರನ್ನು ಕೊಲೆ ಮಾಡಿದ್ದರು. ಅಂದು ಈ ಊರಿನಲ್ಲಿ ಹೊತ್ತಿದ ದ್ವೇಷದ ಬೆಂಕಿ ಇವತ್ತಿಗೂ ಆರಿಲ್ಲ. ಧೂಳಪ್ಪನ ಕೊಲೆಯಾದ ಕೆಲವು ದಿನಗಳ ನಂತರ ಧೂಳಪ್ಪನ ಮಗನಾದ ಧರೆಪ್ಪ ಮುತ್ನಾಳ ಎಂಬುವ ವಿಠ್ಠಲ ಹುಲ್ಲೊಳ್ಳಿ ಎಂಬುವವನ ಮೂಲಕ ತನ್ನ ತಂದೆಯ ಕೊಲೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾನೆಂಬ ಕಾರಣಕ್ಕೆ ಗೋಪಾಲ ಚೆನ್ನಾಳೆ ಎಂಬುವನನ್ನು ಕೊಲೆ ಮಾಡಿಸಿದ್ದ. ಮೂಲತಃ ಈ ಧರೆಪ್ಪ ಎಂತಹ ಪಾತಕ ಮನಸ್ಥಿತಿಯವನೆಂದರೆ ಇದಾದ ಕೆಲವರ್ಷಗಳ ನಂತರ ತನ್ನ ಹೆಂಡತಿಯನ್ನೇ ಗುಂಡಿಟ್ಟು ಕೊಂದುಹಾಕಿದ್ದ. ಇದೆಲ್ಲದರಿಂದಾಗಿ ಇಟ್ನಾಳ ಗ್ರಾಮ ಇಡೀ ರಾಜ್ಯದಲ್ಲಿ ಕೊಲೆಗಳಿಗೆ ಕುಖ್ಯಾತಿ ಪಡೆಯಿತು.

ಲಿಂಗಾಯತರಾದ ಮುತ್ನಾಳ ಕುಟುಂಬದವರು ಸ್ವಲ್ಪ ಸಂಯಮದಿಂದಿದ್ದರೆ ಈಗ್ಗೆ ಕೆಲವು ವರ್ಷಗಳ ಹಿಂದೆ ಕುರುಬರಾದ ಧಾಂಗೆ ಕುಟುಂಬದೊಂದಿಗೆ ದ್ವೇಷ ಸಾಧಿಸುವ ಹಠಕ್ಕೆ ಇಳಿಯುತ್ತಿರಲಿಲ್ಲ. ಅದಕ್ಕೆ ಕಾರಣವಾಗಿದ್ದು 2000ನೇ ಇಸವಿಯಲ್ಲಿ ನಡೆದ ಗ್ರಾಮಪಂಚಾಯತಿ ಚುನಾವಣೆ. ಆ ಚುನಾವಣೆಯ ಸಂದರ್ಭದಲ್ಲಿ ಧಾಂಗೆ ಮತ್ತು ಮುತ್ನಾಳ ಕುಟುಂಬದ ಮಧ್ಯೆ ಹೊತ್ತಿದ ದ್ವೇಷದ ಜ್ವಾಲೆ ಇಂದಿಗೂ ಬಲಿಗಳನ್ನು ಪಡೆಯುತ್ತಲೇ ಇದೆ.

2000ದ ಗ್ರಾಮಪಂಚಾಯತಿ ಚುನಾವಣೆಯಲ್ಲಿ ರಾಮಪ್ಪ ಧಾಂಗೆ ಗುಂಪು ಧರೆಪ್ಪ ಮುತ್ನಾಳ ಗುಂಪಿನ ವಿರುದ್ಧ ಸ್ಪರ್ಧಿಸಿತು. ಆ ಚುನಾವಣೆಯಲ್ಲಿ ಧಾಂಗೆ ಗುಂಪು ಒಂಬತ್ತು ಸೀಟು ಗೆದ್ದು ಅಧಿಕಾರ ಹಿಡಿಯಿತಲ್ಲದೆ ಮಲ್ಲಿಕಾರ್ಜುನ ಬ್ಯಾಕೋಡ್ ಎಂಬಾತ ಅಧ್ಯಕ್ಷನಾದ. ಇದರಿಂದ ಗ್ರಾಮದಲ್ಲಿ ಧರೆಪ್ಪ ಮುತ್ನಾಳನ ಇಮೇಜ್‌ಗೆ ಮರ್ಮಾಘಾತವಾಯಿತು. ಅದೇ ವರ್ಷ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಮುತ್ನಾಳನ ಕುಟುಂಬ ಕಾಂಗ್ರೆಸ್‌ನ ಶ್ಯಾಮ ಘಾಟಗೆ ಪರ ರಾಜಕೀಯ ಶುರು ಮಾಡಿದರೆ ಧಾಂಗೆ ಕುಟುಂಬ ಜೆಡಿಎಸ್ ಅಭ್ಯರ್ಥಿ ಭೀಮಪ್ಪ ಸರಿಕರನ ಪರ ನಿಂತಿತು. ಕೊನೆಗೆ ಸರಿಕರ ಚುನಾಯಿತರಾದರು. ಇದರಿಂದ ಮುತ್ನಾಳನ ಕುಟುಂಬಕ್ಕೆ ಮತ್ತಷ್ಟು ಅವಮಾನವಾಯಿತು.

ಈ ಸೋಲಿನ ವಿರುದ್ಧ ಮುತ್ನಾಳನ ಕುಟುಂಬ ಸೇಡು ತೀರಿಸಿಕೊಂಡಿದ್ದು 2008ರಲ್ಲಿ ನಡೆದ ಕೃಷಿ ಪತ್ತಿನ ಸಹಕಾರಿ ಸಂಘದ ಚುನಾವಣೆಯಲ್ಲಿ. ಆಗ ಎಂಟು ಸೀಟುಗಳಲ್ಲಿ ಬರೋಬ್ಬರಿ ಏಳು ಸೀಟುಗಳನ್ನು ಮುತ್ನಾಳನ ಕುಟುಂಬ ಗೆದ್ದುಕೊಂಡಿತು. ಈಗ ಸಂಸದರಾಗಿರುವ ರಮೇಶ ಕತ್ತಿ ಅವತ್ತು ಬೆಳಗಾವಿ ಡಿಸಿಸಿ ಬ್ಯಾಂಕಿನ ಅಧ್ಯಕ್ಷರಾಗಿದ್ದರು. ಅದೇ ಸಮಯದಲ್ಲಿ ಉಮೇಶ್ ಕತ್ತಿ ಮಂತ್ರಿಯಾದರು. ಲಿಂಗಾಯತರಾದ ಕತ್ತಿ ಸಹೋದರರು ಮತ್ತು ಸೆಕ್ಸ್ ಸೀಡಿ ಕುಖ್ಯಾತಿಯ ಲಕ್ಷ್ಮಣ ಸವದಿ ಜಾತಿಕಾರಣದಿಂದಾಗಿ ಮುತ್ನಾಳನ ಕುಟುಂಬಕ್ಕೆ ಹತ್ತಿರವಾದರು.


ಹೀಗೆ ಲಿಂಗಾಯತ ರಾಜಕಾರಣಿಗಳ ನೆರವು ಸಿಕ್ಕಿದ್ದರಿಂದ ಸುರೇಶ ಮುತ್ನಾಳನ ಕುಟುಂಬ ಸದಾಶಿವ ಧಾಂಗೆ ಕುಟುಂಬದ ವಿರುದ್ಧ ತೊಡೆ ತಟ್ಟಿ ನಿಂತಿತು. ಸ್ವಜಾತಿ ಮಂತ್ರಿಗಳ ಅಧಿಕಾರ ಬಳಸಿಕೊಂಡು ಹೇಗಾದರೂ ಮಾಡಿ ಧಾಂಗೆ ಮನೆತನದ ಪ್ರಮುಖನಾದ ಸದಾಶಿವ ಧಾಂಗೆಯನ್ನು ಹಣಿಯಲೇಬೇಕೆಂಬ ನಿರ್ಧಾರಕ್ಕೆ ಬಂದ ಸುರೇಶ ಮುತ್ನಾಳ ಅಥಣಿಯ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಕಲ್ಯಾಣ ಶೆಟ್ಟಿಯ ಮೂಲಕ 2008ರ ಅಕ್ಟೋಬರ್‌ನಲ್ಲಿ ಸದಾಶಿವ ಧಾಂಗೆಯ ಟ್ರ್ಯಾಕ್ಟರನ್ನು ಸೀಜ್ ಮಾಡಿಸಿದ. ಇದಾದ ಎರಡು ತಿಂಗಳ ನಂತರ ಡಿಸೆಂಬರ್‌ನಲ್ಲಿ ಸದಾಶಿವ ಧಾಂಗೆಯ ತಂದೆಯ ಹೆಸರಿನಲ್ಲಿದ್ದ ಮತ್ತೊಂದು ಟ್ರ್ಯಾಕ್ಟರನ್ನು ಸರ್ಕಲ್ ಇನ್ಸ್‌ಪೆಕ್ಟರ್ ಜಯಪ್ರಕಾಶ ನ್ಯಾಮಗೌಡ ಎಂಬಾತನ ಮೂಲಕ ವಿನಾಕಾರಣ ಸೀಜ್ ಮಾಡಿಸಿದ. ಇದರಿಂದ ವಿಚಲಿತನಾದ ಸದಾಶಿವ ಧಾಂಗೆ 2009ರಲ್ಲಿ ಪೊಲೀಸ್ ಅಧಿಕಾರಿಗಳಾದ ಕಲ್ಯಾಣ ಶೆಟ್ಟಿ ಹಾಗೂ ಜಯಪ್ರಕಾಶ ನ್ಯಾಮಗೌಡರ ವಿರುದ್ಧ ಕೋರ್ಟ್‌ನಲ್ಲಿ ದಾವೆ ಹೂಡಿದ.

ಅಲ್ಲಿಗೆ ಸದಾಶಿವ ಧಾಂಗೆಯ ಫ್ಯಾಮಿಲಿ ಪೊಲೀಸರನ್ನು ಎದುರು ಹಾಕಿಕೊಂಡಂತಾಯಿತು. ಪ್ರತಿಫಲವಾಗಿ ಅದಾದನಂತರ ಧಾಂಗೆ ಕುಟುಂಬದವರು ಹಲವಾರು ಕೇಸುಗಳಲ್ಲಿ ಆರೋಪಿಗಳಾಗುತ್ತಾ ಹೋದರು. ಆದರೆ ಧಾಂಗೆ ಕುಟುಂಬದವರು ಪೊಲೀಸರ ಕೃತ್ಯಗಳಿಗೆ ಹೆದರಿ ಕಲ್ಯಾಣ ಶೆಟ್ಟಿ ಹಾಗೂ ಜಯಪ್ರಕಾಶ ನ್ಯಾಮಗೌಡ ವಿರುದ್ಧ ಹೂಡಿದ್ದ ಕೇಸನ್ನು ಹಿಂದೆ ಪಡೆಯಲಿಲ್ಲ.

ಆಗ ಪೊಲೀಸರು ಕೆಂಡಾಮಂಡಲವಾದರು. 2009ರ ಆಗಸ್ಟ್ 19ರ ರಾತ್ರಿ ಎರಡು ಗಂಟೆಗೆ ಕುಡಚಿ ಕ್ರೈಂ ಸಬ್ ಇನ್ಸ್‌ಪೆಕ್ಟರ್ ಆನಂದ ವಾಘಮೋರೆ, ಪಿಸಿಗಳಾದ ಶ್ಯಾಂಸುಂದರ್, ಅರಭಾವಿ, ಬಡಿಗೇರ, ಚೌಗಲಾ ಮತ್ತು ಇತರರು ಸದಾಶಿವ ಧಾಂಗೆಯ ಮನೆ ಮೇಲೆ ದಾಳಿ ಮಾಡಿದರು. ಇದರಿಂದ ಸಿಟ್ಟಿಗೆದ್ದ ಸದಾಶಿವ ಧಾಂಗೆ ಮತ್ತು ಕುಟುಂಬದವರು ಸಬ್ ಇನ್ಸ್‌ಪೆಕ್ಟರ್ ಆನಂದ ವಾಘಮೋರೆ ಸೇರಿದಂತೆ ಐದು ಜನ ಪೊಲೀಸರನ್ನು ಅಟ್ಟಾಡಿಸಿ ಜಡಿದು ಒಂದು ರೂಂನಲ್ಲಿ ಕೂಡಿ ಹಾಕಿಬಿಟ್ಟರು. ಆ ಪ್ರಕರಣಕ್ಕೆ ಸಂಬಂಧಿಸಿದಂತೆ ಸದಾಶಿವ ಧಾಂಗೆ ಮತ್ತು ಆತನ ಕುಟುಂಬದ 40 ಸದಸ್ಯರು ಜೈಲುಪಾಲಾದರು.

ಹೊಳಲ್ಕೆರೆ: ಶಾಸಕ ಚಂದ್ರಪ್ಪನಿಗೆ ಗೇಟ್‌ಪಾಸ್

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ಶಾಸಕ ಎಂ.ಚಂದ್ರಪ್ಪನ ಊಸರವಳ್ಳಿ ರಾಜಕಾರಣ ಬಟಾಬಯಲಾಗಿದೆ. ಮೊನ್ನೆ ಮೊನ್ನೆಯ ತನಕ ಮಂತ್ರಿ ಸ್ಥಾನ ಪಡೆಯುವ ಕನಸು ಕಾಣುತ್ತಿದ್ದ ಚಂದ್ರಪ್ಪ ಈಗ ಭ್ರಮನಿರಸನಗೊಂಡಿದ್ದಾನಲ್ಲದೆ ಬಿಜೆಪಿಯ ಹಿರಿಯ ನಾಯಕ ಕೆ.ಎಸ್. ಈಶ್ವರಪ್ಪನ ವಿರುದ್ಧ ಬಹಿರಂಗವಾಗಿ ಕಿಡಿಕಾರುತ್ತಿದ್ದಾನೆ.



ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದ ಒಮ್ಮೆ ಯಡಿಯೂರಪ್ಪನ ಪರ, ಇನ್ನೊಮ್ಮೆ ಸದಾನಂದ ಗೌಡರ ಪರ, ಮತ್ತೊಮ್ಮೆ ಈಶ್ವರಪ್ಪನ ಪರ ತನ್ನ ನಿಷ್ಠೆಯನ್ನು ಬದಲಾಯಿಸುತ್ತಲೇ ಬಂದ ಸಮಯ ಸಾಧಕನೀತ. ಅದಕ್ಕೆ ತಕ್ಕಂತೆ ಇತ್ತೀಚಿನ ತನಕ ಸದಾನಂದ ಗೌಡ ಪಾಳೆಯದಲ್ಲಿ ಠಳಾಯಿಸಿದ ಚಂದ್ರಪ್ಪ ಯಾವಾಗ ಡೀವಿ ಮುಖ್ಯಮಂತ್ರಿ ಹುದ್ದೆಯನ್ನು ಕಳೆದುಕೊಂಡು ಆ ಜಾಗಕ್ಕೆ ಜಗದೀಶ್ ಶೆಟ್ಟರ್ ಬರುತ್ತಾರೆ ಎಂದು ಸ್ಪಷ್ಟವಾಯಿತೋ ಆಗ ಶೆಟ್ಟರ್ ಅವರ ಗುಂಪಿಗೆ ಹಾರಿದ. ಅದಕ್ಕೆ ಕಾರಣ ಶೆಟ್ಟರ್ ತನ್ನನ್ನು ಮಂತ್ರಿ ಮಾಡಿ ಗೂಟದ ಕಾರನ್ನು ದಯಪಾಲಿಸುತ್ತಾರೆಂಬ ಚಂದ್ರಪ್ಪನ ದುರಾಸೆ.

ಚಂದ್ರಪ್ಪನೇ ಈಗ ಹೇಳುತ್ತಿರುವಂತೆ ತನ್ನನ್ನು ಮಂತ್ರಿ ಮಾಡಿ ಎಂದು ಬಿಜೆಪಿಯ ರಾಜ್ಯ ನಾಯಕರೊಬ್ಬರಿಗೆ ಬರೋಬ್ಬರಿ ಎರಡು ಕೋಟಿ ರೂಪಾಯಿಗಳ ಅಮೇಧ್ಯ ಸಂದಾಯ ಮಾಡಿದ್ದನಂತೆ. ಆದರೂ ಆತನಿಗೆ ಗೂಟದ ಕಾರು ಸಿಗಲಿಲ್ಲವಾದ್ದರಿಂದ ಈಗ ಈಶ್ವರಪ್ಪನ ವಿರುದ್ಧ ತಿರುಗಿಬಿದ್ದಿದ್ದಾನೆ. ಅಧಿಕಾರಕ್ಕಾಗಿ ಚಂದ್ರಪ್ಪ ಏನನ್ನೂ ಮಾಡಲು ಹೇಸದ ಗಿರಾಕಿ ಎಂಬುದನ್ನು ಆತನೇ ಸ್ಪಷ್ಟಪಡಿಸಿದ್ದಾನೆ.

ಎಲ್ಲೂ ಸಲ್ಲದ ಚಂದ್ರಪ್ಪ

ಕಳೆದ ವರ್ಷ ಸದಾನಂದ ಗೌಡರು ಮುಖ್ಯಮಂತ್ರಿಯಾದಾಗ ಯಡಿಯೂರಪ್ಪನ ಬೆಂಬಲಿಗರ ಪಟಾಲಂನಿಂದ ಕಾಲುಕಿತ್ತ ಚಂದ್ರಪ್ಪ ಡೀವಿಯ ಮನೆಯ ಅಂಗಳದಲ್ಲಿ ಪ್ರತ್ಯಕ್ಷನಾಗಿ "ನಾನೀಗ ನಿಮ್ಮ ವಿನಮ್ರ ಸೇವಕ. ಯಡಿಯೂರಪ್ಪನ ಜಾತಿ ರಾಜಕಾರಣಕ್ಕೆ ಬೇಸತ್ತಿದ್ದೇನೆ. ಹಿಂದುಳಿದವರು, ದಲಿತರು ಒಂದಾದರೆ ಯಡಿಯೂರಪ್ಪನ ಹಾರಾಟ ಬಂದ್ ಮಾಡಬಹುದು" ಎಂದೆಲ್ಲ ಮುಂಖಾನು ಮುಂಖವಾಗಿ ಬೊಗಳಿ ಡೀವಿಯ ಕಾಲಿಗೆ ಶಿರಸಾಷ್ಟಾಂಗ ನಮಸ್ಕಾರ ಮಾಡಿದ್ದ. ಆದರೆ ಆತ ಡೀವಿ ಮುಂದೆ ಆಡಿದ್ದ ಪ್ರತಿ ಪದವೂ ಯಡ್ಡಿಗೆ ವರದಿಯಾಗಿ ಚಂದ್ರಪ್ಪನಿಗೆ ಗೂಟದ ಕಾರ್ ಮಿಸ್ ಆಗಿತ್ತು.

ಸದಾನಂದ ಗೌಡ ಮುಖ್ಯಮಂತ್ರಿಯಾಗಿದ್ದಾಗ ಚಂದ್ರಪ್ಪ ಡೀವಿಯ ಬಾಲಂಗೋಸಿಯಂತಿದ್ದ. ಆದರೆ ಯಾವಾಗ ಯಡ್ಡಿ-ಡೀವಿ ನಡುವಿನ ರಾಜಕೀಯ ಸಮರ ತಾರಕಕ್ಕೇರಿತೋ ಆಗ ಚಂದ್ರಪ್ಪ ಡೀವಿ ಮನೆಯಿಂದ ಸದ್ದಿಲ್ಲದೆ ಹೊರಟು ಯಡ್ಡಿಯ ನಿಷ್ಠರ ಸಾಲಿನಲ್ಲಿ ನಿಂತ.

ಮುಖ್ಯಮಂತ್ರಿ ಸ್ಥಾನಕ್ಕೆ ಜಗದೀಶ್ ಶೆಟ್ಟರ್ ಬರಲಿದ್ದಾರೆ ಎಂದು ಗ್ಯಾರಂಟಿಯಾದದ್ದೇ ತಡ ಹೊಳಲ್ಕೆರೆಯಿಂದ ಎದ್ದೆನೋ ಬಿದ್ದೆನೋ ಎಂದು ಚಂದ್ರಪ್ಪ ಬೆಂಗಳೂರಿಗೆ ಧಾವಿಸಿದ. ಶೆಟ್ಟರ್ ಎದುರು ನಸುಗುನ್ನಿಯಂತೆ ನಕ್ಕು ವಿನಮ್ರ ಸೇವಕನ ಪೋಜು ನೀಡಿದ. ಯಾವಾಗ ಚಂದ್ರಪ್ಪ ಶೆಟ್ಟರ್ ಎದುರು ನಿಂತಿರುವುದು ಯಡ್ಡಿಗೆ ಗೊತ್ತಾಯಿತೋ ಆಗ ಯಡ್ಡಿ ಶೆಟ್ಟರ್‌ಗೆ ಒಂದು ಸೂಚನೆಯನ್ನು ನೀಡಿದರು. "ಯಾರನ್ನು ನಂಬಿದರೂ ಹೊಳಲ್ಕೆರೆ ಶಾಸಕ ಚಂದ್ರಪ್ಪನನ್ನು ನಂಬಬೇಡ. ಆತ ವಿಶ್ವಾಸಘಾತುಕ" ಎಂದು ಯಡ್ಡಿ ಹೇಳಿದ್ದೇ ತಡ ಚಂದ್ರಪ್ಪನ ಮಂತ್ರಿ ಕನಸುಗಳಿಗೆ ಕಲ್ಲು ಬಿತ್ತು.

ಮಂತ್ರಿ ಆಗುವ ಯಾವ ಗುಣಲಕ್ಷಣಗಳೂ ಇಲ್ಲದ ಚಂದ್ರಪ್ಪನ ಬಗ್ಗೆ ಹೊಳಲ್ಕೆರೆ ಜನರಿಗೆ ಚೆನ್ನಾಗಿ ಗೊತ್ತಿದೆ. ಆದ್ದರಿಂದ ಆತ ಇವತ್ತು "ನಾನು ಮಂತ್ರಿ ಪದವಿಯಿಂದ ವಂಚಿತನಾದೆ" ಎಂದು ಮಾಧ್ಯಮಗಳ ಎದುರು ಗೋಳೋ ಎನ್ನುತ್ತಿರುವುದು ಇಲ್ಲಿನ ಮತದಾರರಿಗೆ ಪುಕ್ಕಟೆ ಮನರಂಜನೆಯನ್ನು ನೀಡುತ್ತಿದೆ.

ಎಲ್ಲಾ ಪಕ್ಷಗಳಿಗೂ ಒಂದು ಸುತ್ತು

ಈ ಹಿಂದೆ ಜೆಡಿಎಸ್, ಜೆಡಿಯು, ಕಾಂಗ್ರೆಸ್ ಎಂದೆಲ್ಲ ಸಂದರ್ಭಕ್ಕನುಗುಣವಾಗಿ ಎಗರುತ್ತಲೇ ಅಧಿಕಾರದ ಸವಿ ಅನುಭವಿಸುತ್ತಾ ಬಂದಿರುವ ಚಂದ್ರಪ್ಪ ತನ್ನ ರಾಜಕೀಯದಾಟದ ಕೊನೆಯ ದಾಳವಾಗಿ ಬಿಜೆಪಿಯನ್ನು ಸೇರಿದ. ಭರಮಸಾಗರ ವಿಧಾನಸಭಾ ಕ್ಷೇತ್ರ ಜಗಳೂರು-ಚಿತ್ರದುರ್ಗ-ಹೊಳಲ್ಕೆರೆ ಕ್ಷೇತ್ರಗಳಲ್ಲಿ ಹರಿದುಹಂಚಿ ಹೋದನಂತರ ಹೊಳಲ್ಕೆರೆ ಪರಿಶಿಷ್ಟ ಜಾತಿಗೆ ಮೀಸಲು ಕ್ಷೇತ್ರವಾಯಿತು. ಆನಂತರ ನಡೆದ ಚುನಾವಣಾ ಸಂದರ್ಭದಲ್ಲಿ ಚಂದ್ರಪ್ಪನೆಂಬ ವಲಸೆ ಹಕ್ಕಿ ಅನಿವಾರ್ಯವಾದಂತೆ, ಚಂದ್ರಪ್ಪನಿಗೆ ಬಿಜೆಪಿಯೂ ಅನಿವಾರ್ಯವಾಯಿತು. ನಾಯಿ ಹಸಿದಿತ್ತು, ಅನ್ನ ಹಳಸಿತ್ತು ಎಂಬ ಗಾದೆ ಮಾತಿನಂತೆ ಚಂದ್ರಪ್ಪ ಬಿಜೆಪಿಯ ಅಭ್ಯರ್ಥಿಯಾದ. ಆ ಚುನಾವಣೆಯಲ್ಲಿ ಯಡ್ಡಿ ಪರ ಗಾಳಿ ಬೀಸಿದ್ದರಿಂದ ಚಂದ್ರಪ್ಪನಿಗೂ ಲಾಭವಾಗಿ ಆತ ಗೆದ್ದ. ಆದರೆ ಆತ ಶಾಸಕನಾಗಿ ತನ್ನ ಮತದಾರರಿಗಾಗಲಿ, ತನ್ನ ಕ್ಷೇತ್ರಕ್ಕಾಗಲಿ ಕಡಿದು ಕಟ್ಟೆ ಹಾಕಿರುವುದು ಅಷ್ಟರಲ್ಲೇ ಇದೆ.

ವಾಸ್ತವವಾಗಿ ಬಿಜೆಪಿಯಲ್ಲಿ ಚಂದ್ರಪ್ಪನಿಗೆ ಭವಿಷ್ಯವಿಲ್ಲ ಎಂದೂ, ಮುಂದಿನ ಚುನಾವಣೆಯಲ್ಲಿ ಈತನಿಗೆ ಬಿಜೆಪಿಯ ಟಿಕೆಟು ಕೊಡಬಾರದೆಂದು ಎರಡು ವರ್ಷಗಳ ಹಿಂದೆಯೇ ತೀರ್ಮಾನವಾಗಿದೆ. ಆ ನಿಟ್ಟಿನಲ್ಲಿ ಈಗಾಗಲೇ ದಾವಣಗೆರೆಯ ಬಿಜೆಪಿ ಸಂಸದ ಸಿದ್ದೇಶ್ವರ ರಾಜ್ಯದ ಪೌರಕಾರ್ಮಿಕರ ಅಧ್ಯಕ್ಷ ಜಿ.ಎಸ್. ಮಂಜುನಾಥನನ್ನು ಕಾಂಗ್ರೆಸ್‌ನಿಂದ ಬಿಜೆಪಿಗೆ ಕರೆತಂದು ಆತನನ್ನು ಹೊಳಲ್ಕೆರೆ ವಿಧಾನಸಭಾ ಕ್ಷೇತ್ರದಲ್ಲಿ ಅಡ್ಡಾಡಲು ಬಿಟ್ಟಿದ್ದಾರೆ. ಈಗಾಗಲೇ ಮಂಜುನಾಥ ತಾನು ಬಿಜೆಪಿ ಪಕ್ಷದಿಂದ ಮುಂದಿನ ಅಭ್ಯರ್ಥಿಯಂತೆ ಕ್ಷೇತ್ರದಲ್ಲಿ ಚುನಾವಣಾ ಪ್ರಚಾರ ಶುರು ಮಾಡಿದ್ದಾರೆ.

ಮಂಜುನಾಥರ ಎಂಟ್ರಿಯಿಂದ ಚಂದ್ರಪ್ಪನಿಗೆ ಸಂಕಟವಾದರೆ ಕಾಂಗ್ರೆಸ್‌ನ ಆಂಜನೇಯ ಅವರಿಗೆ ಕಂಟಕವಾಗುವ ಸಾಧ್ಯತೆಗಳಿವೆ. ಮಂಜುನಾಥ ಮತ್ತು ಆಂಜನೇಯ ಇಬ್ಬರೂ ಮಾದಿಗ ಸಮುದಾಯದವರಾದರೂ ಮಂಜುನಾಥರಿಗೆ ಕ್ಷೇತ್ರ ಒಲಿಯುವಂತಿದೆ. ಮಂಜುನಾಥರಿಗೆ ಹಲವಾರು ರೀತಿಯ ಲಾಭಗಳಿವೆ. ಒಂದು ಅವರ ಸ್ವಜಾತಿ ಮತಗಳು, ಎರಡು ಕ್ಷೇತ್ರದಲ್ಲಿ ಈಗಾಗಲೇ ಬಿಜೆಪಿ ಮತ ಬ್ಯಾಂಕ್ ಎಂದು ಪರಿಗಣಿಸಲಾಗಿರುವ 30 ಸಾವಿರ ಮತಗಳು, ಮೂರನೆಯದು ಮಂಜುನಾಥ ಪ್ರೀತಿಸಿ ಮದುವೆಯಾಗಿರುವುದು ಸಾಧು ಲಿಂಗಾಯತರ ಹುಡುಗಿಯನ್ನು. ಈಗಾಗಲೇ ಸಿರಿಗೆರೆಯ ಸಾಧು ಲಿಂಗಾಯತ ಮಠ ಮಂಜುನಾಥರನ್ನು ಒಪ್ಪಿದೆ ಎಂಬುದು ಗುಟ್ಟಾಗುಳಿದಿಲ್ಲ.

ಆದರೆ ಚಂದ್ರಪ್ಪನಿಗೆ ಇಂಡಿಪೆಂಡೆಂಟ್ ಆಗಿ ಸ್ಪರ್ಧೆಗಿಳಿಯುವ ಹುಂಬತನವಿದೆ. ಚಂದ್ರಪ್ಪನೇ ಮಾಧ್ಯಮದವರೆದುರು "5,000 ಕೋಟಿಯಲ್ಲಿ 25 ಕೋಟಿ ಚುನಾವಣೆಗೆ ಖರ್ಚಾಗಲಿ ಬಿಡಿ" ಎಂದು ನೇರಾನೇರ ಮಾತನಾಡುತ್ತಿದ್ದಾನೆ.

ರಾಜಕೀಯವಾಗಿ ಅತಂತ್ರನಾಗಿರುವ ಚಂದ್ರಪ್ಪ ಈಗ ಗಣಿ ಕಳ್ಳ ಬಳ್ಳಾರಿಯ ರೆಡ್ಡಿ ಗ್ಯಾಂಗಿನ ಕರುಣಾಕರ ರೆಡ್ಡಿಯ ತೊಡೆ ಏರಿ ಕೂತಿದ್ದಾನೆ. ಆದರೆ ರೆಡ್ಡಿಗಳ ಸಂಗ ಮಾಡಿದ ಯಾರ ಪರಿಸ್ಥಿತಿಯೂ ಈಗ ನೆಟ್ಟಗಿಲ್ಲ ಎಂಬುದನ್ನು ಚಂದ್ರಪ್ಪ ಮರೆತಿದ್ದಾನೆ. ಅದೇನೇ ಆದರೂ ಚಂದ್ರಪ್ಪನಿಗೆ ಹೊಳಲ್ಕೆರೆ ಕ್ಷೇತ್ರದಿಂದ ಗೇಟ್ ಪಾಸ್ ಸಿಗುವುದು ಗ್ಯಾರಂಟಿಯಾಗಿದೆ.

● ಟಿ.ಎನ್.ಷಣ್ಮುಖ

ನರೆ ಕೆಲವೇ ತಿಂಗಳಲ್ಲಿ ಜಾಮೀನಿನ ಮೇಲೆ ಬಿಡುಗಡೆಗೊಂಡರು.

2011ರಲ್ಲಿ ಮತ್ತೊಂದು ಪ್ರಮುಖ ಘಟನೆ ನಡೆಯಿತು. ಇಟ್ನಾಳಕ್ಕೆ ಮೀಪದಲ್ಲಿರುವ ಕಣದಾಳ ಗ್ರಾಮದಲ್ಲಿ ಸಿದ್ಧಗೌಡ ಪಾಟೀಲ ಹಾಗೂ ಣ್ಣಪ್ಪ ಪಾಟೀಲ ಎಂಬುವವರ ಮಧ್ಯೆ ಜಮೀನಿಗೆ ಸಂಬಂಧಿಸಿದಂತೆ ವಾದ ಪ್ರಾರಂಭವಾಯಿತು. ಇದು ತಾರಕಕ್ಕೆ ಹೋಗಿ 2011ರ ಜೂನ್ ಂದು ಸುರೇಶ ಮುತ್ನಾಳ, ಪಿಂಟು, ಸಿಂಪಿ, ಶ್ರೀಶೈಲ ಬೆನ್ನಾಳಿ ಂತಾದವರು ಇಟ್ನಾಳ ಬಸ್ ನಿಲ್ದಾಣದಲ್ಲಿ ಗಂಗಪ್ಪ ಮಹಾದೇವ ಹುಲ್ಲೊಳ್ಳಿ ಬ ಯುವಕನ ಮೇಲೆ ಗುಂಡು ಹಾರಿಸಿದರು. ಅಷ್ಟೇ ಅಲ್ಲ, ಆತ ನ್ನೂ ಜೀವಂತ ಇದ್ದರೂ ಆತನ ಮೇಲೆ ಪೆಟ್ರೋಲ್ ಸುರಿದು ಆತನನ್ನು ಮಾನುಷವಾಗಿ ಸುಟ್ಟುಹಾಕಿದರು. ಈ ಘಟನೆಯಿಂದ ಇಡೀ ರಾಯಭಾಗ ಲೂಕು ಬೆಚ್ಚಿಬಿದ್ದಿತು. ಆದರೆ ಈ ಕೇಸಿನಲ್ಲಿ ಪೊಲೀಸರು ಯಾರನ್ನೂ ಬಂಧಿಸುವ ಗೋಜಿಗೆ ಹೋಗಲಿಲ್ಲ.

ಹೀಗೆ ಸಾರ್ವಜನಿಕ ಸ್ಥಳದಲ್ಲಿ ಕೊಲೆಯಾದ ಗಂಗಪ್ಪ ಎಂಬ ಯುವಕ ದಾಶಿವ ಥಾಂಗೆಯ ಗುಂಪಿನವನು. ಇದಾದನಂತರ 2012 ಜನವರಿ 12 ದು ಹುಕ್ಕೇರಿ ತಾಲೂಕಿನ ಯಮಕನಮರಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ಕೋರ್ಟ್‌ಗೆ ಹಾಜರಾಗಲು ಸದಾಶಿವ ಥಾಂಗೆ, ಭೀಮಪ್ಪ ಂಗೆ, ಮಹಾದೇವ ಹುಲ್ಲೊಳ್ಳಿ, ಬಸಪ್ಪ ಹುಲ್ಲೊಳ್ಳಿ ಮುಂತಾದವರು ಹೋಗುತ್ತಿದ್ದಾಗ ಸುರೇಶ್ ಮುತ್ನಾಳನ ಗ್ಯಾಂಗ್ ದಾಳಿ ಮಾಡಿತು. ಈ ಬಗೆ ಸಂಬಂಧಿಸಿದಂತೆ ಈಗ ಸುರೇಶ್ ಮುತ್ನಾಳನ ಗ್ಯಾಂಗ್ ಜೈಲಿನಲ್ಲಿ ಮುದ್ದೆ ಮುರಿಯುತ್ತಿದೆ.

ಹೋಗಲಿ, ಇಲ್ಲಿಗೆ ಇಟ್ನಾಳ ಗ್ರಾಮದಲ್ಲಿನ ಕೊಲೆಗಳ ಅಧ್ಯಾಯ ಮುಗಿದು ಎಲ್ಲವೂ ತಣ್ಣಗಾಯಿತು ಎಂದು ತಾಲೂಕಿನ ಜನ ನಿಟ್ಟುಸಿರುಬಿಡುತ್ತಿದ್ದಾಗಲೇ ಕಳೆದ ಮಾರ್ಚ್ 28ರಂದು ಕಟಕಭಾವಿ ಕ್ರಾಸ್ ಬಳಿ ಸದಾಶಿವ ಥಾಂಗೆ ಮೇಲೆ ಗುಂಡಿನ ಮಳೆ ಸುರಿಯಿತು. ಗಂಗಪ್ಪನ ಕೊಲೆ ಆಪಾದನೆ ಮೇಲೆ ಜೈಲು ಪಾಲಾಗಿರುವ ಸುರೇಶ ಮುತ್ನಾಳ ಅಲ್ಲಿದ್ದುಕೊಂಡೆ ಮಾಡಿಸಿದ ದಾಳಿ ಇದು.


ಎರಡು ಬಾರಿ ತನ್ನ ಮೇಲಾದ ದಾಳಿಯಿಂದ ಪಾರಾಗಿರುವ ಸದಾಶಿವ ಥಾಂಗೆ ಹಾಗೂ ಆತನ ಕುಟುಂಬ ಇಷ್ಟಕ್ಕೆ ನಿಟ್ಟುಸಿರುಬಿಡುವಂತಿಲ್ಲ. ಏಕೆಂದರೆ ಕಟಕಭಾವಿ ಕ್ರಾಸ್ ದಾಳಿಯ ಪ್ರಮುಖ ಆರೋಪಿ ಶಾರ್ಪ್ ಶೂಟರ್ ಮಲ್ಲಪ್ಪ ಕಾಳೆಯನ್ನು ಕಳೆದ ಜೂನ್ 21 ರಂದು ಪೊಲೀಸರು ನ್ಯಾಯಾಲಯಕ್ಕೆ ಕರೆದೊಯ್ಯುತ್ತಿದ್ದಾಗ ಪರಾರಿ ಆಗಿದ್ದಾನೆ. ಸುರೇಶ್ ಮುತ್ನಾಳನಿಗೆ ಹತ್ತಿರವಾಗಿರುವ ಪೊಲೀಸರ ಬಗ್ಗೆ ಈ ಪರಾರಿ ಪ್ರಕರಣದಲ್ಲಿ ಹಲವಾರು ಅನುಮಾನಗಳು ಮೂಡುವಂತೆ ಮಾಡುತ್ತಿವೆ. ಅದೇನೇ ಇದ್ದರೂ ಸದಾಶಿವ ಥಾಂಗೆ ಕುಟುಂಬಕ್ಕೆ ನೆಮ್ಮದಿಯ ನಿದ್ದೆ ಎಂಬುದಿಲ್ಲದಂತಾಗಿದೆ.

ದುಷ್ಟ ರಾಜಕಾರಣಿಗಳು, ಬಾಲಬುಡುಕ ಪೊಲೀಸರು, ದ್ವೇಷವನ್ನೇ ಉಸಿರಾಗಿಸಿಕೊಂಡು ಬದುಕುವ ಥಾಂಗೆ-ಮುತ್ನಾಳ ಕುಟುಂಬಗಳಿಂದಾಗಿ ತಾಲೂಕಿನ ಜನ ನೆಮ್ಮದಿ ಕಳೆದುಕೊಂಡಿರುವುದಂತೂ ಸತ್ಯ.

● ಮಹಾಲಿಂಗಪ್ಪ ಆಲಬಾಳ

ಉದ್ಯೋಗ ಖಾತ್ರಿಯಡಿ ವಿಪ್ರೋತ್ತಮರು ಕೂಲಿ ಮಾಡಿದರಂತೆ!

ನಾಲಿಗೆ ಕುಲ ಹೇಳಿತು ಎಂಬುದು ಹಳೆಯ ಗಾದೆ. ಆದರೆ ಕುಲವನ್ನು ಹೇಳದೆ ಜಾಗರೂಕತೆಯಿಂದ ಬದುಕುತ್ತ ಮಾಡುವುದನ್ನೆ ಮಾಡುವ ಪ್ರತಿಭಾವಂತರು ನಮ್ಮಲ್ಲಿ ಹೇರಳವಾಗಿದ್ದಾರಲ್ಲಾ, ಇಂತವರು ಲಂಕೇಶರ ಬಳಿ ಬಹಳ ಮಂದಿಯಿದ್ದರು. ಲಂಕೇಶ್ ತೀರಿಕೊಂಡ ನಂತರ ಆರಾಮವಾಗಿಯೇ ತಮ್ಮ ಬೆಲ್ಟನ್ನು ನೀವಿಕೊಂಡು ಕೆಲವರು, ಕರಡಿಗೆ ಕಟ್ಟಿಕೊಂಡು ಕೆಲವರು ಯಾಚಕ ಶುರುಮಾಡಿದರಂತಲ್ಲಾ. ಈ ಹೊತ್ತಿನಲ್ಲೇ "ನಾನು ಲಂಕೇಶರ ಗರಡಿಯಲ್ಲಿ ಬೆಳೆದವ" ಎಂದು ಹೇಳಿಕೊಳ್ಳುತ್ತಿದ್ದ ಹಾಲಂಬಿ ಎಂಬ ಕಾಕಂಬಿ ವಿಪ್ರೋತ್ತಮರ ಎದುರು "ಈ ಬದುಕು ಸುಂದರವಾಗಿರಲೆಂದು ಜಾತಿಗಳನ್ನು ನಿರ್ಮಿಸಲಾಯ್ತು" ಎಂದು ಹೊಟ್ಟೆ ಸವರಿಕೊಂಡರಂತಲ್ಲಾ. "ಜಾತಿ ಕಾರಣದಿಂದಲೇ ಪುಷ್ಕಳವಾದ ಭೋಜನ ಬಾರಿಸುತ್ತ, ತಿಂದ ಹೊಟ್ಟೆ ತೋರಿಸಿಕೊಂಡು ಮಾತನಾಡುವ ಇಂತವರನ್ನ ಹಿಡಿದು, ಒಂದು ವಾರ ಮಲ ಹೊರೆಸಿ, ಮುನಿಸಿಪಾಲಿಟಿ ಕಕ್ಕಸ್ ತೊಳೆಸಿ, ಜಾತಿಪದ್ಧತಿ ಈಗಲೂ ಸುಂದರವಾಗಿದೆಯೇನಪ್ಪಾ ಎಂದು ಕೇಳಬೇಕು" ಎಂದು ಡಿಎಸ್‌ಎಸ್ ಅಂಬೇಡ್ಕರ್ ಬಣದ ಹುಡುಗರು ಠೇಂಕಾರ ಮಾಡಿವೆಯಂತಲ್ಲಾ, ಥೂತ್ತೇರಿ!



*****

ಇದ್ದಕ್ಕಿದ್ದಂತೆ ನಮ್ಮ ಪುರೋಹಿತರ ಪಿಂಡಗಳು ದಿವಂಗತ ಪ್ರಧಾನಿ ಪಿ.ವಿ. ನರಸಿಂಹರಾಯ ಮಹಾಪ್ರತಿಭಾವಂತ ಮತ್ತು ದೂರದೃಷ್ಟಿ ಇದ್ದ ನಾಯಕನೆಂದು ಹೊಗಳಿ ಕೆರೆಯತೊಡಗಿವೆಯಂತಲ್ಲಾ. ಇದಕ್ಕೆ ಕಾರಣವೇನೆಂದು ಹುಡುಕಲಾಗಿ ಚೆಡ್ಡಿ ಭೈರಪ್ಪನವರು "ಮನಮೋಹನ ಸಿಂಗನ ಆರ್ಥಿಕ ಜ್ಞಾನದ ಬೆಳವಣಿಗೆಗೆ ನಮ್ಮವರಾದ ನರಸಿಂಗರಾಯರೇ ಕಾರಣ" ಎಂದು ಬರೆದಿದ್ದೇ ಆಗಿದೆಯಂತಲ್ಲಾ. ಇದನ್ನು ಓದಿಕೊಂಡ ಪುರೋಹಿತನ ಪಿಂಡಗಳು ವಶಿಷ್ಟನ ಹೊಗಳಿಕೆ ಆರಂಭಿಸಿಬಿಟ್ಟಿವೆಯಂತಲ್ಲಾ. ಈ ನರಸಿಂಗರಾಯನನ್ನು ಹೊಗಳಲು ಇನ್ನೂ ಒಂದು ಕಾರಣ ಏನೆಂದರೆ ಅಧ್ವಾನಿಯ ವಾನರಸೇನೆ ಬಾಬರಿ ಮಸೀದಿ ಕೆಡವಲು ಹೋದಾಗ ಅವುಗಳ ಮೇಲೆ ಬಾಣಬಿಟ್ಟು ಓಡಿಸದೆ, ಇಡೀ ದಿನ ಪೌರೋಹಿತ್ಯದ ಕೆಲಸದಲ್ಲಿ ತೊಡಗಿ, ಮಸೀದಿ ಬಿದ್ದ ಮೇಲೆ ಮೌನ ಮುರಿದು ಮಂತ್ರ ಪಟಿಸಿದನಂತಲ್ಲಾ. ನಂತರ ವಾಜಪೇಯಿ ಪ್ರಧಾನಿಯಾಗಿ ಚೆಡ್ಡಿಗಳ ಜೇಬೆಲ್ಲಾ ತುಂಬಲು ಕಾರಣನಾದ ನರಸಿಂಗರಾಯನನ್ನು ಹೊಗಳದೆ ಉರಿಸಿಂಗನಂತಹ ಮನಮೋಹನಸಿಂಗನನ್ನು ಹೊಗಳಲಾದೀತೆ, ಥೂತ್ತೇರಿ!!

ಥುತ್ತೇರಿ ಯಾಹೂ

******

ಕೆಳಗಿನ ಕೋರ್ಟಿಲ್ಲದಿದ್ದರೆ ಮೇಲಿನ ಕೋರ್ಟಿಗೆ ಹೋಗುತ್ತೇವೆಂದು ಠೇಂಕಾರ ಮಾಡುತ್ತಿದ್ದ ಕುಮಾರಣ್ಣ, ಎಡೂರಣ್ಣ ಮತ್ತು ಯೋಗೇಶರರಿಗೆಲ್ಲಾ "ಅಲ್ಲಿನ ಕೋರ್ಟಿಗೆ ಹೋಗಿ ಶರಣಾಗಿ" ಎಂದು ಮೇಲಿನ ಕೋರ್ಟು ಹೇಳಿಬಿಟ್ಟಿವೆಯಂತಲ್ಲಾ. ಕೋರ್ಟಿನ ಕರಿಚಿತ್ತದ ವಿಟನಿಂದ ಕಂಗಾಲಾಗಿರುವ ಕುಮಾರಣ್ಣ ಅತ್ತ ಪಾರ್ಟಿ ಕಟ್ಟುವುದೊ ಇತ್ತ ಕೋರ್ಟಿಗೆ ಅಲೆಯುವುದೊ ಎಂದು ಚಿಂತಿಸುತ್ತಿದ್ದಾರಂತಲ್ಲಾ. ಆದರೆ ಎಡೂರಪ್ಪ ಯಾವುದಕ್ಕೂ ಕೇರ್ ಮಾಡದೆ ಸಿದ್ದರಾಮಯ್ಯನನ್ನು ಅತ್ತ ಸರಿಸಿ ವಿರೋಧ ಪಕ್ಷದ ಸ್ಥಾನದಲ್ಲಿ ಮಾತನ್ನಾಡುತ್ತ "ನೀವು ಸರಿಯಾದ ಸರ್ಕಾರ ಕೊಡದಿದ್ದರೆ ನಾನು ನಾಡಿನಲ್ಲೆಲ್ಲಾ ಸುತ್ತಿ ನಿಮ್ಮದನ್ನೆಲ್ಲಾ ಬಯಲು ಮಾಡುತ್ತೇನೆ" ಎಂದು ಗುಡುಗಿದರಂತಲ್ಲಾ. ಈ ಮಾತನ್ನು ಕೇಳಿದ ಸಿದ್ದರಾಮಯ್ಯ "ದಯವಿಟ್ಟು ಆ ಕೆಲಸ ಮಾಡಿ. ನಮ್ಮ ಕೆಲಸ ಹಗುರ ಮಾಡಿ ಎಡೂರಪ್ಪಾ" ಅಂದರಂತಲ್ಲಾ. ಇದರಿಂದ ಕೆರಳಿದ ಈಶ್ವರಪ್ಪ "ಇಷ್ಟು ವರ್ಷದ ಸದನದ ಇತಿಹಾಸದಲ್ಲಿ ಯಾರಾದರೂ ನಮ್ಮ ಎಡಿಯೂರಪ್ಪನಂತಹ ಮಾತನ್ನಾಡಿದ್ದಾರೇನ್ರಿ? ಕಲ್ಲುಗೊಳ್ಳಿ ಸಿದ್ದರಾಮಯ್ಯ" ಅಂದರಂತಲ್ಲಾ. ಈ ಮಾತಿಗೆ ಸಿದ್ದರಾಮಯ್ಯ "ಅದಕ್ಕೆ ನಿನ್ನ ಬ್ರೈನ್‌ಲೆಸ್ ಈಶ್ವರಪ್ಪ ಅಂತ ಕರಿಯದು" ಎಂದರಂತಲ್ಲಾ, ಥೂತ್ತೇರಿ!

******

ಶ್ರೀರಾಮುಲು ಬಳಿ ಸೇರಿಕೊಂಡಿರುವ ಉಪನ್ಯಾಸಕ ಮತ್ತು ವಕೀಲ ಎಂಬ ಕರಟಕದಮನಕರಿಬ್ಬರೂ ಬಿಎಸ್‌ಆರ್ ಪಾರ್ಟಿ ಕಟ್ಟುವ ವಿಷಯದಲ್ಲಿ ರಾಮುಲುಗಿಂತಲೂ ರಣೋತ್ಸಾಹಿಂಗಳಾಗಿದ್ದಾರಂತಲ್ಲಾ. ಇವರಿಬ್ಬರ ಉತ್ಸಾಹ ನೋಡಿದ ನಾಡಿನ ಬುದ್ಧಿಜೀವಿಗಳು, ಅಷ್ಟೊ ಇಷ್ಟೊ ಮಾನ ಉಳಿಸಿಕೊಂಡು ಬದುಕುತ್ತಿರುವ ಪಿಂಜರಾಪೋಲು ಪತ್ರಕರ್ತರು ತಮಾಷೆ ಮಾಡುತ್ತ "ಅಂತೂ ಬರಲಿರುವ ಹೊಸ ಸರ್ಕಾರದಲ್ಲಿ ನಮ್ಮ ರಾಜ್ಯಕ್ಕೆ ಬಹುಸಮರ್ಥವಾಗಿ ಖಾತೆ ನಿರ್ವಹಿಸುವ ಎರಡು ಉತ್ತಮ ಪ್ರತಿಭೆಗಳು ಸಿಗುತ್ತವೆ. ಆದರೆ ಅವರಿಬ್ಬರಿಗೂ ನಡೆಯುವ ಜಗಳ ಡಿಕೆಶಿ ಮತ್ತು ವಿಶ್ವನಾಥ್‌ರನ್ನು ನೆನಪಿಸುತ್ತವೆ. ಈಚಿನ ಸರ್ಕಾರದ ರೇಣುಕಾಚಾರಿ ಮತ್ತು ಸಿ.ಟಿ. ರವಿಯನ್ನು ಜ್ಞಾಪಕಕ್ಕೆ ತರುತ್ತವೆ" ಎಂದು ಭವಿಷ್ಯ ನುಡಿದಿದ್ದಾರಂತಲ್ಲಾ, ಥೂತ್ತೇರಿ!

******

ಆಂಧ್ರದ ನ್ಯಾಯಾಧೀಶರಿಗೆ ರೆಡ್ಡಿ ಬಳಗ ಕೊಟ್ಟಿರುವುದು ಹತ್ತು ಕೋಟಿಯಲ್ಲಾ ನೂರು ಕೋಟಿ ಎಂಬ ಸುದ್ದಿ ಹೊರಬೀಳುತ್ತಿದ್ದಂತೆ ಬಳ್ಳಾರಿ ಗಣಿಗಳು ಇನ್ನೂ ಆಳವಾಗಿ ಮತ್ತು ಅಗಲವಾಗಿ ಕಾಣುತ್ತಿವೆಯಂತಲ್ಲಾ. ಜೊತೆಗೆ ಅಲ್ಲಿಂದಲೇ ಬಿ.ಎಸ್.ಆರ್ ಪಾರ್ಟಿಗೆ ಹಣ ಹರಿದುಬಂದಿದ್ದರಿಂದ ಸದರಿ ಪಾರ್ಟಿಯ ಉಪನಾಯಕ ಬೇಲೆಕೇರಿ ಬಂದರಿನ ಜಾಗದಿಂದ ರಾಮನಗರದವರೆಗೂ ಯಾತ್ರೆ ಹೊರಟಿದ್ದಾನಂತಲ್ಲಾ. ರಾಮುಲು ತಲೆಗೆ ಇಂತಹ ಅಲೆಮಾರಿ ಸಲಹೆಯನ್ನು ಯಾರು ಕೊಟ್ಟರೋ ಏನೊ, ಅಂತೂ ಕರಟಕದಮನಕರಿಬ್ಬರೂ "ಮುಂದಿನ ಚುನಾವಣೆಯಲ್ಲಿ ಮೂವತ್ತೈದು ಸೀಟು ಗ್ಯಾರಂಟಿ. ಉಪಮುಖ್ಯಮಂತ್ರಿ ಶ್ರೀರಾಮುಲು ಆದರೆ ನಾನೆ ರೇಷ್ಮೆ ಸಚಿವ ನೀನೇ ಸಮಾಜ ಕಲ್ಯಾಣ ಹಿಂದುಳಿದ ಖಾತೆ ಸಚಿವ" ಎಂದು ಖುಷಿಯಿಂದ ಓಡಾಡುತ್ತಿದ್ದಾರಂತಲ್ಲಾ. ಇವರಿಬ್ಬರ ಸಂಭ್ರಮ ನೋಡಿದ ಕುಷ್ಟಗಿ ಕಡೆಯ ಕಮ್ಯುನಿಸ್ಟ್ ಪತ್ರಕರ್ತನೊಬ್ಬ "ಬತ್ತಿನಿರಿ ನಿಮ್ಮಿಬ್ಬರಿಗೂ ಮಾಡ್ತಿನಿ" ಎಂದು ಈಗಾಗಲೇ ಒಂದು ಗಂಟೆಯಿಂದ ಮಾಡಿದ ದೇವಿ ಪೂಜೆಯನ್ನು ಮತ್ತೂ ಮುಂದುವರಿಸಿದನಂತಲ್ಲಾ, ಥೂತ್ತೇರಿ!

******

ನಿರ್ಗತಿಕರು ಹಸಿವಿನಿಂದ ಮಲಗಬಾರದು, ಅವರ ಕೈಗೆ ಕೆಲಸ ಕೊಟ್ಟರೆ, ಕೂಲಿ ಮಾಡಿ ಆ ಹಣದಲ್ಲಿ ಅಕ್ಕಿ ತಂದು ಬೇಯಿಸಿ ತಿಂದು ಬದುಕುಳಿಯಲಿ ಎಂಬ ಕಾರಣದಿಂದ ಉದ್ಯೋಗ ಖಾತ್ರಿ ಯೋಜನೆಯನ್ನು ಜಾರಿಗೆ ತಂದು ಬಡವರನ್ನು ಸರ್ಕಾರ ರಕ್ಷಿಸಿದೆಯಂತಲ್ಲಾ. ಇಂತಹ ಕ್ರಾಂತಿಕಾರಿ ಯೋಜನೆಯಿಂದ ಕೊನೆಯುಸಿರೆಳೆಯಲಿದ್ದ ಬಡ ಬ್ರಾಹ್ಮಣನೊಬ್ಬ ಉಳಿದು ಬದುಕಿ, ವಿಧಾನ ಪರಿಷತ್ ಸದಸ್ಯನಾಗಿ, ಕ್ರಾಂತಿಯನ್ನೆ ಮಾಡಿದ್ದಾನಂತಲ್ಲಾ. ಇದಲ್ಲವೆ ಪವಾಡ. ಸಾರಾಂಶವೇನೆಂದರೆ ಸಂಸ್ಕೃತ ಭೂಯಿಷ್ಟ ಭಾಷೆ ಮಾತನಾಡುವ ಮತ್ತೂರೆಂಬ ಊರಿನಲ್ಲಿ ಇರುವವರೆಲ್ಲಾ ಬ್ರಾಹ್ಮಣರಂತೆ. ಅಲ್ಲಿಗೆ ಭಾನುಪ್ರಕಾಶ್ ಎಂಬ ಕರಿವಿಪ್ರೋತ್ತಮರು ಲೀಡರಂತೆ. ಇವರು ಅಂತಿಂತಹ ಲೀಡರಲ್ಲ, 'ಬಂ' ಎದುರು ಒಂದು ಕಾಲದಲ್ಲಿ ಕ್ಯಾಂಡೇಟಾಗಿದ್ದರು. ಹಾಲಿ ಬಿಜೆಪಿ ರಾಜ್ಯ ಉಪಾಧ್ಯಕ್ಷರು. ವಿಧಾನ ಪರಿಷತ್ ಸದಸ್ಯರು. ಇಂತಹ ಸ್ಥಳಗಳಿಗೆ ಸದರಿ ಶ್ರಮಿಕ ಪ್ರತಿಭೆ ಏರಿಬರಬೇಕಾದರೆ, ಉದ್ಯೋಗ ಖಾತ್ರಿಯಡಿ ಜಾಬ್ ಕಾರ್ಡು ಪಡೆದು, ಸುಮಾರು ನೂರಾರು ದಿನ ಮಣ್ಣು ಹೊತ್ತು, ಬದು ಹಾಕಿ ಚರಂಡಿ ತೋಡಿ, ಸದರಿ ಹಣದಿಂದ ಪುಳಿಯೊಗರೆ ಪಾಯಸ ಪತ್ರೊಡೆ ಮಾಡಿಕೊಂಡು ತಿಂದು, ಬದುಕುಳಿದು ಮೇಲೆ ಬಂದರಂತಲ್ಲಾ. ಇಂತಹ ಗತಿಗೆಟ್ಟ ಕೆಲಸ ಮಾಡಿ; ಬಡವರ ಅನ್ನ ಕಸಿದ ವಿಷಯವನ್ನು ವಿಧಾನ ಪರಿಷತ್ತಿನಲ್ಲಿ ಪ್ರಸ್ತಾಪ ಮಾಡಲು ಮಾನವಂತ ಶಾಸಕರು ಎದ್ದಾಗ ಅಲ್ಲಿ ಸಭಾಪತಿಯಾಗಿದ್ದವರು ಶಿವಮೊಗ್ಗದ ಶಂಕರಮೂರ್ತಿ. ಅವರ ಪಕ್ಕ ಕುಳಿತವರು ಈಶ್ವರಪ್ಪ, ಈಶ್ವರಪ್ಪನ ಹಿಂದೆ ಕುಳಿತವನು ಕಾಟಕರ ಕೇರಿ ಸಿದ್ದರಾಮಣ್ಣ ಆತನ ಎದುರು ಕುಳಿತವನೇ ಭಾನುಪ್ರಕಾಶ್. ಹೀಗೆ ಒಂದೇ ಊರಿನ ಜನ ಒಂದೇ ಕಡೆ ದಕ್ಕರಿಸಿರುವಾಗ ಉದ್ಯೋಗ ಖಾತ್ರಿ ಯೋಜನೆಯ ಮಾಟದ ಚರ್ಚೆ ಬರಲು ಸಾಧ್ಯವೇ? ಅದೆಲ್ಲಾ ಪತ್ರಿಕೆಯವರ ಸುಳ್ಳು ವರದಿ ಎಂದ ಬಿಜೆಪಿಗಳು ಬಿಜೆಪಿ ನಗೆ ನಕ್ಕರಂತಲ್ಲಾ, ಥೂ, ಥೂ, ಥೂತ್ತೇರಿ!!!

16 ಮಾರುತಿ-ದಮನಕಾಂಡ

ಮುಷ್ಕರಕ್ಕಿಳಿದರು. ತಮ್ಮ ಕಾನೂನುಬದ್ಧ ಹಾಗೂ ಅತ್ಯಂತ ನ್ಯಾಯಸಮ್ಮತವಾದ ಬೇಡಿಕೆಗಳನ್ನು ಮುಂದಿಟ್ಟರು. ಅವುಗಳಲ್ಲಿ ಪ್ರಮುಖವಾದುದು ಮ್ಯಾನೇಜ್ ಮೆಂಟ್‌ನೊಂದಿಗೆ ವ್ಯವಹರಿಸಲು ತಮ್ಮದೇ ಆದ ಯೂನಿಯನ್‌ಗೆ ಮಾನ್ಯತೆ ದೊರಕಬೇಕು ಎಂಬುದು. ಜೊತೆಗೆ ಸಂಬಳದ ಹೆಚ್ಚಳ, ಹಲವು ವರ್ಷಗಳಿಂದ ದುಡಿಯುತ್ತಿರುವವರನ್ನು ಕಾಯಂ ಮಾಡುವುದು ಇತ್ಯಾದಿ.

ಸಮಸ್ಯೆಗಳನ್ನು ಬಗೆಹರಿಸುವ ಆಶ್ವಾಸನೆ ನೀಡಿದ ಮಾಲಿಕ ವರ್ಗ ಹುಟ್ಟುಗುಣವನ್ನು ಪ್ರದರ್ಶಿಸಿದರು. ಹೋರಾಟದ ಮುಂಚೂಣಿಯಲ್ಲಿದ್ದ 21 ಕಾರ್ಮಿಕರನ್ನು ನಾನಾ ನೆಪದಲ್ಲಿ ಸಸ್ಪೆಂಡ್ ಮಾಡಿದರು. ಹೀಗೆ ಅನಿವಾರ್ಯವಾಗಿ ಮತ್ತೊಮ್ಮೆ ಆಗಸ್ಟ್‌ನಲ್ಲಿ ಕಾರ್ಮಿಕರು ಮುಷ್ಕರಕ್ಕಿಳಿದರು. ಅದೂ ಬರೋಬ್ಬರಿ ದಿನಗಳು! ಇದಾದನಂತರ ಅಕ್ಟೋಬರ್‌ನಲ್ಲಿ ಮತ್ತೊಮ್ಮೆ 14 ದಿನಗಳ ಮುಷ್ಕರ! ಬೇಡಿಕೆಗಳು ಮಾತ್ರ ಹಳೆಯ ಬೇಡಿಕೆಗಳೇ. ಅದರ ಜೊತೆಗೆ ಅಮಾನತುಗೊಳಿಸಿದ ತಮ್ಮ ಸಂಗಾತಿಗಳನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂಬ ಬೇಡಿಕೆ ಮಾತ್ರ ಹೊಸದಾಗಿ ಸೇರ್ಪಡೆಯಾಗುತ್ತಿತ್ತು.

ಈ ಕಾರ್ಮಿಕರ ಹೋರಾಟಕ್ಕೆ ಅಕ್ಕಪಕ್ಕದ ಹಳ್ಳಿಗರು ತೋರಿದ ಬೆಂಬಲ ಅಭೂತಪೂರ್ವವಾದುದು. ಸಾಮೂಹಿಕ ಅಡುಗೆ ಮನೆಯನ್ನು ಏರ್ಪಾಡು ಮಾಡಿದ ರೈತರು ಮುಷ್ಕರ ನಿರತ ಕಾರ್ಮಿಕರ ಹಸಿವು ನೀಗಿಸಲು ಮುಂದಾದರು. ಕಾರ್ಮಿಕ-ರೈತ ಐಕ್ಯತೆಯೆಂದರೆ ಇದೇ ತಾನೆ?

ಅಂತಿಮವಾಗಿ ಆದ ಒಪ್ಪಂದದ ಪ್ರಕಾರ ಕಾರ್ಮಿಕರ ಕುಂದುಕೊರತೆಗಳನ್ನು ಆಲಿಸಲು ಒಂದು ಸ್ವತಂತ್ರವಾದ ಸಮಿತಿ ರಚಿಸಲು ಮ್ಯಾನೇಜ್‌ಮೆಂಟ್ ಒಪ್ಪಿಕೊಂಡಿತ್ತು, ಆದರೆ ಅಂಥಾ ಯಾವ ಸಮಿತಿಯೂ ಇದುವರೆಗೆ ರಚನೆಯಾಗಿಲ್ಲ, ಬದಲಿಗೆ ಕಾರ್ಮಿಕ ಮುಖಂಡರನ್ನು ಒಂದಲ್ಲಾ ಒಂದು ನೆಪದ ಮೇಲೆ ಶಿಕ್ಷೆಗೆ ಗುರಿಪಡಿಸುವ ತಂತ್ರವನ್ನು ಮುಂದುವರೆಸಿದರು. ಇಷ್ಟು ಒತ್ತಡದ ನಂತರ ಕಾರ್ಮಿಕ ಇಲಾಖೆ ಸುಜುಕಿ ಆಡಳಿತ ಮಂಡಳಿಗೆ ಕಾರ್ಮಿಕ ಕಾಯಿದೆಗಳ ಉಲ್ಲಂಘನೆಯನ್ನು ಪ್ರಶ್ನಿಸಿ ಒಂದು ನೋಟೀಸ್ ಜಾರಿ ಮಾಡಿತ್ತು, ಇದ್ಯಾವುದಕ್ಕೂ ಕಿಮ್ಮತ್ತು ನೀಡದೆ ಎಂದಿನಂತೆ ತನ್ನ ದಮನ ನೀತಿಯನ್ನು ಮುಂದುವರೆಸಿರುವ ಕಂಪನಿಯ ಮ್ಯಾನೇಜ್‌ಮೆಂಟ್‌ನಿಂದ ದಿನೇದಿನೇ ಕಾರ್ಮಿಕರ ಆಕ್ರೋಶ ಮಡುಗಟ್ಟುತ್ತಾ ಹೋಯಿತು.

ಹೀಗಿರುವಾಗ ಕಳೆದ 18ನೇ ತಾರೀಕು ವೀರೇಂದ್ರ ಪ್ರಸಾದ್ ಎಂಬ ಸೂಪರ್‌ವೈಸರ್ ದಲಿತ ಕಾರ್ಮಿಕನೊಬ್ಬನಿಗೆ ಜಾತಿ ಹೆಸರಿನಲ್ಲಿ ಹೀನಾಯವಾಗಿ ಬೈದ. ಇದರಿಂದ ಸಹಜವಾಗಿ ಕುಪಿತನಾದ ಕಾರ್ಮಿಕ ಆ ಸೂಪರ್‌ವೈಸರ್‌ನ ಮುದ್ದು ತಿರುಗಿಬಿದ್ದ, ಈ ತಿಕ್ಕಾಟ ಮ್ಯಾನೇಜರ್‌ಗಳವರೆಗೆ ಹೋಯಿತು. ಸ್ಥಳಕ್ಕೆ ಧಾವಿಸಿದ ಮ್ಯಾನೇಜರ್‌ಗಳು ಮಾಡಿದ್ದೇನು ಗೊತ್ತೆ? ಜಾತಿನಿಂದನೆಗೆ ಒಳಗಾದ ಕಾರ್ಮಿಕನನ್ನು ಅಶಿಸ್ತಿನ ಹೆಸರಿನಲ್ಲಿ ಅಮಾನತು ಮಾಡಿದರು. ಸುದ್ದಿ ಮಿಂಚಿನಂತೆ ಘಟಕದಾದ್ಯಂತ ಹರಡಿತು. ಕಾರ್ಮಿಕರು ಸ್ವಯಂಪ್ರೇರಿತರಾಗಿ ಕೆಲಸಗಳನ್ನು ನಿಲ್ಲಿಸಿಬಿಟ್ಟರು. ಆ ದಲಿತ ಕಾರ್ಮಿಕನ ವಿರುದ್ಧದ ಕ್ರಮವನ್ನು ರದ್ದುಪಡಿಸಿ, ಜಾತಿನಿಂದನೆ ಮಾಡಿದ ಸೂಪರ್‌ವೈಸರ್‌ನನ್ನು ಅಮಾನತು ಮಾಡಬೇಕೆಂದು ಆಗ್ರಹಿಸಿ ಧರಣಿ ಕೂತರು.

ಆದರೆ ಸಂಜೆಯಾದರೂ ಯಾವೊಬ್ಬ ಅಧಿಕಾರಿಯೂ ಕಾರ್ಮಿಕರ ಕಡೆ ಗಮನ ಹರಿಸಲಿಲ್ಲ, ಬದಲಿಗೆ ತಮ್ಮ ತಮ್ಮ ಕಾರುಗಳನ್ನೇರಿ ಮನೆಕಡೆ ಹೊರಡಲು ಸಿದ್ಧವಾದರು. ಇದರಿಂದ ಆಕ್ರೋಶಭರಿತರಾದ ಕಾರ್ಮಿಕರು ಗೇಟುಗಳನ್ನು ಬಂದ್ ಮಾಡಿ ಅಧಿಕಾರಿಗಳು ಹೊರಹೋಗದಂತೆ ತಡೆದರು. ಆಗಲೇ ಒಳಸೇರಿದ್ದ ಖಾಸಗಿ ಗೂಂಡಾಗಳು ಕಾರ್ಮಿಕರ ಮೇಲೆ ದಾಳಿಗಿಳಿದರು. ಹಲವು ಕಾರ್ಮಿಕರು ತೀವ್ರವಾಗಿ ಗಾಯಗೊಂಡರು. ಇದು ಕಾರ್ಮಿಕರ ಮಡುಗಟ್ಟಿದ್ದ ಆಕ್ರೋಶ ಸ್ಫೋಟಗೊಳ್ಳುವಂತೆ ಮಾಡಿತು. ರೊಚ್ಚಿಗೆದ್ದ ಕಾರ್ಮಿಕರು ಸಿಕ್ಕ ಸಿಕ್ಕ ಅಧಿಕಾರಿಗಳನ್ನು ಬಡಿದರು. ಕಚೇರಿಯ ಕಟ್ಟಡಕ್ಕೆ ಬೆಂಕಿ ಹಚ್ಚಿದರು. ಇದು ಅವನೀಶ್ ಕುಮಾರ್ ಎಂಬ ಒಬ್ಬ ಮ್ಯಾನೇಜರ್‌ನ ದಾರುಣ ಸಾವಿನೊಂದಿಗೆ ಪರ್ಯಾವಸಾನಗೊಂಡಿದೆ.

ಪೊಲೀಸರು 55 ಮಂದಿ ಕಾರ್ಮಿಕರ ಹೆಸರುಗಳನ್ನು ಪಟ್ಟಿ ಮಾಡಿ ಅವರೊಂದಿಗೆ 3000 ಮಂದಿ ಇತರರು ಎಂಬುದಾಗಿ ಹೆಸರಿಸಿ ಐಪಿಸಿ ಸೆಕ್ಷನ್ 307, 302, 147 ಮತ್ತು 149ಗಳ ಅಡಿ ಕೇಸು ದಾಖಲಿಸಿದ್ದಾರೆ. ಈಗಾಗಲೇ ನೂರಾರು ಕಾರ್ಮಿಕರು ಬಂಧನಕ್ಕೊಳಗಾಗಿದ್ದಾರೆ. ಮತ್ತಷ್ಟು ಮಂದಿ ಆಸ್ಪತ್ರೆಗಳಲ್ಲಿದ್ದಾರೆ. ಸಾವಿರಾರು ಮಂದಿ ಗೂಂಡಾಗಳ ಭಯದಿಂದ ಪೊಲೀಸರ ಭಯದಿಂದ ಪರಾರಿಯಾಗಿ ತಲೆಮರೆಸಿಕೊಂಡಿದ್ದಾರೆ.

ಕಂಪನಿಯ ಚೇರ್ಮನ್ ಆರ್.ಸಿ.ಭಾರ್ಗವ ಹರ್ಯಾಣದ ಮುಖ್ಯಮಂತ್ರಿ ಭೂಪೇಂದರ್ ಸಿಂಗ್ ಹೂಡಾ ಅವರನ್ನು ಭೇಟಿ ಮಾಡಿ ಫಾಸ್ಟ್ ಟ್ರಾಕ್ ಕೋರ್ಟ್‌ಗೆ ಒತ್ತಾಯಿಸಿದ್ದಾನೆ. ಸ್ಥಳೀಯ ಪೊಲೀಸ್ ಅಧಿಕಾರಿಯೊಬ್ಬರ ನೇತೃತ್ವದಲ್ಲಿ ಈಗಾಗಲೆ ವಿಶೇಷ ತನಿಖಾ ದಳ ರಚನೆಯಾಗಿದೆ. ಖ್ಯಾತ ಕ್ರಿಮಿನಲ್ ಲಾಯರ್ ಕೆಟಿಎಸ್ ತುಳಸಿಯನ್ನು ವಿಶೇಷ ಪ್ರಾಸಿಕ್ಯೂಟರ್ ಆಗಿ ನೇಮಿಸಿದ್ದಾರೆ.

ಈ ಘಟನೆಯ ನಂತರ ಮಾರುತಿ ಸುಜುಕಿ ಇಂಡಿಯಾ ಲಿಮಿಟೆಡ್ ಕಂಪನಿಯು ಅನಿರ್ದಿಷ್ಟ ಕಾಲ ಬೀಗ ಮುದ್ರೆ ಘೋಷಿಸಿದೆ. ಈ ಘಟಕವನ್ನು ಗುಜರಾತ್‌ಗೆ ಶಿಫ್ಟ್ ಮಾಡುವ ಮಾತುಗಳು ಕೇಳಿಬರುತ್ತಿವೆ. ಇದೇ ಸಂದರ್ಭದಲ್ಲಿ ಮೋದಿ ಇದ್ದಕ್ಕಿದ್ದಂತೆ ಜಪಾನಿಗೆ ಹಾರಿಹೋಗಿದ್ದಾನೆ. ಸುಜುಕಿ ಕಂಪನಿಯ ಮಾಲಿಕರನ್ನು ಭೇಟಿ ಮಾಡುವ ಸಾಧ್ಯತೆಯಿದೆ ಎಂದು ವರದಿಗಳು ತಿಳಿಸಿವೆ.

ಬೆಂಕಿ ಬಿದ್ದ ಮನೆಯಲ್ಲಿ ಗಳ ಹಿರಿಯಲು ರಾಜಕಾರಣಿಗಳು, ಪೊಲೀಸರು, ಮಾಧ್ಯಮಗಳು ಎಲ್ಲರೂ ಪೈಪೋಟಿ ನಡೆಸುತ್ತಿದ್ದಾರೆ. ಸುಜುಕಿ ಕಂಪನಿಯ ಪರವಾಗಿ ವಕಾಲತ್ತು ವಹಿಸಿದ್ದಾರೆ. ಯಾಕೆಂದರೆ ಕಂಪನಿಯ ವಾರ್ಷಿಕ ವಹಿವಾಟು ಸುಮಾರು 35000 ಕೋಟಿಗಳು!

ಆದರೆ ಬಡಪಾಯಿ ಕಾರ್ಮಿಕರ ಬಳಿ ದುಡಿಯುವ ಕೈಗಳನ್ನು ಬಿಟ್ಟರೆ ಬೇರೇನಿದೆ ಹೇಳಿ?

● ದೊಡ್ಡಿಪಾಳ್ಯ ನರಸಿಂಹಮೂರ್ತಿ


2009ರಲ್ಲಿ ಕೊಲೆ ಯತ್ನದಿಂದ ಬಚಾವಾಗಿದ್ದ ಬೆಮೆಲ್


ದಾಳಿಗೆ ಬಲಿಯಾದ ಬೆಮೆಲ್


ಭೀಕರ ದಾಳಿಯ ಅವಶೇಷ

ನಿಲ್ಲದ ನೆಲಮಂಗಲದ ರಕ್ತಚರಿತ್ರೆ

ಕಿಂಗ್‌ಮೇಕರ್ ಬೆಮೆಲ್: ಸೀನನ ಲೆಕ್ಕ ಫೈಸಲ್

ಏನೆಲ್ಲಾ ಹರಸಾಹಸ ಮಾಡಿಯೂ ನೆಲಮಂಗಲದ ಕಿಂಗ್‌ಮೇಕರ್ ಕೃಷ್ಣಪ್ಪ ತನ್ನ ಪ್ರಾಣವನ್ನು ಉಳಿಸಿಕೊಳ್ಳಲಾಗಲಿಲ್ಲ!

ಸಾವಿರ ಕೋಟಿಯ ಆಸ್ತಿವಂತ. ನಂಬಿಕಸ್ಥರ ಪಾಲಿನ ಅನ್ನದಾತ. ಈತ ಮೂವತ್ತು ವರ್ಷಗಳಿಂದ ಸಮಸ್ತ ನೆಲಮಂಗಲದ ರಾಜಕಾರಣವನ್ನು ಆಳಿದಾತ. ಆವತ್ತಿನಿಂದ ಇವತ್ತಿನವರೆಗೆ ತನ್ನ ಆಣತಿಯ ಮೇರೆಗೆ ಎಮ್ಮೆಲ್ಲೆಗಳನ್ನು ಸೃಷ್ಟಿಸಿದಾತ. ನೆಲಮಂಗಲದ ಎಲ್ಲಾ ಆಗುಹೋಗುಗಳ ಕಾರಣಪುರುಷ ಬಿನ್ನಮಂಗಲ ಕೃಷ್ಣಪ್ಪ ಯಾನೇ ಬೆಮೆಲ್ ಕೃಷ್ಣಪ್ಪನ ಅಂತ್ಯ ಇಷ್ಟೊಂದು ಭೀಕರವಾಗಿ ಅದೂ ನಡುರಸ್ತೆಯಲ್ಲಿ ಈ ರೀತಿ ರಕ್ತದ ಓಕುಳಿಯಲ್ಲಿ ಸಂಭವಿಸುತ್ತದೆ



ಯೆಂಬ ನಿರೀಕ್ಷೆ ತಾನೇ ಯಾರಿಗಿತ್ತು?

ರಣಪಾತಕಿ ಚಿತ್ತನಗೆರೆ ಸೀನನ ಕರಾಮತ್ತೇ ಅಂಥಾದ್ದು. ಈತನಕ ಆತ ಹಾಕಿದ ಯಾವ ಸ್ಕೆಚ್ಚೂ ಮಿಸ್ಸಾಗಿಲ್ಲ, ಮಿಸ್ಸಾಗುವುದೂ ಇಲ್ಲ. ಮೊದಲು ಬಾಳೆಕಾಯಿ ಮಂಡಿ ಬಸವರಾಜುನನ್ನು ಮುಗಿಸಿದ. ಆತನ ಕೊಲೆ ಕೇಸಿಗೆಂದು ಸಾಕ್ಷಿದಾರರಾಗಿ ಬೆಮೆಲ್ ರೆಡಿ ಮಾಡಿದ ವಕೀಲ ದೇವರಾಜು ಮತ್ತು ಪಂಚಾಯ್ತಿ ಮೆಂಬರ್ ಕೃಷ್ಣಮೂರ್ತಿಯನ್ನೂ ಇದೇ ರೀತಿಯಲ್ಲಿ ನಡುರಸ್ತೆಯಲ್ಲಿ ಕೊಚ್ಚಿ ಹಾಕಿದ. ಮಗನ ಹತ್ಯೆಗೆ ಕೋರ್ಟಿನಲ್ಲಿ ಸಾಕ್ಷಿ ಹೇಳಿಯೇ ಶಿಕ್ಷೆ ಕೊಡಿಸುತ್ತೇನೆಂದು ನಿಂತ ವಕೀಲ ದೇವರಾಜು ತಂದೆ ಬೈಲಪ್ಪನವರನ್ನೂ ಚಿತ್ತನಗೆರೆಯ ಮಾರ್ಗದಲ್ಲೇ ಕತ್ತರಿಸಿ ಹಾಕಿಸಿದ. ಆನಂತರ ತನ್ನ ಜೊತೆಗೇ ಇದ್ದ ಶಂಕ್ರ ತಿರುಗಿಬಿದ್ದನೆಂದು ಆತನ ಶಿಷ್ಯ ಲೋಹಿತ್ ಗೌಡನನ್ನು ಆಟೋ ರಾಮನಿಗೆ ಸುಪಾರಿ ಕೊಟ್ಟು ಪರಪ್ಪನ ಅಗ್ರಹಾರದ ಜೈಲು ಸಂದಿಯಲ್ಲೇ ನಿಕಾಲಿ ಮಾಡಿಸಿದ. ಈಗ ಈ ಎಲ್ಲಾ ರಕ್ತಪಾತದ ತಾರ್ಕಿಕ ಅಂತ್ಯವೋ ಎಂಬಂತೆ ನೆಲಮಂಗಲದ ಗಾಡ್‌ಫಾದರ್ ಬೆಮೆಲ್ ಕೃಷ್ಣಪ್ಪನನ್ನೇ ಸೀನ ಮುಗಿಸಿದ್ದಾನೆ.

ನೆಲಮಂಗಲದ ಸರಣಿ ಹತ್ಯೆಗಳ ಸುದೀರ್ಘ ಅಧ್ಯಾಯ ವೇನೋ ಮುಗಿದಿದೆ. ಆದರೆ ಇದು ಇಲ್ಲಿಗೇ ಮುಗಿಯುತ್ತಾ?

ಮುಗಿಯಲು ಸೀನ ಬಿಡಬೇಕಲ್ಲ, ಆತ ಬಿಟ್ಟರೂ ಆತನ ದುಷ್ಮನ್ ಶಂಕ್ರ ಸುಮ್ಮನಿರಬೇಕಲ್ಲ. ಬೆಮೆಲ್ ಕೃಷ್ಣಪ್ಪರನ್ನು ಕೊಲ್ಲುವ ಮೂಲಕ ಏನನ್ನು ತಾನು ಸಾಧಿಸಬೇಕೆಂದು ಸೀನ ಲೆಕ್ಕ ಹಾಕಿದ್ದಾನೋ ಅದೇ ಹತ್ಯೆಯ ಮೂಲಕ ಮತ್ತೊಂದು ಸರಣಿಯ ರಕ್ತಪಾತಕ್ಕೆ ಸೀನ ಮುನ್ನುಡಿ ಬರೆದಿದ್ದಾನೆ.

ನೆಲಮಂಗಲಕ್ಕೆ ನೆಮ್ಮದಿ ಇಲ್ಲ

ಬೆಮೆಲ್ ಅಲಿಯಾಸ್ ಬಿನ್ನಮಂಗಲ ಕೃಷ್ಣಪ್ಪ ಕಳೆದ ಜಿಲ್ಲಾ ಪಂಚಾಯ್ತಿ ಚುನಾವಣೆ ಹೊತ್ತಿಗೆ ಜೆಡಿಎಸ್‌ಗೆ ಕಾಲಿಟ್ಟು ದೇವೇಗೌಡರ ಜೊತೆ ಚೆನ್ನಿಗಪ್ಪನ ಸಮೇತ ಕೈಜೋಡಿಸಿದಾಗಲೇ ನೆಲಮಂಗಲವಿನ್ನು ನೆಮ್ಮದಿಯಿಂದಿರುತ್ತದೆ ಎಂದೇ ಜನ ಲೆಕ್ಕ ಹಾಕಿದ್ದರು.

ಹೇಗೂ ಚಿತ್ತನಗೆರೆ ಸೀನ ಕೂಡ ರಾಜಕೀಯವಾಗಿ ಜೆಡಿಎಸ್ಸೇ. ಆತನ ಸಂಬಂಧಿ ಬಂಡೆ ಮಂಜು, ಹತ ಹ್ಯಾಡಾಳು ದೇವಿಯ ಮಗ ಹರ್ಷ; ಇವರೆಲ್ಲರಿಗೂ ಗಾಡ್‌ಫಾದರ್‌ನಂತಿದ್ದ ಮುಂಗಾರು ಮಳೆ ಕೃಷ್ಣಪ್ಪ ಎಲ್ಲರೂ ಜೆಡಿಎಸ್ ಆಗಿದ್ದದ್ದು ಈಗ ಬೆಮೆಲ್ ಕೂಡ ಕಾಂಗ್ರೆಸ್ ತೊರೆದು ಜೆಡಿಎಸ್‌ಗೆ ಬಂದಿರುವುದರಿಂದ ಗ್ಯಾಂಗ್‌ವಾರ್ ತಣಿಯಬಹುದೆಂದೇ ಎಲ್ಲರೂ ಭಾವಿಸಿದ್ದರು. ಬಹುಶಃ ಬೆಮೆಲ್ ಕೂಡ ತನ್ನ ವಿರುದ್ಧ ಕತ್ತಿ ಮಸೆಯುತ್ತಿದ್ದ ಸೀನ ಈ ಕಾರಣಕ್ಕಾದರೂ ತಣ್ಣಗಾಗಬಹುದೆಂಬ ನಿರೀಕ್ಷೆಯಲ್ಲಿದ್ದ.

ಆದರೆ ನೆಲಮಂಗಲದ ಜಿದ್ದಾಜಿದ್ದಿಯ ಆಳವೇ ಬೇರೆ. ಅದು ಪಕ್ಷಗಳು, ಎಲೆಕ್ಷನ್ನು, ಸರ್ಕಾರ, ಸೋಲು-ಗೆಲುವು ಎಲ್ಲವನ್ನೂ ಮೀರಿದ್ದು. ವಿನಾಕಾರಣ ಬಾಳೇಮಂಡಿ ಬಸವರಾಜನನ್ನು ಎತ್ತಿಕಟ್ಟಿ ಡೈರಿ ಚುನಾವಣೆಯಲ್ಲಿ ತನ್ನ ತಂದೆ ಸೋಲುವಂತೆ ಮಾಡಿದ್ದನ್ನಾಗಲಿ, ಊರಹಬ್ಬದಲ್ಲಿ ಕುರುಬರನ್ನು ಛೂಬಿಟ್ಟು ತನ್ನನ್ನು ಅವಮಾನಿಸಿದ್ದನ್ನಾಗಲಿ, ಇದೇ ಕಾರಣಕ್ಕೆ ತಾನು ಬಾಳೆಮಂಡಿ ಬಸವರಾಜನ ಕೊಲೆ ಕೇಸಿಗೆ ಸಿಲುಕಬೇಕಾಗಿ ಬಂದದ್ದು, ಬಸವರಾಜುನ ಕೊಲೆ ಕೇಸಿನಲ್ಲಿ ತನ್ನ ವಿರುದ್ಧ ಸಾಕ್ಷಿಗೆಂದು ಇದೇ ಬೆಮೆಲ್ ವಕೀಲ ದೇವರಾಜು ಮತ್ತು ಪಂಚಾಯ್ತಿ ಮೆಂಬರ್ ಕೃಷ್ಣಮೂರ್ತಿಯನ್ನು ರೆಡಿ ಮಾಡಿದ್ದು, ಅದರಿಂದ ಬಚಾವಾಗಲು ತಾನು ದೇವರಾಜು ಮತ್ತು ಕೃಷ್ಣಮೂರ್ತಿ ಯನ್ನು ಮುಗಿಸಬೇಕಾಗಿ ಬಂದದ್ದು, ಮತ್ತೆ ಈ ಜೋಡಿ ಕೊಲೆ ವಿರುದ್ಧ ವಕೀಲ ದೇವರಾಜು ತಂದೆ ಬೈಲಪ್ಪನನ್ನು ಬೆಮೆಲ್ ಸಾಕ್ಷಿಗೆ ಅಣಿಗೊಳಿಸಿದ್ದು, ಅಂತಿಮವಾಗಿ ತಾನು ಮುದುಕ ಬೈಲಪ್ಪನನ್ನೇ ಕೊಲ್ಲಿಸಿದ್ದು; ಇದೆಲ್ಲದರ ಪ್ರತಿಫಲ ವಾಗಿ ತಿರುಗಿಬಿದ್ದ ಶಂಕ್ರ ತನ್ನ ಅಕ್ಕನ ಗಂಡ ಹ್ಯಾಡಾಳು ದೇವಿಯನ್ನೇ ಕೊಂದು ಹಾಕಿದ್ದನ್ನು ಸೀನ ಕೇವಲ ಬೆಮೆಲ್ ಜೆಡಿಎಸ್‌ಗೆ ಬಂದನೆಂದ ಮಾತ್ರಕ್ಕೆ ಹೇಗೆ ಮರೆಯಲು ಸಾಧ್ಯ?

ಹಾಗೆ ಹ್ಯಾಡಾಳು ದೇವಿಯ ಮಗ ಹರ್ಷನೂ ತಂದೆಯ ಹತ್ಯೆಯ ಪ್ರತೀಕಾರಕ್ಕೆ ಪಣತೊಟ್ಟು ನಿಂತಿದ್ದ. ಹರ್ಷ ಮತ್ತು ಸೀನ ಇಬ್ಬರಿಗೂ ಸಂಬಂಧಿಯಾದ ಬಂಡೆ ಮಂಜ ಬೆಂಗಳೂರು ಪಾಪಕೂಪದಲ್ಲಿ ಪಳಗಿದ ಪಾತಕಿ. ಬೆಮೆಲ್ ಜೆಡಿಎಸ್‌ಗೆ ಬಂದನೆಂದ ಮಾತ್ರಕ್ಕೆ ಇದ್ಯಾವುದನ್ನೂ ವಿರೋಧಿ ಗ್ಯಾಂಗ್ ಮರೆಯುವ ಹಾಗಿರಲಿಲ್ಲ. ಅದಕ್ಕೆ ತಕ್ಕಂತೆಯೇ ಚಿತ್ತನಗೆರೆ ಶಂಕ್ರ ಮತ್ತು ಹಟ್ಟಿ ಮಂಜರ ಪಡೆ ಸೀನನನ್ನು ಮುಗಿಸಲು ಅಣಿಯಾಯಿತು. ಸೀನ ಅಥವಾ ಬಂಡೆ ಮಂಜು ಯಾರೇ ಸಿಕ್ಕರೂ ಅವರನ್ನು ನಿಕಾಲಿ ಮಾಡಲು ಶಂಕ್ರ ಹಾಕಿದ ಸ್ಕೆಚ್ಚುಗಳೇನು ಕಮ್ಮಿಯಾ?

ಬಳ್ಳಾರಿ ಜೈಲಲ್ಲಿದ್ದ ಸೀನನಿಗೆ ಆಹಾರದಲ್ಲಿ ವಿಷ ಬೆರೆಸಿ ಕೊಲ್ಲುವ ಶಂಕ್ರನ ಷಡ್ಯಂತ್ರ ಫಲಿಸಲೇ ಇಲ್ಲ. ಗುಲ್ಬರ್ಗ ಜೈಲಿನಲ್ಲಿದ್ದುಕೊಂಡೇ ಸೀನನನ್ನು ಕೋರ್ಟಿನ ಮಾರ್ಗ ಮಧ್ಯೆ ಫೈರ್ ಮಾಡಿಸುವ ಶಂಕ್ರನ ಪಿತೂರಿಗೆ ಪೊಲೀಸ್ ಇನ್ಸ್‌ಪೆಕ್ಟರ್ ಓರ್ವ ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದ. ರಾಮನಗರದ ಕೋರ್ಟಿಗೆ ಬಂದಿದ್ದ ಸೀನನ ವಿರುದ್ಧ ಹುಡುಗರನ್ನು ಬಿಟ್ಟು ಅಟ್ಯಾಕ್ ಮಾಡಿಸುವ ಶಂಕ್ರನ ಸ್ಕೆಚ್ಚೂ ವಿಫಲವಾಯಿತು. ಇತ್ತ ನೆಲಮಂಗಲದಲ್ಲಿ ಸೀನನ ರೈಟ್‌ಹ್ಯಾಂಡ್ ಬಂಡೆ ಮಂಜನನ್ನು ಬಾಂಬ್ ಹಾಕಿ ಕೊಲ್ಲಲು ಮತ್ತೊಂದು ಸ್ಕೆಚ್ ಹಾಕಿದ ಶಂಕ್ರನ ಲೆಕ್ಕಾಚಾರವೇ


ಚಿತ್ತನಗೆರೆ ಶಂಕ್ರ / ಚಿತ್ತನಗೆರೆ ಸೀನ

ತಲೆಕೆಳಗಾಯಿತು. ಕೂದಲೆಳೆಯಲ್ಲಿ ಮಿಸ್ಸಾದ ಬಂಡೆ ಮಂಜುನ ಬದಲಿಗೆ ಆತನ ಕಾರಿನಲ್ಲಿದ್ದ ಅಮಾಯಕ ಲಾಯರ್ ರವಿ ಕೊಲೆಯಾದ.

ಹೀಗೆ ಸೀನನನ್ನೋ ಬಂಡೆ ಮಂಜನನ್ನೋ ನಿಕಾಲಿ ಮಾಡಲೆಂದು ಶಂಕ್ರ ಏನೆಲ್ಲಾ ಪಿತೂರಿ, ಕಾರಸ್ಥಾನ ರೂಪಿಸಿದ್ದನೋ ಅದೆಲ್ಲವೂ ದುಡುಕಿನ, ಹುಂಬತನದ, ಅರೆಬರೆ ಚಾಲಾಕಿ ಕೃತ್ಯಗಳಾಗಿ ಠುಸ್ಸೆಂದಿತ್ತೇ ಹೊರತು ಯಾವುದೂ ಬರಕತ್ತಾಗಲಿಲ್ಲ. ಹಾಗಂತ ಶಂಕ್ರ ಮತ್ತು ಆತನ ಬಲಗೈ ಬಂಟ ಹಟ್ಟಿ ಮಂಜುರ ಪಡೆ ಕೈಕಟ್ಟಿ ಕೂರಲಿಲ್ಲ. ಅಂತಿಮವಾಗಿ ಮೈಸೂರು ಜೈಲಿನೊಳಗೇ ಸೀನನನ್ನು ಮುಗಿಸಿಬಿಡುವ ಮಾಸ್ಟರ್ ಪ್ಲಾನೊಂದಕ್ಕೆ ಶಂಕ್ರ ಆಯ್ದುಕೊಂಡಿದ್ದು ಟಿಬೆಟ್ ಬಾಲಾಜಿ ಎಂಬ ಮೈಸೂರಿನ ಪಾತಕಿಯನ್ನು.

ಮೈಸೂರು ಜೈಲೊಳಕ್ಕೆ ರಿವಾಲ್ವರ್ ಸಾಗಿಸಿದ್ದೂ ಆಯಿತು. ಸುಪಾರಿ ಪಡೆದ ಟಿಬೆಟ್ ಬಾಲಾಜಿ ಹೇಗೋ ಮೈಸೂರು ಜೈಲಲ್ಲಿದ್ದ ಸೀನನ ಮೇಲೆ ಅಟ್ಯಾಕ್ ಮಾಡಿದ. ಗುಂಡು ಫೈರ್ ಕೂಡ ಆಗಿತ್ತು. ಆದರೆ ಸೀನನ ಆಯುಸ್ಸು ಗಟ್ಟಿಯಾಗಿತ್ತು. ಹೇಗೋ ಬಚಾವಾಗಿ ಬಿಟ್ಟ. ಅಲ್ಲಿಗೆ ಮೂರ್ನಾಲ್ಕು ತಿಂಗಳಲ್ಲೇ ಸೀನ ಜೈಲಿಂದ ಹೊರಬಿದ್ದನಾದರೂ ಆತನ ಗುರಿ ಮಾತ್ರ ಬೇರೆಯೇ ಇತ್ತು. ಅದು 2009 ರ ಆಗಸ್ಟ್ 24 ರಂದು ನೆಲಮಂಗಲದ ಮೈಲನಹಳ್ಳಿ ಕ್ರಾಸಿನಲ್ಲಿ ಹ್ಯಾಡಾಳು ದೇವಿ ಮಗ ಹರ್ಷ ಮತ್ತು ಬಂಡೆ ಮಂಜು ಸೇರಿಕೊಂಡು ಲಾರಿ ಹಾಯಿಸಿ ಬೆಮೆಲ್ ಕೃಷ್ಣಪ್ಪನನ್ನು ಕೊಲ್ಲಲು ಮಾಡಿದ ಯತ್ನವನ್ನು ಪೂರ್ತಿಗೊಳಿಸುವುದು!

ಮೊದಲ ಕೊಲೆ ಯತ್ನ

ಆವತ್ತು ಚೆನ್ನಿಗಪ್ಪನ ಮನೆಯಿಂದ ವಾಪಸ್ಸು ಬಿನ್ನಮಂಗಲಕ್ಕೆ ಬರುತ್ತಿದ್ದ ಕೃಷ್ಣಪ್ಪನ ಕಾರಿನ ಮೇಲೆ ಇದೇ ರೀತಿ ಬಂಡೆ ಮಂಜ ಮತ್ತು ಹ್ಯಾಡಾಳು ದೇವಿ ಮಗ ಹರ್ಷ ಸೇರಿಕೊಂಡು ಭೀಕರವಾಗೇ ದಾಳಿಯಿಟ್ಟಿದ್ದರು. ಎರಡು ಲಾರಿಗಳಲ್ಲಿ ಒಂದೊಂದು ದಿಕ್ಕಿನಿಂದ ಬೆಮೆಲ್ ಕಾರನ್ನು ಅಡ್ಡಗಟ್ಟಿದ್ದರು. ಅದೃಷ್ಟವಶಾತ್ ಬೆಮೆಲ್ ಬಚಾವಾದರು. ಎದುರಾಬದುರಾ ಬಂದ ಲಾರಿಗಳೇ ಪರಸ್ಪರ ಡಿಕ್ಕಿ ಹೊಡೆದು ಹ್ಯಾಡಾಳು ದೇವಿ ಮಗ ಹರ್ಷ ಗಾಯಗೊಂಡು ಆಸ್ಪತ್ರೆ ಸೇರಿಕೊಂಡ. ಮುಗುಚಿ ಬಿದ್ದಿದ್ದ ಕೃಷ್ಣಪ್ಪನವರ ಕಾರನ್ನು ಸಮೀಪಿಸಿ ಇನ್ನೇನು ಕೃಷ್ಣಪ್ಪರನ್ನು ಕತ್ತರಿಸಬೇಕೆನ್ನುವಷ್ಟರಲ್ಲಿ ಜೊತೆಗಿದ್ದ ಗನ್‌ಮನ್ ಗುಂಡು ಹಾರಿಸಿ ದಾಳಿಗೆ ಬಂದಿದ್ದ ಹಂತಕನೊಬ್ಬನನ್ನು ಕೊಂದು ಹಾಕಿದ್ದ. ಅದು ಬೆಮೆಲ್ ಪಾಲಿಗೆ ಪುನರ್ಜನ್ಮವಾಗಿತ್ತು.

ಅಲ್ಲಿಗೆ ನೆಲಮಂಗಲದ ಇಡೀ ಪಾಪಿ ಸಂಕುಲವೇ ಇಬ್ಭಾಗವಾಗಿತ್ತು. ಚಿತ್ತನಗೆರೆ ಸೀನ, ಬಂಡೆ ಮಂಜ, ಹ್ಯಾಡಾಳು ದೇವಿ ಮಗ ಹರ್ಷರಿಗೆ ಅಡಕಮಾರನಹಳ್ಳಿ ಕೃಷ್ಣಪ್ಪ ಅರ್ಥಾತ್ ಮುಂಗಾರು ಮಳೆ ಕೃಷ್ಣಪ್ಪನೇ ಆಸರೆಯಾದರೆ, ಚಿತ್ತನಗೆರೆ ಶಂಕ್ರ, ಹಟ್ಟಿ ಮಂಜುವಿಗೆ ಬೆಮೆಲ್ ಕೃಷ್ಣಪ್ಪನ ಶ್ರೀರಕ್ಷೆ. ರಾಜಕೀಯವಾಗಿ ಮುಂಗಾರು ಮಳೆ ಕೃಷ್ಣಪ್ಪ ಮತ್ತು ಬೆಮೆಲ್ ಒಂದೇ ಪಕ್ಷವಾಗಿದ್ದರೂ ಗ್ಯಾಂಗ್‌ವಾರ್ ಜಿದ್ದಾಜಿದ್ದಿ ಮಾತ್ರ ಮುಂದುವರಿದೇ ಇತ್ತು. ಚಿತ್ತನಗೆರೆ ಶಂಕ್ರ ತನ್ನ ವಿರುದ್ಧ ನಡೆಸಿದ ಇಷ್ಟೆಲ್ಲಾ ಹತ್ಯಾಯತ್ನಗಳಿಗೆ ಫೈನಾನ್ಸ್ ಮಾಡಿದ್ದೇ ಬೆಮೆಲ್ ಎಂದು ಸೀನ ನಂಬಿಕೊಂಡಿದ್ದ. ನಿಜಕ್ಕೂ ಬೆಮೆಲ್ ಶಂಕ್ರನಿಗೆ ಹಣಕಾಸಿನ ನೆರವಾಗಿದ್ದರಾ ಇಲ್ಲವಾ ಎಂಬ ಬಗ್ಗೆ ಯಾರಲ್ಲೂ ನಿಖರತೆಯಿರಲಿಲ್ಲ. ಬಹುಶಃ ಶಂಕ್ರ ತನ್ನ ದುಷ್ಕೃತ್ಯಗಳಿಗೆ ಬೆಮೆಲ್ ಹೆಸರು ಬಳಸಿಕೊಂಡಿರಬೇಕು.

ಆದರೆ ಅಡಕಮಾರನಹಳ್ಳಿ ಕೃಷ್ಣಪ್ಪ ಮಾತ್ರ ಬಂಡೆ ಮಂಜನನ್ನೇ ನೆಚ್ಚಿಕೊಂಡ. ಇತ್ತ ಸೀನ ಮತ್ತು ಶಂಕ್ರನ ಪಡೆಗಳು ಪರಸ್ಪರ ರಕ್ತ ಹರಿಸಲು ಕತ್ತಿ ಮಸೆಯುತ್ತಿದ್ದರೆ ಅದಕ್ಕೆ ಪ್ರತಿಯಾಗಿ ಬೆಮೆಲ್ ಮತ್ತು ಮುಂಗಾರು ಮಳೆ ಕೃಷ್ಣಪ್ಪನವರಿಗೂ ಟಗ್‌ಆಫ್‌ವಾರ್ ಶುರುವಾಯಿತು. ಇಂಥದೊಂದು ಜಿದ್ದಾಜಿದ್ದಿಯ ಬೆಂಕಿಗೆ ತುಪ್ಪ ಸುರಿದದ್ದು ಯಲಹಂಕ ಶಾಸಕ ವಿಶ್ವನಾಥ್. ಮುಂಗಾರು ಮಳೆ ಕೃಷ್ಣಪ್ಪ ನೆಲಮಂಗಲ ಸುತ್ತಮುತ್ತ ಆಕ್ರಮಿಸಿದ್ದ ಸರಿಸುಮಾರು 69 ಎಕರೆ ಸರ್ಕಾರಿ ಭೂಮಿಯ ವಿರುದ್ಧ ತನಿಖೆಗೆ ಯಲಹಂಕ ವಿಶ್ವನಾಥ್ ಖುದ್ದು ಜಿಲ್ಲಾಧಿಕಾರಿಗೆ ದೂರು ಕೊಟ್ಟರು. ಮುಂಗಾರು ಮಳೆ ಕೃಷ್ಣಪ್ಪರ ಭೂಕಬಳಿಕೆ ವಿರುದ್ಧ ಲೋಕಾಯುಕ್ತಕ್ಕೆ ದೂರು ದಾಖಲಾಯಿತು.

ಎಷ್ಟೆಂದರೂ ಯಲಹಂಕ ಬಿಜೆಪಿ ಶಾಸಕ ವಿಶ್ವನಾಥ್ ಮತ್ತು ಬೆಮೆಲ್ ಕೃಷ್ಣಪ್ಪನವರ ಮಧ್ಯೆ ಆತ್ಮೀಯತೆ ಇತ್ತಾದ್ದರಿಂದ ತನ್ನ ವಿರುದ್ಧ ವಿಶ್ವನಾಥ್‌ರನ್ನು ಛೂಬಿಟ್ಟದ್ದೇ ಬೆಮೆಲ್ ಎಂದು ಮುಂಗಾರು ಮಳೆ ಕೃಷ್ಣಪ್ಪ ಭಾವಿಸಿಕೊಂಡ. ಇದೇ ಹೊತ್ತಿಗೆ ಬೆಮೆಲ್ ಮುಂಬರುವ ಚುನಾವಣೆಯ ದೃಷ್ಟಿಯಿಂದ ಪಕ್ಕದ ದಾಸರಹಳ್ಳಿ ಕ್ಷೇತ್ರಕ್ಕೆ ಕಾಲಿಟ್ಟ. ಹೇಗೂ ನೆಲಮಂಗಲ ಮೀಸಲು ಕ್ಷೇತ್ರವಾದ್ದರಿಂದ ಮುಂಬರುವ ಚುನಾವಣೆಯಲ್ಲಿ ದಾಸರಹಳ್ಳಿಗೆ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಹಾಲಿ ಬಿಜೆಪಿ ಶಾಸಕ ಮುನಿರಾಜುವನ್ನು ಸೋಲಿಸುವುದು ಬೆಮೆಲ್ ಉದ್ದೇಶವಾಗಿತ್ತು. ಪ್ರತಿನಿತ್ಯ ದಾಸರಹಳ್ಳಿ ಕ್ಷೇತ್ರದ ಸಮಸ್ಯೆಗೆ ತಲೆ ಕೆಡಿಸಿಕೊಂಡರು.









...ು ಶಾಸಕ ಮುನಿರಾಜು ವಿರುದ್ಧ ತಿರುಗಿ ಬದ್ದಿದ್ದಾರೋ ...ನ್ನೆಲ್ಲ ಜೊತೆ ಹಾಕಿಕೊಂಡು ಸುತ್ತತೊಡಗಿದರು. ಇವತ್ತಲ್ಲಾ ...ಗೆ ಬೆಮೆಲ್‌ರಿಂದ ಅಪಾಯ ಕಟ್ಟಿಟ್ಟ ಬುತ್ತಿ ಎಂಬುದು ...ಮುನಿರಾಜುಗೆ ಖಾತರಿಯಾಗುವುದಕ್ಕೂ ಭೂಕಬಳಿಕೆ ವಿರುದ್ಧ ...ಯುಕ್ತ ಕೋರ್ಟು ಮುನಿರಾಜುಗೆ ವಾರೆಂಟ್ ...ಸುವುದಕ್ಕೂ ಒಂದೇ ಆಗಿತ್ತು.

... ವಿರುದ್ಧ ಲೋಕಾಯುಕ್ತಕ್ಕೆ ದೂರು ಕೊಟ್ಟವರಿಗೆ ಬೆಮೆಲ್ ...ತ್ತಿದ್ದಾರೆಂದೇ ಶಾಸಕ ಮುನಿರಾಜು ಲೆಕ್ಕ ಹಾಕಿದ್ದು ಬೆಮೆಲ್ ...ಅಪಾಯವನ್ನು ಮತ್ತಷ್ಟು ಉಲ್ಬಣಿಸಿತ್ತು. ಇದರ ಮುನ್ಸೂಚನೆ ... ಬೆಮೆಲ್‌ಗೆ ಮೊದಲೇ ಸಿಕ್ಕಿತ್ತೇನೊ. ಯಾರೇ ಕೇಳಿದರೂ ...ನೆಲಮಂಗಲ ತೊರೆದು ದಾಸರಹಳ್ಳಿ ಕ್ಷೇತ್ರಕ್ಕೆ ವಲಸೆ ...ತ್ತೇನೆ, ಹಾಗೊಮ್ಮೆ ಅಲ್ಲಿ ಸೋತು ಬಿಟ್ಟರೆ ದೇಶವನ್ನೇ ... ಆಸ್ಟ್ರೇಲಿಯಾ ಸೇರಿಕೊಂಡು ಅಲ್ಲಿ ತೋಟ, ಜಮೀನು ...ಾಂಡಿರುತ್ತೇನೆಂದು ಹೇಳಿಕೊಳ್ಳುತ್ತಿದ್ದರು.

ರಾಜಿ ನಾಟಕ

...ಬಲ್‌ರ ಇಂಥ ಸಂದಿಗ್ಧವನ್ನೇ ಚೆತ್ತನಗೆರೆ ಸೀನ ಲಾಭ ...ಾಂಡ. ಒಂದೆಡೆ ಮುಂಗಾರು ಮಳೆ ಕೃಷ್ಣಪ್ಪನ ಸಖ್ಯ ...ವೆಡೆ ದಾಸರಹಳ್ಳಿ ಶಾಸಕ ಮುನಿರಾಜು ಜೊತೆ ಬಾಂಧವ್ಯ ...ಟ್ಟ. ಇಲ್ಲಿಗೆ ವರ್ಷದ ಹಿಂದೆ ಜಾಮೀನುಗಿಟ್ಟಿಸಿ ಜೈಲಿಂದ ...ದ್ದಾಗಲೇ ಚೆತ್ತನಗೆರೆ ಸೀನ ಬೇರೆಯದೇ ಷಡ್ಯಂತ್ರವೊಂದಕ್ಕೆ ...ದ್ದ. "ನನಗಿನ್ನು ರೌಡಿಜಂ ಸಾಕು. ಶಂಕ್ರ ಎಷ್ಟೇ ಆಂದ್ರೂ ...ು, ಆಗಿದ್ದಾಯ್ತು, ನಾನಿನ್ನು ರಾಜಕಾರಣಿಯಾಗಿ ಬೆಳೆಯಬೇಕೆ ... ಪಡ್ಡೆ ಹುಡುಗರಂತೆ ಹೊಡೆದಾಟ ಬಡಿದಾಟ ...ಾಂಡಿದ್ದರೆ ಆದರಿಂದ ನನಗೇ ಲುಕ್ಸಾನು" ಎಂದೆಲ್ಲ ಸೀನ ...ುತ್ತಿದ್ದ.

...ಡೆ ಮಂಜನ ಮನೆಯಿದ್ದ ಗಣೇಶನ ಗುಡಿ ಏರಿಯಾದಲ್ಲೇ ...ಂದನ್ನು ಹಿಡಿದು ಮನೆ ಸುತ್ತ ಸಿ.ಸಿ. ಟೀವಿಗಳನ್ನು ಅಳವಡಿಸಿದ್ದ ... ಹುಡುಗರನ್ನು ಅಂಗರಕ್ಷಣೆಗೆ ನೇಮಿಸಿಕೊಂಡ. ಸೀನನ ಈ ಗೆಟಪ್ಪನ್ನು ನೋಡಿದ್ದೇ ಹುಷಾರಾದ ಗ್ರಾಮಾಂತರ ಎಸ್ಪಿ ಪ್ರಕಾಶ್ ಆತನ ಅಡ್ಡೆಯ ಮೇಲೆ ದಾಳಿಯಿಟ್ಟರು. ಅದರ ಮರುದಿನವೇ ಸಿಸಿಬಿಯ ಎಸಿಪಿ ಖಾದಿಮನಿ ತಂಡ ಸೀನನ ಅಡ್ಡೆಗೆ ದಾಳಿಯಿಟ್ಟು ಹತ್ತಾರು ಹುಡುಗರನ್ನು ಎಳೆದೊಯ್ದಿತು. ಅದಕ್ಕಿದ್ದ ಕಾರಣ ಸೀನನಿಗೂ ಪರಪ್ಪನ ಅಗ್ರಹಾರ ಜೈಲಿನ ಸಜಾ ಪಾತಕಿ ಆಟೋ ರಾಮ ಉರ್ಫ್ ದೋಬಿಘಾಟ್ ರಾಮನಿಗೂ ಇದ್ದ ಕ್ರಿಮಿನಲ್ ಸಂಬಂಧ.

ಯಾವತ್ತು ಸಿಸಿಬಿ ಪೊಲೀಸರು ನೆಲಮಂಗಲಕ್ಕೆ ದಾಳಿಯಿಟ್ಟರೋ ಹುಷಾರಾದ ಸೀನ ಏಕಾಏಕಿ ನಾಪತ್ತೆಯಾದ. ಅದೇ ಹೊತ್ತಿಗೆ ಬಂಡೆ ಮಂಜ ಮತ್ತು ಹರ್ಷ ಕೂಡ ಭೂಗತರಾದರು. ಬೆಂಗಳೂರು ಸೇರಿದಂತೆ ನೆಲಮಂಗಲ ಪೊಲೀಸರು ಹುಡುಹುಡುಕಿ ಸುಸ್ತಾದರೆ ಹೊರತು ಸೀನ, ಬಂಡೆ ಮಂಜ, ಹರ್ಷ ಯಾರೂ ಪತ್ತೆಯಿಲ್ಲ. ತನಗೆ ಚೆತ್ತನಗೆರೆ ಶಂಕ್ರನ ಪಡೆಯಿಂದ ಪ್ರಾಣಾಪಾಯವಿರುವುದರಿಂದ ಭೀತಿಗೆ ಬಿದ್ದೇ ಇವರೆಲ್ಲ ನಾಪತ್ತೆಯಾಗಿದ್ದಾರೆಂದು ಪೊಲೀಸರು ಭಾವಿಸಿ ಸೀನನನ್ನು ಹುಡುಕುವುದನ್ನೇ ಬಿಟ್ಟುಬಿಟ್ಟರು.

ಹೀಗೆ ಸೀನ ಭೂಗತನಾಗಿ ಒಂದು ವರ್ಷವೇ ಸಮೀಪಿಸಿತ್ತು. ಇವರ್‍ಯಾರೂ ಪತ್ತೆಯಿಲ್ಲವಾದ್ದರಿಂದ ತನಗೆ ಆ ಮಟ್ಟದ ಆಪತ್ತಿಲ್ಲ ಎಂದೇ ಬೆಮೆಲ್ ಭಾವಿಸಿಕೊಂಡರು. ಅದಕ್ಕೆ ತಕ್ಕಂತೆ ಇಲ್ಲಿಗೆ ತಿಂಗಳ ಹಿಂದೆ ಜೆಡಿಎಸ್ ಅಧಿಪತಿ ಕುಮಾರಸ್ವಾಮಿ ಬೆಮೆಲ್ ಕರೆಸಿಕೊಂಡು ಎರಡೂ ಗ್ಯಾಂಗ್‌ಗಳ ಮಧ್ಯೆ ರಾಜಿ ಮಾಡಿಸುತ್ತೇನೆಂದೂ, ಮುಂಬರುವ ಚುನಾವಣೆಯಲ್ಲಿ ದಾಸರಹಳ್ಳಿಗೆ ನೀವೇ ನಿಲ್ಲಬೇಕೆಂದೂ ಬೆಮೆಲ್‌ರನ್ನು ಸಂತೈಸಿದ್ದರು. ನೆಲಮಂಗಲಕ್ಕೆ ನೆಮ್ಮದಿ ಬರೋದಾದ್ರೆ ನಾನೂ ರಾಜಿಯಾಗ್ತೀನಿ ಎಂದೇ ಚೆತ್ತನಗೆರೆ ಸೀನ ಬೆಮೆಲ್‌ರನ್ನು ನಂಬಿಸಿಬಿಟ್ಟ. (ಬಾಕ್ಸ್ ನೋಡಿ)

ರಾಜಿ ಮುಂಗಾರು ಮಳೆ ಕೃಷ್ಣಪ್ಪನವರ ಮೂಲಕ ಕುದುರಿತ್ತೆ? ಅಥವಾ ಸೀನ ಮಾತು ಕೊಟ್ಟಿದ್ದಾನೆ ಎಂದು ಮುಂಗಾರು ಕೃಷ್ಣಪ್ಪ ಹೇಳಿದ್ದನ್ನು ಬೆಮೆಲ್ ನಂಬಿಕೊಂಡರೋ ಗೊತ್ತಿಲ್ಲ. ಅಂತೂ ತಾನು ರಾಜಿಯಾಗಲು ಸಿದ್ಧ, ಬೆಮೆಲ್ ಬಗ್ಗೆ ನನಗೇನೂ ಸಿಟ್ಟಿಲ್ಲ ಎಂದು ಸೀನ ಕಳುಹಿಸಿದ ಕಪಟ ಸಂದೇಶವನ್ನೇ ಬೆಮೆಲ್ ನಂಬಿಬಿಟ್ಟರು. ಸರ್ಕಾರ ಕಲ್ಪಿಸಿದ್ದ ಒಬ್ಬ ಸಶಸ್ತ್ರ ಪೊಲೀಸ್ ಅಲ್ಲದೆ ಖಾಸಗಿಯಾಗಿ ನೇಮಿಸಿಕೊಂಡಿದ್ದ ಇನ್ನೂ ನಾಲ್ವರು ಗನ್‌ಮನ್‌ಗಳನ್ನು ವಾಪಸ್ಸು ಕಳಿಸಿಬಿಟ್ಟರು. ಹಿಂದಿನಂತೆ ವಿಪರೀತ ಅಲರ್ಟ್ ಆಗಿರುವುದನ್ನು ಬಿಟ್ಟು ಶೇಷಾದ್ರಿಪುರದ ನಟರಾಜ್ ಥೇಟರ್ ಎದುರಿನ ಸಾಮ್ರಾಟ್ ಹೋಟೆಲನ್ನೇ ತಮ್ಮ ಅಡ್ಡೆಯನ್ನಾಗಿ ಮಾಡಿಕೊಂಡರು.

ರಣಪಾತಕಿ ಸೀನನಿಗೆ ಇಷ್ಟೇ ಸಾಕಿತ್ತು. ರಾಜಿ ನಟಿಸಿ ಯಾಮಾರಿಸಿ ಕೊಲ್ಲುವುದೇ ಆತನ ಯಮತಂತ್ರವಾಗಿತ್ತು. ಅದು ಅಂತಿಮವಾಗಿ ಜುಲೈ 25 ರ ಬುಧವಾರದ ರಾತ್ರಿ ಅರಶಿನಕುಂಟೆಯ ಹತ್ಯಾಕಾಂಡದ ಮೂಲಕ ಪರಿಸಮಾಪ್ತಿಯಾಗಿತ್ತು.

● ರಾ.ಸೋಮನಾಥ್

...ಮೆಲ್ ಶವಕ್ಕೆ ಒದ್ದವನೇ ಬಂಡೆ ಮಂಜ!

...ಾಳ ಬುಧವಾರ ಮತ್ತು ಹಂತಕರ ತಯಾರಿ

...ಹತ್ಯಾಕಾಂಡದ ಭೀಕರ, ದಾಳಿಯ ಭರ್ಬರ ಅದೆಷ್ಟು ಅಮಾನುಷವಾಗಿತ್ತೆಂದರೆ ಏಕಾಏಕಿ ನುಗ್ಗಿದ ಕ್ಯಾಂಟರ್ ಗಾಡಿಯೊಂದು ...ಗಿ ಬೆಮೆಲ್ ಕೂತಿದ್ದ ಪಜೆರೋ ಗಾಡಿಗೆ ಗುದ್ದಿತ್ತು. ಕಣ್ಣು ಮಿಟುಕಿಸುವುದರ ಒಳಗೇ ಐದು ಕಾರುಗಳು ಸುತ್ತುವರಿದವು. ...ಇಳಿದ ಮಂಕಿ ಕ್ಯಾಪ್‌ಧಾರಿಗಳ ಕೈಯಲ್ಲಿ ಉದ್ದುದ್ದ ರಾಡು, ಲಾಂಗುಗಳಿದ್ದವು. ಅದು ಸರಿಸುಮಾರು ನಲವತ್ತು ಮಂದಿಯಿದ್ದ ... ಪಡೆ. ಕೂಲಿಗಳು ಹ್ಯಾಲೋ ಬ್ರಿಕ್ಸ್‌ಗಳನ್ನು ಸಾಗಿಸುತ್ತಿದ್ದಂತೆ ರೂಪಿಸಿದ್ದ ಆ ಕ್ಯಾಂಟರ್ ಗಾಡಿ ಬಂದು ಗುದ್ದುತ್ತಿದ್ದಂತೆ ಸುತ್ತುವರಿದ ... ಪೈಕಿ ಮುನ್ನುಗ್ಗಿದ್ದ ಒಂದು ಇನ್ನೋವಾ ಗಾಡಿಯಿಂದ ಇಳಿದ ಇಬ್ಬರ ಕೈಯಲ್ಲಿ ಕಂಟ್ರಿ ಮೇಡ್ ಪಿಸ್ತೂಲುಗಳಿದ್ದವು. ಬಂದು ... ಬೆಮೆಲ್ ಕೂತಿದ್ದ ಪಜೆರೋ ಗಾಡಿಯ ಮೇಲೆ ಗುಂಡಿನ ಮಳೆಗರೆದರು. ಆ ಪೈಕಿ ಎರಡು ಗುಂಡು ನೇರವಾಗಿ ಬೆಮೆಲ್‌ರ ...ಹೊಕ್ಕಿತ್ತು.

...ಾಗುತ್ತಿದೆ ಎಂದು ಗೊತ್ತಾಗುವ ಮೊದಲೇ ಸುತ್ತುವರಿದ ಹಂತಕರು ಕಾರಿನ ಡ್ರೈವರ್, ಜೊತೆಗಿದ್ದ ಅಂಗರಕ್ಷಕರ ಮೇಲೆ ...-ರಾಡುಗಳಿಂದ ಪ್ರಹಾರ ಮಾಡತೊಡಗಿದರು. ಬೆಮೆಲ್ ಜೊತೆಗಿದ್ದ ಗನ್‌ಮನ್ ತನ್ನ ರೈಫಲ್‌ನಿಂದ ಗುಂಡು ಹಾರಿಸುತ್ತಲೇ ಇದ್ದ. ...ವ ಗುಂಡಿಗೆ ಸ್ಥಳದಲ್ಲೇ ಇಬ್ಬರು ಕುಸಿದು ಬಿದ್ದರು. ಆ ಪೈಕಿ ಒಬ್ಬ ಕುಣಿಗಲ್ ಸಮೀಪದ ಕೆಂಪಲಿಂಗನಹಳ್ಳಿಯ ದೇವ. ...ನ್ನನ್ನು ಹಂತಕರೇ ಕಾರಿಗೆ ಹಾಕಿಕೊಂಡು ಹೋದರು.

...ವಕ್ಕೂ ಮುನ್ನ ಗುಂಡು ಬಿದ್ದು ಒದ್ದಾಡುತ್ತಿದ್ದ ಬೆಮೆಲ್‌ರನ್ನು ಎಳೆದುಕೊಂಡಿದ್ದೇ ನಾಲ್ವರು ಹಂತಕರು ಎಲ್ಲೆಂದರಲ್ಲಿ ಕತ್ತರಿಸಿಬಿಟ್ಟರು. ... ಸ್ಥಳದಲ್ಲೇ ಕೃಷ್ಣಪ್ಪನವರ ಪ್ರಾಣಹೋಗಿದೆ. ಬಂದಿದ್ದ ಕಿರಾತಕರ ಪಡೆಯಲ್ಲಿದ್ದ ಮಂಕಿ ಕ್ಯಾಪ್‌ದಾರಿ ನಾಯಕನೊಬ್ಬ ನಿಧಾನವಾಗಿ ... ತನ್ನ ಕಾಲಿನಿಂದ ಒದ್ದು ಬೆಮೆಲ್ ಸತ್ತಿದ್ದನ್ನು ಖಚಿತಪಡಿಸಿಕೊಂಡ. ಆತ ಚೆತ್ತನಗೆರೆ ಸೀನನೋ ಅಥವಾ ಹ್ಯಾಡಾಳು ದೇವಿಯ ...ಹರ್ಷನೋ? ಪ್ರತ್ಯಕ್ಷದರ್ಶಿಗಳ ಹೇಳಿಕೆ ಪ್ರಕಾರ ಆತ ಬಂಡೆ ಮಂಜ!


...ಸಲ ಹತ್ತೇ ನಿಮಿಷದಲ್ಲಿ ಹತ್ಯಾಕಾಂಡ ಮುಗಿದಿತ್ತು. ಗುಂಡೇಟು ತಿಂದು ಕುಸಿದುಬಿದ್ದವರ ಪೈಕಿ ಓರ್ವನನ್ನು ಹಂತಕರ ತಂಡ ...ಯ್ದರ ದೇವ ಎಂಬಾತನ ಹೆಣ ರಸ್ತೆಯಲ್ಲೇ ಬಿದ್ದಿತ್ತು. ನೆಲಮಂಗಲ-ತುಮಕೂರು ರಾಷ್ಟ್ರೀಯ ಹೆದ್ದಾರಿ ಕ್ಷಣಮಾತ್ರದಲ್ಲಿ ಜಾಮ್ ...ಯಿತು. ಬೆಮೆಲ್ ಆಸ್ಪತ್ರೆಗೆ ಒಯ್ಯುವುದಕ್ಕೂ ಮೊದಲೇ ಹೆಣವಾಗಿದ್ದರು. ಅವರ ಗನ್‌ಮನ್, ಡ್ರೈವರ್ ಇಬ್ಬರಿಗೂ ಮಾರಕ ...ಬಿದ್ದಿತ್ತು.

...ದು ಜುಲೈ 25 ರ ಬುಧವಾರ ರಾತ್ರಿ 7.45 ರಿಂದ 8 ರ ಮಧ್ಯೆ ನಡೆದ ಅರಿಶಿನಕುಂಟೆಯ ಹೆದ್ದಾರಿ ರಕ್ತಪಾತದ ಭೀಕರತೆ. ...ಸ್ ಮೂಲಗಳ ಪ್ರಕಾರ ಇಡೀ ಹಂತಕ ಪಡೆಯ ನೇತೃತ್ವ ವಹಿಸಿದ್ದು ಬಂಡೆ ಮಂಜ! ...ಥದೊಂದು ರಣಬೇಟೆಗಾಗಿ ಆತ ನಡೆಸಿದ ತಯಾರಿ, ಪಿತೂರಿ ಅಷ್ಟಿಷ್ಟಲ್ಲ. ನೆಲಮಂಗಲದ ಸುತ್ತಮುತ್ತ ಹೆದ್ದಾರಿಗುಂಟ ಇದ್ದ ...ಪೋಸ್ಟ್‌ಗಳಲ್ಲಿ ತನ್ನ ಕಡೆಯ ಹುಡುಗರನ್ನೇ ಕೆಲಸಕ್ಕೆ ಸೇರಿಸಿದ್ದ. ಪೀಣ್ಯ-ದಾಸರಹಳ್ಳಿ ದಾಟಿದ ನಂತರ ಪಾರ್ಲೆ ಜಿ ಫ್ಯಾಕ್ಟರಿ ...ರುವ ಚೆಕ್‌ಪೋಸ್ಟ್, ಮಾದಾವರದ ಬಳಿಯಿರುವ ಇನ್ನೊಂದು ಚೆಕ್‌ಪೋಸ್ಟ್ ಮತ್ತು ಅರಿಶಿನಕುಂಟೆಯ ಬಳಿಯಿರುವ ಮತ್ತೊಂದು ...ಸ್ ಈ ಮೂರು ಚೆಕ್‌ಪೋಸ್ಟುಗಳಲ್ಲಿ ಮಂಜನ ಹುಡುಗರೇ ಟೋಲ್ ಕಲೆಕ್ಟರುಗಳಾಗಿ ಕೆಲಸಕ್ಕೆ ಸೇರಿಕೊಂಡಿದ್ದರು. ...ಸಕ್ಕೆ ಕೆಲಸ ಜೊತೆಗೆ ಸಂಬಳ. ನೆಲಮಂಗಲಕ್ಕೆ ಯಾರು ಬರುತ್ತಾರೆ, ಹೋಗುತ್ತಾರೆ ಎಂಬ ಮಾಹಿತಿಯನ್ನು ತಮ್ಮ ಬಳಿಯಿದ್ದ ...ನ್ ಮೂಲಕ ಸೀನ ಮತ್ತು ಮಂಜರಿಗೆ ರವಾನಿಸುತ್ತಿದ್ದರು. ಚೆಕ್‌ಪೋಸ್ಟ್‌ಗಳಲ್ಲಿ ಯಾರೇ ಗಲಾಟೆ ಮಾಡಿದರೂ ಇದೇ ಗ್ಯಾಂಗ್ ... ಬಡಿಯುತ್ತಿತ್ತು. ಬೆಮೆಲ್ ನೆಲಮಂಗಲದಿಂದ ಎಷ್ಟು ಹೊತ್ತಿಗೆ ಯಾವ ಚೆಕ್‌ಪೋಸ್ಟ್ ದಾಟಿದರು, ವಾಪಸ್ಸು ಬೆಂಗಳೂರಿನಿಂದ ...ಹೊತ್ತಿಗೆ ಯಾವ ಚೆಕ್‌ಪೋಸ್ಟ್‌ಗೆ ಎಂಟ್ರಿ ಕೊಟ್ಟರು ಇತ್ಯಾದಿ ಪ್ರತಿಯೊಂದು ಮಾಹಿತಿಯೂ ಸೀನನ ಪಡೆಗೆ ರವಾನೆಯಾಗುತ್ತಿತ್ತು. ...ಒಂದು ನೆಟ್‌ವರ್ಕ್ ಮೂಲಕವೇ ಸೀನ ಬೆಂಗಳೂರಿನ ಶೇಷಾದ್ರಿಪುರದ ತನಕ ಬೆಮೆಲ್‌ರನ್ನು ಹಿಂಬಾಲಿಸುತ್ತಿದ್ದ. ...ಗೆ 8 ದಿನದ ಹಿಂದೆ ಚೆತ್ತನಗೆರೆ ಶಂಕ್ರನನ್ನು ಕೋರ್ಟಿಗೆ ಕರೆತಂದಾಗ ಆತನನ್ನು ಮಾರ್ಗ ಮಧ್ಯೆ ಮುಗಿಸಲೆಂದೇ ಸೀನ ಇಂಥ ... ಸಜ್ಜುಗೊಳಿಸಿದ್ದನಂತೆ. ಪೊಲೀಸರ ಬೆಂಗಾವಲಲ್ಲಿ ಬರುವ ಶಂಕ್ರನನ್ನು ಪೊಲೀಸ್ ಬಂದೂಕನ್ನೂ ಲೆಕ್ಕಿಸದೆ ಕೊಲ್ಲುವುದು ಸೀನನ ...ನವಾಗಿತ್ತು, ಅದೃಷ್ಟವಶಾತ್ ಶಂಕ್ರ ಬಚಾವಾದ. ಆದರೆ ಹತ್ಯಾಕಾಂಡಕ್ಕೊಂದು ಮಾಡಿಕೊಂಡ ಸಿದ್ಧತೆಯಿತ್ತಲ್ಲ; ಅದನ್ನೇ ಬೆಮೆಲ್ ...ಬಳಸಿಕೊಳ್ಳಲಾಯ್ತು, ಶಂಕ್ರ ಸಿಕ್ಕದೆ ಅವನನ್ನು ಮುಗಿಸುವುದು ಇಲ್ಲವಾದರೆ ಬೆಮೆಲ್‌ರನ್ನು ಮುಗಿಸುವ ಸಿದ್ಧತೆ ಮಾಡಿಕೊಂಡೇ ಸೀನ ...ಪಡಿದ್ದ!

ಸಿಎಂ ಅದಲು-ಬದಲು

ಬಿಜೆಪಿ ಭಂಡಾಟದಿಂದ ಬೊಕ್ಕಸಕ್ಕೆ


ಕೋಟಿ-ಕೋಟಿ ದಂಡ!!



ಬಿಜೆಪಿ ಭಂಡರ ಅನೈತಿಕ ರಾಜಕಾರಣದ ತೆವಲಿಗೆ ಕಳೆದ ನಾಲ್ಕು ವರ್ಷದಲ್ಲಿ ರಾಜ್ಯಕ್ಕೆ ಆಗಿರುವ ಹಾನಿ ಹೇಳತೀರದು! ತಾವು ಮಹಾತ್ಮ, ಮಹಾನ್ ದೇಶಭಕ್ತರು-ಘೋರ ಪ್ರಾಮಾಣಿಕರು ಎಂದು ಹುಸಿ ಪೋಸು ಕೊಡುವ ಈ ಸಂಘಪರಿವಾರದ ಸೋಗಲಾಡಿಗಳು ಕೋಟಿ-ಕೋಟಿ ಲೆಕ್ಕದಲ್ಲೇ ಸರ್ಕಾರಿ ಬೊಕ್ಕಸಕ್ಕೆ ಕನ್ನಹಾಕಿದ್ದಾರೆ!! ಬಿಜೆಪಿ ಬೇವರ್ಸಿಗಳ ಮುಖ್ಯಮಂತ್ರಿ, ಮಂತ್ರಿಯಾಗುವ ತೆವಲಿಗೆ ಸರ್ಕಾರಿ ಮತ್ತು ಸಾರ್ವಜನಿಕ ಆಸ್ತಿ-ಪಾಸ್ತಿಗೂ ದೊಡ್ಡ ಹಾನಿಯಾಗಿದೆ; ದೊಂಬಿ-ಗಲಾಟೆ-ಬಂದ್ ಭಾನ್ಗಡಿಗಳು ನಡೆದುಹೋಗಿವೆ.

ಪಾರ್ಟಿ ಹೈಕಮಾಂಡ್ ಅಥವಾ ಆರೆಸ್ಸೆಸ್ ರಿಂಗ್‌ಮಾಸ್ಟರ್‌ಗಳ ಚಿತ್ತ ಕಲಕಲು ಬಿಜೆಪಿಯ ಮುಖ್ಯಮಂತ್ರಿ-ಮಂತ್ರಿ ಆಕಾಂಕ್ಷಿಗಳು ಊರೂರಿಗೆ ಬೆಂಕಿ ಹಾಕಿದ್ದೂ ಇದೆ; ಅಮಾಯಕ ಅನುಯಾಯಿಗಳ ಛೂಬಿಟ್ಟು ಸರ್ಕಾರಿ ಬಸ್ಸಿಗೆ ಕಿಚ್ಚು ಹಚ್ಚಿದ್ದೂ ಇದೆ. ಸರ್ಕಾರಿ-ಸಾರ್ವಜನಿಕ ಆಸ್ತಿಪಾಸ್ತಿಗೆ ಹಾನಿ ಮಾಡಿ ಸಮಾಜದ ನೆಮ್ಮದಿ ಕೊಡಿಸಿದ್ದೂ ಒಂದೆರಡು ಸಲವಲ್ಲ. ಇಂಥ ದಿವಾಳಿಕೋರ ರಾಜಕಾರಣ ಮೊದಲ್ಗೊಂಡಿದ್ದೇ ಈಗಿನ ಸಿಎಂ ಜಗದೀಶ್ ಶೆಟ್ಟರ್‌ನನ್ನು ಯಡ್ಡಿ ಮಂತ್ರಿ ಮಾಡದೆ ಸ್ಪೀಕರ್ ಕುರ್ಚಿಗೆ ದಬ್ಬಿದ್ದಾಗ. ಹತಾಶ ಶೆಟ್ಟರ್ ಆಗ ಹುಬ್ಬಳ್ಳಿ-ಧಾರವಾಡಕ್ಕೆ ಬೆಂಕಿಯೇ ಹಾಕಿಸಿದ್ದರು. ಆನಂತರ ಬೆಳ್ಳುಬ್ಬಿಯಿಂದ ಶಿವನಗೌಡ ನಾಯಕನ ತನಕದ ಹಲವು ಹರಾಮಿಗಳು ಮಂತ್ರಿಗಿರಿಗಾಗಿ ಜನಸಾಮಾನ್ಯರಿಗೆ ಹಿಂಸೆ ಕೊಟ್ಟು ಸರ್ಕಾರಕ್ಕೆ ಹಾನಿ ಮಾಡಿ ಸೈತಾನ್ ಶಕ್ತಿ ತೋರಿಸಿಕೊಂಡಿದ್ದರು.

ಈಗ ಬರದ ಬಗ್ಗೆ ಮೊಸಳೆ ಕಣ್ಣೀರು ಸುರಿಸುತ್ತಿರುವ ಯಡ್ಡಿ ಮಹಾತ್ಮನಂತೂ ಸಿಎಂ ಆಗಿದ್ದಾಗ ತನ್ನ ಖಯಾಲಿಗೆ 42 ಕೋಟಿಗಿಂತ ಜಾಸ್ತಿ ಹಣ ಪೋಲು ಮಾಡಿದ್ದಾರೆ. ತನ್ನ ಅಸ್ತಿತ್ವಕ್ಕೆ ಭಿನ್ನಮತೀಯರ ಉಪಟಳದಿಂದ ಗಂಡಾಂತರ ಬಂದಾಗೆಲ್ಲ ಆರೆಸ್ಸೆಸ್ ಸರದಾರರ-ಬಿಜೆಪಿ ಮುಖಂಡರಾದ ಗಡ್ಕರಿ-ವೆಂಕಯ್ಯ ನಾಯ್ಡು-ಜೇಟ್ಲಿಯಂಥವರ ಕಾಲಿಗೆರಗಲು ಯಡ್ಡಿ ವಿಮಾನವೇ ತಗೊಂಡು ದಿಲ್ಲಿ-ನಾಗಪುರಕ್ಕೆ ಹಾರಿದ್ದಿದೆ. ಮಠ-ಮಂದಿರ-ಸ್ವಕಾರ್ಯ-ಸ್ವಾಮಿಕಾರ್ಯಕ್ಕೆ ಅಡಿಗಡಿಗೆ





ಈ ಅಡ್ನಾಡಿ ನಾಯಕ ಕಾಪ್ಟರ್‌ನಲ್ಲೇ ಬೇಕು-ಬೇಕಾದಲ್ಲಿ ಮನಸೋಇಚ್ಛೆ ಹಾರಾಡಿದ್ದಾರೆ.

ಬಿಜೆಪಿಗಳ ಬುರ್ನಾಸ್ ಬೀದಿಕಾಳಗದಿಂದ ಸಿಎಂ ಮೂರು ಬಾರಿ ಬದಲಾದರಲ್ಲವಾ? ಆಗೆಲ್ಲ ಸರ್ಕಾರಿ ಜಾಹಿರಾತು ಹೋರ್ಡಿಂಗ್ಸ್ ಮತ್ತು ಸರ್ಕಾರಿ ಕಡತ-ಪುಸ್ತಕ-ಕರಪತ್ರ-ಯೋಜನಾ ವಿವರಗಳಂಥ ಪ್ರಚಾರ ಸಾಮಗ್ರಿಗಳ ಬದಲಾವಣೆಗೆ ಬರೋಬ್ಬರಿ ಐದೈದು ಕೋಟಿ ... ಖೋತಾ ಆಗಿದೆ! ಬಿಜೆಪಿಯ ಜನದ್ರೋಹಿಗಳು ಸಿಎಂಗಳ ಅಥವಾ ಮಂತ್ರಿಗಳನ್ನು ಬದಲಿಸಿದಷ್ಟು ಸಲೀಸಾಗಿ ಈ ಹೋರ್ಡಿಂಗ್ಸ್, ಪ್ರಚಾರ ಸಾಮಗ್ರಿಗಳ ಮೇಲಿನ ಸಿಎಂ-ಮತ್ತಿತರ ಮಂತ್ರಿಗಳ ಜಾತಕ, ಫೋಟೋ, ಯೋಜನಾ ವಿವರ ತಿದ್ದುಪಡಿ ಮಾಡಿ ಪ್ರಿಂಟ್ ಮಾಡುವ "ಕರ್ಮ" ಮಾಡಲಾಗದು. ಇದಕ್ಕೆ ಟೆಂಡರ್ ಕರೆಯಬೇಕು; ಬೊಕ್ಕಸದ ಹಣ ಕೋಟಿ-ಕೋಟಿ ಮೊಗೆಮೊಗೆದು ಕೊಡಬೇಕು; ಸರ್ಕಾರಿ ಯಂತ್ರ ಈ ವ್ಯರ್ಥ ಕಾರ್ಯಕ್ಕಾಗಿ ಬಳಸಬೇಕು. ಯಾವ ಆ್ಯಂಗಲ್ಲಿನಿಂದ ನೋಡಿದರೂ ಬಿಜೆಪಿ ಸರ್ಕಾರದ ಅದಲು-ಬದಲಿಂದ ಹಾನಿಯೇ ಹಾನಿ!!

ಜನರಿಗೆ ಹೊರೆ-ಕಿರಿಕಿರಿಯಾಗಿರುವ ಬಿಜೆಪಿ ಸರ್ಕಾರ ರಾಜ್ಯಾದ್ಯಂತ ಸುಮಾರು 1,721 ಜಾಹೀರಾತು ಹೋರ್ಡಿಂಗ್ಸ್ ನಿಲ್ಲಿಸಿದೆ. ಹಳ್ಳಿ-ಹಳ್ಳಿಗಳ ಗಲ್ಲಿ-ಗಟಾರದಲ್ಲೆಲ್ಲ ಹಾಕಲಾಗಿರುವ ಜಾಹೀರಾತು ಹೋರ್ಡಿಂಗ್ಸ್ ನಿಲ್ಲಿಸಿದೆ. ಸಿಎಂ, ಮತ್ತಿತರ ಮಂತ್ರಿಗಳ ಮುಖಾರವಿಂದ ಇರುವ ಈ ಜಾಹೀರಾತು ಫಲಕಗಳು ಬಿಜೆಪಿ ಸರ್ಕಾರದ ಹುಸಿ ಸಾಹಸ-ಸಾಧನೆ-ಬೋಗಸ್ ಯೋಜನೆಗಳ ಬಡಿವಾರ ಬಿತ್ತರಿಸುವಂಥವುಗಳು. ಹಳೆಯ ಸಿಎಂ-ಮಂತ್ರಿಗಳ ಭಾವಚಿತ್ರವಿರುವ ಹೋರ್ಡಿಂಗ್ಸ್ ಬದಲಿಸಿ ಹೊಸ ಸಿಎಂ ಫೋಟೋ ಹಾಕಿಸುವ ಒಣಗತ್ತಿನ ಕೈಂಕರ್ಯಕ್ಕೆ 1.25 ಕೋಟಿ ಬೇಕು; 3.25 ಕೋಟಿ ಪಾಂಪ್ಲೆಟ್, ಕಡತ, ಅಂಕಿ-ಅಂಶ-ಯೋಜನೆಗಳ ವಿವರದ ಬೋಗಸ್ ಪುಸ್ತಕದಂಥ ಜಾಹೀರಾತು ಜಗಜ್ಜಾಹೀರಿಗೆ ಬೇಕು.

ಯಡ್ಡಿ ಹೋಗಿ ಡಿವಿ-ಬಂದಾಗ ಪ್ರಚಾರದ ಡುಂ....! ಡುಂ.....!! ಬದಲಾಗಿತ್ತು, ಈಗ ಮತ್ತೆ ಬರೀ ಹನ್ನೊಂದೇ ತಿಂಗಳಲ್ಲಿ ಜಾಹೀರಾತು ಫಲಕಗಳಲ್ಲಿ ಡಿವಿ ಬದಲಿಗೆ ಶೆಟ್ಟರ್ ಸಾಹೇಬರ "ನಗುಮುಖ" ಹಾಕಬೇಕಾಗಿದೆ. ಇದರಿಂದ ನಿಜಕ್ಕೂ ಜನರಿಗೇನೂ ಪ್ರಯೋಜನವಿಲ್ಲ, ಆದರೆ ... ಕೊಳಕು ಕಸರತ್ತು ಮಾಡಿ ಮುಖ್ಯಮಂತ್ರಿ-ಮಂತ್ರಿಯಾದವರ ಪ್ರತಿಷ್ಠೆ ಪುಷ್ಟಿಯಿದು!? ಬಿಜೆಪಿ ಗೆಲ್ಲಿಸಿದ ಜನರ ಪಾಪಕ್ಕೆ ಪ್ರಾಯಶ್ಚಿತ್ತವಿದು!! ಅಲ್ಪರಿಗೆ ಐಶ್ವರ್ಯ ಬಂದರೆ ಎಂತೆಂಥ ಅನಾಹುತವಾಗುತ್ತದೆ, ನೋಡಿ...





ಆಯುಷ್ ವೈದ್ಯರ ಬೇಡಿಕೆಗಳು ಮತ್ತು ಗ್ರಾಮೀಣ ಜನಾರೋಗ್ಯದ ಸವಾಲುಗಳು

ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಖಾಸಗಿಯಾಗಿ ವೈದ್ಯ ವೃತ್ತಿ ನಿರ್ವಹಿಸುವ ಪದವೀಧರ ವೈದ್ಯರಲ್ಲಿ 75% AYUSH (ಆಯುರ್ವೇದ, ಯೋಗ, ಯುನಾನಿ ಸಿದ್ಧ ಮತ್ತು ಹೋಮಿಯೋಪತಿ) ಪದ್ಧತಿಗಳಲ್ಲಿ ಪದವಿ ಪಡೆದ ವೈದ್ಯರು. ಅದರಲ್ಲೂ ಬಹುಪಾಲು ಆಯುರ್ವೇದ (BAMS) ವೈದ್ಯರು. ಈ ಎಲ್ಲಾ ಪರ್ಯಾಯ ವೈದ್ಯಕೀಯದಲ್ಲಿ ಪದವಿ ಪಡೆದ ವೈದ್ಯರು ತಮ್ಮ ಚಿಕಿತ್ಸೆಯಲ್ಲಿ ಸ್ವಲ್ಪ ಪ್ರಮಾಣದ ಅಲೋಪತಿ (ಇಂಗ್ಲಿಷ್) ಔಷಧಿಗಳನ್ನು ಬಳಸುತ್ತಿದ್ದಾರೆ. ಅಲೋಪತಿಯೇತರ ವೈದ್ಯರು ಅಲೋಪತಿ ಔಷಧಿಗಳನ್ನು ಬಳಸುವುದರ ವಿರುದ್ಧ ಕಳೆದ ಕೆಲವು ವರ್ಷಗಳಿಂದ ಅಲೋಪತಿ ವೈದ್ಯಕೀಯದ ಬೋರ್ಡ್‌ಗಳು ತಗಾದೆ ಎತ್ತುತ್ತಾ ಬಂದಿವೆ. ಆದುದರಿಂದ ಇತ್ತೀಚೆಗೆ ಆಯುಷ್ ವೈದ್ಯರು ತುರ್ತು ಸಂದರ್ಭಗಳಲ್ಲಿ ತಮಗೆ ಅಲೋಪತಿ ಔಷಧಿಗಳನ್ನು ಬಳಸಲು ಅನುಮತಿ ನೀಡಬೇಕೆಂದು ಕರ್ನಾಟಕ ರಾಜ್ಯವ್ಯಾಪಿ ಪ್ರತಿಭಟನೆಗಳನ್ನು ನಡೆಸಿದರು. ವಿಪರೀತ ಜ್ವರ, ವಿಪರೀತ ನೋವು ಅಥವಾ ಇನ್ನಾವುದೇ ತುರ್ತು ಸಂದರ್ಭಗಳಲ್ಲಿ ತಮ್ಮ ರೋಗಿಗಳ ಅನಾರೋಗ್ಯವನ್ನು ತತ್‌ಕ್ಷಣದ ಶಮನ ನೀಡಲು ಆಯುಷ್ ವೈದ್ಯರು ಅಲೋಪತಿ ಔಷಧಿಗಳಿಗೆ ಮೊರೆ ಹೋಗಲೇ ಬೇಕಾಗುತ್ತದೆ. ಇದು ಸರಿಯೋ, ತಪ್ಪೋ ಎಂದು ವಿವೇಚಿಸುವುದಕ್ಕಿಂತ ಮೊದಲು ಗ್ರಾಮೀಣ ಭಾರತದ ವೈದ್ಯಕೀಯ ಸೌಲಭ್ಯಗಳ ಕುರಿತಂತೆಯೂ ಸ್ವಲ್ಪ ಯೋಚಿಸಲೇಬೇಕಾಗುತ್ತದೆ.

ಇಂದು ನಮ್ಮ ಪ್ರಭುತ್ವವು ನಕ್ಸಲ್‌ಪೀಡಿತ ಪ್ರದೇಶಗಳೆಂದು ದೇಶದ ಅನೇಕ ಗುಡ್ಡಗಾಡು ಪ್ರದೇಶಗಳನ್ನು ಘೋಷಿಸಿದೆ. ಅಲ್ಲೆಲ್ಲಾ ಪ್ರತಿನಿತ್ಯ ಮಲೇರಿಯಾ, ಟೈಫಾಯ್ಡ್, ಕಾಮಾಲೆ, ರಕ್ತಹೀನತೆ ಮುಂತಾದ ರೋಗಗಳಿಂದ ಸಾವನ್ನಪ್ಪುವ ರೋಗಿಗಳ ಸಂಖ್ಯೆ ಭೀತಿ ಹುಟ್ಟಿಸುವಷ್ಟು ದೊಡ್ಡ ಪ್ರಮಾಣದಲ್ಲಿದೆ. ಡಾ.ಬಿನಾಯಕ್ ಸೇನ್‌ರಂತಹ ಬಡವರ ವೈದ್ಯ ಎತ್ತಿದ್ದ ಮುಖ್ಯ ಸವಾಲು ಇದೇ ಆಗಿದೆ. ಜನರ ಆರೋಗ್ಯ ರಕ್ಷಣೆಯು ಪ್ರಭುತ್ವದ ಜವಾಬ್ದಾರಿಯಾಗಿದೆ. ದೇಶದ ಅಮೂಲ್ಯ ಜನಸಂಪತ್ತು ಸರಿಯಾದ ಚಿಕಿತ್ಸೆ ಸಿಗದೇ ಸಾವನ್ನಪ್ಪುವುದು, ಅರಳುವ ಮುನ್ನವೇ ಅಪೌಷ್ಟಿಕತೆಯ ದೆಸೆಯಿಂದ ಬಾಡುವ ಮಾನವ ಕುಸುಮಗಳು ಇವು ಸೂಪರ್ ಪವರ್ ಆಗ ಹೊರಟ ದೇಶವೊಂದಕ್ಕೆ ಅತೀದೊಡ್ಡ ಅವಮಾನವೂ ಹೌದು. ಡಾ. ಬಿನಾಯಕ್ ಸೇನ್ ಮತ್ತು ಕೆಲವು ಸ್ವತಂತ್ರ ಎನ್‌ಜಿಓಗಳ ಪ್ರಕಾರ ಛತ್ತೀಸ್‌ಗಢ್, ಜಾರ್ಖಂಡ್, ಈಶಾನ್ಯ ರಾಜ್ಯಗಳ ಗುಡ್ಡಗಾಡು ಪ್ರದೇಶಗಳಲ್ಲಿ ಜನರು ಸಾಮಾನ್ಯ ಆರೋಗ್ಯ ಸೇವೆ ಪಡೆಯಲು 30ರಿಂದ 40 ಕಿಲೋ ಮೀಟರ್‌ಗಳಷ್ಟು ದೂರ ಕ್ರಮಿಸಬೇಕಾಗುತ್ತದೆ. ಹಾಗೆ ಕ್ರಮಿಸಲು ಅಂತಹ ಪ್ರದೇಶಗಳಲ್ಲಿ ಸಮರ್ಪಕ ಸಾರಿಗೆ ವ್ಯವಸ್ಥೆಯಾಗಲಿ ಸಂಪರ್ಕ ರಸ್ತೆಗಳಾಗಲೀ ಇಲ್ಲ. ಇಂತಹ ಸ್ಥಿತಿಗಳಲ್ಲಿ ಗುಡ್ಡಗಾಡು ಜನರಿಗಿರುವ ಒಂದೇ ಹಾದಿ, ರೋಗವನ್ನು ಸಹಿಸುತ್ತಾ ಸಾವನ್ನು ಎದುರುಗೊಳ್ಳುವುದು ಮಾತ್ರ! ಜನಾರೋಗ್ಯದ ಮುಂದಿರುವ ಇಂತಹ ಸವಾಲುಗಳೇ ಮೂರು ವರ್ಷದ ಗ್ರಾಮೀಣ ವೈದ್ಯಕೀಯ ಕೋರ್ಸ್‌ಗಳನ್ನು ಆರಂಭಿಸುವ ನಿಟ್ಟಿನಲ್ಲಿ ಕೇಂದ್ರ ಸರಕಾರ ಚಿಂತನೆ ನಡೆಸುವಂತೆ ಮಾಡಿರುವುದು. ಇಂತಹ ಕೋರ್ಸನ್ನು ಪ್ರಾರಂಭಿಸುವುದರ ವಿರುದ್ಧವೂ ವೈದ್ಯಕೀಯ ಸಮೂಹ ಗರಂ ಆಗುತ್ತಿದೆ. ಇದರ ವಿರುದ್ಧ ಮಾತೆತ್ತುವ ವೈದ್ಯರು ಅಂತಹ ಗುಡ್ಡಗಾಡು ಪ್ರದೇಶಗಳಲ್ಲಿ ವೈದ್ಯಕೀಯ ಸೇವೆ ನೀಡಲು ಸಿದ್ಧರಿಲ್ಲ.

ಕರ್ನಾಟಕದ ಮಲೆನಾಡು, ಉತ್ತರ ಕರ್ನಾಟಕದ ಹಳ್ಳಿಗಳ ಸ್ಥಿತಿಯೂ ಈ ಮೇಲೆ ವಿವರಿಸಿದ್ದಕ್ಕಿಂತ ತೀರಾ ಭಿನ್ನವೇನಿಲ್ಲ. ಮಂಗಳೂರು, ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಧಾರವಾಡ ಮುಂತಾದ ಅಭಿವೃದ್ಧಿ ಹೊಂದಿದ (?) ನಗರಗಳಿಂದ ಹತ್ತು ಕಿಲೋಮೀಟರ್ ದೂರವಿರುವ ಹಳ್ಳಿಗಳಲ್ಲಿ ಖಾಸಗಿಯಾಗಿ ವೃತ್ತಿ ನಿರ್ವಹಿಸುವ ವೈದ್ಯರುಗಳಲ್ಲಿ 10ಕ್ಕೆ 7 ಮಂದಿ ವೈದ್ಯರು ಆಯುಷ್ ವೈದ್ಯರು. ಅವರುಗಳು ಯಾವುದೇ ಸಂದರ್ಭಗಳಲ್ಲೂ ಅಲೋಪತಿ ಔಷಧಿಗಳನ್ನು ಬಳಸಬಾರದು ಎಂದರೆ ಅದರ ನೇರ ಪರಿಣಾಮವಾಗುವುದು ರೋಗಿಗಳ ಮೇಲೆ ಎಂಬುದನ್ನು ನಾವು ಮರೆಯುವಂತಿಲ್ಲ. ಆಯುಷ್ ವೈದ್ಯರು ಸ್ವಲ್ಪಮಟ್ಟಿನ ಅಲೋಪತಿ ಔಷಧಿಗಳನ್ನು ಚಿಕಿತ್ಸೆಯಲ್ಲಿ ಬಳಸುವುದು ಜನಾರೋಗ್ಯ ಕಾಪಾಡುವ ನಿಟ್ಟಿನಲ್ಲಿ ತೀರಾ ಅಗತ್ಯ. ಪ್ರಸ್ತುತ ಅರ್ಧಕೋಟಿ ರೂಪಾಯಿಗಳಷ್ಟು ಬಂಡವಾಳ ಹೂಡಿ ಎಂಬಿಬಿಎಸ್ ಪದವಿ ಪಡೆದ ಯಾವ ವೈದ್ಯನೂ ಗ್ರಾಮೀಣ ಪ್ರದೇಶಗಳಲ್ಲಿ ವೃತ್ತಿ ಪ್ರಾರಂಭಿಸುವುದಿಲ್ಲ. ಅದು ಅವರಿಗೆ ಸಾಧ್ಯವಾಗುವುದೂ ಇಲ್ಲ. ಗ್ರಾಮೀಣ ಜನರ ಪಾವತಿ ಶಕ್ತಿ (Paying Capacity) ತೀರಾ ಕಡಿಮೆಯಿರುವುದರಿಂದ ಎಂಬಿಬಿಎಸ್ ಪದವಿಗಾಗಿ ಸುಮಾರು ಅರ್ಧ ಕೋಟಿಯಷ್ಟು ದುಡ್ಡು ಸುರಿದ ವೈದ್ಯ 20-30 ರೂ. ಶುಲ್ಕ ಪಡೆದು ವೃತ್ತಿ ನಿರ್ವಹಿಸುವುದು ಅಸಾಧ್ಯದ ಮಾತು. ಮೆರಿಟ್‌ನಲ್ಲಿ ಸೀಟು ಪಡೆದು ಎಂಬಿಬಿಎಸ್ ಪದವಿ ಪಡೆದವರೇ ಗ್ರಾಮೀಣ ಪ್ರದೇಶಗಳಲ್ಲಿ ಸೇವೆ ಸಲ್ಲಿಸಲು ಸಿದ್ಧರಿಲ್ಲದಿರುವಾಗ ಬಂಡವಾಳ ಹೂಡಿ ಪದವಿ ಪಡೆದವರು ಹೇಗೆ ತಾನೇ ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯಕೀಯ ಸೇವೆ ನೀಡಿಯಾರು? ವೈದ್ಯಕೀಯ ಕ್ಷೇತ್ರವು ಸಂಪೂರ್ಣ ವಾಣಿಜ್ಯೀಕರಣಗೊಂಡ ಈ ದಿನಗಳಲ್ಲಿ ಎಲ್ಲವನ್ನೂ ಬಂಡವಾಳವೇ ನಿರ್ಧರಿಸುತ್ತದೆ. ಓರ್ವ ಎಂಬಿಬಿಎಸ್ ವೈದ್ಯ ತನ್ನ ಪದವಿ ಪೂರೈಸಲು ಖರ್ಚು ಮಾಡಿದ ದುಡ್ಡಿನ ಆಧಾರದಲ್ಲಿಯೇ ತನ್ನ ಶುಲ್ಕವನ್ನು ನಿರ್ಧರಿಸುತ್ತಾನೆ. ಪರಿಸ್ಥಿತಿ ಹೀಗಿರುವಾಗ ಕಡಿಮೆ ಖರ್ಚಿನಲ್ಲಿ ಪದವಿ ಪಡೆದ ಆಯುಷ್ ವೈದ್ಯರು ಮಾತ್ರ ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯ ವೃತ್ತಿ ನಿರ್ವಹಿಸಲು ಮುಂದಾಗುತ್ತಾರೆ. ನಮ್ಮ ರಾಜ್ಯದ ಕೆಲವು ಹಳ್ಳಿಗಳಲ್ಲಂತೂ ಬರೇ ಆಯುಷ್ ವೈದ್ಯರು ಮಾತ್ರ ಇರುತ್ತಾರೆ.



ಆಯುಷ್ ವೈದ್ಯರು ತಮ್ಮ ಚಿಕಿತ್ಸೆಯಲ್ಲಿ ಅಲೋಪತಿ ಔಷಧಿಗಳನ್ನು ಬಳಸಲೇಬಾರದು ಎಂಬ ತಗಾದೆ ಇಂದು ನಿನ್ನೆಯ ದಲ್ಲ. ಅದೇರೀತಿ ಆಯುಷ್ ವೈದ್ಯರು ಸ್ವಲ್ಪ ಪ್ರಮಾಣದ ಅಲೋಪತಿ ಔಷಧಿಗಳನ್ನು ಬಳಸುತ್ತಿರುವುದೂ ಇಂದು ನಿನ್ನೆಯಿಂದಲ್ಲ. ನಮ್ಮ ರಾಜ್ಯದಲ್ಲಿ ಆಯುಷ್ ವೈದ್ಯರು ಅಲೋಪತಿ ಔಷಧಿ ಬಳಸುವುದು ನಿಯಮ ಬಾಹಿರ ಎಂದು ಗುಲ್ಲೆಬ್ಬಿಸಲಾಗುತ್ತಿದ್ದರೂ ದೇಶದ 12 ರಾಜ್ಯಗಳಲ್ಲಿ ಅಲ್ಲಿನ ರಾಜ್ಯ ಸರಕಾರಗಳೇ ತುರ್ತು ಸಂದರ್ಭಗಳಲ್ಲಿ ಅಲೋಪತಿ ಔಷಧಿ ಬಳಸಲು ಅವರಿಗೆ ಅನುಮತಿ ನೀಡಿದೆ. ಹಾಗೆ ನೋಡಹೋದರೆ ಆಯುಷ್ ವೈದ್ಯರು ಅಲೋಪತಿ ಔಷಧಿಗಳ ಬಗ್ಗೆ ತೀರಾ ಅಜ್ಞರೇನೂ ಅಲ್ಲ. ಅಲೋಪತಿಯೇತರ ವೈದ್ಯಕೀಯ ವಿಜ್ಞಾನದ ಪಠ್ಯಕ್ರಮಗಳಲ್ಲೂ ಕೆಲವೊಂದು ಪಠ್ಯವಿಷಯಗಳು ಅಲೋಪತಿ ವೈದ್ಯಕೀಯ ಪದವಿಗಳಲ್ಲಿರುವಂತೆಯೇ ಇದೆ. ಅಂಗವಿಚ್ಛೇದನ ಶಾಸ್ತ್ರ ಶರೀರ ಶಾಸ್ತ್ರ ರೋಗಲಕ್ಷಣ ಶಾಸ್ತ್ರ ಔಷಧ ಶಾಸ್ತ್ರ ಇವುಗಳೆಲ್ಲವನ್ನು ಅಲೋಪತಿಯೇತರ ವೈದ್ಯಕೀಯ ಪದವಿಯಲ್ಲಿ ಬೋಧಿಸಲಾಗುತ್ತದೆ (ಸ್ವಲ್ಪಮಟ್ಟಿನ ವ್ಯತ್ಯಾಸಗಳಿರಬಹುದು ಅಷ್ಟೇ). ಇವಿಷ್ಟು ಮಾತ್ರವಲ್ಲದೇ ಶಸ್ತ್ರ ಚಿಕಿತ್ಸೆಯ ಕುರಿತ ಪಠ್ಯವನ್ನು ಆಯುಷ್ ವಿದ್ಯಾರ್ಥಿ[...] ಬೋಧಿಸಲಾಗುತ್ತದೆ. ಅಲೋಪತಿ ಪದವಿಗೆ ಬೋಧಿಸುವ[...] ವಿಸ್ತೃತವಾಗಿಯಲ್ಲದಿದ್ದರೂ ಶಸ್ತ್ರಚಿಕಿತ್ಸೆ ಕುರಿತ[...] ಬೋಧಿಸಲಾಗುವ ಮೂಲಭೂತ ವಿಚಾರಗಳಲ್ಲಿ ಯಾವ[...] ವ್ಯತ್ಯಾಸವಿರುವುದಿಲ್ಲ.


ಆಯುಷ್ ಪದವಿಗಳ ವಿದ್ಯಾರ್ಥಿಗಳಿಗೆ ಅವರ ಕಲಿ[...] ಕೊನೆಯ ವರ್ಷದ ಇಂಟರ್ನ್‌ಶಿಪ್ ತರಬೇತಿಯ[...] ಸರಕಾರಿ ಅಲೋಪತಿ ಆಸ್ಪತ್ರೆಗಳಲ್ಲೂ ನೀಡಲಾಗು[...] ಆ ಅವಧಿಯಲ್ಲಿ ಅವರು ಕಲಿಯುವುದು ಅಲೋ[...] ವೈದ್ಯ ವಿಜ್ಞಾನದ ವಿಷಯಗಳ ಆಧಾರದಲ್ಲೇ ಆ[...] ಇಂದಿಗೂ ದೊಡ್ಡ ದೊಡ್ಡ ಮಲ್ಟಿಸ್ಪೆಶಾಲಿಟಿ ಆಸ್ಪತ್ರೆ[...] ಆಯುಷ್ ಪದವೀಧರ ವೈದ್ಯರುಗಳನ್ನು ಡ್ಯೂಟಿ ಡಾ[...] ಹುದ್ದೆಗೆ ನೇಮಿಸಿಕೊಳ್ಳುತ್ತಾರೆ. ಈ ಯಾವ ಸಂದರ್ಭಗಳ[...] ಗಣನೆಗೆ ಬಾರದ ಪದವಿ ಅದೇ ಆಯುಷ್ ವೈದ[...] ತುರ್ತು ಸಂದರ್ಭಗಳಲ್ಲಿ ಅಲೋಪತಿ ಔಷಧಿ ಬಳಸುವ[...] ಮಾತ್ರ ಯಾಕೆ ಪ್ರಶ್ನಿಸಲ್ಪಡುತ್ತದೆ?

ಇದು ಒಂದು ಮಗ್ಗುಲಾದರೆ ಇನ್ನೊಂದು ಮಗ್ಗು[...] ಇದಕ್ಕಿಂತಲೂ ಪ್ರಶ್ನಾರ್ಹವೆನಿಸುವಂತಹದ್ದು. ಸರಕ[...] ಪ್ರಾಥಮಿಕ ಕೇಂದ್ರಗಳಲ್ಲಿ ಇಂದಿಗೂ ರೋಗಿಯ ಕೋರಿಕೆ[...] ಮೇರೆಗೆ ಯಾವ ಪರೀಕ್ಷೆಯನ್ನೂ ನಡೆಸದೆ ಸಾಮ[...] ಆರೋಗ್ಯ ಕಾರ್ಯಕರ್ತರು ನೆಗಡಿ, ಜ್ವರ, ಮೈಕೈನೋ[...] ವಾಯುಕ್ಷೋಭೆ, ಮಧುಮೇಹ, ರಕ್ತದೊತ್ತಡ ಇತ್ಯಾದಿ[...] ಮಾತ್ರೆಗಳನ್ನು ನೀಡುತ್ತಾರೆ.

ಟಿವಿ ಜಾಹೀರಾತುಗಳಲ್ಲಿ ಅದೆಷ್ಟೋ ಮಾತ್ರೆ[...] ಸಿರಪ್‌ಗಳ ಜಾಹೀರಾತುಗಳನ್ನು ನೀಡಿ ರೋಗಿ[...] ನೇರವಾಗಿ ಔಷಧಾಲಯಗಳಿಂದ ಔಷಧಿಗಳನ್ನು ಖರೀ[...] ಸೇವಿಸುವಂತೆ ಪ್ರೇರೇಪಿಸಲಾಗುತ್ತದೆ. ಇದು ಎ[...] ಅಪಾಯಕಾರಿ ಮಟ್ಟ ತಲುಪಿದೆಯೆಂದರೆ ಕೆಲವು ಗ[...] ನಿರೋಧಕ ಔಷಧಿಗಳ ಮತ್ತು ಗರ್ಭಛಿದ್ರಗೊಳಿಸು[...] ಔಷಧಿಗಳ ಜಾಹೀರಾತುಗಳನ್ನೂ ಟಿವಿಗಳ[...] ಪ್ರಸಾರಗೊಳಿಸಲಾಗುತ್ತಿದೆ. ಯಾವ ಪದವಿ, ವೈದ್ಯಕೀ[...] ಪರೀಕ್ಷೆಗಳ ಹೊರತಾಗಿ ರೋಗಿಗಳು ಸ್ವಯಂ ವೈದ್ಯ[...] ಇಳಿಯಲು ಪ್ರೇರೇಪಿಸುವ ಜಾಹೀರಾತುಗಳನ್ನು ನಿಷೇ[...] ಲಾಗದ ನಮ್ಮ ಪ್ರಭುತ್ವ ಪದವಿ ಪಡೆದ ವೈದ್ಯರು ತುರ್ತು[...] ಸಂದರ್ಭಗಳಲ್ಲಿ ತಮ್ಮದಲ್ಲದ ಪದ್ಧತಿಯ ಔಷಧಿಗಳ ಬಳ[...] ಕಡಿವಾಣ ಹೇರುತ್ತಿರುವುದು ವಿಪರ್ಯಾಸ.

● ಇಸ್ಮತ್ ಫಜೀರ್

ಸುರಪುರ ಬಿಇಓ ಕಚೇರಿಯಲ್ಲಿ 'ದೊರೆಗಳ' ದರ್ಬಾರು



'ಕಾಗೆ ಕೂತಿದ್ದಕ್ಕೂ ಟೊಂಗೆ ಮುರಿದದ್ದಕ್ಕೂ ಸರಿಹೋಯಿತು' ಎಂಬ ಗಾದೆಯಂತೆ ಸದಾನಂದ ಗೌಡರು ಮುಖ್ಯಮಂತ್ರಿ ಸ್ಥಾನದಿಂದ ಇಳಿಯುತ್ತಿದ್ದಂತೆ ಎಂಟು ವರ್ಷಗಳಿಂದ ಮಿಸುಗಾಡದೆ ಸುರಪುರದಲ್ಲಿ ಬೇರುಬಿಟ್ಟಿದ್ದ ಬಿಇಓ ಶಾಂತಗೌಡರು ಬಳ್ಳಾರಿಗೆ ವರ್ಗಾವಣೆಗೊಂಡಿದ್ದಾರೆ.


ರಾಜ್ಯ ರಾಜಕೀಯದಲ್ಲಿ ಜಾತಿಯ ಮೇಲಾಟಗಳು ಶುರುವಾಗಿರುವುದು ಎಲ್ಲರಿಗೂ ತಿಳಿದಿರುವುದೇ. ಆದರೆ ಈ ಜಾತಿಯ ಮೇಲಾಟ ವಿಧಾನಸೌಧದ ಕುರ್ಚಿಗಳಿಗಷ್ಟೇ ಸೀಮಿತವಾಗಿರದೇ ಅಧಿಕಾರಶಾಹಿಯ ಪ್ರತಿ ಹಂತದಲ್ಲೂ ಸದ್ದಿಲ್ಲದೇ ನಡೆದಿದೆ. ಎಸ್‌ಟಿ ಜನಾಂಗಕ್ಕೆ ಸೇರಿದ ನಾಯಕ ಜಾತಿಯವರನ್ನು 'ದೊರೆಗಳ ಮಂದಿ' ಎಂದು ಕರೆಯುವುದು ಸುರಪುರ ಭಾಗದ ವಾಡಿಕೆ. 'ದೊರೆಮಂದಿ'ಗೆ ಸೇರಿದ ರಾಜೂಗೌಡ (ರಾಜನರಸಿಂಹ ನಾಯಕ) ಎಂಬ ಪರಮ ಪಾತಕಿ ಮಂತ್ರಿಗಿರಿಗೆ ಏರಿದ ಮೇಲಂತೂ ಆಯಕಟ್ಟಿನ ಹುದ್ದೆಗಳಿಗೆ ತನ್ನ ಜನಾಂಗಕ್ಕೆ ಸೇರಿದವರನ್ನು ಕರೆತಂದು ಕೂಡಿಸುತ್ತಿದ್ದಾನೆ. ಸೀರೆ ಹಂಚುವುದನ್ನೇ ಅಭಿವೃದ್ಧಿ ಎಂದುಕೊಂಡಿರುವ ಸಚಿವ ಅಧಿಕಾರಲಾಬಿ, ಜಾತಿಲಾಬಿ ಮಾಡುವುದರಲ್ಲಿಯೇ ಕಾಲ ಕಳೆಯುತ್ತಿದ್ದಾನೆ.

ವಿಶಿಷ್ಟ ವ್ಯಕ್ತಿತ್ವದ ಶಾಂತಗೌಡ


ಕಳೆದ ಎಂಟು ವರ್ಷಗಳಿಂದ ಬಿಇಓ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿರುವ ಶಾಂತಗೌಡರದು ವಿಶಿಷ್ಟವಾದ ವ್ಯಕ್ತಿತ್ವ. ಘನಗಂಭೀರತೆಯನ್ನು ಕಾಪಾಡಿಕೊಂಡು ಬಂದಿದ್ದ ಅವರು ವ್ಯರ್ಥಮಾತುಗಳನ್ನಾಡಿದ್ದು ಕಡಿಮೆ. ಇಲಾಖೆಯ ಸಭೆಗಳಲ್ಲಿ ಮಾತನಾಡಲು ಕುಳಿತರೆ ಸತತವಾಗಿ ಐದಾರು ತಾಸುಗಳವರೆಗೆ ಯೋಜನೆಗಳ ಮಾಹಿತಿ ಒದಗಿಸುತ್ತಿದ್ದರು. ತಮ್ಮ ದೀರ್ಘಾವಧಿಯ ಆಡಳಿತದಲ್ಲಿ ಯಾವ ಶಿಕ್ಷಕರಿಗೂ ತೊಂದರೆ ಕೊಡದ ಇವರು ಅದಕ್ಕೆ ಸಿಆರ್‌ಪಿ, ಬಿಆರ್‌ಪಿಗಳಿಗೆ ಸಿಂಹಸ್ವಪ್ನವಾಗಿದ್ದರು. ವಿಶಿಷ್ಟ ಸ್ಮರಣಶಕ್ತಿ ಪ್ರತಿಭೆಗಳಿಂದ ರಾಜ್ಯ ಬಿಇಓಗಳ ಸಂಘದ ಅಧ್ಯಕ್ಷರಾಗಿ ಜವಾಬ್ದಾರಿ ನಿರ್ವಹಿಸಿದ್ದಾರೆ. ಇವರು ನಗುವುದನ್ನೇ ನೋಡಿರದ ಶಿಕ್ಷಕ ಸಮೂಹ ಮತ್ತು ಜನತೆ ಬಿಇಓರ ಮುತ್ಸದ್ದಿತನಕ್ಕೆ ಪ್ರಶಂಸೆ ವ್ಯಕ್ತಪಡಿಸುತ್ತಾರೆ. ವರ್ಗಾವಣೆಗೊಂಡು ಬಳ್ಳಾರಿಗೆ ಹೊರಟು ನಿಂತಿರುವ ಬಿಇಓ ಶಾಂತಗೌಡರಿಗೆ ಶುಭಹಾರೈಸಿ ಬೀಳ್ಕೊಡೋಣ.

ಚೋರ ಗುರು ಚಂಡಾಲ ಶಿಷ್ಯ


ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕುರುಬರಗಲ್ಲಿಯಲ್ಲಿ ಶಿಕ್ಷಕನಾಗಿ ನೇಮಕಗೊಂಡ ಹಳ್ಳೆಪ್ಪ ಎಂಬ ಶಿಕ್ಷಕ ಶಾಲೆಗೆ ಹೋದದ್ದು ಸಹಿ ಮಾಡಲು ಮಾತ್ರ! ಕನ್ನಡದ ವರ್ಣಮಾಲೆಯೂ ಗೊತ್ತಿರದ ಇವನು ರಾಜೂಗೌಡನೆಂಬ



ಶಾಂತಗೌಡ ಪಾಟೀಲ್



ವಾಸುದೇವ ಗಂಗಿ



ಹಳ್ಳೆಪ್ಪ

ಭ್ರಷ್ಟಮಂತ್ರಿಯ ಪಾದಕ್ಕೆರಗಿದ್ದಕ್ಕೆ ಸಿಕ್ಕ ಕಾಣಿಕೆ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಸ್ಥಾನ. ಶಿಕ್ಷಕರ ಸಂಘದ ಸದಸ್ಯರನ್ನು ಚುನಾವಣೆ ಮೂಲಕ ಶಿಕ್ಷಕರೇ ಆರಿಸುವುದು, ಸದಸ್ಯರು ಅಧ್ಯಕ್ಷನನ್ನು ಆಯ್ಕೆ ಮಾಡುವುದು ನಿಯಮ. ಆದರೆ ಇಲ್ಲಿ ನಡೆಯುತ್ತಿರುವುದೇ ಬೇರೆ. ಯಾರು 'ದೊರೆ ಮಂದಿ'ಗೆ ಸೇರಿರುತ್ತಾರೋ, ಮಂತ್ರಿ ರಾಜೂಗೌಡನ ಸೇವೆಗೆ ಸಜ್ಜಾಗಿರುತ್ತಾರೋ ಅವರು ಅಧ್ಯಕ್ಷ ಮತ್ತು ಸದಸ್ಯರಾಗುತ್ತಾರೆ. ಮಂತ್ರಿಯ ಮನೆಯಲ್ಲಿ ಶಿಕ್ಷಕ ಸಂಘದ ಪದಾಧಿಕಾರಿಗಳ ಘೋಷಣೆಯಾಗುತ್ತದೆ. ಚೋರಗುರು ಚಂಡಾಲ ಶಿಷ್ಯ ಎಂಬಂತೆ ಒಂದೇ ಜಾತಿಯ ಇವರಿಬ್ಬರೂ ಸೇರಿ ತಾಲೂ[...] ಶೈಕ್ಷಣಿಕ ಅಭಿವೃದ್ಧಿಯನ್ನು ಅಧಃಪತನದತ್ತ ಕೊಂ[...] ಯ್ಯುತ್ತಿದ್ದಾರೆ.


ಹೀಗೆ ಕಳ್ಳದಾರಿಯಿಂದ ಜಿಲ್ಲಾಧ್ಯಕ್ಷನಾದ ಹಳ್ಳೆಪ್ಪ [...] ಮೊದಲು ತಾಲೂಕ ಅಧ್ಯಕ್ಷನಾಗಿ ಎರಡೂ ಬ[...] ಆಯ್ಕೆಯಾಗಿದ್ದಾಗಲೂ ಕಿಸಿದು ಕಟ್ಟೆಹಾಕಿದ್ದು ಅಷ್ಟರ[...] ಇದೆ. ಶಿಕ್ಷಕರು ಸಣ್ಣಪುಟ್ಟ ಕೆಲಸಗಳಿಗೆ ವಾರಗಟ್ಟ[...] ಬಿಇಓ ಕಚೇರಿ ಮುಂದೆ ಕೈಕಟ್ಟಿ ನಿಂತುಕೊಂ[...] ಕಾರಕೂನರ ಕೈ ಬೆಚ್ಚಗಾಗಿಸಬೇಕು. ತಿಂಗಳ 5[...] ತಾರೀಖಿನೊಳಗೆ ವೇತನ ಪಡೆಯಬೇಕಾದವರು 20-2[...] ಆದರೂ ವೇತನ ಸಿಗದೆ ಒದ್ದಾಡುತ್ತಿದ್ದಾರೆ. ಶಾಲೆಯ[...] ಕಟ್ಟಡ ಕಾಮಗಾರಿ ಕೆಲಸ ನಡೆದಿದ್ದರಂತೂ ಸಿಆರ್‌ಪಿಯಿಂ[...] ಹಿಡಿದು ಬಿಇಓವರೆಗೆ ಎಲ್ಲಾ ಅಧಿಕಾರಿಗಳಿಗೂ ಮಾಮೂ[...] ಕೊಡಲೇಬೇಕು. ಶಿಕ್ಷಕರಿಗೆ ನೀಡುವ ಸೇವಾನಿರ[...]

ಅಪರೂಪದ ವೈದ್ಯ ಡಾ.ಶಿವರಾಂ ಕಣ್ಮರೆ

ಅಪರೂಪದ ವೈದ್ಯರಾದ ಎಚ್.ಬಿ. ಶಿವರಾಂ ...ಯಗೆ ವಿದಾಯ ಹೇಳಿದ್ದಾರೆ. ಅಂದು ಮೈಸೂರಿ ...ಟನೆಗೊಂಡಿದ್ದ ನಿರಂಕುಶ ಮತಿಗಳಾದ ತೇಜಸ್ವಿ, ...ಮದಾಸ್, ಸುಂದರೇಶ್ ಗುಂಪಿನಲ್ಲಿದ್ದ ಶಿವರಾಂ ...ಗಿಂತಲೂ ಭಿನ್ನವಾಗಿ ವೈದ್ಯಕೀಯ ವಿದ್ಯಾರ್ಥಿ ...ಎ. ಐ.ಎ.ಎಸ್. ಮಾಡಿ ಅಧಿಕಾರಿಯಾಗಬೇಕೆಂಬ ...ದ್ದರೂ ಆ ಬಗ್ಗೆ ಧೈರ್ಯ ತುಂಬಿ ಐಎಎಸ್ ...ಪ್ರೋತ್ಸಾಹವಿಲ್ಲದ ಕಾರಣ ಮೆಡಿಕಲ್ ಓದಲು ...ರು. ಆದರೆ ತಮ್ಮ ಗುಂಪಿನ ಗೆಳೆಯರಿಗಿಂತಲೂ ...ಯಿಂದ ಓದುತ್ತಲೇ ಮೈಸೂರಿನಲ್ಲಿ ನಡೆದ ...ರ ಒಕ್ಕೂಟ, ನವನಿರ್ಮಾಣ ವೇದಿಕೆ ಅಲ್ಲದೆ ...ಳವಳಿಯಲ್ಲೂ ಸಕ್ರಿಯವಾಗಿ ಭಾಗವಹಿಸಿದ್ದರು. ...ಸ್ ಮುಗಿಸಿ ಸರ್ಕಾರಿ ವೈದ್ಯರಾಗಿ ದಾವಣಗೆರೆ, ...ರು, ಶಿವಮೊಗ್ಗದಲ್ಲಿ ಸೇವೆಯಲ್ಲಿದ್ದರೂ ಪ್ರಗತಿಪರ ...ಗಳೊಂದಿಗೆ ಇರುತ್ತಿದ್ದ ಶಿವರಾಂ ಜೊತೆ ...ೂ ಚಳವಳಿ ಮುಖಂಡರು ಇದ್ದೇ ಇರುತ್ತಿದ್ದರು. ...ವರ ಎದುರು ಯಾವಾಗಲೂ ಕುಳಿತಿರುತ್ತಿದ್ದ ...ರರೊಬ್ಬರು ತಾವೂ ಕೂಡ ಜನರ ಸಣ್ಣಪುಟ್ಟ ...ಳಿಗೆ ಟ್ರೀಟ್‌ಮೆಂಟ್ ಕೊಡುವ ಮಟ್ಟಕ್ಕೆ ಬಂದು ... ದಾರಿ ಕಂಡುಕೊಂಡಿದ್ದರು ಎಂದರೆ ಶಿವರಾಂ ...ಳ ತಪಾಸಣೆಯ ವೈಖರಿ ನಿಮಗರ್ಥವಾ...ದು.

...ವನ್ನ ಮನುಷ್ಯನಿಂದ ಶ್ರೀಮಂತನವರೆಗೂ ಕಿಂಚಿತ್ ...ವಿಲ್ಲದೆ ಆಮೂಲಾಗ್ರ ತಪಾಸಣೆ ಮಾಡಿ, ...ಳ್ಳಬಹುದಾದ ಮಾತ್ರೆ ಇಂಜೆಕ್ಷನ್ ಬರೆದು, ...ಟ್ಟಿಗಿ ಇರಬೇಕಾದ ಪಥ್ಯ ಹೇಳಿ ಎಲ್ಲವನ್ನು ... ಮಾಡಿಕಳಿಸುತ್ತಿದ್ದರು. ಇದರಿಂದ ಒಬ್ಬ ರೋಗಿ ... ಅವರು ತೆಗೆದುಕೊಳ್ಳುತ್ತಿದ್ದ ಸಮಯ ಬಹು ...ವಾಗುತ್ತಿತ್ತು. ಸರ್ಕಾರಿ ವೈದ್ಯ ವೃತ್ತಿಯಿಂದ ...ವೃತ್ತಿ ಪಡೆದು ಶಿವಪ್ಪ ನಾಯಕ ಕಾಂಪ್ಲೆಕ್ಸ್‌ನಲ್ಲಿ ...ದಿಗೆ ನರ್ಸಿಂಗ್‌ಹೋಂ ತೆಗೆದಾಗಲೂ ಇವರು ... ತಪಾಸಣೆಗೆ ತೆಗೆದುಕೊಳ್ಳುತ್ತಿದ್ದ ಸಮಯದಲ್ಲಿ ...ಲಿಲ್ಲ. ಬೆಳಗ್ಗೆ ಒಂದು ಏಳೆಂಟು ಜನರ ತಪಾಸಣೆ ...ಜೆ ಐದಾರು ಜನಗಳನ್ನು ನೋಡಿ ಕಳುಹಿಸು ...ಬ್ಬರಿಗೆ ಮೂವತ್ತು ರೂಪಾಯಿಗಳೆಂದರೆ ದಿನದ ... ಅಲ್ಲಿಗೆ ಸರಿಹೋಗುತ್ತಿತ್ತು.

...ಮೊಗ್ಗದಲ್ಲಿ ಖಾಸಗಿ ನರ್ಸಿಂಗ್ ಹೋಂ ತೆರೆದ ... ಕೆಲವೇ ವರ್ಷಗಳಲ್ಲಿ ಬೇಕಾದಷ್ಟು ದುಡಿದು ...ಂಡು, ತೋಟ ಮಾಡಿ ಯಮಧೂತರಂತೆ ...ರಬೇಕಾದರೆ ಶಿವರಾಂ ಕಟ್ಟಾ ಸೋಷಲಿಸ್ಟರಂತೆ ...ಟ್ಟರು. ಹಣಕಾಸಿಗೆ ಎಂದೂ ಮಹತ್ವ ಕೊಡಲಿಲ್ಲ. ...ಳು ಮತ್ತು ಸಂಘಸಂಸ್ಥೆಗಳ ಕಾರ್ಯಗಳಿಗೆ ತಮ್ಮ ... ಸಹಾಯ ಮಾಡುತ್ತಿದ್ದರು. ಲಂಕೇಶರ ಪ್ರಗತಿ ರಂಗಕ್ಕೂ ಧನಸಹಾಯ ಮಾಡಿದ್ದರು.



ಅವರ ಮಾವನವರಾದ ತ್ಯಾನಂದೂರು ಪುಟ್ಟಣ್ಣಯ್ಯನವರೂ ಕೂಡ ಕೊಡುಗೈ ದಾನಿಯಾಗಿ ಮಲೆನಾಡಿನ ಯಾವುದೇ ಕಾರ್ಯಕ್ರಮಗಳಿಗೂ ಹಾಜರಾಗಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಪುಟ್ಟಣ್ಣಯ್ಯನವರ ಮನೆಗೆ ಎಸ್.ಎಲ್. ಭೈರಪ್ಪನವರು ಬಂದು ಉಳಿದು ವಿಶ್ರಾಂತಿ ಪಡೆದು ಹೋಗುತ್ತಿದ್ದರೆಂದರೆ ಪುಟ್ಟಣ್ಣಯ್ಯನವರ ಪಿತೃಗುಣ ಅನುಭವಿಸಿದವರಿಗೇ ಗೊತ್ತು.

ಇಂತವರ ಅಳಿಯನಾದ ಶಿವರಾಂ ಮನೆಗೆ ಮೈಸೂರಿನಿಂದ ಬರುವ ಎಲ್ಲಾ ಸಾಹಿತಿಗಳು, ಹೋರಾಟಗಾರರು ಬರುತ್ತಿದ್ದರು. ಅದರಲ್ಲೂ ರಾಮದಾಸರಿಗೆ ಶಿವರಾಂ ಮನೆ ತಂಗಿಯ ಮನೆಯಂತಿತ್ತು. ಶಿವರಾಂ ಪತ್ನಿ ಆಶಾ ರಾಮದಾಸರಿಗೆ ಅಕ್ಕರೆಯ ತಂಗಿಯಂತೆ ಸತ್ಕರಿಸಿ ಕಳಿಸುತ್ತಿದ್ದರು. ಬಂದಕೂಡಲೇ ರಾಮದಾಸರನ್ನು ಕೂರಿಸಿಕೊಂಡು, ಆಮೂಲಾಗ್ರ ತಪಾಸಣೆ ಮಾಡಿ, ಮಾತ್ರೆ ಕೊಟ್ಟು ಪಥ್ಯ ಹೇಳಿ ಸ್ಮೋಕಿಂಗ್ ಕಡಿಮೆ ಮಾಡಿ ಎಂದು ಎಚ್ಚರಿಸುತ್ತಿದ್ದರು. ಆ ಕೂಡಲೇ ರಾಮದಾಸ್ ಬರಕಲಿ ಸಿಗರೇಟ್ ಹಚ್ಚುತ್ತಿದ್ದರು. ಇದನ್ನು ನೋಡಿದ ಶಿವರಾಂ "ಈ ಸೋಷಲಿಸ್ಟರಿಗೆ ನಾವು ಟ್ರೀಟ್‌ಮೆಂಟ್ ಕೊಡಕ್ಕಾಗಲ್ಲ ಕಂಡ್ರಿ. ಆ ತೇಜಸ್ವಿ, ಲಂಕೇಶ್, ನಂಜುಂಡಸ್ವಾಮಿ, ಇವುರೆಲ್ಲಾ ಡಾಕ್ಟರಿಗೆ ಎಂದೂ ಕೇರ್ ಮಾಡಲ್ಲವಲ್ಲ, ಏನು ಮಾಡದು?" ಎನ್ನುತ್ತಿದ್ದರು. ನಿಜಕ್ಕೂ ಅವರ ಗೆಳೆಯರೆಲ್ಲಾ ತಮ್ಮ ಆರೋಗ್ಯದ ಜವಾಬ್ದಾರಿಯನ್ನು ಶಿವರಾಂ ಮೇಲೆ ಹಾಕಿ ಆರಾಮವಾಗಿರುತ್ತಿದ್ದರು. ಏನಾದರೂ ಏರುಪೇರಾದರೆ ಫೋನ್ ಮೂಲಕ ಸಲಹೆ ಪಡೆದು ಮುಂದುವರಿಯುತ್ತಿದ್ದರು. ರಾಮದಾಸ್ ಶಿವಮೊಗ್ಗದ ಯಾವುದೇ ಕಾರ್ಯಕ್ರಮಕ್ಕೆ ತಪ್ಪಿಸಿಕೊಳ್ಳುತ್ತಿರಲಿಲ್ಲ, ಏಕೆಂದರೆ ಶಿವರಾಮರ ಆರೋಗ್ಯ ತಪಾಸಣೆ.

ಶಿವರಾಂ ಸುಮಾರು ಎರಡು ವರ್ಷ ಆದಿಚುಂಚನಗಿರಿ ಮೆಡಿಕಲ್ ಕಾಲೇಜಿಗೆ ವಾರದಲ್ಲಿ ಎರಡು ದಿನ ಹೋಗಿ ಪಾಠ ಮಾಡಿ ಬರುತ್ತಿದ್ದರು. ಏಕೆಂದರೆ ಆ ಕಾಲೇಜಿನ ಮಾನ್ಯತೆ ಉಳಿಯಬೇಕಾದರೆ ಶಿವರಾಂರಂಥವರ ಸೇವೆ ಅಗತ್ಯವಾಗಿ ಬೇಕಿತ್ತು. ಆಗಲೂ ಕೂಡ ಅವರು ತಮ್ಮ ಫೀಜು, ಭತ್ಯೆ ವಿಷಯವಾಗಿ ಚರ್ಚಿಸಿದವರಲ್ಲ.

ಅವರು ಚುಂಚನಗಿರಿ ಕಾಲೇಜಿನಲ್ಲಿ ಪಾಠ ಮಾಡಿ ಹೊರಡುವ ವೇಳೆಗೆ ನಮ್ಮ ಊರಿನ ಕೆಲವು ಕಾಯಿಲೆ ಜನರನ್ನು ಅಲ್ಲಿಯೇ ತಪಾಸಣೆಗೆ ಕಳಿಸುತ್ತಿದ್ದೆ. ಸಕಲೇಶಪುರದ ಬಳಿಯ ಆನೆಬಾಳಿನವರಾದ ಶಿವರಾಂ ಚುಂಚನಗಿರಿಯಿಂದ ಬರುವಾಗ ಊರ ಮುಖಾಂತರ ಪಿತ್ರಾರ್ಜಿತವಾಗಿ ಬಂದ ಎಸ್ಟೇಟು ಮನೆ ನೋಡಿ ಬರುತ್ತಿದ್ದರು. ಆದರೆ ಅಲ್ಲಾಗಲೇ ವೈದ್ಯರನ್ನು ಕಾಯುವ ಜನ ಜಮಾವಣೆಗೊಂಡಿರುತ್ತಿದ್ದರು. ಕಿಂಚಿತ್ತೂ ಬೇಸರವಿಲ್ಲದೆ ಅವರನ್ನೆಲ್ಲಾ ನೋಡಿ ಕಳಿಸುತ್ತಿದ್ದರು. ಡಾಕ್ಟರನ್ನು ನೋಡಿದ ಕೂಡಲೇ ಕಾಯಿಲೆ ಹೇಳಿಕೊಳ್ಳುವ ಜನರನ್ನು ನೋಡಿ ಇನ್ನಿವರ ಜೊತೆ ಬಂದರೆ ಈ ಬದುಕೇ ಬೇಸರವಾಗಬಹುದೆಂದು ನನಗನ್ನಿಸುತ್ತಿತ್ತು.

ಡಾ. ಶಿವರಾಂ ಕಣ್ಣೆದುರು ಅವರ ಆತ್ಮೀಯ ಗೆಳೆಯರೆಲ್ಲಾ ಹಠಾತ್ತನೆ ಹೊರಟುಹೋದರೂ ಸಾವು ಬಹಳ ಹಿಂದೆಯೇ ಶಿವರಾಂ ಮನೆ ಕದ ತಟ್ಟಿದ್ದೊಂದು ವಿಪರ್ಯಾಸ. ಎರಡೂ ಕಣ್ಣಿನ ನರ ಕವಲಾಗುವಂತಹ ಜಾಗದಲ್ಲಿ ಅವರಿಗೆ ಕ್ಯಾನ್ಸರ್ ಕಾಣಿಸಿಕೊಂಡಿತು. ಇದರಿಂದ ಇಡೀ ಮುಖವನ್ನೇ ಬಿಚ್ಚಿ ಆಪರೇಷನ್ ಮಾಡಬೇಕಿತ್ತು, ಅದನ್ನು ಮಾಡಿಸಿಕೊಂಡನಂತರ ಕಣ್ಣನ್ನು ಓರೆಯಾಗಿ ಕೂರಿಸಿದ ಕಾರಣವಾಗಿ ತಮ್ಮ ವೃತ್ತಿಯಲ್ಲಿ ದಣಿಯುತ್ತಿದ್ದರು.

ಅವರಿಗೆ ಹುಷಾರಿಲ್ಲ, ಕ್ಯಾನ್ಸರ್ ಆಗಿದೆ ಎಂದು ಗೊತ್ತಾದಾಗ ಸುಮಾರು ಜನ ರೋಗಿಗಳು "ಅಂತಹ ವೈದ್ಯರಿಗೆ ಹುಷಾರಿಲ್ಲದ ಮೇಲೆ ನಮ್ಮ ಕಾಯಿಲೆಗಳನ್ನು ಇನ್ನೊಬ್ಬರ ಬಳಿ ತೋರಿಸುವುದೇ ಬೇಡ. ಹೀಗೆ ಹೋಗುತ್ತೇವೆ" ಎಂದು ಶಪಥ ಮಾಡಿದವರು ಶಿವರಾಂಗೆ ಆಪರೇಷನ್ ಆದನಂತರ ಚೇತರಿಸಿಕೊಂಡು ಬರುವವರೆಗೂ ಕಾದರು. ಈ ಪೈಕಿ ಮುಸ್ಲಿಮರೇ ಜಾಸ್ತಿಯಿದ್ದರು. ಶಿವರಾಂ ಶಾಪಿನ ಎದುರು ಹಿಂದೂಗಳಿಗಿಂತಲೂ ಮುಸ್ಲಿಂ ಬುರುಖಾದವರೇ ಜಾಸ್ತಿ. ಶಿವರಾಂ ವ್ಯಕ್ತಿತ್ವಕ್ಕೆ ಮಾರುಹೋದ ಮುಸ್ಲಿಮನೊಬ್ಬ ಅವರ ಬಳಿಯೇ ಸಮಾಜ ಸೇವಕನಂತೆ ಕೆಲಸ ಮಾಡುತ್ತಿದ್ದ. ಅವರು ತಮ್ಮ ಸಹಾಯಕರಾಗಿ ತೆಗೆದುಕೊಳ್ಳುತ್ತಿದ್ದ ಜನಗಳೂ ಕೂಡ ವಿಶೇಷವಾಗಿರುತ್ತಿದ್ದರು. ನಿರ್ಗತಿಕ ಬಡವರು, ಗಂಡಬಿಟ್ಟ ಅಮಾಯಕರು ಇಂತವರಿಗೇ ಕೆಲಸ ಕೊಡುತ್ತಿದ್ದ ಅವರು ಸಲುಗೆಯಿಂದ ತಮಾಷೆ ಮಾಡುತ್ತ ಮನೆಯವರಂತೇ ನೋಡಿಕೊಳ್ಳುತ್ತಿದ್ದರು.

ತಮ್ಮ ವೃತ್ತಿಯನ್ನು ಗಂಭೀರವಾಗಿ ಪರಿಗಣಿಸಿ ಅದರಲ್ಲಿ ಮುಳುಗಿದ್ದರು. ಕೇಂದ್ರ- ರಾಜ್ಯ ಸರ್ಕಾರಗಳು ಏನು ಮಾಡುತ್ತಿವೆ ಎಂಬುದನ್ನೆಲ್ಲಾ ಓದಿಕೊಂಡಿರುತ್ತಿದ್ದರು. ವೈದ್ಯ ಕಾಯಿಲೆ ಕಂಡುಹಿಡಿದು ಹೇಳುವಂತೆ ರಾಜಕಾರಣಿಗಳ ನಡವಳಿಕೆ, ಭಾಷೆಯಲ್ಲೇ ಅಳೆದು ಅವರ ಹಣೆಬರಹ ಹೇಳಿಬಿಡುತ್ತಿದ್ದರು. ಬಂಗಾರಪ್ಪ ಸಂಪುಟ ರಚಿಸಿದ ಕೂಡಲೇ "ಇವುನು ಹೋಯ್ತನೆ ಕಂಡ್ರಿ, ಕೆಟ್ಟ ಹೆಸರು ತಗೊಂಡು" ಎಂದಿದ್ದರು. ಇದೇ ರೀತಿ ಇತ್ತೀಚಿನವರ ಭವಿಷ್ಯವನ್ನು ಹೇಳುತ್ತ ಅವರನ್ನ ನೋಡಲು ಹೇಸಿಗೆಯಾಗಿ ರಾಜಕಾರಣ ಮಾತನಾಡುವುದನ್ನೇ ಬಿಟ್ಟಿದ್ದರು.

ಸರ್ಕಾರಿ ವೈದ್ಯರಾಗಿದ್ದು ಅನಂತರ ಒಂದು ನರ್ಸಿಂಗ್ ಹೋಂನಲ್ಲಿ ಕೆಲಸ ಮಾಡಿದರೂ ಒಂದು ಸೈಟ್ ತೆಗೆದುಕೊಳ್ಳಲಾಗದೇ ಹೋದ ಶಿವರಾಂ ನಿಷ್ಠಾವಂತ ಸೋಷಲಿಸ್ಟರ ಬದುಕು ಹೇಗಿರಬೇಕು ಎಂಬ ಸಂಗತಿಯನ್ನು ಬಿಟ್ಟುಹೋಗಿದ್ದಾರೆ.

ಕಡೆಗಳಿಗೆಯವರೆಗೂ ಮಗುವಿನಂತೆ ನೋಡಿಕೊಂಡ ಪತ್ನಿ ಆಶಾ, ಈಗಾಗಲೇ ಅಮೆರಿಕಾದಲ್ಲಿ ನೆಲೆಸಿರುವ ಇಬ್ಬರು ಹೆಣ್ಣುಮಕ್ಕಳು ಡಾ. ಶಿವರಾಂರನ್ನು ಪೂರ್ಣ ಅರ್ಥಮಾಡಿಕೊಂಡ ಫಲವಾಗಿ ಅವರನ್ನು ಅವರಿಷ್ಟಕ್ಕೆ ಬಿಟ್ಟು ಅವರಿಂದ ಏನನ್ನೂ ನಿರೀಕ್ಷಿಸಲಿಲ್ಲ.

ತಪ್ಪುಗಳನ್ನೆ ಮಾಡದೆ ಬದುಕಿದ್ದ ಶಿವರಾಂ ಯಾರಿಗೂ ನೋವುಂಟುಮಾಡದ ಸ್ನೇಹಜೀವಿ. ಬಹುಸೂಕ್ಷ್ಮ ಮನಸ್ಸಿನ ಶಿವರಾಂ ಬಳಿ ತೇಜಸ್ವಿಯವರು ಪುಸ್ತಕ ಪ್ರಕಾಶನ ತೆರೆಯುವಾಗ ಪಾರ್ಟ್‌ನರ್ ಆಗಿ ಸೇರಿಸಿಕೊಂಡು ಹಣ ಪಡೆದಿದ್ದರು. ಆದರೆ ಪ್ರಕಾಶನ ಆರಂಭವಾದಾಗ ಶಿವರಾಂ ಹಣವನ್ನು ವಾಪಸ್ಸು ಮಾಡಿ ಅವರನ್ನು ಗುಂಪಿನಿಂದ ಕೈಬಿಟ್ಟಿದ್ದರು. ಇದರಿಂದ ಬಹಳ ನೊಂದುಕೊಂಡ ಶಿವರಾಂ "ನಾನೆಂದೂ ಹಣದ ಮುಖ ನೋಡಿದವನಲ್ಲ, ವಿಶ್ವಾಸಕ್ಕಾಗಿ ಇವರ ಜೊತೆ ಸೇರಿಕೊಂಡರೆ ನನ್ನನ್ನು ಈ ತರ ನಡೆಸಿಕೊಂಡರಲ್ಲಾ" ಎಂದು ತುಂಬಾ ಕೊರಗಿದ್ದರು. ಆಗ ನಾನು "ಇದರಲ್ಲಿ ತೇಜಸ್ವಿಯವರ ತಪ್ಪು ಇರಲಾರದು ಸಾರ್. ಪುಸ್ತಕ ಪ್ರಕಾಶನ ಶುರುಮಾಡಿರುವ ಗೆಳೆಯರೆಲ್ಲಾ ಸೇರಿ ಇಂತಹ ತೀರ್ಮಾನ ತೆಗೆದುಕೊಂಡಿರಬಹುದು" ಎಂದು ಸಮಾಧಾನ ಮಾಡಿದ್ದೆ. ಆದರೂ ಹಣಕಾಸಿನ ವಿಷಯದಲ್ಲಿ ಸಣ್ಣತನದಿಂದ ಯೋಚಿಸಿದ ಗೆಳೆಯರ ಬಗ್ಗೆ ಅವರಿಗೆ ಬೇಸರವಿತ್ತು.

ಡಾ. ಶಿವರಾಂ ಕ್ಯಾನ್ಸರ್‌ನಿಂದಾಗಿ ಅವಧಿಗೆ ಮುನ್ನವೇ ಈ ಬದುಕಿಗೆ ವಿದಾಯ ಹೇಳಿರುವಾಗ ಅವರ ಪತ್ನಿಯೂ ಕ್ಯಾನ್ಸರಿಗೆ ತುತ್ತಾಗಿ ಆಪರೇಷನ್ ಮಾಡಿಸಿಕೊಂಡು ಚೇತರಿಸಿಕೊಳ್ಳುತ್ತಿದ್ದಾರೆ. ಶಿವರಾಂ ಗೆಳೆಯರಾದ ಡಾ. ನಾಗರಾಜ್, ಡಾ. ಶ್ರೀನಿವಾಸ್ ತರದ ಬಂಧುಗಳಿರುವಾಗ ಯಾವ ಕಾಯಿಲೆ ಬಂದರೂ ಎದುರಿಸಬಲ್ಲೆ ಎಂದು ನಗುತ್ತಲೇ ಹೇಳುವ ಆಶಾರನ್ನು ಇನ್ನು ಯಾವ ಕ್ಯಾನ್ಸರು ಹೆದರಿಸಲಾರದು.

● ಬಿ.ಚಂದ್ರೇಗೌಡ

...ಗಳಲ್ಲಿ ಕಳಪೆ ಆಹಾರ ನೀಡಿ ವಿವಿಧ ಯೋಜನೆ ...ಂಜೂರಾದ ಕೋಟಿಗಟ್ಟಲೆ ಹಣವನ್ನು ದೋಚ... ಇಷ್ಟೆಲ್ಲಾ ಸಮಸ್ಯೆಗಳಿದ್ದರೂ ಶಿಕ್ಷಕರ ಕಲ್ಯಾಣಕ್ಕಾಗಿ ... ಯೋಚಿಸದ ಹಳ್ಳೆಪ್ಪ ಬಿಇಒ ಖಾತೆಗೆ ಜಮಾ ...ವೆಷ್ಟು ಎಂಬುದನ್ನು ಹದ್ದಿನಗಣ್ಣಿನಿಂದ ಕಾದಿದ್ದು ...ೇಜ್ ಕೊಡುವಂತೆ ಒತ್ತಡ ತರುವುದರಲ್ಲೇ ...ಗಿರುತ್ತಾನೆ.

...ಕರ ಸಮಸ್ಯೆಗೆ ಹೆಗಲು ಕೊಡಬೇಕಾದ ಇವನು ...ರ್ಗಾವಣೆ, ವೈದ್ಯಕೀಯ ಸೌಲಭ್ಯ, ಚಿಣ್ಣರ ಅಂಗಳ ...ಂಜೂರು, ಇತರೇ ಕೆಲಸಗಳಿಗೆ ಶಿಕ್ಷಕರಿಂದಲೇ ...ಸುತ್ತಾನೆ. ಶಿಕ್ಷಕರ ಕಿಸೆಗೆ ಕೈ ಹಾಕಿ ದೋಚುವ ...ರಾಟಕಿ ಕೊನೆಗೊಳ್ಳುವುದಾದರೂ ಯಾವಾಗ ...ರಪುರ ತಾಲೂಕಿನ ಶಿಕ್ಷಕರು ಪರಿತಪಿಸುತ್ತಿದ್ದಾರೆ.

...ಂಗನ ಕೈಗೆ ಮಾಣಿಕ್ಯ

...ಒ ನಂತರ ಇರುವ ಪ್ರಮುಖ ಹುದ್ದೆಯೆಂದರೆ ... ಹುದ್ದೆ. ಇಂತಹ ಹುದ್ದೆಗೆ ದೊರೆ ಜನಾಂಗದ ...ಕ್ಕೆ ಮಂತ್ರಿಯ ಕೃಪಾಕಟಾಕ್ಷದಿಂದ ತಾತ್ಕಾಲಿಕ ...ಯೋಜನೆಗೊಂಡಿರುವವನು ವಾಸುದೇವ ಗಂಗಿ ...ಇವನು ಬಿಆರ್‌ಸಿ ಆಗಿ ನಿಯೋಜನೆಗೊಳ್ಳಲು ...ದವನು ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಹಳ್ಳೆಪ್ಪ ...ಜೂನಿಯರ್ ಕಾಲೇಜಿನಲ್ಲಿ ಹೆಡ್ ಮಾಸ್ಟರನಾಗಿ ...ಮಾಡುತ್ತಿದ್ದ ವಾಸುದೇವನಿಗೆ "ಮಾವ, ಈ ಹುದ್ದೆಗೆ ...ನಿಯಾದ ವ್ಯಕ್ತಿ" ಎಂದು ಮಂತ್ರಿ ಬಳಿಗೆ ...ದು ಹೋದವನೇ ಹಳ್ಳೆಪ್ಪ.


...11-12ನೇ ಸಾಲಿನ ಬೇಸಿಗೆ ರಜೆ ಅವಧಿಯಲ್ಲಿ ... ತಾಲೂಕಿನಲ್ಲಿ ಅಂದಾಜು 50 ಚಿಣ್ಣರ ಅಂಗಳ ..., ನಡೆದಿವೆ. ವಸತಿಸಹಿತ ಚಿಣ್ಣರ ಅಂಗಳ ... 25 ಮಕ್ಕಳಿರುತ್ತಾರೆ. ಒಬ್ಬೊಬ್ಬ ವಿದ್ಯಾರ್ಥಿಗೆ 5,000 ರೂ.ನಂತೆ ಒಂದು ಕೇಂದ್ರಕ್ಕೆ 1,25,000 ರೂ. ಅನುದಾನ ಬಿಡುಗಡೆಯಾಗುತ್ತದೆ. ಮೊದಲ ಹಂತದ 45,000 ರೂ. ಚೆಕ್ಕಿಗೆ ಪ್ರತಿ ಕೇಂದ್ರದಿಂದ 5000 ರೂ. ಮಾಮೂಲಿ ಪಡೆದಿರುವ ಗಂಗಿ ಎರಡನೇ ಅವಧಿಯ ಚೆಕ್ಕು ಬಂದಾಗಲೂ ಶನಿಯಂತೆ ಶಿಕ್ಷಕರ ಹೆಗಲು ಏರಿದ. ಅಂದರೆ ಚಿಣ್ಣರ ಅಂಗಳ ಕೇಂದ್ರದ ಯೋಜನೆಯೊಂದರಿಂದಲೇ ಇವನ ಬರೋಬ್ಬರಿ ಗಳಿಕೆ 5 ಲಕ್ಷ ರೂ. ಆಗುತ್ತದೆ.

ತನ್ನ ಪಾಲಿನ ಮಾಮೂಲಿ ವಸೂಲಿ ಮಾಡಲು ಹಗಲುರಾತ್ರಿಯೆನ್ನದೆ ಶಿಕ್ಷಕರ ಮನೆಗಳಿಗೆ ಎಡತಾಕುವ ಗಂಗಿಗೆ ಸುರಪುರ ತಾಲೂಕಿನಲ್ಲಿ ಎಷ್ಟು ಶಾಲೆಗಳಿವೆ ಎಂಬ ಅರಿವಿಲ್ಲ, ತಾನು ಹೋದಲೆಲ್ಲ ಹಳ್ಳೆಪ್ಪನನ್ನು ಕರೆದುಕೊಂಡು ಹೋಗಿ "ಇವನು ನನ್ನ ಅಳಿಯ, ಇವನಿಂದಲೇ ನಾನು ಅಧಿಕಾರಿಯಾದದ್ದು" ಎಂದು ಹೇಳಿಕೊಳ್ಳುವ ಇವನಿಂದಾಗಿ ಬಿಆರ್‌ಸಿ ಕಚೇರಿಯ ಪಾಡು ಎಲ್ಲಿಗೆ ಮುಟ್ಟುತ್ತೋ ದೇವರೆ ಬಲ್ಲ. ಬಿಇಒ ವರ್ಗಾವಣೆಯಾದ ತಕ್ಷಣ ಈ ಕಳ್ಳ ಮಳ್ಳರಿಬ್ಬರು ಸೇರಿ ಸ್ವಜಾತಿಯ ಕೆಂಪರಾಜಪ್ಪನನ್ನು ಬಳ್ಳಾರಿಯಿಂದ ಹುಡುಕಿ ಕರೆತರುತ್ತಿದ್ದಾರೆ. ಅಲ್ಲಿಗೆ ಬಿಇಒ, ಬಿಆರ್‌ಸಿ, ಶಿಕ್ಷಕ ಸಂಘದ ಜಿಲ್ಲಾಧ್ಯಕ್ಷ - ಮೂವರು ಸೇರಿ ದೊರೆಗಳ ದರ್ಬಾರು ನಡೆಸುವುದರಲ್ಲಿ ಯಾವುದೇ ಅನುಮಾನವಿಲ್ಲ.

ನೂತನವಾಗಿ ಬರುವ ಬಿಇಒ ಕೆಂಪರಾಜನಿಗೆ ಸ್ವಾಗತ ಕೋರಲು ತಾಲೂಕಿನ ಶೈಕ್ಷಣಿಕ ಮತ್ತು ಶಿಕ್ಷಕರ ಸಮಸ್ಯೆಗಳು ಸಾಲುಗಟ್ಟಿ ನಿಂತಿವೆ. ಸಮಸ್ಯೆಗಳನ್ನು ಅರ್ಥೈಸಿಕೊಂಡು ಪರಿಹಾರ ಕಾರ್ಯದಲ್ಲಿ ತೊಡಗುತ್ತಾರೋ ಅಥವಾ ಹುಂಡ ರಾಜಕಾರಣ ಮಾಡುತ್ತಿರುವ ಶಿಕ್ಷಕ?ಅಧಿಕಾರಿಗಳು ಹಾಕುವ ಹೂವಿನ ಹಾರಕ್ಕೆ ತಲೆಕೊಟ್ಟು ಹರಕೆಯ ಕುರಿಯಾಗುತ್ತಾರೋ ಕಾದು ನೋಡಬೇಕಿದೆ!

● ಆಲಿ ಬಾಳ್

ಅಪರೂಪದ ನೆನಪು



'ಮಾಲ್ಗುಡಿ ಡೇಸ್' ಧಾರಾವಾಹಿಯ ಚಿತ್ರೀಕರಣದ ಸಂದರ್ಭದಲ್ಲಿ ನಟ-ನಿರ್ದೇಶಕ ಶಂಕರ್ ನಾಗ್ ಜೊತೆ ಸುನೀಲ್ ರಾವ್

ಚಿತ್ರ ಕೃಪೆ: ಸುನೀಲ್ ರಾವ್

ಭೂಸುಧಾರಣೆ ಕಾಯ್ದೆಗೆ ತಿದ್ದುಪಡಿಗಳು
ನೆಲದ ಮಕ್ಕಳ ಕತ್ತು ಕುಯ್ಯುವ ಹುನ್ನಾರಗಳು



ನಾಲ್ಕು ವರ್ಷದಲ್ಲಿ ಮೂರು ಮುಖ್ಯಮಂತ್ರಿಗಳು!. ಹತ್ತಾರು ಹಗರಣಗಳು, ಕೋಣಗಳೆರಡರ ನಡುವೆ ಕುಳಿತಿರುವ ಮೂರನೆಯ ಮುಖ್ಯಮಂತ್ರಿಯ ಪತನ ಎಂದೋ, ಇಂದೋ ಎಂಬ ಆತಂಕ, ಬಿರಿಯುತ್ತಿರುವ ಭಿನ್ನಮತ, ನಿತ್ಯವೂ ಸಚಿವಾಕಾಂಕ್ಷಿ ಅತೃಪ್ತ ಶಾಸಕರ ಬಂಡಾಯ, ಬೆದರಿಕೆ, ವಾಗ್ವಾಳಿ. ಆಳುವವರಲ್ಲಿಯೂ, ಆಡಳಿತದಲ್ಲಿಯೂ ಅರಾಜಕತೆಯ ವಾತಾವರಣ, ಜನರ ಪಾಲಿಗೆ ಇಲ್ಲವಾದ ಆಡಳಿತ...! ಇದು ಬಿಜೆಪಿ ಅಧಿಕಾರಕ್ಕೆ ಬಂದ ನಂತರದ ನಿತ್ಯ ವಿದ್ಯಮಾನ.

ಈ ಸರ್ಕಾರ ಕುರಿತು ಮಾತನಾಡಲು ನೂರೆಂಟು ಸಂಗತಿಗಳಿವೆ. ಆದರಿಲ್ಲಿ ಈ ಚೆಡ್ಡಿ ಚತುರ ಪಡೆಯ ಭೂ 'ಮಮತೆ'ಯನ್ನಷ್ಟೇ ಗಮನಿಸಿದರೆ ಸಾಕು. 'ಜನನಿ, ಜನ್ಮ ಭೂಮಿ ಎಂಬುದು ಸ್ವರ್ಗ ಸಮಾನವೆಂದೂ; ಇಂತಹ ಮಾತೃಭೂಮಿಗೆ ವಾತ್ಸಲ್ಯದ ಸದಾ ವಂದನೆ'ಗಳನ್ನು ಬೆಳಗಾದರೆ ಶಾಖೆಗಳಲ್ಲಿ ಹರಿಸುವ ಮತ್ತು 'ಪಾಲಿಸುವ ಪರಿ'ಗೆ ಈ ದೇಶಭಕ್ತ ಸಂತತಿ ನಡೆಸಿದ ಭೂ ಹಗರಣಗಳೇ ಸಾಕು.

ತಮ್ಮ ಭೂ ಕಬಳಿಕೆಯ ದಾಹಕ್ಕೆ ಬಾಚಿಕೊಂಡದ್ದು ಮಾಡಿದ್ದು ಸಾಕಾಗಲಿಲ್ಲವೆಂದು ಭೂಬ್ಯಾಂಕ್ ಸ್ಥಾಪಿಸಿ ರಾಜ್ಯದಲ್ಲಿರುವ ಹತ್ತಾರು ಲಕ್ಷ ಎಕರೆ ಜಮೀನನ್ನು ರೈತರಿಂದ ಕಿತ್ತು ಹೂಡಿಕೆದಾರರ ಸೋಗಿನ ಭೂಗಳ್ಳರಿಗೆ, ಕಾರ್ಪೊರೇಟ್ ಕಂಪನಿಗಳಿಗೆ ಪರಭಾರೆ ಮಾಡುತ್ತಿದ್ದಾರೆ. ಅದಕ್ಕಾಗಿ ವಿಶೇಷವಾಗಿ ಕೃಷಿರಂಗದಲ್ಲಿ ಜಾಗತಿಕ ಬಂಡವಾಳ ಹೂಡಿಕೆದಾರರ ಎರಡೆರಡು ಸಮಾವೇಶಗಳನ್ನೂ ಈ ಸರ್ಕಾರ ನಡೆಸಿದೆ. ವಿಶೇಷ ಒಪ್ಪಂದಗಳೂ ಏರ್ಪಟ್ಟಿವೆ. ಲಕ್ಷಾಂತರ ಕೋಟಿ ರೂ.ಗಳ ಹೂಡಿಕೆಯ ನೀಲನಕ್ಷೆ ತೋರಿಸುತ್ತಿದೆ. ಕರ್ನಾಟಕದ ಕೃಷಿ, ಕೃಷಿಕರನ್ನು ಸರ್ವನಾಶಗೊಳಿಸಲು, ಕೃಷಿಯ ಕಂಪನೀಕರಣಕ್ಕೆ ಹೊರಟಿದೆ. ಅವುಗಳನ್ನು ಜಾರಿಗೊಳಿಸಲೆಂದೇ ಈಗಿರುವ ಭೂಕಾನೂನನ್ನು ಮತ್ತಷ್ಟೂ ಬದಲಾಯಿಸಲೇಬೇಕೆಂದು ಕ್ರಮ ವಹಿಸಿದೆ. ಈ ಹಿನ್ನೆಲೆಯಲ್ಲಿ ಈಗ ಆರಂಭಗೊಂಡ ವಿಧಾನಸಭಾ ಅಧಿವೇಶನದಲ್ಲಿಯೇ 'ಕರ್ನಾಟಕ ಭೂ ಸುಧಾರಣೆಗಳ ಕಾಯ್ದೆ(1961)'ಗೆ ಪ್ರತಿಗಾಮಿ ತಿದ್ದುಪಡಿಗಳನ್ನು ತರಲು ವಿಧೇಯಕ ಮಂಡಿಸುತ್ತಿದೆ. ಇದಕ್ಕೆ 'ಕರ್ನಾಟಕ ಭೂಸುಧಾರಣೆಗಳ (ತಿದ್ದುಪಡಿ) ವಿಧೇಯಕ, 2012' ಎಂದು ಹೆಸರಿಸಿದೆ.

ಉದಾರೀಕರಣದ ಪರಿಣಾಮಗಳು

1990ರ ದಶಕದಲ್ಲಿ ದೇಶದಲ್ಲಿ ಅನುಷ್ಠಾನಕ್ಕೆ ತರಲಾದ ಉದಾರೀಕರಣದ ನೀತಿಗಳ ಪರಿಣಾಮವಾಗಿ ಬಂಡವಾಳಶಾಹಿ-ಭೂ ಮಾಲಕ ವರ್ಗಗಳ ಸರ್ಕಾರಗಳು ಭೂಸುಧಾರಣೆಗಳ ಮಾತೆತ್ತುವುದನ್ನೇ ಕೈಬಿಟ್ಟಿವೆ. ಮಾತ್ರವಲ್ಲ ಅಳಿದುಳಿದ ಭೂ ಸುಧಾರಣಾ ಕ್ರಮಗಳನ್ನು ಸಡಿಲಗೊಳಿಸಿ, ಭಾರೀ ಪ್ರಮಾಣದ ಕೃಷಿ ಭೂಮಿಯನ್ನು ದೇಶೀಯ ಮತ್ತು ವಿದೇಶೀಯ ಕಾರ್ಪೊರೇಟ್ ಕಂಪೆನಿಗಳಿಗೆ ನೀಡಲು ಮುಂದಾಗಿವೆ. ಕರ್ನಾಟಕದ ಬಿಜೆಪಿ ಸರ್ಕಾರವು ಸಹ ಕಾರ್ಪೊರೇಟ್ ಕಂಪನಿಗಳ ಅನುಕೂಲಕ್ಕಾಗಿ 1961ರ ಭೂಸುಧಾರಣೆಗಳ ಕಾಯ್ದೆಯನ್ನು ತಿದ್ದುಪಡಿ ಮಾಡಲು ಹೊರಟಿದೆ. ಈ ತಿದ್ದುಪಡಿಗಳಿಂದಾಗಿ ಭೂ ಸುಧಾರಣೆಗಳ ಮೂಲ ಆಶಯಗಳಿಗೆ ಕೊಡಲಿ ಪೆಟ್ಟು ಬೀಳಲಿದೆ.

ಪ್ರಗತಿ ವಿರೋಧಿಯಾಗಿರುವ ಪಾಳೇಗಾರಿ (ಜಮೀನ್ದಾರಿ) ಪದ್ಧತಿಯನ್ನು ನಿರ್ಮೂಲನೆಗೊಳಿಸುವುದು ಪ್ರಗತಿಪರ ಭೂ ಸುಧಾರಣೆಗಳ ಮುಖ್ಯ ಆಶಯ. ಭೂಮಿತಿಯನ್ನು ನಿಗದಿಪಡಿಸಿ, ಜಮೀನ್ದಾರರ ವಶದಲ್ಲಿರುವ ಹೆಚ್ಚುವರಿ ಭೂಮಿಯನ್ನು ವಶಪಡಿಸಿಕೊಂಡು ಗೇಣಿದಾರರಿಗೆ, ಭೂಹೀನ ಕೃಷಿ ಕೂಲಿಕಾರರಿಗೆ ವಿತರಣೆ ಮಾಡುವುದೇ ಪ್ರಗತಿಪರ ಭೂಸುಧಾರಣೆಗಳ ಉದ್ದೇಶ. ಹೀಗೆ ವಿತರಣೆ ಮಾಡಲಾದ ಭೂಮಿಯನ್ನು ಪಟ್ಟಭದ್ರ ಹಿತಾಸಕ್ತಿಗಳು ಕಬಳಿಸುವುದನ್ನು ತಡೆಯಲು, ಕೃಷಿ ಭೂಮಿಯನ್ನು ಕೃಷಿಕರಲ್ಲದ ಬಂಡವಾಳಗಾರರು/ವ್ಯಾಪಾರಸ್ಥರು ಖರೀದಿ ಮಾಡಿಕೊಂಡು ಕೃಷಿಯೇತರ ಉದ್ದೇಶಕ್ಕೆ ಬಳಸುವುದನ್ನು ತಡೆಯಲು ಕಾನೂನಿನಲ್ಲಿ ಅವಕಾಶ ಇರಬೇಕಾಗುತ್ತದೆ. ಕಾಯ್ದೆಯ ಈ ಮೂಲಭೂತ ಆಶಯಗಳಿಗೆ ವಿರುದ್ಧವಾದ ತಿದ್ದುಪಡಿಗಳನ್ನು ತರಲು ರಾಜ್ಯ ಸರ್ಕಾರ ಈಗ ಮುಂದಾಗಿದೆ.

1994ರಲ್ಲೇ 1961ರ ಭೂ ಸುಧಾರಣಾ ಕಾಯ್ದೆಗೆ ಪ್ರತಿಗಾಮಿ ತಿದ್ದುಪಡಿಗಳನ್ನು ಮಾಡಿ ಕೃಷಿಯೇತರ ಉದ್ದೇಶಗಳಿಗಾಗಿ ಕೃಷಿ ಭೂಮಿಯನ್ನು ಬಳಕೆ ಮಾಡಲು ಆಸ್ಪದ ಮಾಡಿಕೊಡಲಾಯಿತು. ಕರ್ನಾಟಕ ಭೂ ಸುಧಾರಣೆಗಳ ಕಾಯ್ದೆ 1961ರ 109ನೇ ಪ್ರಕರಣದ ಉಪ ಪ್ರಕರಣ (1) ಮತ್ತು (1-ಎ) ತಿದ್ದುಪಡಿಮಾಡಿ ಕೆಲವು ಷರತ್ತುಗಳೊಂದಿಗೆ ಕೈಗಾರಿಕೆ, ಶಿಕ್ಷಣ, ಧಾರ್ಮಿಕ ಮಂದಿರ ಮುಂತಾದ ಸಾರ್ವಜನಿಕ ಉದ್ದೇಶಗಳಿಗಾಗಿ ಕೃಷಿ ಭೂಮಿಯನ್ನು ಬಳಕೆ ಮಾಡಲು ರಿಯಾಯಿತಿ ನೀಡಲಾಯಿತು. ಅಂದಿನ ಮುಖ್ಯಮಂತ್ರಿ ದೇವೇಗೌಡರ ಸರ್ಕಾರದ ಈ ಕ್ರಮವನ್ನು ವಿರೋಧಿಸಿ ಕರಡು ತಿದ್ದುಪಡಿ ಪ್ರತಿಗಳನ್ನು ರಾಜ್ಯಾದ್ಯಂತ ಸುಟ್ಟುಹಾಕಿ ಪ್ರತಿಭಟನೆಗಳೂ ನಡೆದವು.

2009ರಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪ ಸಚಿವ ಸಂಪುಟವು ಕೃಷಿಯೇತರ ಉದ್ದೇಶಗಳಿಗೆ ಕೃಷಿ ಭೂಮಿಯನ್ನು ಒದಗಿಸುವ ಕಾನೂನು ಪ್ರಕ್ರಿಯೆಯನ್ನು ಇನ್ನಷ್ಟು ಸಡಿಲು ಮಾಡಿತು. ಅಲ್ಲಿಯವರೆಗೆ ಯಾವುದೇ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಕೊಡಬೇಕಾದರೆ ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿರುವ ಸಚಿವ ಸಂಪುಟದ ಉಪ ಸಮಿತಿಯ ಅನುಮತಿ ಪಡೆದುಕೊಳ್ಳಬೇಕಾಗಿತ್ತು, ಯಡಿಯೂರಪ್ಪ ಸರಕಾರ ಈ ಷರತ್ತನ್ನು ಕಿತ್ತುಹಾಕಿ ಭೂಮಿಯ ನೇರ ಖರೀದಿಗೆ ಅವಕಾಶ ಕಲ್ಪಿಸಿತು. ಇದರೊಂದಿಗೆ ಭೂ ಸುಧಾರಣೆಗಳ ಮೂಲ ಆಶಯಗಳನ್ನು ಗಾಳಿಗೆ ತೂರಲಾಯಿತು.

ಕರ್ನಾಟಕ ಭೂಸುಧಾರಣೆಗಳ ಕಾಯ್ದೆ 1961ನ್ನು ತಿದ್ದುವ ಪ್ರಕ್ರಿಯೆಯನ್ನು ರಾಜಾರೋಷವಾಗಿ ಮುನ್ನಡೆಸಲು ರಾಜ್ಯ ಬಿಜೆಪಿ ಸರ್ಕಾರ ಮುಂದಾಗಿದೆ. ಭೂ ಹಿಡುವಳಿಗಳ ಮಿತಿಯನ್ನು ನಿಗದಿಪಡಿಸುವ 1961ರ ಕಾಯ್ದೆಯ 63ನೇ ಪ್ರಕರಣವನ್ನು ತಿದ್ದುಪಡಿ ಮಾಡಿ ಭೂಮಿತಿಯನ್ನು ಹೆಚ್ಚಿಸಲು ನಿರ್ಧರಿಸಿದೆ. ಐದು ಜನ ಸದಸ್ಯರಿರುವ ಒಂದು ಕುಟುಂಬಕ್ಕೆ 27 ಎಕರೆ ನೀರಾವರಿ ಭೂಮಿಯನ್ನು ಹೊಂದಲು ಇರುವ ಅವಕಾಶವನ್ನು ಹೆಚ್ಚಿಸಿ 54 ಎಕರೆ ನೀರಾವರಿ ಭೂಮಿಯನ್ನು ಹೊಂದಲು ಅವಕಾಶ ಕಲ್ಪಿಸಲಾಗುತ್ತಿದೆ. ಮಾತ್ರವಲ್ಲ 10 ಜನ ಸದಸ್ಯರಿರುವ ಒಂದು ಕುಟುಂಬಕ್ಕೆ ಗರಿಷ್ಠ 54 ಎಕರೆ ಬದಲಾಗಿ ಗರಿಷ್ಠ 108 ಎಕರೆ ನೀರಾವರಿ ಭೂಮಿಯನ್ನು ಹೊಂದಲು ಅವಕಾಶ ನೀಡಲಾಗುತ್ತಿದೆ. ಈ ಕ್ರಮದಿಂದಾಗಿ ಮತ್ತೊಮ್ಮೆ ಭೂ ಕೇಂದ್ರೀಕರಣಕ್ಕೆ ಅವಕಾಶವಾಗುತ್ತದೆ. ಅಲ್ಲದೆ ಭೂ ರಹಿತ ಬಡವರಿಗೆ ಭೂಮಿಯನ್ನು ವಿತರಣೆ ಮಾಡಲು ಇರುವ ಅವಕಾಶ ಕಡಿತಗೊಳ್ಳುತ್ತದೆ.

ಕರ್ನಾಟಕ ಭೂ ಸುಧಾರಣೆಗಳ ಕಾಯ್ದೆ 1961ರ ಪ್ರಕರಣ 79ನ್ನು 1994ರಲ್ಲೇ ತಿದ್ದುಪಡಿ ಮಾಡಿ ಎರಡು ಲಕ್ಷ ರೂ.ಗಿಂತ ಕಡಿಮೆ ವಾರ್ಷಿಕ ಆದಾಯ ಇರುವ ವ್ಯಕ್ತಿ ಅಥವಾ ಕುಟುಂಬ ಮಾತ್ರ ಕೃಷಿ ಭೂಮಿಯನ್ನು ಖರೀದಿ ಮಾಡಬಹುದು ಎಂದು ಬದಲಾವಣೆ ಮಾಡಲಾಗಿತ್ತು. ಅದಕ್ಕೂ ಮೊದಲು ಮೂಲ ಕಾಯ್ದೆಯಲ್ಲಿ ಆದಾಯ ಮಿತಿ 50 ಸಾವಿರ ರೂ. ಇತ್ತು. ಪ್ರಸಕ್ತ ಬಿಜೆಪಿ ಸರ್ಕಾರ ಆದಾಯದ ಈ ಮಿತಿಯನ್ನು ಎರಡು ಲಕ್ಷದಿಂದ ಆರು ಲಕ್ಷಕ್ಕೆ ಹೆಚ್ಚಿಸಲು ಹೊರಟಿದೆ. ಇದರಿಂದಾಗಿ ಹಣವುಳ್ಳವರಿಗೆ, ಬಂಡವಾಳಗಾರರಿಗೆ, ವ್ಯಾಪಾರಸ್ಥರಿಗೆ ಯಾವುದೇ ನಿರ್ಬಂಧವಿಲ್ಲದೆ ಕೃಷಿ ಭೂಮಿಯನ್ನು ಖರೀದಿ ಮಾಡಲು ಅವಕಾಶವಾಗಲಿದೆ. ಹಿಂದೆ ರೈತರು ಸಾಲ ಕೇಳಲು ಬಂದಾಗ, ಸಾಹುಕಾರರು, ವ್ಯಾಪಾರಸ್ಥರು ರೈತರ ಭೂಮಿಯನ್ನು ಒತ್ತೆಹಾಕಿಸಿಕೊಳ್ಳುತ್ತಿದ್ದರು. ರೈತರು ಅನೇಕ ರೀತಿಯಲ್ಲಿ ಮೋಸಕ್ಕೆ ಒಳಗಾಗುತ್ತಿದ್ದರು. ಸಾಲ ತೀರಿಸಲಾಗದ



ರೈತರ ಭೂಮಿಯನ್ನು ವಶಪಡಿಸಿಕೊಂಡು ರೈತರನ್ನು ಹೊರದಬ್ಬುತ್ತಿದ್ದರು. ಇದನ್ನು ತಡೆಗಟ್ಟಲು ಭೂ ಸುಧಾರಣೆಗಳ ಕಾಯ್ದೆಯಲ್ಲಿ ರೈತರಲ್ಲದವರು ಭೂಮಿ ಖರೀದಿಸುವುದನ್ನು ತಡೆಯಲಾಗಿತ್ತು, ಈ ತಿದ್ದುಪಡಿಯಿಂದ ರೈತರಿಗೆ ರಕ್ಷಣೆ ಇಲ್ಲದಂತಾಗಲಿದೆ.

ರಾಜ್ಯ ಬಿಜೆಪಿ ಸರ್ಕಾರವು ವಿಧಾನಸಭೆಯ ಮುಂಬರುವ ಮುಂಗಾರು ಅಧಿವೇಶನದಲ್ಲಿ ಪಾಸು ಮಾಡಲು ಹೊರಟಿರುವ ತಿದ್ದುಪಡಿಗಳು ಇನ್ನೂ ಹೆಚ್ಚು ಅಪಾಯಕಾರಿಯಾಗಿವೆ. ಕಾಯ್ದೆಯ 2ನೇ ಪ್ರಕರಣವನ್ನು ತಿದ್ದುಪಡಿಮಾಡಿ ಪ್ರಕರಣದ (ಎ) ಉಪ ಪ್ರಕರಣದ (1)ನೇ ಖಂಡದ (ಎಫ್) ಉಪ ಖಂಡದ ತರುವಾಯ ಈ ಕೆಳಗಿನವುಗಳನ್ನು ಸೇರ್ಪಡೆ ಮಾಡಲು ಉದ್ದೇಶಿಸಿದೆ. (ಜಿ) ಬೇಸಾಯ ಆಧಾರಿತ ಕೈಗಾರಿಕೆಗಳು, (ಹೆಚ್) ಬೇಸಾಯ ಸಂಸ್ಕರಣಾ ಕೈಗಾರಿಕೆಗಳು, (ಐ) ಸುಗ್ಗಿಯ ನಂತರದ ಕಾರ್ಯಾರಂಭ ಮತ್ತು ಬೇಸಾಯ ಮೂಲ ಸೌಕರ್ಯ.

ಪ್ರಕರಣದ 2ರ (ಎ) (1) ಉಪ ಪ್ರಕರಣವು "ಬೇಸಾಯ" ಎಂಬ ಪರಿಭಾಷೆಯ ವ್ಯಾಖ್ಯಾನವನ್ನು ಒಳಗೊಂಡಿದೆ. ಇದುವರೆಗೆ "ಬೇಸಾಯ"ವು (ಎ) ಮೀನುಗಾರಿಕೆ (ಎಎ) ಉದ್ಯಾನ ಕೃಷಿ (ಬಿ) ಬೆಳೆ, ಹುಲ್ಲು ಅಥವಾ ತೋಟದ ಉತ್ಪನ್ನಗಳನ್ನು ಬೆಳೆಯುವುದು (ಸಿ) ಹೈನುಗಾರಿಕೆ (ಡಿ) ಕೋಳಿ ಸಾಕಾಣಿಕೆ (ಇ) ಪಶು ಸಂವರ್ಧನೆ (ಎಫ್) ಮೇಯಿಸುವುದು ಇವುಗಳನ್ನು ಮಾತ್ರ ಒಳಗೊಂಡಿತ್ತು, ಈಗ ಹೊಸ ತಿದ್ದುಪಡಿ ಅಂಗೀಕರಿಸಲ್ಪಟ್ಟರೆ, ಮೇಲೆ ಹೇಳಿರುವ (ಜಿ) (ಹೆಚ್) ಮತ್ತು (ಐ) "ಬೇಸಾಯ"ದ ವ್ಯಾಪ್ತಿಗೆ ಸೇರ್ಪಡೆಯಾಗುತ್ತವೆ. ಈ ತಿದ್ದುಪಡಿ ಅಂಗೀಕರಿಸಲ್ಪಟ್ಟರೆ ಕೈಗಾರಿಕೆಗಳಿಗೆ ಕೃಷಿ ಕ್ಷೇತ್ರದೊಳಗೆ ನುಗ್ಗಲು ಬಾಗಿಲು ತೆರೆದಂತಾಗುತ್ತದೆ. ಕೃಷಿಗೂ ಕೈಗಾರಿಕೆಗೂ ವ್ಯತ್ಯಾಸ ಇರುವುದಿಲ್ಲ, ಕೈಗಾರಿಕೋದ್ಯಮಿಗಳು ತಾವೂ ರೈತರೆಂದು ಹೇಳಿಕೊಂಡು ಕೃಷಿ ಕ್ಷೇತ್ರಕ್ಕೆ ಸಿಗುವ ಎಲ್ಲಾ ರಿಯಾಯ್ತಿಗಳನ್ನು, ಸೌಲಭ್ಯಗಳನ್ನು ಕಬಳಿಸಲು ಸಾಧ್ಯವಾಗುತ್ತದೆ. ಅವರ ಒಟ್ಟು ಆದಾಯವನ್ನು ಕೃಷಿ ಆದಾಯವೆಂದು ತೋರಿಸಲು ಅವಕಾಶ ಸಿಕ್ಕಂತಾಗುತ್ತದೆ.

ಇನ್ನೊಂದು ಅಷ್ಟೇ ಅಪಾಯಕಾರಿ ತಿದ್ದುಪಡಿ ಕಾಯ್ದೆಯ 107ನೇ ಪ್ರಕರಣದ (1) ನೇ ಉಪ ಪ್ರಕರಣದಲ್ಲಿ (viii)ನೇ ಖಂಡದ ತರುವಾಯ ಈ ಕೆಳಗಿನವುಗಳನ್ನು ಸೇರಿಸುವ

ಈ ಪದ್ಧತಿ ಜಾರಿಗೆ ಬಂದರೆ ರೈ
ಬದಲು ಕಂಪೆನಿಗಳು ಬೇಸಾ
ಮಾಡುತ್ತವೆ. ಈಗಾಗಲೇ "ಗುತ್ತಿಗೆ ಕೃ
ನಮ್ಮ ರಾಜ್ಯದಲ್ಲಿ ಜಾರಿಯಾಗಿದೆ. ಅ
ಮುಂದುವರಿದ ಭಾಗವಾಗಿ ಕಂಪೆನಿ
ರೈತರ ಭೂಮಿಯನ್ನು ವ
ತೆಗೆದುಕೊಂಡು ರಾಜ್ಯದಲ್ಲಿ "ಕಂ
ಕೃಷಿ"ಯನ್ನು ಆರಂಭ ಮಾಡಲು ಬಿ
ಸರ್ಕಾರ ಹೊರಟಿದೆ. ಇದರಿಂದ
ಅಮೆರಿಕ, ಯುರೋಪಿನ ದೇಶಗ
ಜಾರಿಯಲ್ಲಿರುವ ಈ ಪದ್ಧತಿ ಕರ್ನಾಟ
ಕ್ರಮೇಣ ಕಾಲಿಡಲಿದೆ. ರೈತರೆಲ್ಲ
ಕೃಷಿ ಕ್ಷೇತ್ರದಿಂದ ಹೊರದಬ್ಬಿ ಕಂಪೆನಿ
ಕೃಷಿ ಮಾಡುವುದಾದರೆ ಅದರ
ಯಾರಿಗೆ ಲಾ

ಪ್ರಸ್ತಾವ (ix) ಈ ಮುಂದಿನ ಎಂದರೆ 1. ಹೂಡಿಕೆದ… ಇತರ ಉದ್ದೇಶಗಳಿಗಾಗಿ ಭೂಮಿಯನ್ನು ಪರಿವರ್ತಿಸ… 2. ರೈತರು ಭೂಮಿಯ ಮಾಲೀಕರಾಗಿ ಮುಂದು… ತಕ್ಕದ್ದು; 3. ಭೂಮಿಗೆ ಯಾವುದೇ ರೀತಿಯ ಹಾ… ಉಂಟುಮಾಡತಕ್ಕದ್ದಲ್ಲ; 4. ಬೇಸಾಯ, ಬೇ… ಸಂಬಂಧಿಸಿದ ಚಟುವಟಿಕೆಗಳು ಮತ್ತು ಬೇಸಾಯ… ಮಾರುಕಟ್ಟೆ/ರಫ್ತು ಹಾಗೂ ಮೌಲ್ಯವೃದ್ಧಿ ಚಟುವಟಿ… ಹೂಡಿಕೆದಾರರು ಕೈಗೊಳ್ಳತಕ್ಕದ್ದು; 5. ಬೇಸಾಯ… ಚಟುವಟಿಕೆಗಳು ಕರ್ನಾಟಕ ಸರ್ಕಾರವು ರೂಪಿಸಿದ… ಬೇಸಾಯ ವ್ಯಾಪಾರ ಅಭಿವೃದ್ಧಿ ಕಾರ್ಯನೀತಿ, 2… ಅನುಸಾರವಾಗಿ ಇರತಕ್ಕದ್ದು.

ಈ ತಿದ್ದುಪಡಿ ಜಾರಿಗೆ ಬಂದರೆ, ಮೇಲಿನ ಷರ… ಒಳಪಟ್ಟು, ಖಾಸಗೀ ಕೃಷಿ ಭೂಮಿಯನ್ನು ದೀರ್ಘಾ… ಗೇಣಿ ಆಧಾರದ ಮೇಲೆ ಕೃಷಿ ವಾಣಿಜ್ಯ ಚಟುವಟಿ… ನೀಡುವುದು ಸಾಧ್ಯವಾಗಲಿದೆ. ಅಂದರೆ ರೈತರ ಭೂಮಿ… ಕೈಗಾರಿಕೋದ್ಯಮಿಗಳಿಗೆ ದೀರ್ಘಾವಧಿ ಗೇ… ಆದಾರದಲ್ಲಿ ಕೊಡಲು ಸಾಧ್ಯವಾಗಲಿದೆ.

ಇದುವರೆಗೆ ಭೂಮಾಲಿಕನ ಭೂಮಿಯನ್ನು ಭೂ… ಬಡವ ಗೇಣಿ ಆಧಾರದಲ್ಲಿ ಪಡೆದು ಬೇಸಾಯ ಮಾ… ಈಗ ಬಡ ರೈತ ತನ್ನ ಅಡಚಣೆಗಾಗಿ ತನ್ನ ಭೂಮಿ… ಬೃಹತ್ ಕಂಪೆನಿಗಳಿಗೆ ಗೇಣಿ ಅಧಾರದಲ್ಲಿ … ಕಂಪೆನಿಯ ಗುಲಾಮನಾಗಲು ಸರ್ಕಾರ ಆಹ್ವಾನ ನೀ… ದೀರ್ಘಾವಧಿ ಗೇಣಿ ಎಂದರೆ ಶಾಶ್ವತವಾಗಿ ರೈ… ಭೂಮಿಯನ್ನು ಕಂಪೆನಿಗೆ ಕೊಟ್ಟಂತೆ!

ಈ ಪದ್ಧತಿ ಜಾರಿಗೆ ಬಂದರೆ ರೈತರ ಬದಲು ಕಂ… ಬೇಸಾಯ ಮಾಡುತ್ತವೆ. ಈಗಾಗಲೇ "ಗುತ್ತಿಗೆ ಕೃಷಿ"… ರಾಜ್ಯದಲ್ಲಿ ಜಾರಿಯಾಗಿದೆ. ಅದರ ಮುಂದುವರಿದ ಭಾ… ಕಂಪೆನಿಗಳು ರೈತರ ಭೂಮಿಯನ್ನು ವಶಕ್ಕೆ ತೆಗೆದುಕೊ… ನಮ್ಮ ರಾಜ್ಯದಲ್ಲಿ "ಕಂಪೆನಿ ಕೃಷಿ"ಯನ್ನು ಆರಂಭಮಾ… ಬಿಜೆಪಿ ಸರ್ಕಾರ ಹೊರಟಿದೆ. ಇದರಿಂದಾಗಿ ಅ… ಯುರೋಪಿನ ದೇಶಗಳಲ್ಲಿ ಜಾರಿಯಲ್ಲಿರುವ ಕಂಪೆ… ಪದ್ಧತಿ ಕರ್ನಾಟಕಕ್ಕೆ ಕ್ರಮೇಣ ಕಾಲಿಡಲಿದೆ. ನಮ್ಮ ದೇ… ಹಾಗೂ ಕರ್ನಾಟಕ ರಾಜ್ಯದಲ್ಲಿ ರೈತ ಆಧಾರಿತ… ಪದ್ಧತಿ ಇದೆ. ಇಲ್ಲಿ ಇಂದಿಗೂ ಶೇ 60 ರಿಂದ 70… ಜನ ಕೃಷಿಯನ್ನೇ ಅವಲಂಬಿಸಿದ್ದಾರೆ. ರೈತರೆಲ್ಲರನ್ನು… ಕ್ಷೇತ್ರದಿಂದ ಹೊರದಬ್ಬಿ ಕಂಪೆನಿಗಳು ಕೃಷಿ ಮಾಡುವು… ಅದರಿಂದ ಯಾರಿಗೆ ಲಾಭ?.ಇಲ್ಲಿ ರೈತರಿಗೆ, ಕೂಲಿ… ಕೆಲಸ ಮಾಡಿ ಜೀವನ ನಿರ್ವಹಿಸಲು ಸಹ … ಸಿಗಲಾರದು. ಏಕೆಂದರೆ ಕಂಪೆನಿಗಳು ಕೃಷಿ ಕೆಲಸಗ… ಯಂತ್ರಗಳನ್ನೇ ಹೆಚ್ಚು ಉಪಯೋಗಿಸುತ್ತಾರೆಯೇ ಹೊ… ಕೂಲಿ ಆಳುಗಳನ್ನಲ್ಲ.

ಕರ್ನಾಟಕದಲ್ಲಿ ಭೂಸುಧಾರಣೆಗಳ … ಆರಂಭವಾಗಿರುವ ಈ ದಾಳಿ ಆಕಸ್ಮಿಕವಲ್ಲ. ಕೇ… ಕಾಂಗ್ರೆಸ್ ಸರ್ಕಾರ ಮತ್ತು ರಾಜ್ಯದ ಬಿಜೆಪಿ ಸರ್ಕಾ…



ಲ್ಲುತ್ತಿರುವ ಉದಾರೀಕರಣ ನೀತಿಗಳ ಫಲ ವೆ. ಈ ವಿಷಯದಲ್ಲಿ ಕೇಂದ್ರ ಕಾಂಗ್ರೆಸ್ ಹಾಗೂ ಬಿಜೆಪಿ ಸರ್ಕಾರಗಳ ಧೋರಣೆಗಳಲ್ಲಿ ಯಾವುದೇ ವಿಲ್ಲ.

ಭೂ ಸುಧಾರಣೆ ಈಗ ಮುಗಿದುಹೋದ ಅಧ್ಯಾಯ ಪ್ರತಿಪಾದಿಸಲಾಗುತ್ತಿದೆ. ಇಂದು ಭೂಮಿಯನ್ನು ಭಾಗಗಳಾಗಿ ಪರಿವರ್ತಿಸುವ ಭೂಸುಧಾರಣೆಗಳು ಲ್ಲ. ಇಂಥ ಬೇಕಾಗಿರುವುದು ಸಾವಿರಾರು ಎಕರೆ ಯನ್ನು ಒಂದೇ ಕಡೆ ಸೇರಿಸುವ ಭೂ ಸುಧಾರಣೆಗಳು ಪಾದಿಸಲಾಗುತ್ತಿದೆ. ಸಣ್ಣ ಹಿಡುವಳಿಗಳು ಯಕವಲ್ಲ ಎಂಬ ವಾದದಲ್ಲಿ ಸತ್ಯಾಂಶವಿದೆ. ವೆಚ್ಚ ತ್ತದೆ, ಉತ್ಪಾದನೆ ಕಡಿಮೆ ಆಗುತ್ತದೆ. ಆದರೆ ಬೇಕಾಗುವ ಮೂಲ ಸೌಕರ್ಯಗಳನ್ನು ಅವರ ಸುವ ದರಗಳಲ್ಲಿ ಸರಿಯಾಗಿ ಪೂರೈಕೆ ಮಾಡಿದರೆ ದನೆ ಕಡಿಮೆಯಾಗುವುದಿಲ್ಲ. ಇದನ್ನು ನಾವು ಪಶ್ಚಿಮ ದಲ್ಲಿ ಎಡರಂಗ ಸರ್ಕಾರದ ಆಡಳಿತಾವಧಿಯಲ್ಲಿ ದ್ದೇವೆ. ಆ ಅವಧಿಯಲ್ಲಿ ಒಬ್ಬ ರೈತನೂ ಅಲ್ಲಿ ತ್ಯೆ ಮಾಡಿಕೊಂಡಿರಲಿಲ್ಲ ಎಂಬುದೇ ಇದಕ್ಕೆ ಸಾಕ್ಷಿ.

ರೈತರೇ ತಮ್ಮ ಭೂಮಿಯನ್ನು ಕೈಗಾರಿಕೆಗಳಿಗೆ ಲು ಸಿದ್ಧರಿದ್ದಾರೆ. ಕೆಲವು ಸಂಘಟನೆಗಳು ಅನಗತ್ಯವಾಗಿ ನಡುವೆ ಗೊಂದಲ ಉಂಟುಮಾಡುತ್ತಿವೆ" ಎಂದು ಗಾ ಮಂತ್ರಿ ಮುರುಗೇಶ್ ನಿರಾಣಿ ಆರೋಪಿಸುತ್ತಾರೆ. ತಮ್ಮ ಭೂಮಿಯನ್ನು ಬಿಟ್ಟು ಓಡಿಹೋಗುವಂತಹ ಯನ್ನು ಈ ದೇಶದಲ್ಲಿ ಕಳೆದ 20 ವರ್ಷಗಳಿಂದ ಣ ಮಾಡಲಾಗಿದೆ. ಕೃಷಿ ಸಬ್ಸಿಡಿಗಳ ಕಡಿತ, ಸಾಂಸ್ಥಿಕ ಕಡಿತ, ಕೃಷಿ ಉತ್ಪನ್ನಗಳಿಗೆ ಯೋಗ್ಯ ಬೆಲೆ ಸಿಗದಂತಹ ನಿರ್ಮಾಣ ಮಾಡಿ ರೈತರು ಇಂದು ಕೃಷಿ ಒಂದು ದಾಯಕ ಉದ್ಯೋಗವಾಗಿ ಉಳಿದಿಲ್ಲ ಎಂದು ತಮ್ಮ ರಹವನ್ನು ಶಪಿಸುತ್ತಾ ಕೃಷಿ ಮಾಡುವುದನ್ನೇ ವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ್ದಾರೆ. ಕ್ಷೇತ್ರವನ್ನು ಪ್ರವೇಶ ಮಾಡಿ, ರೈತರ ಭೂಮಿಯನ್ನು ಸಿಕೊಂಡು ಲಾಭ ಮಾಡಬೇಕೆಂದು ಹವಣಿಸುತ್ತಿರುವ ಮ ಮತ್ತು ವಿದೇಶಿ ಕಾರ್ಪೋರೇಟ್ ಕಂಪನಿಗಳಿಗೆ ಮತ್ತು ರಾಜ್ಯ ಸರ್ಕಾರಗಳು ಕೃಷಿಯನ್ನು, ಕೃಷಿ ಯನ್ನು ಒತ್ತೆ ಇಡಲು ಹೊರಟಿವೆ.


ರಾಜ್ಯ ಬಿಜೆಪಿ ಸರ್ಕಾರ 2010ರಲ್ಲಿ ಹೊರತಂದ ದೃಷ್ಟಿ 2020" ಎಂಬ ದಾಖಲೆಯಲ್ಲಿ ಕೃಷಿ ದ ಬಿಜೆಪಿ ಧೋರಣೆ ಅಡಕವಾಗಿದೆ. ಕೃಷಿಯಲ್ಲಿ ರುವ ಜನಗಳನ್ನು ಇಂದಿನ ಶೇ 61 ರಿಂದ 2022ರ ಶೇ 40ಕ್ಕೆ ಇಳಿಸುವುದು. ಅಂದರೆ 60-70 ಲಕ್ಷ ನ್ನು ಕೃಷಿಯಿಂದ ಬಿಡಿಸಿ ಕೃಷಿಯೇತರ ಕೆಲಸಗಳಲ್ಲಿ ಗಿಸುವುದು ಎಂದು ಅರ್ಥ. ಇದೊಂದು ಹಸವಲ್ಲದೆ ಬೇರೆನೂ ಅಲ್ಲ. ಇಷ್ಟೊಂದು ಜನ ಣ ಪ್ರದೇಶಗಳಿಂದ ಇಂದು ನಗರ ಪ್ರದೇಶಗಳಿಗೆ ಬರುವುದು ಸರ್ಕಾರಕ್ಕೆ ಸಮಸ್ಯೆಯಾಗಿಲ್ಲ!. ರೈತರು ಭೂಮಿಯನ್ನು ಬೀಳುಬಿಟ್ಟು ನಗರ ಪ್ರದೇಶಗಳಿಗೆ ದೆ ಆ ಭೂಮಿಯನ್ನು ಯಾವುದೇ ವಿರೋಧವಿಲ್ಲದೆ ನಪಡಿಸಿ ಕಂಪನಿಗಳಿಗೆ ನೀಡಬಹುದು ಎಂದು ಯುವರು ಕನಸು ಕಾಣುತ್ತಿದ್ದಾರೆ.

ಕೃಷಿಯ ಮೇಲಿನ ಅವಲಂಬನೆ ಕಡಿಮೆ ಆಗುವುದು ವಿದೆ. ಅದಕ್ಕಾಗಿ ಕೈಗಾರಿಕೀಕರಣ ಆಗಬೇಕಾಗಿದೆ. ಅದು ಸಹಜವಾದ ಪರಿವರ್ತನೆಯಾಗಬೇಕಾಗಿದೆ. ಕಾರಿ ಭೂಸುಧಾರಣೆಗಳನ್ನು ಜಾರಿಗೆ ತಂದು, ಕೃಷಿಯಲ್ಲಿ ಉತ್ಪಾದನೆಯನ್ನು ಸಾಧಿಸಿ, ರೈತಾಪಿ ಜನವಿಭಾಗಗಳ ಪುಕೊಳ್ಳುವ ಸಾಮರ್ಥ್ಯವನ್ನು ಹೆಚ್ಚು ಮಾಡುವ ಜೊಯೊಂದಿಗೆ ಕೈಗಾರಿಕೀಕರಣವೂ ಬೆಳೆದು ಸಾತಾಗಬೇಕು. ರೈತರನ್ನು, ಕೃಷಿ ಕೂಲಿಕಾರರನ್ನು ಭಿಕಾರಿಗಳನ್ನಾಗಿ ಮಾಡಿ ಕೈಗಾರಿಕೀಕರಣ ಮಾಡುವು ದ ಏನು ಪ್ರಯೋಜನ?. ಆದ್ದರಿಂದ ಕಂಪೆನಿಗಳ ಕೂಲಿಕ್ಕಾಗಿ ಮತ್ತು ಸ್ವಂತಕ್ಕೆ ವ್ಯಕ್ತಿಗತ ಲಾಭ ಪಡೆಯುವ ದ್ದೇಶದಿಂದ ಭೂಸುಧಾರಣೆಗಳ ಕಾಯ್ದೆಗೆ ಪ್ರತಿಗಾಮಿ ಪಡಿಗಳನ್ನು ತರುವ ಬಿಜೆಪಿ ಸರಕಾರದ ಕ್ರಮವನ್ನು ವಾಗಿ ವಿರೋಧಿಸಬೇಕಾಗುತ್ತದೆ.

ದುರಂತವಾಗಿ, ಇಂತಹ ಕ್ರೂರ ಮಾರಕ ಮಸೂದೆ ಸನದಲ್ಲಿ ಅಂಗೀಕಾರಕ್ಕಾಗಿ ಮಂಡನೆಯಾಗಲಿದೆ. ದುರದೃಷ್ಟವಶಾತ್ ವಿಧಾನಸಭೆಯಲ್ಲಿನ ವಿರೋಧ ಪಕ್ಷಗಳಾದ ಗ್ರೆಸ್, ಜೆಡಿಎಸ್ ಪಕ್ಷಗಳು ಯಾವುದೇ ಗಂಭೀರವಾದ ಧಪನ್ನಾಗಲೀ, ಪ್ರತಿರೋಧದ ವಿರೋಧವನ್ನಾಗಲೀ ಲ್ಲಿ, ಇತ್ತೀಚಿನ ದಿನಗಳಲ್ಲಿ ಎಂತಹುದೇ ಗಂಭೀರ ಯಿದ್ದರೂ ಯಾವುದೇ ಚರ್ಚೆಯೂ ಇಲ್ಲದೇ ಗಳ ನಡುವೆಯೇ ಅಂಗೀಕರಿಸುವ ಪ್ರಜಾಪ್ರಭುತ್ವ ಧಿ ಕುತಂತ್ರಗಳನ್ನೇ ಅನುಸರಿಸಲಾಗುತ್ತಿದೆ. ಈಗಲೂ ಗೆ ಈ ವಿಧೇಯಕಕ್ಕೆ ಒದಗಿದರೆ ಆಶ್ಚರ್ಯವಿಲ್ಲ. ಕಾಣದ ಕಣಿತದ ಎದುರಲ್ಲಿ ಲಕ್ಷಾಂತರ ಪುಟ್ಟ ಕತ್ತು ಕೊಯ್ಯಲು ಅವರು ಹೇಸುವುದಿಲ್ಲ.

• ಎಸ್.ವೈ.ಗುರುಶಾಂತ್

ಪುಸ್ತಕ ಮಾರಾಟ ಮತ್ತು ಲೇಖಕರ ಪರದಾಟ



ಇತ್ತೀಚೆಗೆ ಗ್ರಂಥಾಲಯದ ಕುರಿತು ಪತ್ರಿಕೆಗಳಲ್ಲಿ ಲೇಖನಗಳು ಬರುತ್ತಿರುತ್ತವೆ. ಗ್ರಂಥಾಲಯಕ್ಕೆ ಬರುವ ಕೃತಿಗಳ ಕುರಿತು, ಆಯ್ಕೆ ಸಮಿತಿಯ ಕುರಿತು, ಗ್ರಂಥಗಳ ಆಯ್ಕೆಯ ಕುರಿತು ಹಲವರು ತಮ್ಮ ಅಭಿಪ್ರಾಯಗಳನ್ನು ಸೂಚಿಸಿದ್ದಾರೆ. ಈ ವಿಷಯದಲ್ಲಿ ನನ್ನ ಕೆಲವು ಅನುಭವಗಳನ್ನು ಹೇಳಲಿಚ್ಛಿಸುತ್ತೇನೆ.

1994 ರಿಂದ ನನ್ನ ಕೃತಿಗಳನ್ನು ನಾನೇ ಪ್ರಕಟಿಸಲಾರಂಭಿಸಿದೆ. ಆಗ ಗ್ರಂಥಾಲಯ ಇಲಾಖೆಗೆ ಪುಸ್ತಕ ಕಳುಹಿಸಿ ಇಲಾಖೆಯ ಪತ್ರಕ್ಕಾಗಿ ಕಾಯುತ್ತಿದ್ದೆ. ಆಗ ಗ್ರಂಥಗಳನ್ನು ಆಯ್ಕೆ ಮಾಡುವುದು ಮಾತ್ರ ಗ್ರಂಥಾಲಯದ ಕೆಲಸವಾಗಿತ್ತೇ ಹೊರತು ಈಗಿನಂತೆ ಸಗಟು ಖರೀದಿ ಇರಲಿಲ್ಲ. ಈ ಆಯ್ಕೆಯಾದೊಡನೆ ಬೆಂಗಳೂರಿನ ಕೆಲವು ಮಾರಾಟಗಾರರು ಲೇಖಕರನ್ನು ಸಂಪರ್ಕಿಸಿ ಆಯ್ಕೆಯಾದ ಕೃತಿಗಳನ್ನು 50% ರಿಯಾಯಿತಿಯಂತೆ 100 ಅಥವಾ 150 ಪ್ರತಿಗಳನ್ನು ನಮ್ಮಿಂದ ತರಿಸಿಕೊಂಡು ಗ್ರಂಥಾಲಯಕ್ಕೆ ಬೇಕಾದಷ್ಟನ್ನು ಸರಬರಾಜು ಮಾಡಿ ಉಳಿದ ಪ್ರತಿಗಳನ್ನು ನಮಗೆ ಹಿಂತಿರುಗಿಸುತ್ತಿದ್ದರು. ಪುಸ್ತಕ ಕಳುಹಿಸುವ ಮತ್ತು ಹಿಂದಕ್ಕೆ ಪಡೆಯುವ ಎಲ್ಲಾ ಖರ್ಚುವೆಚ್ಚಗಳನ್ನೂ ನಾವೇ ಭರಿಸಬೇಕಾಗಿತ್ತು, ಮಂಗಳೂರಿನಲ್ಲಿ ಪುಸ್ತಕ ಪ್ರಕಟಿಸಿ ಈ ಎಲ್ಲಾ ಖರ್ಚುವೆಚ್ಚಗಳನ್ನೂ ಭರಿಸಿದಾಗ ಆ ಲೇಖಕರಿಗೆ ದೊರೆಯುವುದೇನೆಂದು ಒಮ್ಮೆ ಯೋಚಿಸಿ.


2002 ರಿಂದ 2004 ವರೆಗೆ ನಾನು ಅನಿರೀಕ್ಷಿತವಾಗಿ ಇಲಾಖೆಯ ಉನ್ನತ ಮಟ್ಟದ ಆಯ್ಕೆ ಸಮಿತಿಯ ಸದಸ್ಯಳಾದೆ. ನಾನು ಇದಕ್ಕಾಗಿ ಯಾರನ್ನೂ ಸಂಪರ್ಕಿಸಿರಲಿಲ್ಲವಾದರೂ ವಿಶ್ವವಿದ್ಯಾನಿಲಯದ ಡಾ. ಚೆನ್ನಣ್ಣ ವಾಲೀಕಾರ ಅವರು ಸಮಿತಿಯ ಅಧ್ಯಕ್ಷರಾಗಿದ್ದು ನಾನು ಮತ್ತು ಆರ್ಯಾಂಬ ಪಟ್ಟಾಭಿಯವರು ಮಹಿಳಾ ಸದಸ್ಯೆಯಾಗಿದ್ದೆವು. ಆಗ ಆಯ್ಕೆಗಾಗಿ ಸುಮಾರು 5000 ಕೃತಿಗಳು ಬರುತ್ತಿದ್ದವು. ಈ ಆಯ್ಕೆಗಾಗಿ ನಾವು ತಿಂಗಳಿಗೊಮ್ಮೆ ಅಥವಾ ಎರಡು ತಿಂಗಳಿಗೊಮ್ಮೆ ಸೇರುತ್ತಿದ್ದೆವು.

'ಈಗ ಆಯ್ಕೆಗಾಗಿ 7000 ಪುಸ್ತಕಗಳು ಬರುತ್ತಿವೆ. ಅವುಗಳೆಲ್ಲವನ್ನೂ ಒಂದೆರಡು ದಿನಗಳಲ್ಲಿ ಓದುವುದು ಹೇಗೆ? ಪುಸ್ತಕಗಳನ್ನು ಓದದೆ ಗ್ರಂಥಾಲಯ ಇಲಾಖೆ ತುರ್ತಾಗಿ ಪುಸ್ತಕಗಳನ್ನು ಆಯ್ಕೆ ಮಾಡುತ್ತಿದ್ದಾರೆ' ಎಂಬ ಆರೋಪವನ್ನು ಇಲಾಖೆಯ ಮೇಲೆ ಹೊರಿಸಲಾಗಿದೆ.

ಆಯ್ಕೆ ಸಮಿತಿಯವರು ಈ ಎಲ್ಲಾ ಕೃತಿಗಳನ್ನೂ ಓದಿ ಆಯ್ಕೆ ಮಾಡುವುದು ಅಸಾಧ್ಯ ಎಂಬುದು ಎಲ್ಲರಿಗೂ ತಿಳಿದಿರಬಹುದು. ಆಯ್ಕೆಗಾಗಿ ಈ ಎಲ್ಲಾ ಕೃತಿಗಳನ್ನೂ ಓದಬೇಕಾದ ಅಗತ್ಯವೂ ಇಲ್ಲ. ಸಮಿತಿಯಲ್ಲಿರುವ ಹೆಚ್ಚಿನ ಸದಸ್ಯರು ಸಾಹಿತಿಗಳೇ ಆಗಿದ್ದು ಯಾರ ಕೃತಿಗಳು ಹೇಗಿರುತ್ತವೆ ಎಂಬುದನ್ನು ಅವರು ಊಹಿಸಬಲ್ಲರು. (ಈಗಿನ ಆಯ್ಕೆ ಸಮಿತಿಯ ಕುರಿತು ನನಗೆ ತಿಳಿಯದು). ಮಾತ್ರವಲ್ಲ ಹೆಚ್ಚಿನ ನಿಯತಕಾಲಿಕೆಗಳಲ್ಲಿ ಪುಸ್ತಕ ವಿಮರ್ಶಾ ವಿಭಾಗಗಳಿದ್ದು ಆಯಾ ವರ್ಷದಲ್ಲಿ ಪ್ರಕಟವಾದ ಕೃತಿಗಳ ವಿಮರ್ಶೆಗಳು ಈ ಭಾಗಗಳಲ್ಲಿರುತ್ತವೆ. ಲೇಖಕರಿಗೆ ಇತರ ಲೇಖಕರ ಕುರಿತು ತಿಳವಳಿಕೆ ಇದ್ದು ಅಂತಹ ಉತ್ತಮ ಕೃತಿಗಳನ್ನು ಓದಿಯೂ ಇರುತ್ತಾರೆ. ಕೆಲವು ಪ್ರಕಾಶನ ಸಂಸ್ಥೆಗಳ ಕುರಿತೂ ತಿಳಿವಳಿಕೆ ಇರುತ್ತದೆ. ಉದಾಹರಣೆಗೆ ಲಂಕೇಶ್ ಪ್ರಕಾಶನ. ಆ ಪಟ್ಟಿಯನ್ನು ನೋಡಿದರೆ ಆ ಕೃತಿಗಳನ್ನು ಓದಿಯೇ ಆಯ್ಕೆ ಮಾಡಬೇಕಾದ ಅಗತ್ಯವಿಲ್ಲ. ಹಾಗೆಯೇ ಇನ್ನೂ ಕೆಲವು ಉತ್ತಮ ಪ್ರಕಾಶನ ಸಂಸ್ಥೆಗಳ ಕೃತಿಗಳೂ ಚೆನ್ನಾಗಿಯೇ ಇರುತ್ತವೆ. ಕೃತಿಗಳ ಮುನ್ನುಡಿ, ಬೆನ್ನುಡಿಗಳನ್ನು ಓದಿದರೂ ಒಳಗಿನ ಹೂರಣದ ಅಂದಾಜಾಗುತ್ತದೆ. 5,000 ಅಥವಾ 7,000 ಕೃತಿಗಳನ್ನು ಓದಿಯೇ ಆಯ್ಕೆ ಮಾಡಬೇಕೆನ್ನುವುದು ಬಾಲಿಶ ಯೋಚನೆಯೇ ಆಗಿದೆ. ತೀರಾ ನಿಷ್ಪ್ರಯೋಜಕವೆನ್ನಿಸುವ ಪುಸ್ತಕಗಳನ್ನು ನಮ್ಮ ಸಮಿತಿ ಆಯ್ಕೆ ಮಾಡುತ್ತಲೂ ಇರಲಿಲ್ಲ. ನಮ್ಮ ಸಮಿತಿ ಅಸ್ತಿತ್ವದಲ್ಲಿ ಇದ್ದಷ್ಟು ದಿನ ಯಾವುದೇ ಅಪವಾದವೂ ಇರಲಿಲ್ಲ. ನಿರ್ದೇಶಕರಾಗಲಿ, ಇಲಾಖೆಯ ಇತರ ಸಿಬ್ಬಂದಿಗಳಾಗಲಿ ಎಲ್ಲರೂ ಪರಸ್ಪರ ಸಹಕರಿಸುತ್ತಾ ಎಲ್ಲರೂ ಒಗ್ಗಟ್ಟಿನಿಂದ ಕಾರ್ಯಾಚರಿಸುತ್ತಿದ್ದೆವು.

ಹೀಗೆ ಗ್ರಂಥಗಳು ಆಯ್ಕೆಗೊಂಡರೂ ಸಗಟು ಖರೀದಿಯ ನಿಯಮವಿಲ್ಲದೆ ಲೇಖಕ ಪ್ರಕಾಶಕರಿಗಂತೂ ಬಹಳ ತೊಂದರೆಯಾಗುತ್ತಿತ್ತು, ಹೀಗಾಗಿ ಒಂದು ಬಾರಿ ನಮ್ಮ ಇಡೀ ತಂಡ ಅಧ್ಯಕ್ಷರೊಡನೆ ಮುಖ್ಯಮಂತ್ರಿಗಳ ಬಳಿಗೆ ಹೋಗಿ ಸಗಟು ಖರೀದಿಗಾಗಿ ಅವರನ್ನು ಒತ್ತಾಯಿಸಲು ತೀರ್ಮಾನಿಸಿದೆವು. ಹಾಗೆಯೇ ಒಂದು ದಿನ ನಾವೆಲ್ಲರೂ ಆಗ ಮುಖ್ಯಮಂತ್ರಿಗಳಾಗಿದ್ದ ಎಸ್.ಎಂ. ಕೃಷ್ಣ ಅವರ ಬಳಿಗೆ ಹೋಗಿ ಸಗಟು ಖರೀದಿಗಾಗಿ ಅವರ ಬಳಿ ಬೇಡಿಕೆಯೊಡ್ಡಿದೆವು. ಮುಂದಿನ ವರ್ಷ ಸರ್ಕಾರ ಗ್ರಂಥಗಳ ಸಗಟು ಖರೀದಿಗಾಗಿ 5 ಕೋಟಿ ರೂಪಾಯಿಗಳ ಅನುದಾನವನ್ನು ಮಂಜೂರು ಮಾಡಿತು. ಇದಲ್ಲದೆ ಕಲ್ಕತ್ತಾದ ರಾಜಾರಾಮ್‌ಮೋಹನ್ ರಾಯ್ ಲೈಬ್ರರಿ ಫೌಂಡೇಷನ್ ನಿಂದಲೂ ಅನುದಾನ ಬರುತ್ತಿದೆ. ಇವೆರಡನ್ನೂ ಸಮನಾಗಿ ವಿಲೇವಾರಿ ಮಾಡಿದರೆ ಎಲ್ಲ ಲೇಖಕರಿಗೂ ಪ್ರಕಾಶನಕ್ಕೆ ಹಾಡಿದ ಹಣ ದೊರೆಯಬಹುದು. ಪ್ರಕಾಶಕರೆಲ್ಲರೂ ಸತ್ಯಸಂಧರಾಗಿದ್ದರೆ ಮಾತ್ರ.... ಈ ಸತ್ಯಸಂಧತೆ ಮತ್ತು ಪ್ರಾಮಾಣಿಕತೆಯ ಕೊರತೆಯಿಂದಾಗಿ ಇಂದು ನೈಜ ಲೇಖಕ ಪ್ರಕಾಶಕರಿಗೆ ತೊಂದರೆಯಾಗುತ್ತಿದೆ.

ಬೆಂಗಳೂರು ಮಹಾನಗರ ಪಾಲಿಕೆಯ ಆಡಳಿತದಲ್ಲಿ ಐದು ನಗರ ಕೇಂದ್ರ ಗ್ರಂಥಾಲಯಗಳಿವೆ. ಈ ಗ್ರಂಥಾಲಯಗಳಿಗೆ ನಗರಪಾಲಿಕೆಯಿಂದ ಸಮನಾಗಿ ಹಣ



ಬಿಡುಗಡೆಯಾದರೆ ಇವರು ಸಾಕಷ್ಟು ಪುಸ್ತಕಗಳನ್ನು ಖರೀದಿಸಬಹುದು. ಆದರೆ ಇಲ್ಲಿಯೂ ಎಲ್ಲೆಡೆಗಳಂತೆ ಅವ್ಯವಸ್ಥೆಗಳಿವೆ. ಹಿಂದಿನ ಆಯ್ಕೆ ಸಮಿತಿಯ ಅವಧಿ ಮುಗಿದಬಳಿಕ ಹಲವು ತಿಂಗಳುಗಳವರೆಗೆ ಹೊಸ ಆಯ್ಕೆ ಸಮಿತಿಯ ರಚನೆಯಾಗದೆ 2010 ರ ಕೊನೆಯಲ್ಲಷ್ಟೇ ಆಯ್ಕೆ ಸಮಿತಿಯ ರಚನೆಯಾಯಿತು. ಹೀಗಾಗಿ 2010 ರ ಗ್ರಂಥಗಳ ಆಯ್ಕೆಯಾಗಿ ಪುಸ್ತಕಗಳ ಸಗಟು ಖರೀದಿಗೆ 2011 ರ ಕೊನೆಯಲ್ಲಿ ಬೇಡಿಕೆಯಾಗಿ ಲೇಖಕರು ಮತ್ತು ಪ್ರಕಾಶಕರು 2010 ರಲ್ಲಿ ಪ್ರಕಟಗೊಂಡ ಗ್ರಂಥಗಳನ್ನು ಕಳುಹಿಸುವಾಗ 2011 ಮುಗಿದು 2011 ರ ಕೃತಿಗಳ ಆಯ್ಕೆಗಾಗಿ ಗ್ರಂಥಾಲಯದಲ್ಲಿ ಸಿದ್ಧತೆ ನಡೆದಿತ್ತು, 'ನಾವು ಗ್ರಂಥಗಳ ಆಯ್ಕೆಗಾಗಿ ಒಂದು ವರ್ಷ ಹಿಂದಿದ್ದೇವೆ' ಎಂದು ಇಲಾಖೆಯ ಸಿಬ್ಬಂದಿಗಳು ಹೇಳುತ್ತಿದ್ದರು. ಈಗ ನಗರಪಾಲಿಕೆಯ ಗ್ರಂಥಾಲಯಗಳಲ್ಲಿ 2010 ರ ಗ್ರಂಥಗಳ ಖರೀದಿಯ ಕುರಿತು ವಿಚಾರಿಸುವಾಗ "ನಾವು ಇನ್ನೂ 2009 ರ ಗ್ರಂಥಗಳ ಖರೀದಿಯನ್ನು ಮುಗಿಸಿಲ್ಲ, 2012ರ ವರೆಗೆ ಅವುಗಳ ಖರೀದಿಗೆ ಅವಧಿ ಇದೆ. 2013 ರ ಜನವರಿಯಲ್ಲಷ್ಟೇ 2010 ರ ಗ್ರಂಥಗಳನ್ನು ಖರೀದಿಸಲಾರಂಭಿಸುತ್ತೇವೆ" ಎನ್ನುತ್ತಾರೆ. 2010 ರ ಆಯ್ಕೆ ಸಮಿತಿ ರಚನೆ ಆದ ವಿಳಂಬವೇ ಈ ಎಲ್ಲಾ ಅವ್ಯವಸ್ಥೆಗೆ ಕಾರಣವಾಗಿದೆ.

ಈ ಮೊದಲೆಲ್ಲಾ ಲೇಖಕರು ಕಾಲೇಜುಗಳಿಗೆ ಭೇಟಿ ನೀಡಿ ಅಥವಾ ಪತ್ರ ಬರೆದು ತಮ್ಮ ಕೃತಿಗಳನ್ನು ಕಾಲೇಜುಗಳ ಗ್ರಂಥಾಲಯಗಳಿಗೆ ಮಾರಾಟ ಮಾಡುತ್ತಿದ್ದು ತಲಾ ಎರಡು ಅಥವಾ ಮೂರು ಪ್ರತಿಗಳನ್ನು ಪ್ರಾಂಶುಪಾಲರು ಕೊಂಡುಕೊಳ್ಳುತ್ತಿದರು. ಆದರೆ ಇತ್ತೀಚೆಗೆ ಕಾಲೇಜುಗಳೂ ಲೇಖಕರಿಂದ ನೇರವಾಗಿ ಕೊಂಡುಕೊಳ್ಳುವುದನ್ನು ನಿಲ್ಲಿಸಿವೆ. ಕೆಲವು ಕಾಲೇಜುಗಳ ಪ್ರಾಂಶುಪಾಲರೊಡನೆ ನಾನು ದೂರವಾಣಿ ಮುಖಾಂತರ ಕೇಳಿದರೆ, "ನೀವು ಪುಸ್ತಕಗಳನ್ನು ಅಂಗಡಿಗೆ ಕೊಡಿ. ನಾವು ಅಂಗಡಿಗಳಿಂದ ಕೊಳ್ಳುತ್ತೇವೆ!" ಎನ್ನುತ್ತಾರೆ. ಅಂಗಡಿಗಳಲ್ಲಂತೂ ಎಲ್ಲದಕ್ಕೂ ಕಮಿಷನ್ ಇದ್ದೇ ಇದೆ! ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲ ಕಾಲೇಜುಗಳೂ ಜಿಲ್ಲೆಯ ಲೇಖಕರಿಂದ ತಲಾ ಎರಡು ಪ್ರತಿಗಳನ್ನು ಕೊಂಡುಕೊಂಡರೂ ಲೇಖಕ ಪ್ರಕಾಶಕರು ಗ್ರಂಥಾಲಯದ ಆಯ್ಕೆ ಮತ್ತು ಖರೀದಿಗಾಗಿ ಕಾಯಬೇಕಾಗಿರಲಿಲ್ಲ. ವಿಶ್ವವಿದ್ಯಾನಿಲಯಗಳಲ್ಲಿ ಗ್ರಂಥಾಲಯಕ್ಕಾಗಿ ಸರ್ಕಾರದ ಅನುದಾನ ಚೆನ್ನಾಗಿಯೇ ಇದೆ. ಆದರೆ ಅದು ಲೇಖಕರಿಗೆ ಸಮನಾಗಿ ತಲುಪುತ್ತದೆಯೇ? ನನ್ನಿಂದ ಈವರೆಗೆ ಯಾವ ವಿಶ್ವವಿದ್ಯಾನಿಲಯಗಳೂ ತಾವಾಗಿಯೇ ಬೇಡಿಕೆ ಕಳುಹಿಸಿ ಪುಸ್ತಕಗಳನ್ನು ಖರೀದಿಸಿಲ್ಲ. ನಾನೇ ಕೇಳಿಕೊಂಡಾಗ ಕೆಲವು ವಿಶ್ವವಿದ್ಯಾನಿಲಯಗಳು ಅಪರೂಪಕ್ಕೆ ಐದೈದು ಪ್ರತಿಗಳನ್ನು ತರಿಸಿಕೊಂಡಿರಬಹುದು. ಬಿಜಾಪುರದ ಮಹಿಳಾ ವಿಶ್ವವಿದ್ಯಾನಿಲಯ ನನ್ನನ್ನು ಕರೆದು ನನಗೆ ಡಾಕ್ಟರೇಟ್ ನೀಡಿದೆ. ಆದರೆ ನನ್ನ ಕೃತಿಗಳನ್ನು ಕೊಂಡುಕೊಳ್ಳಲಿಲ್ಲ! ಒಂದು ವಿಶ್ವವಿದ್ಯಾಲಯದ ಓರ್ವ ಪ್ರಾಧ್ಯಾಪಕರು ನಮ್ಮೂರಿಗೆ ಬಂದಿದ್ದಾಗ ಅವರ ಕೈಯಲ್ಲೇ ನನ್ನ ಒಂದು ಕೃತಿಯ ನಾಲ್ಕೈದು ಪ್ರತಿಗಳನ್ನು ಕೊಟ್ಟಾಗ ಅವನ್ನು ಕೊಂಡೊಯ್ದು ಮಾರಾಟ ಮಾಡಿದ್ದೂ ಇದೆ!

ಕಳೆದ ವರ್ಷ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಯುಜಿಸಿ ಯಿಂದ ಗ್ರಂಥಗಳ ಖರೀದಿಗಾಗಿ 5 ಕೋಟಿ ರೂಪಾಯಿ ಬಿಡುಗಡೆಯಾಗಿದೆ ಎಂಬ ಸುದ್ದಿ ಇತ್ತು, ಇದಕ್ಕಾಗಿ ಕರ್ನಾಟಕದ ಬೇರೆಬೇರೆ ಭಾಗಗಳಿಂದ ಮಾತ್ರವಲ್ಲ ಉತ್ತರ ಭಾರತದಿಂದಲೂ ಹಲವಾರು ಮಾರಾಟಗಾರರು ಹಿಂದಿ ಮತ್ತು ಇಂಗ್ಲಿಷ್ ಪುಸ್ತಕಗಳನ್ನು ಹೊತ್ತುಕೊಂಡು ಬಂದರು. ಎಲ್ಲರೂ ಕ್ಯಾಂಪಸ್‌ನಲ್ಲಿ ಟೆಂಟ್ ಹಾಕಿ ಕುಳಿತರು. ಟೆಂಟ್‌ಗೆ ಬಾಡಿಗೆಯನ್ನೂ ಕೊಡಬೇಕಾಯಿತು. ಎಲ್ಲ ಪ್ರಾಧ್ಯಾಪಕರೂ, ಉಪನ್ಯಾಸಕರೂ ಬಂದು ಭೇಟಿ ನೀಡಿದರೇ ಹೊರತು ಪುಸ್ತಕಗಳ ವ್ಯಾಪಾರ ಮಾಡಲಿಲ್ಲ! ಬೆಂಗಳೂರಿನ ದೊಡ್ಡ ಪುಸ್ತಕ ವ್ಯಾಪಾರಿಗಳು ಯಾರೂ ಟೆಂಟ್ ಹಾಕಿ ಕುಳಿತುಕೊಳ್ಳಲೂ ಇಲ್ಲ. ಉತ್ತರ ಭಾರತದಿಂದ ಬಂದ ಮಾರಾಟಗಾರರು ವಿಶ್ವವಿದ್ಯಾಲಯವನ್ನು ಬೈಯುತ್ತಾ ಹಿಂತಿರುಗಿ ದರಂತೆ. ಹಾಗಾದರೆ ಈ ಐದು ಕೋಟಿಯ ವ್ಯಾಪಾರ ಎಲ್ಲಾಯಿತು? ಈ ವಿವರ ಅಲ್ಲಿಗೆ ಹೋದ ಮಾರಾಟಗಾರರೊಬ್ಬರ ಅನುಭವವಾಗಿತ್ತು.

ಇಂತಹ ಕಾರಣಗಳಿಂದಾಗಿ ಲೇಖಕರು ಗ್ರಂಥಾಲಯದ ಸಗಟು ಖರೀದಿಗಾಗಿ ಕಾಯುವುದಲ್ಲದೆ ಬೇರೆ ದಾರಿ ಇಲ್ಲ ಎಂಬಂತಾಗಿದೆ. ಕನ್ನಡ ಭಾಷೆಯನ್ನು ಉಳಿಸಬೇಕು, ಕನ್ನಡ ಮಾಧ್ಯಮದಲ್ಲೇ ಶಿಕ್ಷಣ ನೀಡಬೇಕು ಎಂಬುದೆಲ್ಲವೂ ಬರೀ ಭಾಷಣಗಳಿಗೆ ಮಾತ್ರ ಸೀಮಿತ ಗೊಂಡಿದೆ. ಕನ್ನಡ ಭಾಷೆ ಉಳಿಯಬೇಕಾದರೆ ಆ ಭಾಷೆಯಲ್ಲಿ ಬರೆಯುತ್ತಿರುವ ಸಾಹಿತಿಗಳಿಗೆ ಸಾಕಷ್ಟು ಪ್ರೋತ್ಸಾಹ ದೊರೆಯಬೇಕು.

ಇತ್ತೀಚೆಗೆ ಪುಸ್ತಕ ಮಾರಾಟಗಾರರೆಲ್ಲರೂ ಪ್ರಕಾಶಕರಾಗಿದ್ದಾರೆ. ಅವರ ಆಸಕ್ತಿ ತಮ್ಮ ಪ್ರಕಾಶನ ಗ್ರಂಥಗಳನ್ನು ಮಾರಾಟ ಮಾಡುವುದರಲ್ಲಿದೆಯೇ ಹೊರತು ಇತರರ ಕೃತಿಗಳನ್ನು ಮಾರಾಟ ಮಾಡುವುದರಲ್ಲಿ ಅವರಿಗೆ ಆಸಕ್ತಿ ಇಲ್ಲ, ಲೇಖಕ ಪ್ರಕಾಶಕರಿಗೆ ಪುಸ್ತಕ ಮಾರಾಟದ ಸ್ವಂತ ಅಂಗಡಿ ಇದ್ದರೆ ಮಾತ್ರ ಅವರು ಉಳಿಯಬಲ್ಲರು ಎಂಬಂತಹ ಪರಿಸ್ಥಿತಿ ಲೇಖಕರಿಗೆ ಎದುರಾಗಿದೆ. ನವ ಕರ್ನಾಟಕದಂತಹ ಕೆಲವೇ ಕೆಲವು ಪುಸ್ತಕ ಮಾರಾಟಗಾರರಿಂದಾಗಿ ಲೇಖಕರು ಕೊಂಚ ಉಸಿರು ಬಿಡುವಂತಾಗಿದೆ ಎಂದಷ್ಟೇ ಹೇಳಲಿಚ್ಛಿಸುತ್ತೇನೆ.

• ಸಾರಾ ಅಬೂಬಕ್ಕರ್

ಆ ಮಾತು

?#@*&%!

ಕರುಪ್ಪಾಯಿ ಬೀದಿ ನಲ್ಲಿಯಲ್ಲಿ ನೀರು ಹಿಡಿಯಲು ನಿಂತಿದ್ದಾಗ ಪೊನ್ನನ್ 'ಆ ಮಾತನ್ನು' ಆಡಿದ್ದನ್ನು ಕೇಳಿದ್ದಳು. ಅವಳಿಗೆ ಇಷ್ಟು ಚಿಕ್ಕ ಹುಡುಗ ಆ ಪದವನ್ನು ಉಪಯೋಗಿಸಿದ್ದು ಹಿಡಿಸಲಿಲ್ಲ. ಆದರಿಂದ ಕರುಪ್ಪಾಯಿ "ಅದೇನು ನೀನು ಅಂದಿದ್ದು ಹೇಳು ಮತ್ತೆ" ಎಂದು ಹುಡುಗ ಪೊನ್ನನ್‌ನನ್ನು ಕೇಳಿದಳು.

ಹುಡುಗ ಅದೇ ಮಾತನ್ನು ಬೇಕಾಬಿಟ್ಟಿಯಾಗಿ ಉಚ್ಚರಿಸಿ ತನ್ನ ಬುಗುರಿಗೆ ಚಾಟ ಸುತ್ತತೊಡಗಿದ.

"ಆ ಮಾತಿನ ಅರ್ಥ ನಿಂಗೊತ್ತಾ" ಎಂದು ಅವಳು ಪುನಃ ಹುಡುಗನನ್ನು ಕೇಳಿದಳು. ಪೊನ್ನನ್ ಬೇಕುಬೇಕೂಂತಾನೆ ಆ ಪದವನ್ನು ನಿಧಾನವಾಗಿ ಉಚ್ಚರಿಸಿ ಕರುಪ್ಪಾಯಿಗೆ "ನಿನ್ನದನ್ನು ನೀನು ನೋಡಿಕೊ" ಎಂದುಬಿಟ್ಟ. ಇದು ಕರುಪ್ಪಾಯಿಯನ್ನು ಕೆರಳಿಸಿಬಿಟ್ಟಿತು. ಅವಳು ಓಡಿ ಹೋಗಿ ಹುಡುಗನನ್ನು ಹಿಡಿದುಕೊಂಡು 'ಆ ಮಾತನ್ನು' ಸೇರಿಸಿದಂತೆ ಬೈಗುಳಗಳ ಮಳೆ ಕರೆಯುತ್ತ ಅವನಿಗೆ ಚೆನ್ನಾಗಿ ಹೊಡೆದುಬಿಟ್ಟಳು.

ಪೊನ್ನನ್ ಕಿರುಚುತ್ತಾ 'ಆ ಮಾತನ್ನು' ಹತ್ತು ಬಾರಿ ಹೇಳಿದ. ಇಷ್ಟರಲ್ಲಿ ಪೊನ್ನನ್‌ನ ಅಕ್ಕ ಪೂಂಗವನಮ್ ಅಲ್ಲಿ ಪ್ರತ್ಯಕ್ಷಳಾಗಿ "ಅವನಿಗ್ಯಾಕೆ ಹೊಡೆದೆ"ಎಂದು ಕೋಪದಿಂದ ಕರುಪ್ಪಾಯಿಯನ್ನು ಕೇಳಿದಳು. ಕರುಪ್ಪಾಯಿ ಹೊಡೆದದ್ದಕ್ಕೆ ಕಾರಣ ಕೊಟ್ಟಳು. ಸಣ್ಣ ಹುಡುಗ ಇಂಥ ಕೆಟ್ಟ ಮಾತನ್ನು ಆಡಿದ್ದಾನೆ ಎನ್ನುತ್ತ ಅವಳೂ ಆ ಮಾತನ್ನು ತಾನೂ ಆಡಿದಳು. ಆಗ ಪೂಂಗವನಮ್ "ಅವನು ಹುಡುಗ 'ಆ ಮಾತನ್ನು' ಅಂದಮಾತ್ರಕ್ಕೆ ಹೊಡೆಯಲು ನೀನ್ಯಾರು?" ಎಂದು ಕರುಪ್ಪಾಯಿಯ ಮೇಲೆ ಜೋರು ಮಾಡುತ್ತ 'ಆ ಪದ'ವನ್ನು ಎರಡು ಬಾರಿ ಉಪಯೋಗಿಸಿದಳು.

ಆ ನಲ್ಲಿಯ ಹತ್ತಿರ ಸೇರಿದ್ದ ಜನರಲ್ಲಿ ಇದೊಂದು ಚರ್ಚೆಗೆ ಗ್ರಾಸವಾಯಿತು. ಕ್ರಮೇಣ ಎಲ್ಲರೂ ಬಾಯಿ ಹಾಕಿ "ಹುಡುಗ 'ಆ ಮಾತು' ಆಡಿರಬಹುದು. ಆದರೆ ಹೊಡೆಯಲು ಕರುಪ್ಪಾಯಿ ಯಾರು? ಅವನೇನು ಅವಳ ಮಗನೇ" ಎಂದು ವಾದಿಸಲಾರಂಭಿಸಿದರು. ಚಿಕ್ಕ ಮಕ್ಕಳು ಹಾಗೆಲ್ಲಾ ಮಾತನಾಡಬಾರದು. ಎನ್ನುತ್ತಲೇ ಕಮಲಂ ಎರಡು ಸಲ 'ಆ ಮಾತನ್ನು' ಉರುಳಿಸಿದಳು. ಮುದುಕಿ ಪಟ್ಟು ಉಪ್ಪಿನಕಾಯಿಯನ್ನು ಚಪ್ಪರಿಸುವಂತೆ 'ಆ ಪದ'ವನ್ನು ನಿಧಾನವಾಗಿ ಹೇಳುತ್ತಾ "ಕರುಪ್ಪಾಯಿ ಮಾಡಿದ್ದು ಒಳ್ಳೆದಾಯ್ತು, ಚಿಕ್ಕ ಮಕ್ಕಳನ್ನು ತಿದ್ದಬೇಕು" ಎಂದು ತನ್ನದೂ ಒಂದು ಮಾತು ಸೇರಿಸಿದಳು.

ಇಷ್ಟೆಲ್ಲಾ ಆಗುತ್ತಿರುವಾಗ ಪೊನ್ನನ್ ಮಾತ್ರ ಕಿರುಚಿಕೊಂಡು ಪುನಃ ಪುನಃ 'ಆ ಪದ'ವನ್ನೇ ಮಂತ್ರದಂತೆ ಜಪಿಸುತ್ತಿದ್ದ.


ಇಷ್ಟು ಹೊತ್ತಿಗೆ ಒಂದು ಥಳಥಳ ಹೊಳೆವ ತಾಮ್ರದ ಬಿಂದಿಗೆಯೊಂದಿಗೆ ಬಂದ ಮಂಗಳಂ ಬಿಂದಿಗೆಯನ್ನು ನೀರಿಗಾಗಿ ಕ್ಯೂನಲ್ಲಿಟ್ಟು ಪೂಂಗವನಮ್‌ಳನ್ನು "ಏನೊ ಗಡಿಬಿಡಿ ನಡೆದಿದೆಯಲ್ಲಾ ಅದೇನು" ಎಂದು ಕೇಳಿದಳು. ಪೂಂಗವನಮ್ ನಡೆದ ಘಟನೆಯನ್ನು ವಿವರಿಸುತ್ತ 'ಆ ಮಾತ'ನ್ನು ಹತ್ತು ಬಾರಿ ಅಂದಳು. ನಡೆದದ್ದನ್ನು ಕೇಳಿ ಗೊಂದಲಕ್ಕೀಡಾದ ಮಂಗಳಂ ಕೊನೆಗೆ ವಿಷಯದ ಸಾಧಕ ಬಾಧಕಗಳನ್ನು ತೂಗಿ ನೋಡಿ "ಏನೇ ಆಗಲಿ ಮಕ್ಕಳು ಈ ರೀತಿ ಮಾತನಾಡಬಾರದು" ಎಂದು ಹೇಳುತ್ತಲೇ 'ಆ ಪದ'ವನ್ನು ಮಾತಿನ ನಡುವೆ ತೂರಿಸಿದಳು.

ಪೊನ್ನನ್ ನಿಧಾನವಾಗಿ ಎಳೆದೆಳೆದು ಅಳುತ್ತ ನಡುವೆ ನಿಮಿಷಕ್ಕೊಂದರಂತೆ 'ಆ ಮಾತನ್ನು' ಪೋಣಿಸುತ್ತಲೇ ಇದ್ದ.

ಅದೇ ಮಾರ್ಗವಾಗಿ ಕೆಲಸಕ್ಕೆ ಹೋಗುತ್ತಿದ್ದ ಏಳುಮಲೈ ನಲ್ಲಿಯ ಹತ್ತಿರ ನಿಂತ. ಸೇದುತ್ತಿದ್ದ ಮೋಟು ಬೀಡಿಯನ್ನು ಆತ್ಲಾಗೆ ಎಸೆದು ಕರುಪ್ಪಾಯಿಯನ್ನು "ಇಲ್ಲೇನು ನಡೆಯುತ್ತಿದೆ" ಎಂದು ಕೇಳಿದ.

ಕರುಪ್ಪಾಯಿ ಏಳುಮಲೈ ತನಗೆ ಸಪೋರ್ಟ್ ಮಾಡಬಹುದೆಂದು ನಿರೀಕ್ಷಿಸಿಕೊಂಡು ಅವನಿಗೆ ನಡೆದ ಘಟನೆಯ ಬಗ್ಗೆ 'ಆ ಮಾತನ್ನು' ಬಳಸಿಕೊಂಡು ವಿವರವಾಗಿ ಹೇಳಿದಳು. ಏಳುಮಲೈ ತಾನು ಯಾರ ಪರ ವಹಿಸಬೇಕೆಂದು ತಿಳಿಯದೆ ತಬ್ಬಿಬ್ಬಾದ. ಪೊನ್ನನ್ ಅಕ್ಕ ಪೂಂಗವನಮ್ ಮಧ್ಯೆ ಬಾಯಿ ಹಾಕಿ "ಏನೊ ಚಿಕ್ಕ ಹುಡುಗ 'ಆ ಮಾತನ್ನು' ಅಂದುಬಿಟ್ಟ ಅಂತ ಇವಳು ಹೊಡೆಯಬಹುದೇ" ಎಂದು ಕೇಳಿದಳು. ಅವಳ ಮಾತಿನಲ್ಲಿ 'ಆ ಪದ' ಹಲವಾರು ಬಾರಿ ನುಸುಳಿಕೊಂಡಿತ್ತು.

ಏಳುಮಲೈ 'ಆ ಪದ'ದಿಂದಲೇ ತನ್ನ ಮಾತನ್ನು ಪ್ರಾರಂಭಿಸಿ "ನೀವು ಹೆಂಗಸರಿಗೆ ಜಗಳ ಆಡೋದು ಬಿಟ್ರೆ ಬೇರೆ ಕೆಲಸವಿಲ್ಲ?" ಎಂದು 'ಆ ಪದ'ವನ್ನು ಗೊಣಗುತ್ತಲೇ ಅಲ್ಲಿಂದ ಕಂಬಿಕಿತ್ತ.




ಈ ವಾಗ್ವಾದಕ್ಕೆ ಇನ್ನೂ ಅನೇಕರು ಕೈ ಜೋಡಿಸಿದ ಅವರೆಲ್ಲಾ ಎರಡು ಗುಂಪುಗಳಾಗಿ 'ಆ ಪದದ' ವಿರೋಧವಾಗಿ ಮಾತಾನಾಡತೊಡಗಿದರು. ಸಹಜವ ಕರುಪ್ಪಾಯಿ ಮತ್ತು ಪೂಂಗವನಮ್ ಪರ, ವಿರೋ ಪಾರ್ಟಿಗಳ ನೇತಾರರಾಗಿ, ತಮ್ಮ ವಾದವೇ ಸರಿಯೆಂ ಕಚ್ಚಾಡುವ ಫಿಲಾಸಫಿ ಪ್ರೊಫೆಸರ್‌ಗಳಂತೆ ಕಚ ಲಾರಂಭಿಸಿದರು. ಈ ವಾಗ್ಯುದ್ಧದಲ್ಲಿ ನಾನಿಲ್ಲಿದ್ದೇನೆ ಎಂ 'ಆ ಪದ' ವಿಜೃಂಭಿಸಲಾರಂಭಿಸಿತು.

ಇಷ್ಟರಲ್ಲಿ ಪೊನ್ನನ್‌ನ ಅಳುವಿನ ವಾಲಗ ನಿಧಾನ ತಾಳಿ, ಎರಡು ನಿಮಿಷಕ್ಕೊಂದರಂತೆ 'ಆ ಪದ' ಅ ಬಾಯಿಂದ ಹೊರಬರತೊಡಗಿತು. ಇದುವರೆಗೆ ಒಂ ಖಾಲಿ ಟಾರ್ ಡ್ರಮ್ ಮೇಲೆ ಕುಳಿತು 'ಆ ಮಾತ ಜಪಿಸುತ್ತಿದ್ದ ಪೊನ್ನನ್ ಹಿರಿಯರು ತನ್ನ ಕಡೆ ಗವ ಕೊಡದೆ ಅವರದೇ ಗಲಾಟೆ ಪ್ರಪಂಚದಲ್ಲಿರುವುದನ್ನು ನೋ ತೆಪ್ಪಗೆ ತನ್ನ ಜೊತೆಗಾರರನ್ನು ಸೇರಲು ಕಾರ್ಪೊರೇಶ ಪಾರ್ಕಿನ ಕಡೆ ತೆರಳಿದ.

ಆ ಉಲ್ಲಾಸಮಯ ಬೆಳಗಿನ ಸಮಯ ಪೂಂಗವನ ಕರುಪ್ಪಾಯಿ ಮುಂತಾದ ಹೆಂಗಸರೂ, ಗಂಡಸರೂ ಸೇರಿ 'ಆ ಪದ'ವನ್ನು ಒಂದು ನೈತಿಕ ಪ್ರಶ್ನೆಯನ್ನಾಗಿಸಿಕೊಂ ಹೋರಾಡಿದರು. ಅವರೆಲ್ಲಾ ಚದುರಿ ಹೋಗುವ ಮು 'ಆ ಮಾತನ್ನು' ಒಂದು ಸಾವಿರ ಸಲವಾದರೂ ಅಂದಿರಬೇ

ಇಂಗ್ಲಿಷ್ ಮೂಲ: ಓ.ಟಿ.ರವೀಂದ್ರ
ಕನ್ನಡಕ್ಕೆ : ಪದ್ಮ ಶ್ರೀರಾವ

ಕಾಲಚಕ್ರ




ಕೋಟೆ ಕೊತ್ತಲಗಳ ಕಟ್ಟಿದವರು
ಅರಮನೆಗಳಲ್ಲಿ ಬಾಳಿದವರು
ಸಾಮ್ರಾಜ್ಯಗಳ ಆಳಿದವರು
ಏನಾದರು? ಕಡೆಗೊಮ್ಮೆ
ಕಾಲಗರ್ಭದಲ್ಲಿ ಹುದುಗಿ
ಮಣ್ಣಾದರು.

ಕಾಲ ನ್ಯಾಯವ ಮರೆತರೆ
ಕತ್ತಲೆಯೊಳಗಿನ ಮೌನ
ಬೆಳಕಿನೊಳಗಿನ ಶಬ್ದದೊಂದಿಗೆ
ಯುದ್ಧ ಸಾರುತ್ತದೆ.

ಕಾಲ ಜ್ಞಾನವ ಮರೆತರೆ
ಬದುಕಿನೊಳಡಗಿರುವ ಹಸಿವು
ಬಡತನದ ಬೇಗೆಯೊಂದಿಗೆ
ಬುಸುಗುಟ್ಟುತ್ತದೆ.

ಕಾಲ ಚಿಕಿತ್ಸೆಯ ಮರೆತರೆ
ನೋವಿನೊಳಡಗಿರುವ ಸಾವು
ಸಂಬಂಧಗಳ ಮರೆತು
ವಿಜೃಂಭಿಸುತ್ತದೆ.

ಕಾಲ ಚಕ್ರವ ತಡೆದರೆ
ಮನುಷ್ಯ ಬಾಲವಿಲ್ಲದ
ಪ್ರಾಣಿಯಾಗುತ್ತಾನೆ
ಮಾನವೀಯತೆ ಕರಗಿ
ಕ್ರೂರತೆ ಹೆಪ್ಪು ಕಟ್ಟುತ್ತದೆ.



ಡಾ.ಡಿ.ಸಿ.ರಾಜಪ್ಪ
ಎಸ್‌ಪಿ, ಬಿಜಾಪುರ

▸5 ಸಮವಸ್ತ್ರದ ದಬ್ಬಾಳಿಕೆ

ಅನುಮತಿ ನಿರಾಕರಿಸಿತ್ತು, ಹಾಡಿಯಾ ಕಾಲೇಜು ಆಡಳಿತ ಮಂಡಳಿಯ ವಿರುದ್ಧ ಏಕಾಂಗಿಯಾಗಿ ಹೋರಾಡಿ, ಹೈಕೋರ್ಟಿನವರೆಗೆ ಹೋಗಿ ಪರೀಕ್ಷೆಗೆ ಹಾಜರಾಗಲು ಅನುಮತಿ ಪಡೆದಿದ್ದರು. ಹಾಗಾಗಿ ರಾಮಕುಂಜೇಶ್ವರ ಕಾಲೇಜಿನ ಪ್ರಿನ್ಸಿಪಾಲರು, ಹಿಜಬ್ ಧರಿಸಿ ಬಂದ ಮುಸ್ಲಿಮ್ ವಿದ್ಯಾರ್ಥಿನಿಯರಿಗೆ ತರಗತಿಗಳಿಗೆ ಪ್ರವೇಶ ನಿರಾಕರಿಸಿರುವ ಕ್ರಮ ಸಂವಿಧಾನ ವಿರೋಧಿ ಎನ್ನುವುದು ಸ್ಪಷ್ಟವಾಗಿದೆ. ಆದಾಗ್ಯೂ ವಿಶ್ವವಿದ್ಯಾಲಯದ ಉಪಕುಲಪತಿಗಳಿಗೆ ಪ್ರಿನ್ಸಿಪಾಲರ ಅಕ್ರಮಕ್ಕೆ ಪ್ರೂಫ್ ಬೇಕಂತೆ!

ಈ ನಡುವೆ ತನ್ನ ಕೊಳಕು ನಾಲಿಗೆ ಮತ್ತು ಕೊಳಕು ಕೆಲಸ-ಎರಡಕ್ಕೂ ಕುಖ್ಯಾತರಾಗಿರುವ ಆರ್‌ಎಸ್‌ಎಸ್ ಧುರೀಣ ಕಲ್ಲಡ್ಕ ಪ್ರಭಾಕರ ಭಟ್ಟರೂ ಸೇರಿದಂತೆ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಖಾಸಗಿ ಸಂಸ್ಥೆಗಳ ಮುಖ್ಯಸ್ಥರು ಸಭೆ ಸೇರಿ ರಾಮಕುಂಜೇಶ್ವರ ಕಾಲೇಜಿನ ಪ್ರಿನ್ಸಿಪಾಲರಿಗೆ ತಮ್ಮ ಬೆಂಬಲ ಸೂಚಿಸುತ್ತ "ಶಿಕ್ಷಣ ಸಂಸ್ಥೆಗಳಲ್ಲಿ ಸಮವಸ್ತ್ರವನ್ನು ಕಡ್ಡಾಯಗೊಳಿಸುವುದು ಆರ್ಥಿಕ, ಸಾಮಾಜಿಕ, ಜಾತೀಯ ಅಸಮಾನತೆಗಳಿಂದ ಹೊರಬರುವ ವೈಜ್ಞಾನಿಕ ವಿಧಾನ" ಎಂದು ಘೋಷಿಸಿದ್ದಾರೆ.

ಈ ಹೇಳಿಕೆಯ ಹಿಂದಿರುವ ಸಂಘ ಪರಿವಾರದ ಹುನ್ನಾರವನ್ನು ಸೂಕ್ಷ್ಮವಾಗಿ ಗಮನಿಸಬೇಕಾಗಿದೆ. ಸಂಪತ್ತು, ಕೃಷಿ ಭೂಮಿ, ಶಿಕ್ಷಣ ಮತ್ತು ಸಾಮಾಜಿಕ ಅವಕಾಶ- ಇವುಗಳಲ್ಲಿ ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು" ಎಂಬ ಧ್ಯೇಯ ವಾಕ್ಯ ಎಂದೂ ಸಂಘಪರಿವಾರದ ಆದರ್ಶವಾಗಿರಲಿಲ್ಲ; ದೇಶದ ಸಕಲ ಜಾತಿಮತ ಧರ್ಮಗಳವರ ನಡುವೆ ಹೋಗಲಿ, ಕನಿಷ್ಠ ಹಿಂದೂ ಧರ್ಮದ ಒಳಗೆ ಸಮಾನತೆ ಕೂಡ ಸಂಘ ಪರಿವಾ ಆದರ್ಶವಲ್ಲ. "ನಾವೆಲ್ಲ ಹಿಂದೂ, ನಾವೆಲ್ಲ ಒಂದು" ಎ ಅದರ ಘೋಷಣೆಯ ಹಿಂದೆ ಇರುವುದು ಹಿಂದೂ ನಡುವೆ ಸಮಾನತೆಯೂ ಅಲ್ಲ, ಭ್ರಾತೃತ್ವವೂ ಅಲ್ಲ; ಬದ ಅವರು ಬಯಸುವುದು ಮುಸ್ಲಿಮರು ಮತ್ತು ಕ್ರೈಸ್ತರ ಒಡೆಯಲು ಹಿಂದೂಗಳ ಒಗ್ಗಟ್ಟು. ಶಿಕ್ಷಣ, ಉದ್ಯೋ ಮುಂತಾದ ಅವಕಾಶಗಳಲ್ಲಿ ಸಮಾನತೆಯ ಬದಲು ಅ ಗುರಿ ಸಂಸ್ಕೃತಿಯ ಏಕರೂಪತೆ. ತನ್ನ ಆಚಾರವಿಚಾರಗಳಿಗೆ ಭಿನ್ನವಾಗಿರುವ ಎಲ್ಲದರ ಕುರಿತೂ ಅಸಹನೆ ಸಂ ಪರಿವಾರದ ಸಿದ್ಧಾಂತದ ಭಾಗವೇ ಆಗಿದೆ.

ರಾಮಕುಂಜೇಶ್ವರ ಕಾಲೇಜಿನ ಪ್ರಿನ್ಸಿಪಾಲ ಗೊತ್ತಿದ್ದೋ, ಗೊತ್ತಿಲ್ಲದೆಯೋ ಈ ಅಸಹನೆಯ ಧೋರ ಅನುಗುಣವಾದ ಒತ್ತಾಯದ ಸಾಂಸ್ಕೃತಿಕ ಏಕರೂಪವ ತನ್ನ ಕಾಲೇಜಿನ ಮೇಲೆ ಹೇರುತ್ತಿದ್ದಾರೆ. ಆದ್ದರಿಂದ ಹಿಂದೂ ವಿದ್ಯಾರ್ಥಿಗಳು ನಾಮ, ಮುದ್ರೆ, ತಿಲಕ, ಓಲೆಗಳ ಧರಿಸಿ ಕಾಲೇಜಿಗೆ ಬರಬಹುದಾದರೆ ಮುಸ್ಲಿಮ್ ವಿದ್ಯಾರ್ಥಿ ಯರು ಹಿಜಬ್ ಯಾಕೆ ಧರಿಸಬಾರದು ಎಂಬ ಪತ್ರಕರ್ತ ಪ್ರಶ್ನೆಗೆ ಅವರ ಬಳಿ ಉತ್ತರವಿಲ್ಲ, ಸದ್ಯ ಪ್ರಿನ್ಸಿಪಾಲ ಮತ್ತು ಕಲ್ಲಡ್ಕ ಪ್ರಭಾಕರ ಭಟ್ಟರು, ಮುಸ್ಲಿಮ್ ವಿದ್ಯಾರ್ಥಿ ಯರ ಪ್ರತಿಭಟನೆಯನ್ನು ಹತ್ತಿಕ್ಕಿದೆವು ಎಂದು ಹೆಮ್ಮೆಯಿ ಬೀಗಬಹುದು. ಆದರೆ ವಿನಾಕಾರಣ ಒಂದು ಸಮುದಾ ವನ್ನು ಅವಮಾನಿಸಿ ಸಂತೋಷಪಡುವುದು ಮಾನ ರೋಗದ ಲಕ್ಷಣ. ಮೊದಲೇ ಅಲ್ಪಸಂಖ್ಯಾತರೂ, ಅವಕ ವಂಚಿತರೂ ಆಗಿರುವ ಮುಸ್ಲಿಮ್ ಸಮುದಾಯದ ವಿದ್ಯಾರ್ಥಿ ಯರನ್ನು ನೋಯಿಸಿದ ರಾಮಕುಂಜೇಶ್ವರ ಕಾಲೇ ಪ್ರಿನ್ಸಿಪಾಲರು ನಿಜಕ್ಕೂ ನಮ್ಮ ಸಹಾನುಭೂತಿಗೆ ಪಾತ್ರ ಅವರ ಸಂತೋಷವೂ ಹೆಚ್ಚುಕಾಲ ಉಳಿಯುವಂತಹದ್ದ

● ಜಿ. ರಾಜಶೇಖ

ಇದ್ದಕಿದ್ದಂಗೆ ಎಡೂರಪ್ಪ ಇರೋಧ ಪಕ್ಷದ ನಾಯಕಾದನಂತೆ!


"ಥೂ, ಯಂಥಾ ಕ್ಯಲಸಾಯ್ತೋ ಮಾವ" ...ಮಕೊಂಡು ಉಗ್ರಿ ಬಂದ.

"ಯಾಕೆ ಅಂಥದೇನಾಯಿತ್ಲ?"

"ಜಗದೀಶ್ ಶೆಟ್ರು ಇಪ್ಪತ್ತೈದು ಸವುರ ಸಾಲಮನ್ನಾ ...ಧ್ಯವುರೆ. ಅದು ಪಾದ್ನೆ ವರಸದಿಂದ ಇಲ್ಲೀಗಂಟ ಸಾಲ ...ಡಿದ್ರೆ ಮಾತ್ರ ಮನ್ನಾ ಆಯ್ತದೆ. ನಾನು ಸಾಲ ...ದಿರದು ಅದಕ್ಕಿಂತ ಹಿಂದಿನ ವರ್ಸ."

"ಏಟು ಸಾಲ ಮಾಡಿದ್ದಿಲಾ?"

"ಐವತ್ತು ಸವುರ ಮಾಡಿದ್ದೀನಿ ಕಣ ಮಾವ. ...ಬಿಡ್ಡಿ ಸೇರಿ ಆರವತ್ತಾಗಿರಬೇಕು. ಆದ್ರೂ ಏನೂ ಪ್ರಯೋಜನ ಇಲ್ಲವಲ್ಲ ಹೇಳು."



"ಸರಕಾರ ನಚ್ಚಿಗಂಡು ಯಾವ ಕ್ಯಲಸ ...ಪಕ್ಕಾದತ್ಲ. ಅವುನು ಸಾಲ ಮನ್ನಾ ...ಪವಾಗ್ಲೂ ಲ್ಯಕ್ಕ ಹಾಕಿರತನೆ. ...ರಕೂ ಲಾಸಾಗಬಾರದು, ರೈತರ ...ಮೂ ವರಿಸಿದಂಗಾಗಬೇಕು. ...ನಿಗಿಂತ ಕುಮಾರಸ್ವಾಮಿ ಸಾಲಮನ್ನಾ ...ಡಿದ್ದೆ ಚನ್ನಾಗಿತ್ತು ಕಂಡ್ಯ" ಎಂದ ...ಮಾವ.

"ಸರಕಾರ ಸಾಲಮನ್ನಾ ಮಾಡೇ ...ತ್ತದೆ ಅಂತ ಸಾಲ ಮಾಡಿದೋರು ...ಶ ವಳ್ಳೆ ರೈತರಲ್ಲ ಕಂಡ್ಯ" ಎಂದ ಸೀರ.

"ನೀನು ಮಾತ್ರ ವಳ್ಳೆ ರೈತ ನೋಡು."

"ನಾನು ಇದ್ದುದರಲ್ಲೇ ಯಂಗೋ ಕಾಲ ಹಾಕ್ತಿನೆ ...ಕು ಈ ಬ್ಯಾಂಕು, ಸರಕಾರದ ಸವಾಸಕೆ ಹೋಗದಿಲ್ಲ ...ಶಿ."

"ಸೀರ ಮಾವ ಮನೆ ಜಪ್ತಿಗೆ ಹೆದರತನೆ ಕಂಡ್ಯ" ...ದಳು ಜುಮ್ಮಿ.

"ಮನೆ ಜಪ್ತಿಗೆ ಅವುನಷ್ಟೇ ಅಲ್ಲ ಕಣೆ, ಯಲ್ಲಾ ...ರೂ ಹೆದರತರೆ. ಮಣ್ಯಾತ್ಮ ನಂಜುಂಡಸ್ವಾಮಿ ಬರದೆ ...ಇಗಿದ್ರೆ ಈಟೊತ್ತಿಗೆ ರೈತರ ಉರು ಬಡಕಂಡು ...ಸಾಕಿರೋರು."

"ಅದೇನೊ ನಿಜಕಂಡ್ಯ. ಆಗ ಸರಕಾರಿ ಜೇಪಿನ ...ದ್ದ ಕೇಳಿದ್ರೆ ಕಾಡುಮೃಗ ದಂಗೆ ಓಡೋರು ರೈತರು. ...ವತ್ತು ನಂಜುಂಡಸ್ವಾಮಿ ಬಂದು 'ಸರಕಾರನೆ ರೈತನಿಗೆ ...ಂಗಾರ. ನೀವ್ಯಾರೂ ಹೆದರಬ್ಯಾಡಿ' ಅಂತ ಹೇಳಿಕೆ ...ಟ್ಟನೋ, ಅವತ್ತೆ ರೈತರು ಯದೆಕೊಟ್ಟು ನಿಂತಿದ್ದು, ...ಮನ್ನಾ ಸುರುವಾದದ್ದು" ಎಂದು ಕಾಳಮಾವ ...ಜುಂಡಸ್ವಾಮಿ ನೆನೆಸಿಕೊಂಡು ಕಣ್ಣು ಮಿನುಗಿಸಿದ.

"ನಂಜುಂಡಸ್ವಾಮಿಗಿಂತ್ಲೂ ಈಗ ಎಡೂರಪ್ನೆ ಜೋರಾಗ್ಯವುನೆ ದೊಡಪ್ಪಾ" ಎಂದುಕೊಂಡು ವಾಟಿಸ್ಸೆ ಬಂದ.

"ನಂಜುಂಡಸ್ವಾಮಿ ಎಲ್ಲೀ, ಎಡೂರಪ್ಪೆಲ್ಲೀ? ಅದ್ಯಾಕೊ ಅಂತ ಓಲಿಕೆ ಮಾಡ್ತಿ?"

"ಹೋಲಿಕೆ ಅಲ್ಲ ಕಣೊ ಉಗ್ರೀ. ಪ್ರಜಾವಾಣಿ ಪೇಪರ್ ನೋಡಿ ಅಂಗಂದೆ. ಇಷ್ಟು ದಿನಕೆ ವಬ್ಬ ವಿರೋಧಪಕ್ಷದ ನಾಯಕ ಸಿಕ್ಕಿದ ಅನ್ನಂಗೆ ಎಡೂರಪ್ಪ ವಿಧಾನಸಭೆಲಿ ಮಾತಾಡಿದ್ದ ಒಂದಕ್ಷರನೂ ಬುಡದಂಗೆ ಬರದವುರೆ."

"ಇದಾನ ಸಭೆಲಿ ಏನಂ ಮಾತಾಡಿದುನ್ನಾ?"

"ವಿಧಾನಸಭೆಲಿ ಥೇಟ್ ವಿರೋಧಪಕ್ಷದೊನಂಗೆ ಮಾತಾಡ್ಯವುನೆ ದೊಡಪ್ಪ. ರೈತರ ಸಾಲಮನ್ನಾ ಮಾಡಿ, ಕುಡಿಯೋರಿಗೆ ನೀರು ಕೊಡಿ, ತಿನ್ನೋರಿಗೆ ಹುಲ್ಲು ಕೊಡಿ, ಬರಪರಿಯಾರ ಬಿಡುಗಡೆ ಮಾಡಿ, ಇದು ಮಾಡದೆಯಿದ್ರೆ ನಾನು ಸುಮ್ಮನಿರದಿಲ್ಲ, ಇಡೀ ಕರ್ನಾಟಕನೆ ತಿರುಕೊಂಡು ಬೈತಿನಿ ಅಂದ."

"ಅದಪ್ಪ ವರಸೆ. ಇವುನಿದ್ದಾಗ ಏನು ಮಾಡಿದ್ನಂತೆ?"

"ಬರೀ ಅಕ್ರಮದಲ್ಲಿ ಮುಳುಗಿದ್ದ ದೊಡಪ್ಪ, ಆಗ ಅವುನೀಗೇಳತಾಯಿರೋ ಕ್ಯಲಸ ಮಾಡಕ್ಕೆ ಟೈಮಿರಲಿಲ್ಲ. ಈಗಂತೂ ಫುಲ್‌ಟೈಂ ಬಿಡುಗಡೆ. ಅದ್ಕೆ ಹಳೆ ವಿರೋಧ ಪಕ್ಷದ ಎಡೂರಪ್ಪನ ಅವುತಾರಾಗ್ಯದೆ."

"ಆ ಇದಾನ ಸಭೇಲಿ ಏನು ಮಾಡ್ತಾರೆ ಅಂತ ಒಂದು ಸತಿ ನೋಡಬೇಕು ಕಂಡ್ಯ"

"ನೋಡಬ್ಯಾಡ ಸೀರ ಚಿಗಪ್ಪ. ನಿನಿಗೆ ಬೇಜಾರಾಗಬಹುದು. ಈಗ್ಯಂಗಿದ್ದಿಯೋ ಅಂಗೆ ಸುಮ್ಮನಿದ್ದುಬುಡು ಅತ್ತಗೆ."

"ಅದ್ಯಾಕ್ಲ ಅಂಗಂತಿ?"

"ನಾನು ಬೇಕಾದಷ್ಟು ಸತಿ ಹೋಗಿದ್ದೀನಿ. ಆದ್ರೆ ಮನ್ನೆ ದಿನ ಹೋದಾಗ ಬಾಳ ಬೇಜಾರಾಯ್ತು"

"ಬೇಜಾರಾಗೋ ಅಂತದೇನಾಯಿತ್ಲ ಅಲ್ಲಿ?" ಎಂದಳು ಜುಮ್ಮಿ.

"ಯಮ್ಮೆಲ್ಲೆಗಳಿಗೆ, ಮಂತ್ರಿಗಳಿಗೆ, ವಿಧಾನಸಭೆ ವಳಗಡೆ ಕುತುಗಂಡು ನಮ್ಮ ವಿಷಯ ಚರ್ಚೆ ಮಾಡಬೇಕು ಅಂತ ಇಂಟರೆಸ್ಟೇ ಇಲ್ಲ ಕಣಕ್ಕ. ಅರ್ಧಕ್ಕಿಂತ ಜಾಸ್ತಿ ಜನ ಹೋಗಿ, ಸಯಿನು ಮಾಡಿ ನಾನು ಭಾಗವಯಿಸಿದ್ದೇ ಅನ್ನೊ ಭತ್ಯ ತಗಳೊ ಪ್ಲಾನ್ ಮಾಡಿಕಂಡು ವಂಟೋಯ್ತರೆ. ಇನ್ನಾವ್ರೊ ವಸಿ ಕೊತಗಂಡು ತೂಗುಡುಸ್ತವೆ. ಈ ಸತಿ ನಾನೋಗಿದ್ದಾಗ ಆ ಕಾಗೇರಿ ಅನ್ನೋ ಕಾಗೆ ಕವ್ವ ಕವ್ವ ಅನ್ನದ ನೋಡಿ ಯರಡು ಬಡನ ಅನ್ನಿಸ್ತು"

"ಅಂತದೇನು ಮಾತಾಡಿದಾ?"

"ಅವುನು ಎಜುಕೇಷನ್ ಮಂತ್ರಿ. ಅಂದ್ರೆ ವಿದ್ಯಾ ಇಲಾಖೆ ಮಂತ್ರಿ. ಇಡೀ ರಾಜ್ಯದ ಪ್ರತಿ ತಾಲೂಕಿನಲ್ಲೂ ಐವತ್ತರಿಂದ ನೂರು ಜನ ಮೇಷ್ಟ್ರು ಕಡಮೆಯಿದ್ದರಂತೆ. ಇವುನು ಯರಡಮೂರೊರ್ಸದಿಂದ ಮೇಷ್ಟ್ರುಗಳಿಗೆ ಕ್ಯಲಸನೆ ಕೊಟ್ಟಿಲ್ವಂತೆ. ಯಾಕೆ ಅಂದ್ರೆ ಹಣಕಾಸಿನ ಇಲಾಖೆಯವರು ಒಪ್ಗಿಗೆ ಕೊಟ್ಟಿಲ್ವಂತೆ."

"ಓಹೊಹೊ, ಅದಕೆ ಕಂಡ್ಯ ಇಸುಗೂಲು ಮುಚ್ಚತಾ ಅವರೆ" ಎಂದ ಸೀರ.

"ಅದೂ ಒಂದುಕಾರಣ ಇರಬಹುದು ಚಿಗಪ್ಪ. ಏಳು ಕ್ಲಾಸ ಯರಡು ಜನ ಮೇಷ್ಟ್ರು ನೋಡ್ತರೆ ಅಂದ್ರೆ, ಯಾವ ತಂದೆತಾಯಿ ಮಕ್ಕಳ ಇಸುಗೂಲಿಗೆ ಕಳಿಸ್ತಾರು? ಸಫಿಸಿಯಂಟ್ ಮೇಸ್ಟ್ರುಗಳಿರೊ ಪ್ರೈವೇಟ್ ಸ್ಕೂಲಿಗೆ ಕಳುಸ್ತರೆ. ಈ ಕಾಗೆ ಮುಂಡೇದು ಬರೀ ತರ್ಲೆ ಕ್ಯಲಸ ಮಾಡಿಕಂಡು ಮೇಷ್ಟ್ರನೇ ನೇಮಕ ಮಾಡಿಲ್ಲ. ವಿಧಾನ ಸಭೇಲಿ ಕೇಳಿದ್ರೆ ಸಬೂಬೇಳ್ತನೆ."

"ಗೋವಿಂದೆಗೌಡ್ರು ಕಾಲ್ದಲಿ ವಸಿ ಮೇಷ್ಟ್ರ ನೇಮಕ ಮಾಡಿದ್ರೇನೊ."

"ಊ ಕಣೊ ಉಗ್ರಿ. ಸಾವುರಾರು ಜನ ತಗಂಡ್ರು. ವಬ್ಬ ಮೇಷ್ಟ್ರರತ್ರನೂ ಒಂದು ಪೈಸ ಮುಟ್ಟದಂಗೆ ಕ್ಯಲಸ ಕೊಟ್ರು ಗೋವಿಂದೆಗೌಡ್ರು. ಇವತ್ತಿಗೂ ವಿದ್ಯಾಮಂತ್ರಿಗಳೆಸುರು ಉಳಿದಿರದು ಯರಡೆ ಕಣೊ. ಒಂದು ಶಂಕರೇ ಗೌಡ್ರು. ಇನ್ನೊಂದು ಗೋವಿಂದೇಗೌಡ್ರು. ಅಂಥ ಖಾತೆಗಳ ಕಾಗೆ ಕೈಲಿ ಕೊಟ್ರೆ ಹಿಂಗೆ ಆಗದು."

"ಸರಿಯಿಲ್ಲ ಬುಡಿವುನು."

"ಇನ್ನೊಂದು ಪ್ಲಾನ್ ಮಾಡಿದ್ದರಂತೆ ಕಣೊ ಉಗ್ರಿ. ಅಂಗೇನಾರ ಆದ್ರೆ ನಮ್ಮೂರಿಗೆ ಬರೊ ವಸಾ ಮೇಷ್ಟ್ರ ಸರಿಯಾಗಿ ಚಕಪ್ ಮಾಡಬೇಕಾಯ್ತದೆ."

"ಅವುರನ್ಯಾಕೆ ತನಿಖೆ ಮಾಡಬೇಕೊ?"

"ಯಾಕೆ ಅಂದ್ರೆ ಈ ಕಾಗೇರಿ ಟೀಮು ಆರೆಸೆಸ್‌ನೋರನ್ನಲ್ಲ ಕರದು ಮೇಷ್ಟ್ರು ಕ್ಯಲಸ ಕೊಡಬೇಕು ಅಂತ ಮಾಡಿದ್ದರಂತೆ. ಅಂಗೇನಾರ ಆದ್ರೆ ಬಾಳ ಡೈಯಿಂಜರು. ನಮುಡುಗ್ರ ನಮ್ಮ ವಿರುದ್ಧನೇ ಎತ್ತಿ ಕಟ್ಟಿಬುಡ್ತರೆ. ಅವುರ ದೂಡೊ ಪಾಠನ ನಾವು ತನಿಖೆ ಮಾಡಬೇಕಾಯ್ತದೆ."

"ಅಂತದಿನ್ನೇನು ಪಾಠ ಮಾಡ್ತರ್ಲ?" ಎಂದಳು ಜುಮ್ಮಿ.

"ಏನು ಮಾಡ್ತರೆ ಗೊತ್ತೇನಕ್ಕ? ಈ ದೇಸಕ್ಕೆ ಸ್ವಾತಂತ್ರ್ಯ ಬಂದಿದ್ದು ಸಾವರಕರನಿಂದ. ದೇಶದಲ್ಲಿ ಇವತ್ತು ಹಿಂದೂ ಧರ್ಮ ಉಳದಿರದು ಗೋಳವಲಕರನಿಂದ. ಭಾರತ ಕಂಡ ಶ್ರೇಷ್ಠ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ. ದೇಶ ಕಂಡ ಒಳ್ಳೆ ಮುಖ್ಯಮಂತ್ರಿ ನರೇಂದ್ರ ಮೋದಿ. ಭಾರತದ ವೀರ ಮಹಿಳೆ ಸುಷ್ಮಾ ಸ್ವರಾಜ್ ಅಂತ ಪಾಠ ಮಾಡ್ತವೆ."

"ಅದರಿಂದ ಏನಾದತೂ?"

"ಭಾಳ ವಳ್ಳೆ ಪ್ರಶ್ನೆ ಕೇಳಿದೆ. ನಿನ್ನಂಥ ತಾಯಿರು ಇದ್ರೆ ಚಡ್ಡಿಗಳ ಕಾರ್ಯಾಚರಣೆ ಸಕ್ಸಸ್ ಆದಂಗೆಯ ಕಣಕ್ಕ. ಮುಂದೆ ಚಡ್ಡಿಗಳು ಮಕ್ಕಳಿಗೆ ಪಾಠ ಮಾಡಿದ್ರೆ ನಾವು ನಿಮಗೇ ಪಾಠ ಮಾಡಬೇಕಾಯ್ತದೆ. ಇರ್ಲಿ ಈಗ ದೇಶಕ್ಕೆ ಸ್ವಾತಂತ್ರ್ಯ ಬಂದದ್ದು ಗಾಂಧಿಮಾತ್ಮನಿಂದ. ಅವುನ ಪಾಲೊಯರ್‍ರಿಂದ. ಆಮ್ಯಾಲೆ ನೆಹರು, ಇಂದ್ರಾಗಾಂಧಿ ಒಂದು ಮೂವತ್ತು ವರ್ಸ ಆಳಿದ್ರಿಂದ, ಮನಮೋಹನ ಸಿಂಗ ಹತ್ತೊರ್ಸ ಆಳಿದ್ರಿಂದ ದೇಸ ಹಿಂಗದೆ. ಇಲ್ದೆಯಿದ್ರೆ ಪಾಕಿಸ್ತಾನದಂಗಾಗದು. ಬೇಡ ಬಿಜೆಪಿಗಳೇ ಆಳಿದ್ರೆ ಪಾಕಿಸ್ತಾನದಂಗಾಗದು ಕಣಕ್ಕ"

ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

"ಏ ಅದೇನೇನೊ ಹೇಳ್ತಿ ಕಂಡ್ಯ, ಒಂದೂ ಗೊತ್ತಾಗದಿಲ್ಲ ನನಿಗೆ."

"ಮುಂದೆ ಗೊತ್ತಾಗಂಗೆ ಹೇಳ್ತಿನಿ. ಈಗ ಪಾಯಿಂಟ್ ಅರ್ಥಮಾಡಿಕೊ. ಸಾಬರು ಸಣ್ಣುಡಗರಿಗೇ ನಮಾಜು ಮಾಡದ್ಯಂಗೆ, ಉಪಾಸ ಮಾಡದ್ಯಂಗೆ, ಬುರುಖ ಹಾಯ್ಕಳದ್ಯಂಗೆ ಅಂತ ಕಲಿಸಿಬುಡ್ತರೆ. ಅದ್ಕೆ ಅವು ಸಾಯ ಗಂಟ ಸಾಬರಾಗಿರತವೆ. ಎಲ್ಲೊ ಕೆಲವು ಸರಿಯಾಗಿರತವೆ. ಅದ ನೋಡಿ ಈ ಆರೆಸೆಸ್ಸಿನೋರು ಸಣ್ಣುಡಗರನೇ ಹಿಡಕಂಡು ಬದ್ಲಾಸಕ್ಯೋಯ್ತಾಯಿದ್ರು. ಈಗ ಅವುರಕೈಗೇ ಅಧಿಕಾರ ಸಿಕ್ಕಿರದ್ರಿಂದ ಪ್ರೈಮರಿ ಸ್ಕೂಲಿಗೇ ಮೇಷ್ಟ್ರು ಮಾಡಿ ಕಳಿಸಿಬುಡ್ತರಂತೆ. ಅಂಗಾದ್ರೆ ಮುಂದೆ ಅನಿವಾರ್ಯವಾಗಿ ಕಿರುಸ್ತಾನ್ರು, ಸಾಬರುಡುಗ್ರು ಸ್ಕೂಲಿಗೋಗದು ಕಷ್ಟ ಆಯ್ತದೆ. ಅವು ಶಿಕ್ಷಣದಿಂದ ದೂರ ಉಳಿತವೆ. ಮತಾಂಧರಾಯ್ತವೆ. ಬಿ.ಜೆ.ಪಿಗೆ ಬೇಕಾಗಿರದು ಅದೆಯ. ಶಕ್ತಿ ರಾಜಕಾರಣ ಶುರುಮಾಡಿಬುಡ್ತರೆ. ಆಗ ನಮ್ಮ ರಾಜ್ಯ ದೇಶ ಯಕ್ಕುಟ್ಟಿ ಹೋಯ್ತದೆ ಕಣಕ್ಕ!!"

ಮಾತಿನ ಮೋಡಿ

ನನ್ನ ಈ ಗೆಳೆಯ ತೀರಾ ಕೆಟ್ಟ ಸ್ಥಿತಿಯಲ್ಲಿರುವವರಿಗೆ ಸಾವಿರಾರು ರೂಪಾಯಿ ಕೊಡುತ್ತಾನೆ; ಇಸಿದುಕೊಂಡವರಲ್ಲಿ ಬಹಳ ಜನ ಹಿಂದಿರುಗಿ ...ಸುವುದೇ ಇಲ್ಲ, ಆದರೆ ಯಾರಾದರೂ ಎರಡು ರೂಪಾಯಿಗೆ ಮೋಸ ಮಾಡಿದರೆ ರೇಗಿ ದೊಡ್ಡ ರಾದ್ಧಾಂತ ಮಾಡುತ್ತಾನೆ: ಅವನ ಕಣ್ಣು ಕೆಂಪಾಗಿ, ಧ್ವನಿ ಗೊಗ್ಗರಾಗುತ್ತದೆ. ನಾನೂ ಅಷ್ಟೇ, ಮೋಸವನ್ನು ಸಹಿಸುವುದಿಲ್ಲ. ಈ ಬಗ್ಗೆ ನಾನು ಬಹಳ ಸಲ ಯೋಚಿಸಿದ್ದೇನೆ. ಯಾಕೆ ಹೀಗೆ ಮೋಸ ಅದರಲ್ಲೂ ನಾವು ನಂಬಿದವರು ಮಾಡಿದ ಮೋಸ ನಮ್ಮನ್ನು ಅಲ್ಲಾಡಿಸುತ್ತದೆ? ಇದಕ್ಕೆ ನಮ್ಮ ನಾಗರಿಕತೆಯಲ್ಲಿಯೇ ಕಾರಣಗಳಿವೆ; ನಾವು ರಚಿಸಿದ ಸರ್ಕಾರ, ನಾವು ರೂಪಿಸಿಕೊಂಡ ಗೆಳೆಯರು, ನಮ್ಮೊಂದಿಗೆ ವ್ಯವಹರಿಸುವ ದಿನಸಿ ಅಂಗಡಿಯವರಿಂದ ಹಿಡಿದು ಜವಳಿ, ಶೂಸ್, ತರಕಾರಿ ಅಂಗಡಿಯವರ ವರೆಗೆ ಎಲ್ಲರೂ ಕನಿಷ್ಠ ಪ್ರಾಮಾಣಿಕತೆಯ ನಿಯಮಗಳನ್ನು ಇಟ್ಟುಕೊಂಡಿದ್ದರೆ ಮಾತ್ರ ನಮ್ಮ ಬದುಕಿಗೆ ಸ್ಥಿರತೆ ಬರುತ್ತದೆ. ನಿಮ್ಮ ನಾಯಕರು ವಂಚಕರಾಗಿದ್ದರೆ ಏನು ಕೆಲಸ ಮಾಡಲು ಸಾಧ್ಯ? ಏನನ್ನು ಸಾಧಿಸಲು ಸಾಧ್ಯ? ...ರೊಂದಿಗೆ ವ್ಯವಹರಿಸುವಾಗ ನಮ್ಮ ಎಚ್ಚರಿಕೆ, ...ಮಾನ, ಪರೀಕ್ಷೆಯಲ್ಲೇ ನಮ್ಮ ಎಲ್ಲ ಶಕ್ತಿ ...ಳೆ ವ್ಯಯವಾಗುತ್ತದೆ. ಆದ್ದರಿಂದಲೇ ಇಂಗ್ಲೆಂಡಿನಲ್ಲಿ ಒಂದು ಸಂಚಿಕೆ ಇದೆ; ಅಲ್ಲಿಯ ಪ್ರಧಾನಿ ಮಹಾ ಸೋಮಾರಿ, ಕ್ರಿಯಾಶಾಲಿ




ಮತ್ತು ಶಕ್ತಿವಂತ. ಯಾಕೆಂದರೆ ಆತ ತಾನೇ ಎಲ್ಲ ಕೆಲಸ ಮಾಡದೆ ಬೇರೆಯವರಿಗೆ ಹಂಚಿರುತ್ತಾನೆ. ಅವರಲ್ಲಿ ಪೂರ್ಣ ವಿಶ್ವಾಸವಿಟ್ಟು ತನ್ನ ಅಧಿಕಾರದ ನೆರವಿನಿಂದ ಅವರ ಕಷ್ಟಗಳನ್ನು ಬಗೆಹರಿಸಿ ಅವರು ಮಾಡಿದ ಕೆಲಸಕ್ಕೆ ಪೂರ್ತಿ ಮನ್ನಣೆ ಸಿಗುವಂತೆ ನೋಡಿಕೊಳ್ಳುತ್ತಾನೆ; ಪ್ರಧಾನಿ ತನ್ನ ಕೆಲಸವನ್ನು ತನ್ನ ಬದುಕಿನ ಒಂದು ವಿಧಾನವಾಗಿ ಮಾಡಿಕೊಂಡಿರುತ್ತಾನೆ. ಆಗ ಮಾತ್ರ ಆತ ಮಾಡುವ ಕೆಲಸದಿಂದ ಅವನಿಗೆ ಸಂತೋಷ ಸಿಗುತ್ತದೆ: ಸಂತೋಷಕರವಲ್ಲದ ಕೆಲಸ ತುಂಬಾ ಕೆಟ್ಟದು. ಇದನ್ನು ವಿಕೇಂದ್ರೀಕರಣವೆನ್ನಿ, ನಾಯಕತ್ವದ ಮುಖ್ಯ ಗುಣ ಅನ್ನಿ, ಏನೇ ಅನ್ನಿ, ಇದೆಲ್ಲ ಮೋಸದಿಂದ ಮುಕ್ತವಾಗಿರುತ್ತದೆ; ತನ್ನ ಪ್ರಧಾನಿಗಾಗಿ ಕೆಲಸ ಮಾಡುವುದು ಮಂತ್ರಿಯ, ಅಧಿಕಾರಿಯ ಹೆಮ್ಮೆಯಾದಂತೆಯೇ ತನ್ನ ಮಂತ್ರಿಗಳೊಂದಿಗೆ ಆಡಳಿತ ನಡೆಸುವುದು ಪ್ರಧಾನಿಯ ಹೆಮ್ಮೆಯ ಕ್ರಿಯೆಯಾಗುತ್ತದೆ.

ಒಬ್ಬ ಮುಖ್ಯಮಂತ್ರಿ ಭ್ರಷ್ಟ ಎಂದು ಇಟ್ಟುಕೊಳ್ಳಿ. ಪ್ರಜಾಪ್ರಭುತ್ವದಲ್ಲಿ-ಅಂದರೆ ಮುಕ್ತ ಸಮಾಜದಲ್ಲಿ-ಭ್ರಷ್ಟತೆಯ ಸುದ್ದಿ ಹೇಗೆ ಪ್ರಯಾಣಿಸುತ್ತದೆ ಅಂದರೆ ಒಬ್ಬ ಟೈಪಿಸ್ಟ್, ಒಬ್ಬ ಜವಾನ ಭ್ರಷ್ಟತೆಯ ಸುದ್ದಿಯನ್ನು ಎಲ್ಲೆಲ್ಲೂ ಹರಡು ತ್ತಾನೆ. ಈ ಜವಾನ ಮತ್ತು ಟೈಪಿಸ್ಟ್‌ಗೂ ಯಾವುದು ಪ್ರಾಮಾಣಿಕತೆ, ಯಾವುದು ಭ್ರಷ್ಟತೆ ಎನ್ನುವುದು ಗೊತ್ತಿರುತ್ತದೆ.

ಇಷ್ಟರಲ್ಲಿ ನೀವು ಊಹಿಸಿರಬಹುದು. ಜನಕ್ಕೆ ತಾನು ಪ್ರಾಮಾಣಿಕನಾಗಿಯೂ ದಕ್ಷನಾಗಿಯೂ ಇರುವುದಾಗಿ ಭರವಸೆ ನೀಡಿ ಚುನಾಯಿತನಾದ ಒಬ್ಬ ವ್ಯಕ್ತಿ ಭ್ರಷ್ಟನಾದರೆ ಅದು ಮತದಾರನಿಗೆ ಮಾಡಿದ ವಂಚನೆ. ಹೀಗೆ ವಂಚಿತನಾದ ಮತದಾರನಿಗೆ ಕೇಳಿದಷ್ಟು ಹಣ, ಹೆಂಡ ಕೊಟ್ಟು ತೃಪ್ತಿಪಡಿಸಿದರೂ ಇದನ್ನೆಲ್ಲ ಗಮನಿಸುತ್ತಿರುವ ಜನಕ್ಕೆ ಶಾಸಕ ಮತ್ತು ಮತದಾರ ತಮ್ಮ ಕೆಟ್ಟ ಕೆಲಸಗಳಿಂದ ಸೃಷ್ಟಿಸಿರುವ ಗಬ್ಬುನಾಸನೆ ಗೊತ್ತು ಅವರೆಲ್ಲ ತಮ್ಮ ದುಗುಡದ ವೇಳೆಯಲ್ಲಿ ಮೋಸ ಮಾಡದೇ ಬದುಕುವುದೇ ಅಸಾಧ್ಯ ಎಂಬ ತೀರ್ಮಾನಕ್ಕೆ ಬಂದು ಒಂದು ದೇಶದ ಜನ ಯಾರನ್ನೂ ನಂಬದ, ಏನನ್ನೂ ಮಾಡಲಾರದ ಸ್ಥಿತಿ ತಲುಪುತ್ತಾರೆ.

ನಾನು ಮತ್ತು ನನ್ನ ಗೆಳೆಯ ಚಿಕ್ಕಪುಟ್ಟ ಮೋಸವನ್ನು ಕೂಡ ಸಹಿಸದೆ ಇರುವುದಕ್ಕೆ ಕಾರಣ ಇಲ್ಲಿದೆ. ಇವತ್ತು ನಮಗೆ ಒಬ್ಬ ಒಂದು ರೂಪಾಯಿನ ವಂಚನೆ ಮಾಡ ಬಹುದು. ನಾಳೆ ಇದು ಆತ ನಮ್ಮ ಜೀವ ವನ್ನೇ ತೆಗೆಯುವ ಮಟ್ಟಕ್ಕೆ ಹೋಗುತ್ತದೆ. ಅದು ಮೋಸ, ವಂಚನೆಯ ಬೃಹತ್ ಅವತಾರ. ಇದು ಒಂದು ದೇಶದಲ್ಲಿ ಶುರು ವಾದರೆ ಬೆಳೆಯುತ್ತಲೇ ಹೋಗುತ್ತದೆ. ಇದನ್ನು ಪೂರ್ತಿ ಕಿತ್ತುಹಾಕಲು ಇಡೀ ದೇಶದ ಜನ ಪ್ರಯತ್ನಿಸಬೇಕಾಗುತ್ತದೆ.



ಇಲ್ಲಿ ವಿವರಗಳಿಗೆ ಹೋಗಲು ಆಗುತ್ತಿಲ್ಲ. ಒಬ್ಬ ಇವತ್ತು ವಿದೇಶಕ್ಕೆ ಒಳ್ಳೆಯ ಸಾಮಾನು ಕಳಿಸುವುದು, ನಾಳೆ ಡೂಪ್ಲಿಕೇಟ್ ವಸ್ತುಗಳನ್ನು ಕಳಿಸುವುದು, ಹಾಲಿಗೆ ನೀರು ಬೆರೆಸುವುದು, ಲೆಕ್ಕದಲ್ಲಿ ಮೋಸ ಮಾಡುವುದು- ಹೀಗೆ ಸಾವಿರಾರು ಉದಾಹರಣೆ ಕೊಡಬಹುದು. ಲಂಚ ಕೊಟ್ಟವನು ತಾನೂ ಲಂಚ ತೆಗೆದುಕೊಂಡು ತನ್ನ ನಷ್ಟವನ್ನು ತುಂಬಿಕೊಳ್ಳಬೇಕಾಗುತ್ತದೆ; ಇಬ್ಬರೂ ಅನಗತ್ಯವಾಗಿ ಕೆಟ್ಟವರೂ ಅಳುಕು ಅನುಭವಿಸುವವರೂ ಆಗುತ್ತಾರೆ.

ಅಳುಕು, ಪಾಪಪ್ರಜ್ಞೆಯೇ ಇಲ್ಲದ ಮೋಸ... ಭೀಕರವಾದದ್ದು.

ಜುಲೈ 16 1997

ದೇವರು ಲಂಚ ಸ್ವೀಕರಿಸಿದ!

ದೇವರು ಲಂಚ ಸ್ವೀಕರಿಸುತ್ತಾನಾ?

ಸ್ವೀಕರಿಸುತ್ತಾನೆ ಎಂಬುದು ಬಹುಜನರ ನಂಬಿಕೆ!

ಜನಾರ್ದನ ರೆಡ್ಡಿ ಪ್ರಕರಣ ನೋಡಿ.

ಬೇಲ್‌ಗಾಗಿ ಲಂಚ ನೀಡಿದರು.

ಯಾರಿಗೆ?

ನ್ಯಾಯದೇವತೆಗೆ!

ಹಾಗೆ ಮಾಡಲು ಸಾಧ್ಯವೇ ಇಲ್ಲ, ಅವಳ ಕಣ್ಣನ್ನು ಕಪ್ಪುಬಟ್ಟೆಯಲ್ಲಿ ಕಟ್ಟಿರುತ್ತಾರಲ್ಲ, ಹಣ ನೋಡುವುದು, ಎಣಿಸುವುದು ಹೇಗೆ ಸಾಧ್ಯ ಎಂದು ಕೆಲವರು ಆಕ್ಷೇಪಿಸಬಹುದು. ಅದಕ್ಕೆ ನಮ್ಮ ಉತ್ತರ ಇಷ್ಟೇ: ಲಂಚ ಸ್ವೀಕರಿಸಿದವರು ಎಂದೂ ಅದನ್ನು ಎಣಿಸುವುದಿಲ್ಲ, ಕಣ್ಣಿನ ಅಂದಾಜಿನಲ್ಲೇ ಮೊತ್ತವನ್ನು ಗ್ರಹಿಸಬಲ್ಲರು. ಕಾಣದಂತೆ ಕಣ್ಣಿಗೆ ಕಪ್ಪುಬಟ್ಟೆ ಕಟ್ಟಿರುತ್ತಲ್ಲಾ ಅಂದರೆ ಆಕೆ ದೇವತೆ! ಒಳಗಣ್ಣು ಇರುತ್ತಲ್ಲಾ ಅದರಲ್ಲಿ ನೋಡಿರುತ್ತಾಳೆ!

ಬೇಲ್ ಸಿಕ್ಕಿತು. ಆದರೆ ಅದು ಊರ್ಜಿತ ಆಗಲಿಲ್ಲ, ನಿಜ. ಬೇಲ್ ಕೊಡಿಸುವುದಷ್ಟೇ ಆಕೆಯ ಕರ್ತವ್ಯ. ಮುಂದಿನದಕ್ಕೆ ಆಕೆ ಹೊಣೆ ಅಲ್ಲ!


ನಮ್ಮ ಘನ ಸರ್ಕಾರ ಈ ಘಟನೆಯಿಂದ ಪಾಠ ಕಲಿತಿರಬೇಕು. ಭೀಕರ ಬರಗಾಲ. ಮಳೆ ಹೋಗಿ ಅಟ್ಟ ಸೇರಿದೆ. ಅದನ್ನು ಭೂಮಿಗೆ ಇಳಿಸಬೇಕು ಹೇಗೆ? ದೇವರಿಗೆ ಲಂಚ ನೀಡಿ!

ನೀಡುವುದೇನೋ ಸರಿ. ಏನೇ ಸೌಲಭ್ಯ ಬೇಕಾದರೂ ಲಂಚ ನೀಡಬೇಕು ಎನ್ನುವ ಅಲಿಖಿತ ಕಾನೂನೇ ಇದೆ ಎಂಬ ಅರಿವು ಇದೆ. ಆದರೆ ಅದನ್ನು ನೀಡುವುದು ಹೇಗೆ? ನೇರವಾಗಿಯಾ?

ದೇವರು ಯಾವುದನ್ನೂ ನೇರವಾಗಿ ಸ್ವೀಕರಿಸುವುದಿಲ್ಲ, ಅವನ ವ್ಯವಹಾರವೆಲ್ಲಾ ಪೂಜಾರಿಗಳ ಮುಖಾಂತರ!

ಈ ಹಿಂದೆಯೂ ಬರಗಾಲ ಬಂದಿತ್ತು, ಎಸ್.ಎಂ.ಕೃಷ್ಣ ಮುಖ್ಯಮಂತ್ರಿ ಯಾಗಿದ್ದರು. ಆಗ 'ಗುಡಿ, ಚರ್ಚ್, ಮಸೀದಿಗಳಲ್ಲಿ ಮಳೆಗಾಗಿ ಪ್ರಾರ್ಥಿಸಿ' ಎಂಬ ಸುತ್ತೋಲೆ ಹೊರಡಿಸಿದ್ದರು. ಪ್ರಾರ್ಥನೆಯೂ ನಡೆಯಿತು. ಆದರೂ ಮಳೆರಾಯ ಕೃಪೆ ತೋರಲಿಲ್ಲ ಯಾಕೆ? ಆಗ ಹಣದ ಬಾಬತ್ತು ಇರಲಿಲ್ಲ! ದೇವರಿಗೆ ಲಂಚ ನೀಡಿರಲಿಲ್ಲ!

ಈ ತಪ್ಪು ಮರುಕಳಿಸಬಾರದು ಎಂದೇ ಜಗದೀಶ್ ಶೆಟ್ಟರ್ ಸರ್ಕಾರ ಮುಜರಾಯಿ ದೇವರುಗಳಿಗೆ ಲಂಚದ ಆಮಿಷ ಒಡ್ಡಿದೆ. ಒಂದು ದೇವಸ್ಥಾನಕ್ಕೆ ಐದು ಸಾವಿರ ರೂಪಾಯಿ. ಮೂವತ್ನಾಲ್ಕು ಸಾವಿರ ದೇವಸ್ಥಾನಗಳಿಗೆ ಹದಿನೇಳು ಕೋಟಿ ಅಷ್ಟೇ! ಜವಾಬ್ದಾರಿಯುತ ಸರ್ಕಾರ ಹೀಗೆ ಹಣವನ್ನು ಪೋಲು ಮಾಡಬಾರದು. ಅದೇ ಹಣವನ್ನು ಬರ ಪರಿಹಾರಕ್ಕೆ ಬಳಸಿಕೊಳ್ಳಬಹುದಾಗಿತ್ತು ಎನ್ನುವ ನಾಸ್ತಿಕರಿಗೇನೂ ಈ ದೇಶದಲ್ಲಿ ಕೊರತೆ ಇಲ್ಲ, ಅವರ ವಿಚಾರಕ್ಕೆ ಬರೋಣವಂತೆ. ಪ್ರತಿ ದೇವಾಲಯಗಳಲ್ಲೂ ಕನಿಷ್ಠ ನಾಲ್ಕು, ಐದು ಪೂಜಾರಿಗಳಿರುತ್ತಾರೆ. ಅಂದರೆ 34,000x5 ಜನರ ಬರಪರಿಹಾರ ಆಗಲಿಲ್ಲವಾ...! ಇನ್ನೂ ಇಂತಹದ್ದೇ ವಿತಂಡವಾದ ಮುಂದುವರೆಸುತ್ತಾರೆ. ಅದೇನು



ಅಂದರೆ ಹಲವು ಮುಜರಾಯಿ ದೇವಾಲಯಗಳಲ್ಲಿ ಒಬ್ಬನೇ ದೇವರು ಇರಬಹುದು. ಉದಾಹರಣೆಗೆ ಈಶ್ವರನೇ ಹಲವು ದೇವಾಲಯಗಳಲ್ಲೂ ಇರಬಹುದು ಅಲ್ಲವಾ: ಹೀಗಾದಾಗ 'ಲಂಚ' ಪುನರಾವರ್ತನೆ ಆಗುತ್ತದೆ ಅಲ್ಲವಾ ಎನ್ನುವುದು. ಇಂತಹ ವಾದಗಳಲ್ಲಿ ಯಾವುದೇ ಮನ್ನಣೆ ಇಲ್ಲ.

ಮತ್ತೆ ಮಳೆಗಾಗಿ ಲಂಚ ಪ್ರಕರಣಕ್ಕೆ ಬರೋಣ. ಲಂಚದ ಮಹಿಮೆಯೇ ಅಂತಹದ್ದು. ಈ ಸುತ್ತೋಲೆ ಹೊರಡಿಸಿದ್ದಾರೆ ಅಷ್ಟೆ. ಜಾರಿಗೆ ತಂದಿಲ್ಲ, ಆಗಲೇ ಅಲ್ಲಲ್ಲಿ ಆದರೂ ಆಗದಂತೆ ಮಳೆ ಆಗಿದೆ! ವಿಶೇಷ ಪೂಜೆಗಳೆಲ್ಲ ಮುಗಿಯುತ್ತಿದ್ದಂತೆ ಧೋ ಧೋ ಮಳೆ ಸುರಿಯುತ್ತದೆ. ಇದರಲ್ಲಿ ಸಂಶಯ ಬೇಡ!


ಒಂದು ವೇಳೆ ಮಳೆ ಆಗಲೇ ಇಲ್ಲ, ಆಗ?

ಪೂಜೆಯಲ್ಲಿ ಏನೋ ಅಪಚಾರ ಆಗಿದೆ ಎಂದು ಅರ್ಥ!

ಹಿಂದೂ ದೇವರುಗಳೆಲ್ಲ ಲಂಚದ ಹಣದಿಂದ ಸಂಪ್ರೀತರಾಗಿ ವರುಣ ದೇವನ ಮನ ಒಲಿಸಿ ಮಳೆ ಸುರಿಸಬಹುದು. ಮುಜರಾಯಿ ಇಲಾಖೆ ವ್ಯಾಪ್ತಿಗೆ ಚರ್ಚ್, ಮಸೀದಿಗಳು ಬಾರದಿರುವುದರಿಂದ 'ಲಂಚ ಮಳೆ'ಯ ಸೌಲಭ್ಯ ಅದರ ಅನುಯಾಯಿ ಗಳಿಗೆ ಲಭಿಸುವುದಿಲ್ಲವೇ ಎಂಬ ಅನುಮಾನ ವ್ಯಕ್ತಪಡಿಸ ಬಹುದು. ಇದಕ್ಕೆ ಯಾವ ಕಾರಣವೂ ಇಲ್ಲ, ಹಿಂದೂ ದೇವರುಗಳು ಅವರ ದೇವರುಗಳಂತೆ ಪಕ್ಷಪಾತಿಗಳಲ್ಲ ಎಂಬುದನ್ನು ಮನದಟ್ಟು ಮಾಡುವುದೇ ಘನಸರ್ಕಾರದ ಉದ್ದೇಶ.

ಬರ ಬಂದರೂ ಮಕ್ಕಳು ಆಗುತ್ತಲೇ ಇವೆ!

ಚಟ್ಟಕ್ಕೇರಿದರೂ ಚಟ ಬಿಡುವಲ್ಲು ಅನ್ನುವ ಹಂಗಾಗಿದೆಯಂತೆ ಕೊಪ್ಪಳ ಜನರ ಬಾಳು. ಅವೆಲ್ಲೋ ಚೆಂಗಲು ಮುಂಡೇವು ಇರಬೇಕು. ಸಿಟಿಲಿ ಸಿನಿಮಾ ನೋಡಿ ಹಾಳುಮೂಳಿನ ರುಚಿ ಹಿಡ್ದದಂತೆ ಬಡ್ಡೆತ್ತವ್ಕೆ ವಸಿ ಅವಕಾಶ ಸಿಕ್ಕಿದರೂ ಸಾಕು ರಣ್ ಅಂತ ಹಾರಿ ಮಂಗಮಾಯ ಆಯ್ತವಂತೆ! ಬ್ಯಾಡ್ರೋ ತಮ್ಮದಿರಾ, ಹಿಂಗೆ ಹೋಗಬ್ಯಾಡ್ರೋ! ಅಂದರೂ 'ಏನಜ್ಜ ನೀನು ಒದರಿದ್ದೇ ಒದರ್ತೀಯಾ?' ಅಂತ ತಿಗ ತಿರುಗಿಸಿಕೊಂಡು ಹೋಯ್ತವಂತೆ. ಅಲ್ಲ, ಅಲ್ಲೇ ಇದ್ದಿದ್ದರೂ ಅವರು ಏನು ಸಾಯ್ತಾ ಇರಲಿಲ್ಲವಂತೆ. ಸಾಯ್ತೇನಿ ಅಂದರೂ ಸಾಹುಕಾರರು ಸಾಯಲು ಬಿಡ್ತಾನೆ ಇರ್ತಿರ್ಲಿಲ್ಲವಂತೆ. ಅಷ್ಟೋ ಇಷ್ಟೋ ಕೆಲಸಾನೂ ಕೊಡ್ತಿದ್ದರಂತೆ. ಗೆಯ್ಮೆ ಮಾಡವ್ರಲ್ಲಾ ಅಂತಾ ಒಂದಿಷ್ಟು ಕೂಲಿನೂ ಕೊಡ್ತಿದ್ರಂತೆ. ಪೂರಾ ಬಿಟ್ಟಿಯೇನೂ ಗೆಯ್ಸಿಸಿಕೊಳ್ತಿರ್ಲಿಲ್ಲವಂತೆ. ಆದರೂ ಸಿಟಿ ರುಚಿ ಕಂಡೋವು ನೋಡಿ. ಅಲ್ಲಿ ಕೊಡೋ ಹಂಗೆ ಇಲ್ಲೂ ಕೊಡಿ ಅಂತಾವಂತೆ. ಹಿಂಗೆ ಕೂಲಿ ಕೊಟ್ಟು ಯಾರಾದರೂ ಬದುಕಕ್ಕಾದಾತಾ ಅನ್ನೊ ಸಂಕಟ ಸಾಹುಕಾರರಿಗಂತೆ. ಮುರುಗೇಶ ನಿರಾಣಿ ಸಾಹೇಬರು ಅದೇ ನೀರು ಕುಡಿದೋರಲ್ವಾ ಅಲ್ಲಿ ಜನಾವ ಆಳೆದು



ಎಚ್.ಎಲ್. ಕೇಶವಮೂರ್ತಿ

ಅಣಕ

ಸುರಿದು ಹಾಕವ್ರೆ. ಅದಕ್ಕೆ 'ಗುಳೆ ಹೋಗುವುದು ಕೊ… ಜನರ ಚಾಳಿ' ಅಂದವ್ರೆ! ಇಂತಹ ಚಾಳಿಯೋ ಷ್ಯೆ ನಿ… ಸಾಹೇಬರು ಏನು ತಾನೆ ಮಾಡಿಯಾರು ಪಾಪ! … ಹೋಗಿ ಸಾಯಲಿಬಿಡಿ!

ಮಳೆ ಹುಯ್ದು ಮಕ್ಕಳು ಆದರೆ ಕೇಡ ಅಂ… ಮಳೆ ಹುಯ್ಯಲಿಲ್ಲ, ಬರಗಾಲ ಬಂತು. ಆಗ… ಮಕ್ಕಳಾದರೆ? ಕೇಡು ಅಂತಾನೆ ಅರ್ಥ. ಆದ… ಮಾಡುತ್ತೀರಿ. ವಯಸ್ಸೇ ಅಂತಹದ್ದು. ಉಪ್ಪು ಹುಳಿ … ದೇಹ. ಯಾವ ಯಾವ ಕಾಲದಲ್ಲಿ ಯಾವ ಯಾವ … ಆಗಬೇಕೋ ಅವೆಲ್ಲ ಆಗಲೇಬೇಕು.


ಸಾಯದೆ ಬದುಕಿದ್ದರೆ ಹುಟ್ಟಿದ ದಿನ ಬಂದೇ ಬ… ಅಧಿಕಾರ ಅಂತ ಒಂದು ಇದ್ದರೆ ಅದ… ಆಚರಿಸಿಕೊಳ್ಳಲೇಬೇಕು. ಬೈಲಹೊಂಗಲ ಶಾಸಕರಿಗೆ … ಆಯಿತಂತೆ. ಇನ್ನೂ ಬದುಕಿದ್ದರಲ್ಲವಾ. ಹುಟ್ಟಿದ … ಬಂದಿತಂತೆ. ಅದನ್ನು ಹಬ್ಬ ಅಂತ ಆಚರಿಸಿಕೊಳ್ಳೊ… ಅಂದಮೇಲೆ ಅದ್ದೂರಿಯಾಗೇ ಇರಲಿ ಅಂತಾವ ಹಾ… ಆಚರಿಸಿಕೊಂಡರಂತೆ. ಇದರಲ್ಲೇನೂ ಅಪರಾಧ ಇಲ್ಲ … ಮುತ್ತು ಅಂತ ಇದ್ದ ಮೇಲೆ ಎಲ್ಲಿಗೆ ಬೇಕಾ… ಪೋಣಿಸಿಕೊಳ್ಳಬಹುದು. ಆದರೆ ರಾಜಕಾರಣಿ ಅಂದ… ಶತ್ರುಗಳು ಇದ್ದೇ ಇರ್ತವೆ. ಇದನ್ನೇ ಹಿಡಿದುಕೊ… 'ಬರಗಾಲದಲ್ಲಿ ಶಾಸಕರ ಮೋಜಿ ಮಸ್ತಿ' ಅಂತೆಲ್ಲ … ಬರೆಸುತ್ತಾ ಕುಂತವಂತೆ!

ಮಂತ್ರಿ ಅಂದಮೇಲೆ ಕೆಲವು ಶಾಸಕರನ್ನಾದ… ಬಗಲಲ್ಲಿಟ್ಟುಕೊಂಡಿರಬೇಕು. ಆಗಲೇ ಅವರಿಗೆ ಬ… ಕಿಮ್ಮತ್ತು, ಶಾಸಕರ ಸಮಾರಂಭಗಳಿಗೆ ಹೋ… ಬೇಕಾಗುತ್ತದೆ. ಹಾಗೇನೆ ಇದಕ್ಕೂ ಹೋಗಿದ್ದರಂತೆ ಉ… ಕತ್ತಿ ಸಾಹೇಬರು. ವಿರೋಧಿಗಳ ಆರ್ಭಟ ಕೇಳಿ ಯಾ… ಒದರಾಡ್ತಾ ಇದಾವೆ. ಬರಗಾಲಕ್ಕೂ, ಹುಟ್ಟಿದ ಹ… ಅದ್ದೂರಿ ಸಮಾರಂಭಕ್ಕೂ ಎತ್ತಿಣಿಂದ ಎತ್ತಣ ಸಂಬ… ಅನ್ನೋದೆ ತಿಳಿಯದಾಯಿತಂತೆ. ಅಲ್ಲ ಬರಗಾಲ ಬಂ… ಅಂತ ಹುಟ್ಟಿದ ದಿನಾನೇ ಬರುವುದಿಲ್ಲವೆ? ಅ… ಆಚರಿಸಿಕೊಳ್ಳುವುದೇ ಇಲ್ಲವೆ? ಇದರಲ್ಲಿ ತಪ್ಪು … ಎಂದು ಯೋಚಿಸಿದಾಗ ಸಾಹೇಬರಿಗೆ ಒಂದ್ ಸ್ವಲ… ತಪ್ಪು ಕಾಣಿಸಲಿಲ್ಲವಂತೆ. 'ಬರಗಾಲ ಬರಗಾಲ … ಹೇಳ್ತಾ ಕುಂತಾರ. ಬರಗಾಲದಲ್ಲಿ ಅದ್ದೂರಿ ಮದುವೆ… ಆಗ್ತಾವ, ಮಕ್ಕಳಾನೂ ಆಗ್ತಾವ' ಅಂತ ಸಾಹೇ… ಕಾಲಜ್ಞಾನಿಯಂತೆ ಹೇಳಿದರಂತೆ!

ಎಷ್ಟೇ ಆಗಲಿ ಅನುಭವಸ್ಥರು!

ಕರಾವಳಿಯಲ್ಲಿ ಬಿಜೆಪಿ ವಿರೋಧಿಗಳೂ ಇದ್ದಾರೆ

ಶಿವಸುಂದರ್ ಅವರ 'ಜಾತಿವ್ಯಾಕರಣ ಮತ್ತು ಹಿಂದುತ್ವ ರಾಜಕಾರಣ' ಲೇಖನದಲ್ಲಿ (ಚಾರ್ವಾಕ ಅಂಕಣ, ಆಗಸ್ಟ್ 01, 2012) ತಪ್ಪು ಮಾಹಿತಿಯೊಂದು ನುಸುಳಿದೆ. ಜನಾರ್ದನ ಪೂಜಾರಿಯವರ ವಿರುದ್ಧ ನಳಿನ್ ಕುಮಾರ್ ಕಟೀಲ್ ಗೆದ್ದಿರುವುದು ಒಂದೂವರೆ ಲಕ್ಷ ಮತಗಳ ಅಂತರದಿಂದಲ್ಲ, ಕೇವಲ 40,420 ಮತಗಳ ಅಂತರ ದಿಂದ. ರಾಜಕೀಯ ವಿಶ್ಲೇಷಣೆಯ ದೃಷ್ಟಿಯಿಂದ ಇಲ್ಲಿ ಇನ್ನೂ ಒಂದು ಮುಖ್ಯ ಸಂಗತಿಯನ್ನು ಗಮನಿಸಬೇಕು. ಮತದಾರರನ್ನು ಸೆಳೆಯುವ ವಿಷಯದಲ್ಲಿ ಕಾಂಗ್ರೆಸ್ ಇಲ್ಲಿ ಸಂಘಟನಾತ್ಮಕವಾಗಿ ದುರ್ಬಲವಿದ್ದು ಶ್ರಮಪಟ್ಟು ಕೆಲಸ ಮಾಡುತ್ತಿಲ್ಲವಾದ ಕಾರಣ ಕರಾವಳಿಯಲ್ಲಿ ಮತಗಳ ಧ್ರುವೀಕರಣದಲ್ಲೊಂದು ವೈಶಿಷ್ಟ್ಯ ಉಂಟಾಗಿದೆ. ಒಂದೆಡೆ ಯಲ್ಲಿ ಹಿಂದುತ್ವ ಅಜೆಂಡಾದ ಬಿಜೆಪಿಯ ಮತಗಳಿದ್ದರೆ, ಇನ್ನೊಂದೆಡೆ ಯಲ್ಲಿ ಇರುವುದು ಬಿಜೆಪಿ ವಿರೋಧಿ ಮತಗಳೇ ಹೊರತು ಕಾಂಗ್ರೆಸ್ ಪರ ಮತಗಳಲ್ಲ.



ನಳಿನ್ ಕುಮಾರ್ ಕಟೀಲ್ ಗಳಿಸಿದ 4,99,385 ಮತಗಳಿಗೆ ವಿರುದ್ಧವಾಗಿ ಜನಾರ್ದನ ಪೂಜಾರಿ 4,58,965 ಮತಗಳನ್ನು ಗಳಿಸಿರುವುದು ಜಾತ್ಯತೀತ ಶಕ್ತಿಗಳ ಮಟ್ಟಿಗೆ ಸಮಾಧಾನದ ಮತ್ತು ಭರವಸೆ ಮೂಡಿಸುವ ಒಂದು ಸಂಗತಿ. ಯಾಕೆಂದರೆ ವಾಸ್ತವದಲ್ಲಿ ಇವು ಸಂಘ ಪರಿವಾರದ ಅಜೆಂಡಾವನ್ನು ವಿರೋಧಿಸುವ ಮತಗಳು. ಬಿಜೆಪಿಯನ್ನು ವಿರೋಧಿಸುವ ಮತದಾರರು ಕರಾವಳಿಯಲ್ಲಿ ದೊಡ್ಡ ಪ್ರಮಾಣದಲ್ಲಿದ್ದರೂ, ಬಿಜೆಪಿಗೆ ಪರ್ಯಾಯವಾದ ಸಮರ್ಥ ರಾಜಕೀಯ ಪಕ್ಷ ಇಲ್ಲದಿರುವುದರಿಂದ, ಯಾರಿಗೆ ಮತ ಚಲಾಯಿಸುವುದು ಎಂಬ ವಿಚಾರದಲ್ಲಿ ಇಲ್ಲಿನ ಬಿಜೆಪಿ ವಿರೋಧಿ ಮತದಾರರು ದಿಕ್ಕು ಕಾಣದಂತಾಗಿದ್ದಾರೆ ಎನ್ನುವುದನ್ನು ಬಹುಮುಖ್ಯವಾಗಿ ಇಲ್ಲಿ ಗಮನಿಸಬೇಕು.

- ಶ್ರೀನಿವಾಸ ಕಾರ್ಕಳ, ಮಂಗಳೂರು

ಹಿಂಸೆ ವಿರುದ್ಧದ ಮೌನವೂ ಹಿಂಸೆಯೇ

ಮಹಿಳೆಯರ ಮೇಲೆ ನಡೆಯುತ್ತಿರುವ ಹಿಂಸೆಯ ಬಗ್ಗೆ ಬಹಳಷ್ಟು ಜನರು ಮೌನ ವಹಿಸುತ್ತಿರುವುದೂ ಒಂದು ರೀತಿಯಲ್ಲಿ ಹಿಂಸೆಯೇ ಆಗಿದೆ. ಲೈಂಗಿಕ ಕಿರುಕುಳ ಮತ್ತು ದೈಹಿಕ ಬಲಾತ್ಕಾರದ ವಿರುದ್ಧ ಈಗಿರುವ ಕಾನೂನು ಅಂತಹ ಅಪರಾಧವನ್ನು ಶಿಕ್ಷಿಸಲು ಸಾಲುತ್ತಿಲ್ಲ, ನಮ್ಮ ಒಂದು ಕಾನೂನಿನಪ್ರಕಾರ ಬಲಾತ್ಕಾರವಾದಾಗ ಹೆಣ್ಣಿನ ಯೋನಿಯೊಳಗೆ ಗಂಡಸಿನ ಶಿಶ್ನ ಹೋಗದಿದ್ದರೆ ಅದನ್ನು "ಔಟ್‌ರೇಜಿಂಗ್ ಮಾಡೆಸ್ಟಿ ಆಫ್ ವಿಮೆನ್" ಎಂಬ ಕಾನೂನಿನಡಿಯಲ್ಲಿ ಪರಿಗಣಿಸಲಾಗುವುದಿಲ್ಲ, ಮಾತ್ರವಲ್ಲ ಅಂತಹ ಅಪರಾಧಗಳು ನಡೆದರೂ ಆರೋಪಿಗೆ ಸುಲಭವಾಗಿ ಜಾಮೀನು ಸಿಗುತ್ತದೆ ಮತ್ತು ಆರೋಪ ಸಾಬೀತಾದಾಗ ಸಿಗುವ ಶಿಕ್ಷೆ ಕೇವಲ ಎರಡು ವರ್ಷಗಳ ಜೈಲುವಾಸ, ಅಷ್ಟೇ. ಪರಿಸ್ಥಿತಿ ಹೀಗಿರುವಾಗ ತೀವ್ರ ಲೈಂಗಿಕ ಹಲ್ಲೆ, ಗುಂಪಿನಿಂದ ಆಗುವ ಲೈಂಗಿಕ ಹಲ್ಲೆ, ಇತರ ರೀತಿಯ ಬಲಾತ್ಕಾರ, ವಸ್ತುಗಳನ್ನು ಉಪಯೋಗಿಸಿ ಮಾಡುವ ಬಲಾತ್ಕಾರ, ಮದುವೆಯಲ್ಲಿ ನಡೆಯುವ ಬಲಾತ್ಕಾರ, ಅಂತರ ಲಿಂಗಿಗಳು, ಟ್ರಾನ್ಸ್‌ಜೆಂಡರ್ ಮತ್ತು ಗಂಡು ದೇಹ ಹೊಂದಿರುವವರ ಮೇಲೆ ನಡೆಯುವ ಬಲಾತ್ಕಾರ, ಬಟ್ಟೆ ಬಿಚ್ಚಿ ನಗ್ನವಾಗಿ ಸಾರ್ವಜನಿಕರ ಮುಂದೆ ಓಡಾಡಿಸುವುದು... ಇಂತಹ ಅಪರಾಧಗಳನ್ನು ಎಸಗುವವರಿಗೆ ಶಿಕ್ಷೆ ಆಗುವ ಸಾಧ್ಯತೆ ತುಂಬಾ ಕಡಿಮೆ ಇದೆ.

ಆಘಾತಕಾರಿ ಅಂಶ ಯಾವುದೆಂದರೆ ಕಾನೂನನ್ನು ಕಾಪಾಡಬೇಕಾಗಿರುವ ಪೊಲೀಸರೇ ಠಾಣೆಗಳಲ್ಲಿ ದೈಹಿಕ ಬಲಾತ್ಕಾರ ಮಾಡುವುದು. 2012 ಜುಲೈ 23ರಂದು ಕೆಲಸ ಕೊಡಿಸುವ ನೆಪದಲ್ಲಿ ಉತ್ತರ ಪ್ರದೇಶದ ಬಿದ್ದ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ವೀರೇಂದ್ರ ಕುಮಾರ್ ಓರ್ವ ಮಹಿಳೆಯನ್ನು ಕರೆಸಿ ಇತರೆ ಪೊಲೀಸರೊಂದಿಗೆ ಆಕೆಯ ಮೇಲೆ ಬಲಾತ್ಕಾರ ಮಾಡಿದ. ಅದಕ್ಕೆ ಎರಡು ವಾರಗಳ ಮುನ್ನ ಲಕ್ನೊದಲ್ಲಿ ಮಲ್ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಅವಸ್ಥಿ ಎಂಬಾತ ದೂರು ನೀಡಲು ಬಂದಿದ್ದ ದಲಿತ ಮಹಿಳೆಯ ಮೇಲೆ ಬಲಾತ್ಕಾರ ಮಾಡಲು ಪ್ರಯತ್ನಿಸಿದ. ಹಾಗೆಯೇ ಉತ್ತರ ಪ್ರದೇಶದ ಲಾಖಿಮ್‌ಪುರ್-



ಖೀರಿ ಜಿಲ್ಲೆಯ ಪೊಲೀಸರು ಓರ್ವ ಚಿಕ್ಕ ಹುಡುಗಿ… ಮೇಲೆ ಬಲಾತ್ಕಾರ ಮಾಡಿದರಲ್ಲದೆ ಆಕೆಯನ್ನು ಕೊಂ… ಹಾಕಿದರು.

ಬಡವರು, ದಲಿತರು, ಆದಿವಾಸಿ ಮಹಿಳೆಯರು, ಟ್ರಾ… ಜೆಂಡರ್‌ಗಳು, ಅಂಗವಿಕಲರು ಇಂತಹ ದೌರ್ಜನ್ಯಗ… ತುತ್ತಾಗುತ್ತಿದ್ದಾರೆ. ಛತ್ತೀಸ್‌ಘಡದ ಶಾಲಾ ಶಿಕ್ಷಕಿ ಮ… ಆದಿವಾಸಿ ಮಹಿಳೆ ಸೋನಿ ಸೋರಿ ಸರ್ಕಾರದ ವಿರ… ದನಿ ಎತ್ತಿದ್ದಕ್ಕೆ ಸರ್ಕಾರವೇ ಅಂಕಿತ್ ಗರ್ಗ್ ಎಂಬ ಐಪಿ… ಪೊಲೀಸ್ ಅಧಿಕಾರಿಯ ಮೂಲಕ ಆಕೆಯ ಮೇ… ಅತ್ಯಾಚಾರವನ್ನೆಸಗಿತು. ಈ ಸಾಧನೆಗೆ ಅಂಕಿತ್ ಗರ್ಗ್… ರಾಷ್ಟ್ರಪತಿಯ ಶೂರತ್ವದ ಪುರಸ್ಕಾರ ಸಿಕ್ಕಿತು.


ಇನ್ನು ಕಾಶ್ಮೀರ, ಈಶಾನ್ಯ ರಾಜ್ಯಗಳು ಮತ್ತು ಮ… ಭಾರತದಲ್ಲಿರುವ ಆದಿವಾಸಿಗಳು ಸರ್ಕಾರದ ವಿರ… ಹೋರಾಡುತ್ತಿರುವುದರಿಂದ ಆ ಪ್ರದೇಶಗಳಿಗೆ ಸರ್ಕಾರ… ಆಯೋಜಿಸಿರುವ ಸೇನೆಯ ಸೈನಿಕರು ಮತ್ತು ಪೊಲೀಸ… ಅಲ್ಲಿನ ಮಹಿಳೆಯರ ಮೇಲೆ ದೈಹಿಕ ಮತ್ತು ಲೈಂ… ದಾಳಿಗಳನ್ನು ನಿರಂತರವಾಗಿ ಮಾಡುತ್ತಿದ್ದಾರೆ. ಉದಾಹರ… ಈ ತಿಂಗಳ ಆರಂಭದಲ್ಲಿ ಅತ್ತ ಅಸ್ಸಾಮಿನ ದಿಮಾವ್… ಹದಿಹರೆಯದ ಹೆಣ್ಣು ಮಗಳ ಮೇಲೆ ಬಲಾತ್ಕಾರ ನಡೆದ… ಇತ್ತ ಛತ್ತೀಸ್‌ಘಡದ ಬಿಜಪ್ಪೂರ್‌ನಲ್ಲಿ ಸೌದೆ ಆರಿಸಿಕೊಳ್ಳ… ಕಾಡಿಗೆ ಹೋಗಿದ್ದ ಐದು ವರ್ಷದ ಹುಡುಗಿಯ ಮೇ… ಸೇನೆಯ ಜವಾನರು ಬಲಾತ್ಕಾರ ಎಸಗಿದ್ದಾರೆ.

ದೆಹಲಿ ನಗರದಲ್ಲಿ ಇತ್ತೀಚೆಗೆ ಅನೇಕ ಬಲಾತ… ಪ್ರಕರಣಗಳು ನಡೆದಿವೆ. ಇವುಗಳ ಬಗ್ಗೆ ಪೊಲೀಸರ… ಸಂದರ್ಶಿಸಿದಾಗ ಪೊಲೀಸರು "ಹಾಗೆ ಹೆಚ್ಚೇನೂ ಆಗ… ಶೇಕಡ ಹತ್ತು ದೂರುಗಳು ಮಾತ್ರ ನಿಜವಾಗಿದ್ದು ಮಿಕ್ಕ… ಲೈಂಗಿಕ ಕಾರ್ಮಿಕರು ತಮಗೆ ಸರಿಯಾಗಿ ದುಡ್ಡು ಸಿಗದಿದ… ಕೊಟ್ಟಿರುವ ಸುಳ್ಳು ದೂರುಗಳಾಗಿವೆ" ಎಂದಿದ್ದಾರೆ. ನ… ಪೊಲೀಸರ ಉದಾಸೀನತೆಗೆ ಇದಕ್ಕಿಂತ ಉದಾಹರಣೆ ಬೇ… ಟ್ರಾನ್ಸ್‌ಜೆಂಡರ್, ದಲಿತ ಮತ್ತು ಆದಿವಾಸಿ ಮಹಿಳೆಯ… ಮೇಲೆ ನಡೆಯುವ ದೈನಂದಿನ ಬಲಾತ್ಕಾರ ಎಲ್ಲಿಯ… ವರದಿಯಾಗದೇ ಹೋಗುವ ಪರಿಸ್ಥಿತಿಯಲ್ಲಿ ನಾ…

ಹಾಸ್ಯ ಚಕ್ರವರ್ತಿಯ ನೆನಪು

ಹಾಸ್ಯ ಚಕ್ರವರ್ತಿ ನರಸಿಂಹರಾಜು ನಿಧನ ಹೊಂದಿ ಜುಲೈ 24ಕ್ಕೆ 30 ವರ್ಷಗಳು ಸಂದುಹೋದವು. ಕನ್ನಡ ...ೋದ್ಯಮ ಈ ಮಹಾನ್ ನಟನನ್ನು ಮರೆತಿದೆ ಎಂಬುದರಲ್ಲಿ ಎರಡು ಮಾತಿಲ್ಲ, ಆದರೆ ನರಸಿಂಹರಾಜು ಅವರ ...ಮ್ಮಕ್ಕಳು ಮೊನ್ನೆ ಅವರದೇ ಆದ ರೀತಿಯಲ್ಲಿ ತಮ್ಮ ತಾತನನ್ನು ನೆನಪಿಸಿಕೊಂಡರು.

ಈಗಾಗಲೇ 'ಜುಗಾರಿ' ಎಂಬ ಚಿತ್ರವನ್ನು ನಿರ್ಮಿಸಿ ನಿರ್ದೇಶಿಸಿದ ನರಸಿಂಹರಾಜು ಅವರ ಮೊಮ್ಮಗ ಅರವಿಂದ್ ... ತಂಡದೊಂದಿಗೆ 'ಎವರ್ ರೆಡಿ ಬಾಯ್ಸ್' ಎಂಬ ಹೊಸ ಚಿತ್ರವನ್ನು ಆರಂಭಿಸಿದರು. ತಮ್ಮ ತಾತನ 89ನೇ




ಹುಟ್ಟುಹಬ್ಬದ ದಿನದಂದು ಈ ಚಿತ್ರವನ್ನು ಆರಂಭಿಸುವ ಮುಖಾಂತರ ಮೊಮ್ಮಕ್ಕಳು ತಾತನಿಗೆ ತಮ್ಮ ಶ್ರದ್ಧಾಂಜಲಿ ಅರ್ಪಿಸಿದರು. ಅಷ್ಟೇ ಅಲ್ಲ, ನರಸಿಂಹರಾಜು ನಟಿಸಿರುವ ಕೆಲವು ಪ್ರಮುಖ ಚಿತ್ರಗಳ ಡಿ.ವಿ.ಡಿ. ಯನ್ನು ಕೂಡ ಹೊರತಂದು ತಾತನನ್ನು 'ಅಮರ'ರನ್ನಾಗಿಸುವತ್ತ ಒಂದು ಹೆಜ್ಜೆಯಿಟ್ಟರು.

ಈ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಉಪ ಮುಖ್ಯಮಂತ್ರಿ ಅಶೋಕ್ ಅವರಿಗೆ ಬೆಂಗಳೂರಿನ ಯಾವುದಾದರೊಂದು ರಸ್ತೆಗೆ ತಾತನ ಹೆಸರಿಡಿ ಎಂದು ಒತ್ತಾಯಿಸಿದರು. ಸಭೆಯಲ್ಲಿ ಉಪಸ್ಥಿತರಿದ್ದ ಅಶೋಕ್ ಮತ್ತು ಮೇಯರ್ ವೆಂಕಟೇಶಮೂರ್ತಿ ಈ ಬೇಡಿಕೆಗೆ ಕೂಡಲೇ ತಥಾಸ್ತು ಅಂದರು. ಅಷ್ಟೇ ಅಲ್ಲ, ನರಸಿಂಹರಾಜು ಅವರ ಹುಟ್ಟೂರಾದ ತಿಪಟೂರಿನಲ್ಲಿ ಕಟ್ಟುತ್ತಿರುವ ರಂಗಮಂದಿರಕ್ಕೆ ನರಸಿಂಹರಾಜು ಅವರ ಹೆಸರನ್ನು ಇಡಲಾಗುತ್ತದೆ ಎಂದು ಅಶೋಕ್ ಘೋಷಿಸಿದರು.

ಹೀಗೆ 30 ವರ್ಷಗಳ ಬಳಿಕ ಕನ್ನಡ ಚಿತ್ರರಂಗ ಮರೆತುಹೋಗಿದ್ದ ಮಹಾನ್ ಚೇತನ ನರಸಿಂಹರಾಜು ಅವರನ್ನು ...ರ ಮೊಮ್ಮಕ್ಕಳಾದ ಅರವಿಂದ್ ಮತ್ತು ಅವಿನಾಶ್ ನೆನಪಿಸಿಕೊಂಡಿದ್ದು ವಿಶೇಷವಾಗಿತ್ತು. ಅಂದಹಾಗೆ, 'ಜುಗಾರಿ' ...ದಲ್ಲಿ ನಾಯಕನಟನಾಗಿ ನಟಿಸಿದ್ದ ನರಸಿಂಹರಾಜು ಅವರ ಮತ್ತೊಬ್ಬ ಮೊಮ್ಮಗ ಅವಿನಾಶ್ ಹೊಸ ಚಿತ್ರದಲ್ಲೂ ...ಯಕನ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ.

ಮತ್ತೆ ಬರಲಿದೆ 'ಡಕೋಟ' ಜೋಡಿ





ರಾಕ್‌ಲೈನ್ ವೆಂಕಟೇಶ್ ಮತ್ತು ಓಂಪ್ರಕಾಶ್ ಜೋಡಿ ಮತ್ತೊಮ್ಮೆ ಗಾಂಧಿನಗರದಲ್ಲಿ ಮ್ಯಾಜಿಕ್ ಮಾಡಲು ಹೊರಟಿದೆ.ಆರೇಳು ವರ್ಷಗಳ ಹಿಂದೆ ಓಂಪ್ರಕಾಶ್ ಮತ್ತು ರಾಕ್‌ಲೈನ್ ವೆಂಕಟೇಶ್ ನಾಯಕರಾಗಿ ನಟಿಸಿದ್ದ 'ಡಕೋಟ ಎಕ್ಸ್‌ಪ್ರೆಸ್' ಎಂಬ ಚಿತ್ರ ಗಾಂಧಿನಗರದ ಎಲ್ಲಾ ಚಿತ್ರಪಂಡಿತರ ಲೆಕ್ಕಾಚಾರಗಳನ್ನು ತಲೆಕೆಳಗೆ ಮಾಡಿ ಬಾಕ್ಸ್ ಆಫೀಸಿನಲ್ಲಿ ಅಪೂರ್ವ ಯಶಸ್ಸನ್ನು ಗಳಿಸಿತ್ತು. ಅಷ್ಟೇ ಅಲ್ಲ, ಇವರಿಬ್ಬರಿಗೂ ಎಲ್ಲಿಲ್ಲದ ತಾರಾಮೌಲ್ಯವನ್ನು ತಂದುಕೊಟ್ಟಿತ್ತು. ಆ ಸಂದರ್ಭದಲ್ಲಿ ಈ ಚಿತ್ರದೊಂದಿಗೆ ಬಿಡುಗಡೆಯಾಗಿದ್ದ ದೊಡ್ಡ ದೊಡ್ಡ ಸ್ಟಾರ್‌ಗಳ ಸಿನಿಮಾಗಳು ಬಿದ್ದುಹೋಗಿದ್ದನ್ನು ಇಲ್ಲಿ ಸ್ಮರಿಸಬಹುದು.

ಈಗ ಈ ಜೋಡಿ 'ಡಕೋಟ ಪಿಕ್ಚರ್' ಎಂಬ ಸಿನಿಮಾವನ್ನು ಸದ್ದುಗದ್ದಲವಿಲ್ಲದೆ ಮಾಡಿ ಮುಗಿಸಿರುವ ಸುದ್ದಿ ಬಂದಿದೆ. ಈ ಚಿತ್ರ ಯಾವಾಗ ಶುರುವಾಯಿತು? ಯಾವಾಗ ಮುಗಿಯಿತು? ಎಂಬುದು ಗಾಂಧಿನಗರದಲ್ಲಿ ಯಾರಿಗೂ ಗೊತ್ತಿಲ್ಲ. ಅಂದರೆ, ಅಷ್ಟೊಂದು ರಹಸ್ಯವಾಗಿ ಇದರ ಚಿತ್ರೀಕರಣವನ್ನು ಮಾಡಿ ಮುಗಿಸಿದ್ದಾರೆ. ಓಂಪ್ರಕಾಶ್ ಅವರು 'ಭೀಮಾ ತೀರದ ಹಂತಕರು' ಮತ್ತು 'ಶಿವ' ಎಂಬ ಎರಡು ದೊಡ್ಡ ಚಿತ್ರಗಳನ್ನು ನಿರ್ದೇಶಿಸುತ್ತಿದ್ದ ಸಂದರ್ಭದಲ್ಲೇ ಅದು ಹೇಗೋ ಸಮಯ ಮಾಡಿಕೊಂಡು ಈ ಚಿತ್ರದಲ್ಲಿ ನಟಿಸಿರುವ ಗಾಂಧಿನಗರದ ಜನ ಹುಬ್ಬೇರಿಸುವಂತೆ ಮಾಡಿದೆ. ಅಂದಹಾಗೆ, ನಮಗೆ ತಿಳಿದುಬಂದಿರುವ ಮಾಹಿತಿ ಪ್ರಕಾರ ಇದು ಹಿಂದಿಯ 'ಮಾಲಾ ಮಾಲ್ ವೀಕ್ಲಿ' ಎಂಬ ಚಿತ್ರದ ರೀಮೇಕ್ ಆಗಿದೆ. ನಿಖಿತಾ ಪಟೇಲ್ ಎಂಬ ಸುಂದರಿ ಇವರಿಬ್ಬರೊಂದಿಗೆ ನಾಯಕಿಯಾಗಿ ಕಾಣಿಸಿಕೊಂಡಿದ್ದಾಳೆ. ""ಡಕೋಟ ಎಕ್ಸ್‌ಪ್ರೆಸ್' ನನಗೆ ತಾರಾಮೌಲ್ಯವನ್ನು ತಂದುಕೊಟ್ಟಿತ್ತು, ನಾನು ಎಲ್ಲೇ ಹೋದರೂ ಚಿಕ್ಕಮಕ್ಕಳಿಂದ ಹಿಡಿದು ಹಿರಿಯರತನಕ ಎಲ್ಲರೂ ನನ್ನ 'ಡಕೋಟ ಎಕ್ಸ್‌ಪ್ರೆಸ್' ಚಿತ್ರದ ಪಾತ್ರದ ಬಗ್ಗೆ ಪ್ರಶಂಸಿಸುತ್ತಿದ್ದರು" ಎಂದು ರಾಕ್‌ಲೈನ್ ವೆಂಕಟೇಶ್ ಅನೇಕ ಬಾರಿ ಹೇಳಿದ್ದುಂಟು. ಬಹುಶಃ ಪ್ರೇಕ್ಷಕರ ಈ ಒಂದು ಪ್ರಶಂಸೆಯ ಮಾತುಗಳೇ ಈ ಜೋಡಿ ಮತ್ತೊಮ್ಮೆ ಇದೇ ಮಾದರಿಯ ಚಿತ್ರದಲ್ಲಿ ಕಾಣಿಸಿಕೊಳ್ಳಲು ಪ್ರೇರೇಪಿಸಿರಬೇಕು.

'ಡಕೋಟ ಪಿಕ್ಚರ್' ಸದ್ಯದಲ್ಲೇ ತೆರೆಕಾಣಲಿದ್ದು, 'ಡಕೋಟ ಎಕ್ಸ್‌ಪ್ರೆಸ್' ರೀತಿಯಲ್ಲೇ ಜನರನ್ನು ರಂಜಿಸುತ್ತದೋ ಎಂಬುದನ್ನು ನೋಡಬೇಕಾಗಿದೆ.

ಶೆಣೈ

'ಗುಂಡಿನ ಹುಡುಗಿ' ಪೂಜಾ



ಹಿಂದೊಮ್ಮೆ ಮಾಲಾಶ್ರೀಗೆ ಸಿಕ್ಕಿದ್ದಂತಹ ಬೇಡಿಕೆ ಈಗ 'ದಂಡುಪಾಳ್ಯ' ಸಿನಿಮಾದ ನಾಯಕಿ ...ಜಾ ಗಾಂಧಿಗೆ ಗಾಂಧಿನಗರದಲ್ಲಿ ಸಿಗುತ್ತಿದೆ.

'ನಂಜುಂಡಿ ಕಲ್ಯಾಣ' ಚಿತ್ರದಲ್ಲಿ ಮಾಲಾಶ್ರೀ 'ಒಳಗೆ ಸೇರಿದರೆ ಗುಂಡು...' ಎಂಬ ...ಡಿಗೆ ಮಾದಕವಾಗಿ ನರ್ತಿಸಿದ್ದು ನಿಮಗೆ ನೆನಪಿದೆ ತಾನೆ? 'ದಂಡುಪಾಳ್ಯ' ಚಿತ್ರದಲ್ಲಿ ...ಜಾಗಾಂಧಿ ಕೂಡ ಇದೇ ತರಹ ಕುಡಿದ ಮತ್ತಿನಲ್ಲಿ ನರ್ತಿಸಿರುವ ಹಾಡು ಗಾಂಧಿನಗರದ ...ರಿಗೆ ತುಂಬಾ ಇಷ್ಟವಾಗಿದೆ. ಈ ಕಾರಣಕ್ಕೆ ಅಂತಹ 'ಕುಡಿಯುವ ಹಾಡಿ'ನಲ್ಲಿ ...ಸಬೇಕೆಂದು ಗಾಂಧಿನಗರದ ಅನೇಕ ನಿರ್ಮಾಪಕರು ಪೂಜಾ ಗಾಂಧಿಯನ್ನು ಕೇಳುತ್ತಿದ್ದಾರೆ. ...ರೆ 'ಮುಂಗಾರು ಮಳೆ'ಯ ಈ ಹುಡುಗಿಗೆ ತಾನಿನ್ನೂ ಮಳೆಯಲ್ಲಿ ತೊಯ್ದು ...ಸುತ್ತುವ ಹಾಡುಗಳಲ್ಲಿ ಕಾಣಿಸಿಕೊಳ್ಳಬೇಕೆಂಬ ಆಸೆ ಇದೆ. ಈ ಕಾರಣಕ್ಕಾಗಿ ಆಕೆ ...ಂಡಿನ ಹಾಡು'ಗಳನ್ನು ಒಪ್ಪುತ್ತಿಲ್ಲವಂತೆ.

'ದಂಡುಪಾಳ್ಯ' ಚಿತ್ರದ ಯಶಸ್ಸು ನಾಯಕಿ ಪೂಜಾ ಗಾಂಧಿಗೆ 'ಗುಂಡಿನ ಹುಡುಗಿ' ...ಬ ಇಮೇಜನ್ನು ತಂದುಕೊಟ್ಟಿರುವುದು ಆಶ್ಚರ್ಯ ಎನಿಸುತ್ತಿದೆ.


ಇದೇ ತರಹ 'ಕಳ್ಳ-ಮಳ್ಳ-ಸುಳ್ಳ' ಎಂಬ ಚಿತ್ರದಲ್ಲಿ 'ತುಪ್ಪ ಬೇಕಾ ತುಪ್ಪ' ಎಂಬ ...ಡಿನಲ್ಲಿ ಮಾದಕವಾಗಿ ನರ್ತಿಸಿ ತನ್ನ ಮೈಸಿರಿಯನ್ನು ಪ್ರದರ್ಶಿಸಿದ್ದ ರಾಗಿಣಿಗೂ ಆ ...ತ್ರದ ನಂತರ ಇಂತಹದ್ದೇ ಅನೇಕ ಪಾತ್ರಗಳು ಬಂದೊದಗಿದ್ದವು. ಆದರೆ ರಾಗಿಣಿ ...ಡಲೇ ಎಚ್ಚೆತ್ತು ಅಂತಹ ಪಾತ್ರಗಳಲ್ಲಿ ಮತ್ತೆ ಕಾಣಿಸಿಕೊಳ್ಳುವ ತಪ್ಪನ್ನು ಮಾಡದೇ ...ಗರೂಕತೆಯಿಂದ ಪಾತ್ರಗಳನ್ನು ಆಯ್ಕೆ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು.


ಮೂರು ವಿಶೇಷ ಧಾರಾವಾಹಿಗಳು


ಸುವರ್ಣ ಚಾನಲ್ ಈ ತಿಂಗಳ 30 ರಿಂದ ಮೂರು ಮೆಗಾ ಧಾರಾವಾಹಿಗಳನ್ನು ಆರಂಭಿಸಲಿದೆ. ವಿಶೇಷವೆಂದರೆ ಈ ಮೂರು ಮೆಘಾ ಧಾರಾವಾಹಿಗಳಲ್ಲಿ ಚಿತ್ರೋದ್ಯಮದ ಇಬ್ಬರು ಪ್ರಮುಖ ಕಲಾವಿದರು ಕಾಣಿಸಿಕೊಳ್ಳುತ್ತಿದ್ದಾರೆ. 'ಭಾಗ್ಯವಂತರು' ಎಂಬ ಸಾಮಾಜಿಕ ಕಥಾವಸ್ತುವಿನ ಧಾರಾವಾಹಿಯಲ್ಲಿ ಭಾರತಿ ವಿಷ್ಣುವರ್ಧನ್ ಮುಖ್ಯ ಪಾತ್ರದಲ್ಲಿ ಕಾಣಿಸಿಕೊಂಡರೆ, ಐತಿಹಾಸಿಕ ಧಾರಾವಾಹಿಯಾದ 'ಕೆಳದಿ ಚೆನ್ನಮ್ಮ' ನಿರ್ದೇಶಕ ನಾಗಾಭರಣರವರ ಸಾರಥ್ಯದಲ್ಲಿ ಮೂಡಿಬರುತ್ತಿದೆ. ಈ ಧಾರಾವಾಹಿಯನ್ನು ಉದಯೋನ್ಮುಖ ನಟ ಶಿವಧ್ವಜ್ ನಿರ್ಮಿಸುತ್ತಿದ್ದಾರೆ.

ನಾಗಾಭರಣ ಕಳೆದ ಹಲವಾರು ವರ್ಷಗಳಿಂದ ಇಂತಹ ಐತಿಹಾಸಿಕ ಕಥಾವಸ್ತುವಿನ ಧಾರಾವಾಹಿಯನ್ನು ಮಾಡಲು ಸಿದ್ಧತೆ ನಡೆಸಿದ್ದರೂ ಪ್ರತಿ ಬಾರಿ ಕೊನೆಕ್ಷಣದಲ್ಲಿ ಆ ಪ್ರಾಜೆಕ್ಟ್‌ಗಳು ನಿಂತುಹೋಗುತ್ತಿದ್ದವು. ಈಗ ಸುವರ್ಣ ಚಾನಲ್ ನಾಗಾಭರಣರ ಕನಸನ್ನು ನನಸು ಮಾಡಲು ಹೊರಟಿದೆ. ಅದರಲ್ಲೂ ಕರ್ನಾಟಕದ ಧೀರ ಮಹಿಳೆ ಕೆಳದಿ ಚನ್ನಮ್ಮನ ಕಥಾವಸ್ತುವನ್ನು ಮೆಘಾ ಧಾರಾವಾಹಿ ಮಾಡಲು ಹೊರಟಿರುವ ಸುವರ್ಣ ಚಾನಲ್‌ನವರ ಹೆಜ್ಜೆಯನ್ನು ಮೆಚ್ಚಲೇಬೇಕು.

ಸಿನಿಮಾದಲ್ಲಿ ಸಂಪೂರ್ಣ ಸ್ವಾತಂತ್ರ್ಯ ಹೊಂದಿರುವ ನಿರ್ದೇಶಕರು ಮೆಘಾ ಸೀರಿಯಲ್ ಮಾಡುವಾಗ ಟಿಆರ್‌ಪಿ ಭಯದಲ್ಲೇ ಕೆಲಸ ಮಾಡಬೇಕಾಗುತ್ತದೆ. ಅಷ್ಟೇ ಅಲ್ಲ ಪ್ರೇಕ್ಷಕರ ಅಭಿರುಚಿಗೆ ತಕ್ಕಂತೆ ಕೆಲವೊಮ್ಮೆ ನಿರ್ದೇಶಕರು ತಮ್ಮ ಚಿತ್ರಕಥೆಯನ್ನು ಕೂಡ ಬದಲಾಯಿಸಬೇಕಾಗುತ್ತದೆ. ಯಾವಾಗಲೂ ನಿರ್ದೇಶಕನ ಸ್ವಾತಂತ್ರ್ಯದ ಬಗ್ಗೆ ಹೆಮ್ಮೆಯಿಂದ ಮಾತನಾಡುವ ನಾಗಾಭರಣ ಇಂತಹ ಸವಾಲಿನ ಕೆಲಸವನ್ನು ಹೇಗೆ ನಿಭಾಯಿಸುತ್ತಾರೆ ಎಂಬುದು ನಿಜಕ್ಕೂ ಕುತೂಹಲಕಾರಿಯಾಗಿದೆ. ಕಳೆದ ಒಂದು ವರ್ಷದಿಂದ ಈ ಧಾರಾವಾಹಿಗಾಗಿ ಸಾಕಷ್ಟು ತಯಾರಿಯನ್ನು ಮಾಡಿಕೊಂಡಿರುವ ನಾಗಾಭರಣ ಈ ಮೆಘಾ ದಾರಾವಾಹಿ ಕನ್ನಡಿಗರ ಮನಸ್ಸನ್ನು ಗೆಲ್ಲುತ್ತದೆ ಎಂಬ ಆತ್ಮವಿಶ್ವಾಸವನ್ನು ಹೊಂದಿದ್ದಾರೆ.









ಇತ್ತ ಭಾರತಿ ವಿಷ್ಣುವರ್ಧನ್ ಕಾಣಿಸಿಕೊಳ್ಳುತ್ತಿರುವ 'ಭಾಗ್ಯವಂತರು' ಮೆಘಾ ಧಾರಾವಾಹಿಯ ಕಥಾವಸ್ತು ಹೀಗಿದೆ: ಈಕೆ ಇಡೀ ಊರಿಗೆ ಹೆಗ್ಗಡತಿಯಂತೆ. ಈಕೆಯ ಮಾತನ್ನು ಊರಿಗೆ ಊರೇ ಗೌರವಿಸುತ್ತದೆಯಂತೆ.

ಇಂತಹ ಜಮೀನ್ದಾರನ ಪಾತ್ರಗಳಲ್ಲಿ ವಿಷ್ಣುವರ್ಧನ್ ಬೇಕಾದಷ್ಟು ಬಾರಿ ಕಾಣಿಸಿಕೊಂಡದ್ದಿದೆ. ಬೆಳ್ಳಿತೆರೆಯಲ್ಲಿ ವಿಷ್ಣು ಮಾಡಿದ ಪಾತ್ರವನ್ನು ಕಿರುತೆರೆಯಲ್ಲಿ ಅವರ ಪತ್ನಿ ಭಾರತಿ ವಿಷ್ಣುವರ್ಧನ್ ಮಾಡುತ್ತಿರುವುದು ವಿಶೇಷ. ಅದಕ್ಕಿಂತಲೂ ಮುಖ್ಯವಾದ ವಿಷಯವೆಂದರೆ ಗಿರಿಜಾ ಮೀಸೆಯನ್ನು ಹೊಂದಿರುವ, ತಲೆಗೆ ಪೇಟವನ್ನು ಕಟ್ಟಿರುವ ವಿಷ್ಣು ಫೋಟೋ ಮೆಘಾ ಸೀರಿಯಲ್‌ನ ಉದ್ದಕ್ಕೂ ಕಾಣಿಸಿಕೊಳ್ಳಲಿದೆಯಂತೆ. ಅದರ ಬಗ್ಗೆ ಭಾರತಿ ವಿಷ್ಣುವರ್ಧನ್ ಈ ರೀತಿ ಹೇಳಿದರು: "ನನಗೆ ವಿಷ್ಣುವರ್ಧನ್ ಅವರ ಫೋಟೋ ಜೊತೆ ನಟಿಸುತ್ತಿದ್ದೇನೆ ಅಂತ ಅನಿಸುತ್ತಿಲ್ಲ. ಅದರ ಬದಲಿಗೆ ಸ್ವತಃ ವಿಷ್ಣುವರ್ಧನ್ ಅವರ ಜೊತೆಯೇ ನಾನು ಈ ಧಾರಾವಾಹಿಯಲ್ಲಿ ಪಾತ್ರ ಮಾಡುತ್ತಿದ್ದೇನೋ ಎಂದೆನಿಸುತ್ತಿದೆ." ಅಂದರೆ ವಿಷ್ಣು ಅಭಿಮಾನಿಗಳ ಪಾಲಿಗೆ ಪರೋಕ್ಷವಾಗಿ ವಿಷ್ಣುವರ್ಧನ್ ಕಿರುಪರದೆಯಲ್ಲಿ ಕಾಣಿಸಿದಂತಾಗಿದೆ.

'ಆಕಾಶ ದೀಪ' ಎಂಬ ಮತ್ತೊಂದು ಮೆಘಾಧಾರಾವಾಹಿಯನ್ನು ಕಿರುಪರದೆಯ ಯಶಸ್ವಿ ನಿರ್ದೇಶಕ ಸಕಲೇಶಪುರ ಶ್ರೀನಿವಾಸ್ ನಿರ್ದೇಶಿಸುತ್ತಿದ್ದಾರೆ. 'ಕನ್ನಡದ ಕೋಟ್ಯಾಧಿಪತಿ' ಕಾರ್ಯಕ್ರಮದಲ್ಲಿ ಶಿವಮೊಗ್ಗದ ಹೆಣ್ಣುಮಗಳು ದೀಪಾ ಹೇಳಿದ ಆಕೆಯ ಜೀವನ ಕಥೆಯೇ ಈ ಧಾರಾವಾಹಿಗೆ ಸ್ಫೂರ್ತಿಯಂತೆ. ಹೀಗೆ ಒಂದು ಐತಿಹಾಸಿಕ, ಇನ್ನೊಂದು ಸಾಮಾಜಿಕ, ಮತ್ತೊಂದು ರಿಯಲಿಸ್ಟಿಕ್ ಕಥಾವಸ್ತುವನ್ನು ಕೈಗೆತ್ತಿಕೊಂಡು ಸುವರ್ಣ ಚಾನಲ್ ಒಂದೇ ದಿನದಲ್ಲಿ ಮೂರು ಮೆಘಾ ಧಾರಾವಾಹಿಗಳನ್ನು ಆರಂಭಿಸಿ ಹೊಸ ಪ್ರಯೋಗ ಮಾಡುತ್ತಿರುವುದು ವಿಶೇಷವೇ ಸರಿ.

...ಕುತ್ತಿದ್ದೇವೆ. ಗುವಾಹತಿಯಲ್ಲಿ ...ಚೆಗೆ ಓರ್ವ ಯುವತಿಯ ...ಲೆ ಸಾರ್ವಜನಿಕ ಸ್ಥಳದಲ್ಲಿ ...ರ ದೈಹಿಕ ಹಲ್ಲೆ ಮತ್ತು ...ಚಾರವನ್ನು ಒಬ್ಬ ಮಾಧ್ಯಮ ...ಗಾರ 20 ನಿಮಿಷಗಳ ಕಾಲ ...ರ್ಡ್ ಮಾಡಿದ್ದಾನೆ. ಈ ...ತು ದೇಶದಾದ್ಯಂತ ವಿರೋಧ ...ವಾದಾಗ ರಾಷ್ಟ್ರೀಯ ಮಹಿಳಾ ...ಯೋಗದ ಅಧ್ಯಕ್ಷೆ ಮಮತಾ ...ರ್ಮ ಅರ್ಥವಿಲ್ಲದ ಹೇಳಿಕೆ ಯನ್ನು ನೀಡಿದ್ದಾರೆ. ...ಂತೆಯೇ ಇತರೆ ರಾಜಕಾರಣಿಗಳೂ ಪ್ರತಿಕ್ರಿಯಿಸಿದ್ದಾರೆ. ...ಲ್ಲ ನಮ್ಮೆಲ್ಲ ಆತಂಕವನ್ನು ಮೂಡಿಸಿದೆ.



2011ರಲ್ಲಿ ನಡೆಸಿದ ಒಂದು ಸಮೀಕ್ಷೆಯ ಪ್ರಕಾರ ...ತದ ಮಹಾ ನಗರಗಳಲ್ಲಿ ದೆಹಲಿಯ ನಂತರ ...ಗಳೂರಿನಲ್ಲಿ ಮಹಿಳೆಯರ ವಿರುದ್ಧ ನಡೆಯುವ ಹೆಚ್ಚು ...ಅಪರಾಧ ಕೃತ್ಯಗಳು ದಾಖಲಾಗಿವೆ. ಆದರೂ ಇಲ್ಲಿನ ಜನ ...ದ ಬಗ್ಗೆ ಮೌನ ವಹಿಸಿರುವುದು ಅಚ್ಚರಿ ಮೂಡಿಸುತ್ತದೆ. ...ತಹ ಉದಾಸೀನತೆಯ ವಿರುದ್ಧ ಎಲ್ಲರೂ ದನಿ ...ಬೇಕಿದೆ. ನಮ್ಮ ದೇಶದ ಪ್ರತಿ ನಗರಗಳಲ್ಲಿ ಜನರು, ...ರಲ್ಲೂ ಮಹಿಳೆಯರು, ತಮ್ಮ ಮೌನ ಮುರಿದು ...ಯ ವಿರುದ್ಧ ಹೋರಾಡ ಬೇಕಿದೆ.

...ಮಾತ್ರವಲ್ಲ, ಕಾನೂನಿನಲ್ಲಿ ಮತ್ತು ನಮ್ಮ ವ್ಯವಸ್ಥೆಯಲ್ಲಿ ...ವಾರು ಬದಲಾವಣೆಗಳನ್ನು ತರಲು ಸರ್ಕಾರದ ಮೇಲೆ ...ವನ್ನು ಹೇರಬೇಕಿದೆ.

...ಉದಾಹರಣೆಗೆ: ಸಾರ್ವಜನಿಕವಾಗಿ ವಿಚಾರಗೋಷ್ಠಿ ...ನ್ನು ಆಯೋಜಿಸಿ ಅಪರಾಧೀ ಕಾನೂನು ತಿದ್ದುಪಡಿ ...10ರ ಅಡಿಯಲ್ಲಿ ವಿವಿಧ ರೀತಿಯ ಲೈಂಗಿಕ ಹಿಂಸೆ ...ಂದರೆ ಮದುವೆಯ ಒಳಗೆ ಬಲಾತ್ಕಾರ, ಯಾವುದೇ ...ಗಳ ಮೇಲೆ ಬಲಾತ್ಕಾರ, ತೀವ್ರ ರೀತಿಯ ಲೈಂಗಿಕ ...ಸೆ, ಹಲ್ಲೆ, ಜಾತಿ ತೋರಿಸುವ ಉದ್ದೇಶದಿಂದ ನಡೆಯುವ ...ಗಿಕ ಹಿಂಸೆ - ಇವುಗಳನ್ನು ಗುರುತಿಸಿ ಶಿಕ್ಷೆಯನ್ನು ವಿಧಿಸುವ ಕಾನೂನನ್ನ ಜಾರಿಗೆ ತರಬೇಕು.

ಬಲಾತ್ಕಾರದ ಕೇಸುಗಳನ್ನು ಪುರುಷ ಪೊಲೀಸರು ತನಿಖೆ ಮಾಡುವ ಬದಲು ಇಂತಹ ಅಪರಾಧಗಳನ್ನು ಕುರಿತು ಮಹಿಳಾ ಪೊಲೀಸರಿಗೆ ವಿಶೇಷ ತರಬೇತಿ ನೀಡಿ ಅವರೇ ತನಿಖೆ ಮಾಡುವಂತೆ ನೋಡಿಕೊಳ್ಳಬೇಕು.

ಒಂದು ಸಹಾಯವಾಣಿ ನಿರ್ಮಿಸಿ, ಅದರ ಬಗ್ಗೆ ವ್ಯಾಪಕ ಪ್ರಚಾರ ನೀಡಿ, ಕೌಟುಂಬಿಕ ಹಿಂಸೆ ಮತ್ತು ಕೌಟುಂಬಿಕ ಲೈಂಗಿಕ ಹಿಂಸೆಗೆ ಗುರಿಯಾಗಿರುವ ಮಹಿಳೆಯರಿಗೆ ನೆರವಾಗಬೇಕು. ಸಹಾಯವಾಣಿಯ ಜೊತೆಗೆ ದೈಹಿಕ ಮತ್ತು ಲೈಂಗಿಕ ದೌರ್ಜನ್ಯಕ್ಕೆ ಗುರಿಯಾಗಿರುವ ಮಹಿಳೆಯರ ರಕ್ಷಣೆಗೆ 'ಶೆಲ್ಟರ್' ಮನೆಗಳನ್ನು ಸ್ಥಾಪಿಸಬೇಕು.

ಪೊಲೀಸ್ ಠಾಣೆಗಳಲ್ಲಿ ಎಲ್ಲಾ ಬಲಾತ್ಕಾರಗಳ ಕೇಸುಗಳನ್ನು ಸರ್ಕಾರ ಶೀಘ್ರಗತಿಯಲ್ಲಿ ವಿಚಾರಣೆ ನಡೆಸಿ ಕೃತ್ಯ ಎಸಗಿದ ಅಧಿಕಾರಿಗಳನ್ನು ಕೂಡಲೆ ಕೆಲಸದಿಂದ ತೆಗೆದು ಹಾಕಿ ಅವರಿಗೆ ಕಾನೂನಿನ ಪ್ರಕಾರ ಶಿಕ್ಷೆ ವಿಧಿಸಬೇಕು.

ಕಾಶ್ಮೀರ, ಈಶಾನ್ಯ ರಾಜ್ಯಗಳಲ್ಲಿ ಮತ್ತು ಮಧ್ಯ ಭಾರತದಲ್ಲಿ ವಿಚಾರಣೆಗಳನ್ನು ನಡೆಸಿ ಅಲ್ಲಿನ ಮಹಿಳೆಯರ ಮೇಲೆ ಸೇನೆ ಮತ್ತು ಪೊಲೀಸರು ನಡೆಸಿರುವ ಹಿಂಸೆಗೆ ಶಿಕ್ಷೆ ನೀಡಬೇಕು.

- ಬೆಂಗಳೂರಿನ ಹಲವಾರು ಮಹಿಳಾಪರ ಸಂಘಟನೆಗಳು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.

Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 08-08-2012 RNI No. KARKAN/



ಜಯಮಾಲಾರ 'ಸೌಂದರ್ಯ' ಕನಸು

"ಸೌಂದರ್ಯ ಮತ್ತು ನಾನು' ಎಂಬ ವಿಶೇಷ ಕಾರ್ಯಕ್ರಮಕ್ಕೆ ನಿಮಗೆಲ್ಲ ಆಹ್ವಾನ" ಎಂದು ಜಯಮಾಲಾ ಮೊನ್ನೆ ಪತ್ರಕರ್ತರಿಗೆ ಆಹ್ವಾನ ಕಳುಹಿಸಿದ್ದರು. ಜಯಮಾಲಾ ಅವರ ಪುತ್ರಿ ಸೌಂದರ್ಯ ನಾಯಕಿಯಾಗಿ ನಟಿಸಿರುವ 'ಗಾಡ್‌ಫಾದರ್' ಚಿತ್ರ ಬಿಡುಗಡೆಯಾಗುತ್ತಿರುವುದರಿಂದ ಈ ಕಾರ್ಯಕ್ರಮವನ್ನು ಏರ್ಪಡಿಸಿರಬಹುದು ಎಂದು ಯಾರು ಬೇಕಾದರೂ ಊಹಿಸಬಹುದಿತ್ತು. ಆದರೆ ಅವರು ಈ ಕಾರ್ಯಕ್ರಮವನ್ನು ನಡೆಸಿಕೊಟ್ಟ ರೀತಿ ಮತ್ತು ಅದರ ಪರಿಕಲ್ಪನೆ ನಿಜಕ್ಕೂ ಎಲ್ಲರ ಮನಸ್ಸನ್ನು ಗೆದ್ದಿತು.

ನಿರೂಪಕಿ ಅರ್ಪರ್ಣ ಈ ಕಾರ್ಯಕ್ರಮವನ್ನು ತನ್ನದೇ ಆದ ಶೈಲಿಯಲ್ಲಿ ಆರಂಭಿಸಿ ಎರಡೇ ಮಾತಿನಲ್ಲಿ ಎಲ್ಲರನ್ನೂ ಸ್ವಾಗತಿಸಿದರು. ಆನಂತರ ನಿರ್ದೇಶಕ ಯೋಗರಾಜ್ ಭಟ್ಟರ ಹಿನ್ನೆಲೆ ಧ್ವನಿಯಲ್ಲಿ ಒಂದು ಡಾಕ್ಯುಮೆಂಟರಿಯನ್ನು ಪ್ರಸಾರ ಮಾಡಿದರು. ಅದರಲ್ಲಿ ಜಯಮಾಲಾ ಉದ್ಯಮಕ್ಕೆ ಕಾಲಿಟ್ಟದ್ದು ಸಾಧಿಸಿದ್ದು, ಪ್ರಶಸ್ತಿ ಗಳಿಸಿದ್ದು ಮತ್ತು ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷೆಯಾಗಿ ಅಮೃತಮಹೋತ್ಸವವನ್ನು ನಡೆಸಿದ್ದನ್ನು ಚುಟುಕಾಗಿ ವಿವರಿಸಲಾಯಿತು.

'ಇಂತಹ ಮಹಾನ್ ನಟಿಯ ಪುತ್ರಿ ಈಗ ಚಿತ್ರರಂಗಕ್ಕೆ ನಾಯಕಿಯಾಗಿ ಪಾದಾರ್ಪಣೆ ಮಾಡುತ್ತಿದ್ದಾಳೆ' ಎಂದು ಹೇಳಿದ ನಂತರ ಹಿನ್ನೆಲೆ ಧ್ವನಿಯ ಕೆಲಸವನ್ನು ಸ್ವತಃ ಜಯಮಾಲಾ ನಿರ್ವಹಿಸಿದರು. 'ನಾನು ಮತ್ತು ಸೌಂದರ್ಯ' ಎಂಬ ಕಾರ್ಯಕ್ರಮದಲ್ಲಿ ಸೌಂದರ್ಯಳ ಹುಟ್ಟು, ಆಕೆಯ ಬಾಲ್ಯ ವಿದ್ಯಾಭ್ಯಾಸ, ಕನಸುಗಳನ್ನೆಲ್ಲ ಹೇಳುತ್ತ ಹೋದ ಜಯಮಾಲಾ "ಈ ಪುಟ್ಟ ಹುಡುಗಿಯನ್ನು ಕನ್ನಡ ಜನ ಕೋಟಿಗೆ ಅರ್ಪಿಸುತ್ತಿದ್ದೇನೆ. ನನ್ನನ್ನು ಬೆಳೆಸಿದ ರೀತಿಯಲ್ಲಿ ಆಕೆಯನ್ನೂ ಬೆಳೆಸಿ, ಹರಸಿ ಎಂದು ನಿವೇದನೆ ಮಾಡಿಕೊಳ್ಳುತ್ತೇನೆ" ಎಂದದ್ದು ತುಂಬಾ ಚೆನ್ನಾಗಿತ್ತು. ಒಬ್ಬ ತಾಯಿಯಾಗಿ ತನ್ನ ಮಗಳನ್ನು ನಾಯಕಿಯನ್ನಾಗಿ ಮಾಡುತ್ತಿರುವ ಸಂದರ್ಭದಲ್ಲಿ ಆಕೆಯಲ್ಲಿರುವ ಆತಂಕ, ತಳಮಳ ಮತ್ತು ಭಾವನೆಗಳು ಆಕೆಯ ಮುಖದಲ್ಲಿ ಕಾಣುತ್ತಿದ್ದವು. ಮಗಳು ಸೌಂದರ್ಯ 10ನೇ ತರಗತಿ ಓದುತ್ತಿದ್ದಾಗಲೇ ತಾಯಿ ಜಯಮಾಲಾ ಡಾಕ್ಟರೇಟ್ ಪದವಿಗಾಗಿ ಓದುತ್ತಿದ್ದರು. ಇಬ್ಬರು ರಾತ್ರಿಹಗಲು ಎನ್ನದೆ ವಿದ್ಯಾಭ್ಯಾಸದಲ್ಲಿ ಜೊತೆಯಾಗಿ ತೊಡಗಿಕೊಂಡಿದ್ದರು. "ಈಗ ನಾವಿಬ್ಬರೂ ಆ ಘಟ್ಟದಿಂದ ಹೊರ[illegible] ನನ್ನ ಮಗಳು ನಾಯಕಿಯಾಗುತ್ತಿರುವುದು ನನಗೆ ಮತ್ತೊಂದು ಪರೀಕ್ಷೆ ತರಹ ಕ[illegible]" ಎಂದು ಜಯಮಾಲಾ ಭಾವುಕರಾಗಿ ನುಡಿದರು.



ಅದೇ ಸಮಾರಂಭದಲ್ಲಿ ಅಮ್ಮ-ಮಗಳು ತಮಗೆ ಅವಕಾಶ ಕೊಟ್ಟ [illegible] ಮಂಜು, ನಾಯಕ ಉಪೇಂದ್ರ ಮತ್ತು ನಿರ್ದೇಶಕ ಶ್ರೀರಾಮ್ ಅವರನ್ನು [illegible] ಕೂಡ ಅರ್ಥಪೂರ್ಣವಾಗಿತ್ತು. 'ಗಾಡ್‌ಫಾದರ್' ಚಿತ್ರ ತೆರೆಕಂಡ ನಂತರ ಅಪ್ಪ[illegible] ಮಲ್ಲಿಗೆ ನಗೆಯ ಈ ಹುಡುಗಿ ಸೌಂದರ್ಯ ತನ್ನ ತಾಯಿ ಜಯಮಾಲಾರ[illegible] ಬೇಡಿಕೆ ಗಳಿಸಲು ಎಂದು ಆಶಿಸುತ್ತೇವೆ.

ವೀಣಾ ಮಲ್ಲಿಕ್ ಎಂಬ ಸುದ್ದಿಬಿಂದು

ಪಾಕಿಸ್ತಾನದ ಕಲಾವಿದೆ ವೀಣಾ ಮಲ್ಲಿಕ್ ಎರಡು ದೇಶಗಳಲ್ಲಿ ಏಕಕಾಲಕ್ಕೆ ಸುದ್ದಿಯ ಕೇಂದ್ರಬಿಂದುವಾಗಿದ್ದಾಳೆ.

ಈಕೆ ನಟಿಸುತ್ತಿರುವ 'ಡರ್ಟಿ' ಚಿತ್ರವನ್ನು ಥಿಯೇಟರ್‌ಗಳಲ್ಲಿ ಬಿಡುಗಡೆ ಮಾಡಲು ಬಿಡುವುದಿಲ್ಲ ಎಂದು ಹಿಂದೂ ಮೂಲಭೂತವಾದಿ ಮುತಾಲಿಕ್ ಮೊನ್ನೆ ಹೇಳಿರುವುದು ನಿಮಗೆಲ್ಲ ಗೊತ್ತಿರಬಹುದು. ಅದೇರೀತಿ ಪಾಕಿಸ್ತಾನದಲ್ಲೂ ವೀಣಾ ಮಲ್ಲಿಕ್ ಮೂಲಭೂತವಾದಿಗಳ ಕೆಂಗಣ್ಣಿಗೆ ಗುರಿಯಾಗಿದ್ದಾರೆ.



ಇತ್ತೀಚೆಗೆ ಪಾಕಿಸ್ತಾನದ 'ಹೀರೋ' ಎಂಬ ಚಾನಲ್ ಮೂಲಕ ರಮ್‌ಜಾನ್ ಹಬ್ಬದ ಸಂದರ್ಭದಲ್ಲಿ ವೀಣಾ ಮಲ್ಲಿಕ್ ಸಾಂಪ್ರದಾಯಿಕವಾಗಿ ಉಡುಪನ್ನು ಧರಿಸಿ ಮುಸ್ಲಿಂ ಬಾಂಧವರಿಗೆ ರಮ್‌ಜಾನ್ ಹಬ್ಬವನ್ನು ಅತ್ಯಂತ ಭಕ್ತಿ ಮತ್ತು ಗೌರವದಿಂದ ಆಚರಿಸುವಂತೆ ಕರೆ ನೀಡಿದ್ದರಂತೆ. ಅದನ್ನು ತೀವ್ರವಾಗಿ ವಿರೋಧಿಸಿದ ಮುಸ್ಲಿಂ ಮೂಲಭೂತವಾದಿಗಳು "ಅರೆನಗ್ನವಾಗಿ ಸಿನಿಮಾದಲ್ಲಿ ನಟಿಸುವ ಈ ಹುಡುಗಿ ನಮಗೆ ಬುದ್ಧಿವಾದ ಹೇಳುವುದು ಬೇಡ. ಈ ಕಾರ್ಯಕ್ರಮವನ್ನು ನಿಲ್ಲಿಸಿ" ಎಂದು ಗಲಾಟೆ ಮಾಡಿದರಂತೆ. ಕೊನೆಗೆ 'ಹೀರೋ' ಚಾನಲ್‌ನವರು ಬೇರೆ ದಾರಿ ಕಾಣದೇ ಆಕೆಯ ಕಾರ್ಯಕ್ರಮವನ್ನು ಪ್ರಸಾರ ಮಾಡುವುದನ್ನು ನಿಲ್ಲಿಸಿದರಂತೆ.

ಅಂತೂ-ಇಂತೂ ವೀಣಾ ಮಲ್ಲಿಕ್ ಅತ್ತ ಪಾಕಿಸ್ತಾನದಲ್ಲೂ, ಇತ್ತ ಭಾರತದಲ್ಲೂ ವಿವಾದದ ಕೇಂದ್ರಬಿಂದುವಾಗಿದ್ದಾಳೆ ಎಂಬುದೇ ಸೋಜಿಗ.



ಪಬ್ಲಿಸಿಟಿಗಾ[illegible] ಕಣ್ಣೀರ[illegible]

ಮೊನ್ನೆ 'ಗೌರಿಪುತ್ರ' [illegible] ನಿರ್ದೇಶಕ ಮತ್ತು ನಿರ್ಮಾಪಕರಾದ ಮಂಜು ಮಸ್ಕಲ್ ಮಟ್ಟಿ ಪತ್ರಿಕಾಗೋ[illegible] ಕಣ್ಣೀರಿಟ್ಟರು. ಇದಕ್ಕೆ ಕಾರಣ ಚಿತ್ರದ ನಾಯಕಿ ನಿಖಿತಾ ಮಾಡಿರುವ [illegible] ಸಣ್ಣಪುಟ್ಟ ಕಿರಿಕ್‌ಗಳು. ಅಷ್ಟೇ ಅಲ್ಲ, ಆಕೆ ಚಿತ್ರದ ಬಿಡುಗಡೆಯ ಪ[illegible] ಬರುವುದಿಲ್ಲವೆಂದು ಹೇಳಿದರಂತೆ. ಜೊತೆಗೆ ನಿರ್ಮಾಪಕ ಮಂಜು ಕೊಡಬೇಕಾದ ಸಂಭಾವನೆಯನ್ನು ಕೊಟ್ಟಿಲ್ಲ ಎಂದು ಪತ್ರಿಕೆಗಳಿಗೆ ಹೇಳಿಕೆ ನೀಡಿದ್ದಾಳಂತೆ.



"ಈ ರೀತಿ ಒಬ್ಬ ನಾಯಕಿ ಹೇಳಿಕೆ ನೀಡಿದ ಕೂಡಲೇ ಅದನ್ನು ಬರೆಯುವ ಬದಲು ನೀವು ಒಂದು ಮಾತು ನನ್ನ ಬಳಿ ಕೇಳಬಹುದಿತ್ತು. ನೀವು ಹೀಗೆ ಬರೆದಿರುವುದರಿಂದ ವಯಸ್ಸಾದ ನನ್ನ ತಂದೆಗೆ ಎಷ್ಟು ತೊಂದರೆ ಯಾಯಿತು ಗೊತ್ತಾ?" ಎಂದೆಲ್ಲ ಮಂಜು ಕಣ್ಣೀರಿಟ್ಟರು. ಆತ ಕಣ್ಣೀರಿಟ್ಟಿದ್ದೇ ತಡ, ಟಿವಿ ಚಾನಲ್‌ಗಳ ವರದಿಗಾರರು 'ಪತ್ರಿ ಕಾಗೋಷ್ಠಿಯಲ್ಲಿ ಕಣ್ಣೀರಿಟ್ಟ ಮಂಜು ಮಸ್ಕಲ್' ಎಂದು ಬ್ರೇಕಿಂಗ್ ನ್ಯೂಸ್‌ನ್ನು ಹಾಕಿದರು. ಅಲ್ಲಿಗೆ ಮಂಜುಗೆ ನಿರಾಯಾಸವಾಗಿ ಪಬ್ಲಿಸಿಟಿ ದೊರಕಿತು!

ನಿರ್ದೇಶನ ದತ್ತ ನಿರ್ಮಾಪಕ ಶಂಕ್ರೇಗೌಡ

ಈತನಕ ನಾಯಕನಟ ಸುದೀಪ್ ಜೊತೆ ಅನೇಕ ಸಿನಿಮಾಗಳನ್ನು ಮಾಡಿ ಅವರೊಂದಿಗೆ ಕ್ರಿಕೆಟ್ ಆಡುತ್ತ ಸುದೀಪ್ ಪಾಳಯದಲ್ಲೇ ಕಾಣಿಸಿಕೊಂಡಿದ್ದ ನಿರ್ಮಾಪಕ ಶಂಕ್ರೇಗೌಡ ಮುಂದಿನ ತಿಂಗಳು ನಿರ್ದೇಶಕರಾಗಿ 'ಆರಂಗೇಟ್ರಂ' ಮಾಡಲಿದ್ದಾರೆ. ಅಷ್ಟೇ ಅಲ್ಲ, ಅವರು ನಿರ್ಮಿಸಿ-ನಿರ್ದೇಶಿಸುತ್ತಿರುವ ಚಿತ್ರವನ್ನು ಕನ್ನಡ ಭಾಷೆಯಲ್ಲಿ ಮಾತ್ರವಲ್ಲ, ತಮಿಳು ಮತ್ತು ತೆಲುಗಿನಲ್ಲೂ ಏಕಕಾಲದಲ್ಲಿ ನಿರ್ಮಿಸುವ ಮುಖಾಂತರ ಒಂದು ಹೊಸ ಹೆಜ್ಜೆಯನ್ನು ಇರಿಸಿದ್ದಾರೆ.

ಚಿತ್ರದ ಬಗ್ಗೆ ಹೆಚ್ಚಿನ ವಿವರಗಳನ್ನು ನೀಡಲು ಹಿಂಜರಿದ ಶಂಕ್ರೇಗೌಡರು "ಈ ಚಿತ್ರದಲ್ಲಿ ಐದು ಜನ ನಾಯಕಿಯರಿರುತ್ತಾರೆ. ಈಗಾಗಲೇ ರಮ್ಯ ಬಾರ್ನ ಮಾತ್ರ ಒಂದು ಪಾತ್ರಕ್ಕೆ ಆಯ್ಕೆಯಾಗಿದ್ದಾಳೆ. ಆಗಸ್ಟ್ 15 ರಂದು ಈ ಚಿತ್ರದ ಮುಹೂರ್ತವನ್ನು ಭಾರೀ ದೊಡ್ಡ ಪ್ರಮಾಣದಲ್ಲಿ ನೆರವೇರಿಸಲಿದ್ದೇನೆ" ಎಂದಷ್ಟೇ ಹೇಳಿದರು.

ಚಿತ್ರದ ಮೂರು ಭಾಷೆಯ ಅವತರಣಿಕೆಯಲ್ಲಿ ಆಯಾ ಭಾಷೆಯ ನಾಯಕನಟರು ಇರುತ್ತಾರಂತೆ. ಚಿತ್ರಕ್ಕೆ 'ಇಂಡಿಪೆಂಡೆನ್ಸ್ ಡೇ' ಎಂಬ ಹೆಸರಿಡುವ ಬಗ್ಗೆ ಮಾತುಕತೆ ನಡೆಯುತ್ತಿದ್ದರೂ ಇನ್ನೂ ಅಂತಿಮ ತೀರ್ಮಾನವನ್ನು ಕೈಗೊಂಡಿಲ್ಲ ಎಂದು ಶಂಕ್ರೇಗೌಡರು ಹೇಳಿದರು.



"ಈ ಚಿತ್ರದ ಕಥಾವಸ್ತು ತುಂಬಾ ಆಕರ್ಷಣೀಯವಾಗಿದ್ದು, ಇದನ್ನು ಕಳೆದೆರಡು ವರ್ಷಗಳಿಂದ ನಾನು ಹೆಣೆಯುತ್ತ ಬಂದಿದ್ದೇನೆ. ನನಗೆ ಯಾವತ್ತೂ ನಿರ್ದೇಶಕನಾಗಬೇಕೆಂಬ ಕನಸು ಇರಲೇ ಇಲ್ಲ, ಆದರೆ ಈ ಚಿತ್ರದ ಕಥೆ ಹೆಣೆಯುತ್ತ ಬಂದಂತೆ ನಾನೇ ಯಾಕೆ ಈ ಚಿತ್ರವನ್ನು ನಿರ್ದೇಶಿಸಬಾರದೆಂದೆನಿಸಿತು. ಹೀಗಾಗಿ ಆಕಸ್ಮಿಕವಾಗಿ ನಿರ್ದೇಶಕನಾಗುತ್ತಿದ್ದೇನೆ. ಜೊತೆಗೆ ಸುದೀಪ್, ನಂದ, ಸುರೇಶ್ ಮೊದಲಾದ ಅನೇಕ ನಿರ್ದೇಶಕರು ನನಗೆ ನನ್ನ ಕೆಲಸದಲ್ಲಿ ಸಹಾಯ ಮಾಡುತ್ತೇವೆಂದು ಭರವಸೆ ನೀಡಿದ್ದಾರೆ. ಹೀಗಾಗಿ ಈ ಚಿತ್ರದ ನಿರ್ದೇಶನದ ಜವಾಬ್ದಾರಿಯನ್ನು ಯಶಸ್ವಿಯಾಗಿ ಪೂರೈಸುತ್ತೇನೆ ಎಂಬ ನಂಬಿಕೆ ನನಗಿದೆ" ಎಂದು ಶಂಕ್ರೇಗೌಡರು ಹೇಳಿದರು.

ಸದ್ಯಕ್ಕೆ ಸುದೀಪ್ ನಾಯಕನಟನಾಗಿ[illegible]ತ್ತಿರುವ 'ವರದನಾಯಕ' ನಿರ್ಮಾಣದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿರುವ ನಿರ್ಮಾಪಕ ಶಂಕ್ರೆ[illegible] ಈ ಚಿತ್ರವನ್ನು ಮುಗಿಸಿದಕೂಡಲೇ ತಮ್ಮ ಹೊಸ ಚಿತ್ರವನ್ನು ಆರಂಭಿಸು[illegible] ಅಂದಹಾಗೆ ಈ ಹೊಸ ಚಿತ್ರ ಮುಗಿದಾಕ್ಷಣ ಚಿರಂಜೀವಿ ಸರ್ಜಾ[illegible] ನಾಯಕನಟನನ್ನಾಗಿ ಹಾಕಿಕೊಂಡು ಮತ್ತೊಂದು ಚಿತ್ರವನ್ನು ನಿರ್ದೇ[illegible] ಶಂಕ್ರೇಗೌಡರು ಈಗಾಗಲೇ ಪ್ಲಾನ್ ಮಾಡಿದ್ದಾರಂತೆ. ಅಂದರೆ, ಇನ್ನು [illegible] ನಿರ್ದೇಶಕರಾಗಿಯೇ ಸಿನಿಮಾರಂಗದಲ್ಲಿ ಮುಂದುವರೆಯುವ ನಿರ್ಧಾರ[illegible] ಶಂಕ್ರೇಗೌಡರು ಕೈಗೆತ್ತಿಕೊಂಡಂತಿದೆ. ಕಳೆದ 10 ವರ್ಷಗಳಿಂದ ನಿರ್ಮಾಪಕ[illegible] ಚಿತ್ರೋದ್ಯಮದ ಒಳ-ಹೊರಗನ್ನು ಅರಿತಿರುವ ಶಂಕ್ರೇಗೌಡರಿಗೆ ನಿರ್ದೇಶನ[illegible] ಹೊಸ ಆಕರ್ಷಣೆ ಯಶಸ್ಸು ತಂದುಕೊಡಲಿ ಎಂಬುದು ನಮ್ಮ ಹಾರೈಕೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com